ಸಂಗಾತ

ಆಗಸ್ಟ್ ೨೦೦೮ ರೂ. ೨೦

- ಚರ್ಚೆ: ಜಾತಿ-ಧರ್ಮ ತಾರತಮ್ಯ
- ಸಿದ್ಧರಾಮಯ್ಯ ಅವರಿಗೊಂದು ಬಹಿರಂಗ ಪತ್ರ

ಸುಳ್ಳು ಭರವಸೆಗಳ
ವಿಶ್ವಬ್ಯಾಂಕ್ ನಿರ್ದೇಶನದ

ಬಿಜೆಪಿ ಬಜೆಟ್

ಸಂವಾದ
ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೧೦
ಆಗಸ್ಟ್ ೨೦೦೮

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
© ೨೩೪೮೦೨೭೮/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
© 080-23480278, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

❑ ಪತ್ರಗಳು ೦೩
❑ ಹೊಸ ಪುಸ್ತಕ ೦೪
❑ ಅಂತರಂಗ ೦೫
❑ ಜಾತಿ, ಧರ್ಮ, ತಾರತಮ್ಯ ಚರ್ಚೆ
○ ಡಾ. ವಿ.ಎಸ್ ಶ್ರೀಧರ್ ೦೬
○ ಡಾ. ಸಿ.ಜಿ ಲಕ್ಷ್ಮೀಪತಿ ೦೮
○ ಡಾ. ಡೊಮಿನಿಕ್ ಡಿ ೧೦
❑ ಶ್ರೀ ಸಿದ್ಧರಾಮಯ್ಯ ಅವರಿಗೊಂದು ಬಹಿರಂಗ ಪತ್ರ
○ ಪ್ರೊ॥ ಜಿ. ಕೆ ಗೋವಿಂದ ರಾವ್ ೧೨

❑ ಗೋರಕ್ಷಣೆಯ ಕೂಗೋ ತಳಿ ನಾಶದ ಯಜ್ಞವೋ?
○ ಹೆಚ್. ಜಯಪ್ರಕಾಶ್ ಶೆಟ್ಟಿ ೧೬
❑ ಪ್ರತಿಭಟನೆಯ ಅಸ್ತ್ರವಾಗಿ ಅಹಿಂಸಾತ್ಮಕ ಹೋರಾಟ
○ ಮ. ಶ್ರೀ. ಮುರಳೀ ಕೃಷ್ಣ ೧೯
❑ ಪ್ರಮಾಣ ವಚನ-ನೆಲೆ ಬೆಲೆ
○ ಜ. ಹೋ ನಾರಾಯಣ ಸ್ವಾಮಿ ೨೦
❑ ಜಿ.ಟಿ.ಎನ್: ಮರೆಯಾದ ವಿಶ್ವ ಕೋಶ
○ ನಾ. ದಿವಾಕರ್ ೨೪
❑ ಸುಳ್ಳು ಭರವಸೆಗಳ ಬಿಜೆಪಿ ಬಜೆಟ್ ೨೬
○ ಶಿವಸುಂದರ್
❑ ಜಾನಪದ ಆಧುನಿಕಗಳ ಸಂಬಂಧ...
○ ಡಾ. ಸಿ.ಬಿ ಹೊನ್ನಯ್ಯ ೩೦



❑ ಪ್ರಸವದ ನೋವಿನಲ್ಲಿ ನೇಪಾಳ
○ ಸತ್ಯ ೩೮
❑ ಧರೆ ಹತ್ತಿ ಉರಿದರೆ...
○ ಡಾ. ಟಿ. ಆರ್ ಚಂದ್ರ ಶೇಖರ್ ೪೨
❑ ದಲಿತ್ ಡೈರಿ ೪೬
○ ಚಂದ್ರಭಾನ್ ಪ್ರಸಾದ್/ ಡೊಮಿನಿಕ್
❑ ಬುದ್ಧಾಯಣ ೫೦
○ ಸಿ.ಎಚ್ ರಾಜಶೇಖರ್



ಕವನಗಳು : ❑ ಧೂಳಿನ ಪಾತ್ರೆ / ಕನಸು ೧೫

ಮುಖಪುಟ ಕಲೆ: ನಾಗಪ್ಪ ಪಿ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಮಠಗಳು ಅನುಭವ ಮಂಟಪಗಳಾಗಲಿ

ಮಾನ್ಯರೆ,

ಕರ್ನಾಟಕದಲ್ಲಿರುವಷ್ಟು ಮಠಗಳು ರಾಷ್ಟ್ರದ ಯಾವುದೇ ರಾಜ್ಯದಲ್ಲಿ ಇಲ್ಲ. ಮಠಗಳ ಸಂಖ್ಯೆ ಜಾಸ್ತಿಯಾದಂತೆಲ್ಲ ಜಾತಿಯತೆ ದಿನೇದಿನೇ ಜಾಸ್ತಿಯಾಗುತ್ತಿರುವುದು ಮತ್ತು ಜಾತಿಯೇ ಪ್ರಧಾನವೆಂದು ತಿಳಿದುಕೊಂಡು, ಯಾವುದೇ ತತ್ವ-ಸಿದ್ಧಾಂತಕ್ಕೆ ಬದ್ಧವಾಗದೆ ಅಧಿಕ ಮಠಗಳು ಬಸವಣ್ಣನವರ ಹೆಸರು ದುರ್ಬಳಕೆ ಮಾಡುವುದು ಸರಿಯಲ್ಲ.

ಮಠಗಳು ಇರುವ ಯಾವುದೇ ಒಂದು ಗ್ರಾಮಕ್ಕೆ ಭೇಟಿ ಕೊಟ್ಟು ಮಠ ಯಾವ ಸಮು ದಾಯಕ್ಕೆ ಸೇರಿದೆಯೆಂದು ಕೇಳಿದ ತಕ್ಷಣ ವೀರಶೈವ-ಲಿಂಗಾಯಿತರ ಮಠ, ಒಕ್ಕಲಿಗರ ಮಠ, ಕುರುಬರ ಮಠ, ಮಡಿವಾಳರ ಮಠ ಇತ್ಯಾದಿ ಜಾತಿ ಹೆಸರನ್ನು ಉಲ್ಲೇಖಿಸುತ್ತಾರೆಯೇ ವಿನಃ ಬಸವಣ್ಣನವರು ಕಟ್ಟಿದ ಅನುಭವ ಮಂಟಪಕ್ಕೆ ಮತ್ತು ಆದರ್ಶ ತತ್ವ-ಸಿದ್ಧಾಂತಗಳಿಗೆ ಸೇರಿದ ಮಠವೆಂದು ಹೇಳುವುದು ರಾಜ್ಯದ ಜನತೆ ಯಾರಾದರೂ ಕಂಡು ಕೇಳಿದ್ದೀರಾ ಅಥವಾ ನೇರವಾಗಿ ಮಠಾಧಿಪತಿಗಳನ್ನೇ ಸಂಪರ್ಕಿಸಿ ನಿಮ್ಮ ಮಠ ಯಾವ ಸಮುದಾಯಕ್ಕೆ ಸೇರಿದೆಯೆಂದು ಪ್ರಶ್ನಿಸಿದಾಗ ಈ ಮಠ ಯಾವುದೇ ಜಾತಿಗೆ ಸೇರಿಲ್ಲ, ಇದು ಬಸವಣ್ಣನವರು ನಡೆದು ಹೋದ ಸಮಾಜಕ್ಕೆ ಒಳಪಡುವ ಅನುಭವ ಮಂಟಪವೆಂದು ಘಂಟಾಘೋಷವಾಗಿ ಹೇಳುವಷ್ಟು ಧೈರ್ಯ, ಸ್ಥೈರ್ಯ, ವಿಶಾಲತೆ ಮಠಾಧಿಪತಿಗಳಿಗೆ ಇದ್ದೆಯೇ? ಅಂದರೆ ಜಗಜ್ಯೋತಿ ಬಸವಣ್ಣ ಅವರ ಹೆಸರು ದುರ್ಬಳಕೆ ಆಗುವುದನ್ನು ಯಾರು ಬೇಕಾದರೂ ಖಚಿತ ಪಡಿಸಿಕೊಳ್ಳಬಹುದಲ್ಲವೆ?

ಅಕ್ಷರದಾಸೋಹ-ಅನ್ನದಾಸೋಹದ ಕಾರ್ಯಕ್ರಮದಡಿ ನಡೆಸುವ ಮಠಗಳೆಲ್ಲ ಜಾತಿವಾದಿಗಳ ಮಠಗಳೇ ಹೊರತು ಬಸವಣ್ಣನವರ ಜಾತ್ಯತೀತ ಸಿದ್ಧಾಂತಕ್ಕಾಗಲಿ, ಅಸ್ಪೃಶ್ಯತೆ ನಿವಾರಣೆಗಳಾಗಲಿ, ಅಂತರ್ಜಾತಿ ವಿವಾಹಕ್ಕಾಗಲಿ ಸಹಭೋಜನ ಕೂಟಕ್ಕಾಗಲಿ ಬಸವಣ್ಣನವರ ಆದರ್ಶ-ತತ್ವ-ಸಿದ್ಧಾಂತಕ್ಕೆ ಅನುಗುಣವಾಗಿ ರಚಿಸಿರುವ ಸಂವಿಧಾನಕ್ಕೆ ಒಳಪಡುವ ಸರ್ವಮಾನವನ ಸಮಬಾಳು, ಸಮಪಾಲು, ಸಮಾನತೆ, ಸ್ವಾತಂತ್ರ್ಯ ಹಾಗೂ ಭ್ರಾತೃತ್ವಕ್ಕೆ ಒತ್ತುಕೊಡುವ ಅನುಭವ ಮಂಟಪಗಳು ಅಲ್ಲವೇ ಅಲ್ಲ. ಕೇವಲ ಬಸವಣ್ಣನವರ ಹೆಸರು ಹೇಳಿಕೊಂಡು ಜಾತಿ ರಾಜಕೀಯ ಮಾಡುವ ಜಾತಿ ಮಠಗಳು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಮೈಸೂರು ವಿಶ್ವವಿದ್ಯಾಲಯ ಅಂಬೇಡ್ಕರ್ ಸಂಶೋಧನೆ ಮತ್ತು ವಿಸ್ತರಣ ಕೇಂದ್ರದಲ್ಲಿ ನಡೆದ ವಿಚಾರ ಸಂಕಿರಣದ ಸಮಾರಂಭದಲ್ಲಿ ಮಾತನಾಡುತ್ತಾ "ಇಂಥವರೇ ಮುಖ್ಯಮಂತ್ರಿಯಾಗಬೇಕೆಂದು ಮಠಾಧಿಪತಿಗಳು ಸಾರ್ವಜನಿಕವಾಗಿ ಹೇಳಿದರೆ ಮುಖ್ಯಮಂತ್ರಿಗಳು ತಮ್ಮ ಕುರ್ಚಿಗೆ ಪೂಜೆ ಮಾಡಿದ್ದಾರೆಂದು" ಹೇಳಿರುವುದನ್ನು ಜಾತ್ಯತೀತ ಸಿದ್ಧಾಂತಕ್ಕೆ ಬದ್ಧವಾದ ವ್ಯಕ್ತಿಗಳು ಮರೆಯುವಂತಿಲ್ಲ.

ಅಲ್ಲದೆ ಬಸವಣ್ಣನವರ ವಚನಗಳು, ಆದರ್ಶಗಳು, ತತ್ವ-ಸಿದ್ಧಾಂತಗಳು ಅನುಷ್ಠಾನಕ್ಕೆ ಬರಬೇಕೆಂಬ ಬಯಕೆ ಏನಾದರೂ ಮಠಾಧಿಪತಿಗಳಿಗೆ ಇದ್ದದ್ದೇ ಆದ ಪಕ್ಷದಲ್ಲಿ ಮೊದಲು ಮಠಗಳನ್ನು ಅನುಭವಮಂಟಪಗಳನ್ನಾಗಿ ಪರಿವರ್ತಿಸಬೇಕು ಮತ್ತು ಅಸ್ಪೃಶ್ಯತೆ ನಿವಾರಣೆಗೆ, ಜಾತಿ ವಿನಾಶಕ್ಕೆ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಇದಕ್ಕೆ ಬೇಕಾದ ಸಂಪೂರ್ಣ ಬೆಂಬಲ, ಸಹಕಾರ, ಸಹಾಯಕ್ಕೆ ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ಕಂಕಣಬದ್ಧವಾಗಬೇಕು. ಕಾಂಗ್ರೆಸ್ ಇತ್ಯಾದಿ ರಾಜಕೀಯ ಪಕ್ಷಗಳನ್ನು ಟೀಕೆ ಮಾಡುವ ಬಿಜೆಪಿ ಶಾಸಕರು, ಸಂಸದರು, ಸಚಿವರು ಅದರಲ್ಲೂ ಮುಖ್ಯವಾಗಿ ಪರಿಶಿಷ್ಟರ ಪ್ರತಿನಿಧಿಗಳಾದ ದಲಿತ ಶಾಸಕರುಗಳು ಹಾಗೂ ಸಚಿವರುಗಳು ಸಾಮಾಜಿಕ ಪಿಡುಗು ಅಸ್ಪೃಶ್ಯತೆ ನಿವಾರಣೆ ಮತ್ತು ಜಾತಿ ವಿನಾಶಕ್ಕೆ ರೂಪುರೇಷೆಗಳನ್ನು ಹಾಕಿಕೊಳ್ಳುವುದು, ಮಠಗಳನ್ನು ಅನುಭವ ಮಂಟಪಗಳನ್ನಾಗಿ ಪರಿವರ್ತಿಸುವುದು, ಬಸವಣ್ಣನವರು ಹುಟ್ಟಿದ ನಾಡಿನಲ್ಲಿ ಅಸ್ಪೃಶ್ಯತೆ ಮೊದಲು ನಿವಾರಣೆ ಆಗಿ ಮಾದರಿ ರಾಜ್ಯವಾಗಬೇಕು.

ಇದಕ್ಕೆ ಬೇಕಾದ ವಾತಾವರಣವನ್ನು ಬಸವಣ್ಣನವರ ಹೆಸರನ್ನು ಸದಾ ಬಳಸುವ ಮಠಗಳು ಹಾಗೂ ಮಠಾಧಿಪತಿಗಳು ರಾಜಕೀಯ ಕ್ಷೇತ್ರವನ್ನು ಜಾತಿ ಹೆಸರಿನಲ್ಲಿ ಬಲಪಡಿಸುವ ಬದಲು ಬಸವಣ್ಣನವರ ಆದರ್ಶ-ತತ್ವ-ಸಿದ್ಧಾಂತಗಳಿಗೆ ಬದ್ಧವಾಗಿ ಜಾತ್ಯತೀತ ಸಮಾಜ ನಿರ್ಮಾಣಕ್ಕೆ ಮಠಾಧಿಪತಿಗಳ ಪಾತ್ರ ಗುರುತರವಾದುದು. ಸಮಾಜ ಸುಧಾರಕ ಬಸವಣ್ಣನವರು ನಡೆದು ಹೋದ ಹಾದಿಯನ್ನು ಮಠಾಧಿಪತಿಗಳು ಅನುಸರಿಸುವ ಮೂಲಕ ರಾಜ್ಯದಲ್ಲಿರುವ ಮಠಗಳು ಅನುಭವ ಮಂಟಪಗಳಾಗಲಿ ಎಂದು ಹಾರೈಸೋಣ.

ಶ್ರೀ ಎ. ಮಾದಯ್ಯ ಎಂ.ಎ.
ಮೈಸೂರು

ಪತ್ರಾಗಾರ

ಪತ್ರಿಕೋದ್ಯಮಕ್ಕೆ ಹೊಸ ತಿರುವು

ಪ್ರಿಯ ಇಂದೂಧರ ಹೊನ್ನಾಪುರ ಇವರಿಗೆ,

ನಮಸ್ಕಾರ.

ಸಂವಾದ ಪತ್ರಿಕೆ ನೋಡಿದೆ.

ಜಡ್ಡುಗಟ್ಟುತ್ತಿರುವ ಕನ್ನಡ ಪತ್ರಿಕೋದ್ಯಮಕ್ಕೆ ಹೊಸ ತಿರುವು ನೀಡಲು, 'ಸಂವಾದ'ದಂತಹ ಪತ್ರಿಕೆ ತೀರ ಅಗತ್ಯ ಹಾಗೂ ಅನಿವಾರ್ಯ.

ಮೇ ಸಂಚಿಕೆ ಗೆಳೆಯ ಸುರೇಶ್ ಕುಷ್ಟಗಿ ಮನೆಯಲ್ಲಿತ್ತು. ಎತ್ತಿಕೊಂಡು ಬಂದು ಇಡೀ ಸಂಚಿಕೆ ಓದಿದೆ. Realy it is Worthy.

ಅರುಂಧತಿರಾಯ್ ಚಿಂತನೆಗಳು ಮನಕಲಕುವಂತಿವೆ. ರಾಜಕಾರಣದ ಚರ್ಚೆಯಲ್ಲೂ ಜಿ.ರಾಜಶೇಖರ್, ವೀರಭದ್ರಪ್ಪ, ಮಧುಸೂದನ್ ಚಿಂತನೆಗಳು ಗಂಭೀರ ಹಾಗೂ Heart touching. ಪತ್ರಿಕೆಗೆ ಚಂದಾ ಹಣ ಕಳುಹಿಸುತ್ತಿರುವೆ.

ಒಮ್ಮೆ ಹೊಸಪೇಟೆಗೆ ಬನ್ನಿ. ಒಂದು ಸಣ್ಣ ಸಂವಾದ ಹಮ್ಮಿಕೊಳ್ಳೋಣ. ಅದು ಪತ್ರಿಕೆಯ ಪ್ರಸರಣಕ್ಕೂ ಅನುಕೂಲವಾದೀತು. ಈ ಹೊತ್ತಿನಲ್ಲಿ ಹಿಂದೊಮ್ಮೆ ಲಂಕೇಶರು ಸಂದರ್ಶನ ಒಂದರಲ್ಲಿ ಪತ್ರಿಕೋದ್ಯಮದ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂಬ ಪ್ರಶ್ನೆಗೆ, 'ಧಣಿ ಕರೆಯುವುದಕ್ಕಿಂತ ಮುಂಚೆಯೇ ಅವನ ಕಾಲೊತ್ತುವ ಜನ ನಾವು, ಇಲ್ಲಿ ಪತ್ರಿಕೆಗಳಿಂದ, ಪತ್ರಿಕೋದ್ಯೋಗಿಗಳಿಂದ ವಾಸ್ತವ ಕಂಡಿತೆಂದು ಬಯಸಿದರೆ ಅಂತಹವನು ಒಬ್ಬ ಹುಚ್ಚನಷ್ಟೇ' ಎಂದು ಮಾರ್ಮಿಕ ಉತ್ತರ ನೀಡಿದ್ದರು. Ofcourse ಅನಂತರ ಅವರೇ ಲಂಕೇಶ್ ಪತ್ರಿಕೆ ಪ್ರಾರಂಭಿಸಿದ್ದು ಬೇರೆ.

ಅದೇಕೋ ನನಗಂತೂ ಅಂದಿನ ಲಂಕೇಶರ ಹೇಳಿಕೆ ಬಹುಪಾಲು ಪತ್ರಿಕೋದ್ಯಮ ಹಾದಿ ನೋಡಿದಾಗ ಅದು ಇಂದಿಗೂ relevent ಅನಿಸ್ತಿದೆ.

ಅಭಿನಂದನೆ ಹಾಗೂ ಶುಭಾಶಯಗಳೊಡನೆ,

ನಿಮ್ಮ ಆತ್ಮೀಯ

ರವಿವರ್ಮ ಡಿ.
ಹೊಸಪೇಟೆ.

ಹೊಸ ತಲೆಮಾರಿನ ವಿದ್ವಾಂಸ ಡಾ. ನಟರಾಜ ಬೂದಾಳ್ ಅವರ 'ಬೌದ್ಧ ಸೌಂದರ್ಯ ಮೀಮಾಂಸೆ' ಮುಂದಿನ ಸಂಚಿಕೆಯಿಂದ ಆರಂಭ



ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಸಂಪಾದಕೀಯ

ಚಿಂತನ



ಅಣು ಒಪ್ಪಂದ ಮತ್ತು ಬಿಜೆಪಿ ದ್ವಿಪಾತ್ರಾಭಿನಯ!

ಅಣು ಒಪ್ಪಂದದ ತಲೆದಂಡದಿಂದ ಕಡೆಗೂ ಕಾಂಗ್ರೆಸ್ ತಪ್ಪಿಸಿಕೊಂಡಿದೆ. ಎರಡು ದಿನಗಳ ಕಾಲ ನಡೆದ ಲೋಕಸಭೆ ವಿಶ್ವಾಸಮತ ವಿಶೇಷ ಅಧಿವೇಶನದಲ್ಲಿ ಕಾಂಗ್ರೆಸ್ ನಿರೀಕ್ಷೆಗೂ ಮೀರಿ ವಿಶ್ವಾಸಗಳಿಸಿದ್ದು ಆಶ್ಚರ್ಯವೇನಲ್ಲ. ಎಡಪಕ್ಷಗಳು ಬೆಂಬಲ ಹಿಂಪಡೆಯುವ ವಿಚಾರ ಪ್ರಸ್ತಾಪವಾದಾಗಿನಿಂದಲೇ ಕಾಂಗ್ರೆಸ್ ಇತರೆ ಗೆಳೆಯರ ಮೇಲೆ ಕಣ್ಣು ಹಾಕಿತ್ತು. ವೈರಿಗೆ ವೈರಿ ಮಿತ್ರ ಎನ್ನುವಂತೆ ಸಮಾಜವಾದಿ ಪಕ್ಷ ಕಾಂಗ್ರೆಸ್‌ನತ್ತ ವಾಲಿದ ಕೂಡಲೇ ಫಲಿತಾಂಶವೂ ನಿರ್ಧಾರವಾಗಿತ್ತು.

ಈ ಎಲ್ಲಕ್ಕಿಂತ ಹೆಚ್ಚಾಗಿ ವಿವಿಧ ಪಕ್ಷಗಳಲ್ಲಿನ ಒಳಜಗಳ ಕಾಂಗ್ರೆಸ್‌ಗೆ ಅನುಕೂಲವಾಯಿತು. ಎಡಪಕ್ಷಗಳೂ ಸೇರಿದಂತೆ ಎಲ್ಲ ಪಕ್ಷಗಳಲ್ಲೂ ಇರುವ ಆಂತರಿಕ ಭಿನ್ನಮತ ಅಣುಒಪ್ಪಂದದ ಅಲಗಿನಿಂದ ಕಾಂಗ್ರೆಸ್‌ಅನ್ನು ಪಾರುಮಾಡಿತು. ಆದರೆ ಅಣು ಒಪ್ಪಂದದ ವಿಚಾರದಲ್ಲಿ ಸರ್ಕಾರವನ್ನು ಬೀಳಿಸಲು ಎಡಪಕ್ಷಗಳು ಬಿಜೆಪಿಯೊಂದಿಗೆ ಕೈ ಜೋಡಿಸಿದ್ದು ಮಾತ್ರ ವಿಶೇಷವಾಗಿತ್ತು!

ಇದೊಂದು ಸಂದಿಗ್ಧದ ಪರಿಸ್ಥಿತಿ. ಎಡಪಕ್ಷಗಳ ಸಹಕಾರ ದೊಂದಿಗೆ ಸರ್ಕಾರ ರಚಿಸಿದ ಕಾಂಗ್ರೆಸ್ ಒಪ್ಪಂದದಂತೆ ಕನಿಷ್ಠ ಕಾರ್ಯಕ್ರಮಗಳ ಹೊರತಾಗಿ ಬೇರೇನನ್ನೂ ಮಾಡಬಾರದಾಗಿತ್ತು. ಆದರೆ ಕನಿಷ್ಠ ಕಾರ್ಯಕ್ರಮಗಳ ವ್ಯಾಪ್ತಿಯಲ್ಲಿ ಬಾರದಿದ್ದರೂ ಅಣು ಒಪ್ಪಂದ ದೇಶದ ಹಿತದೃಷ್ಟಿಯಿಂದ ಅನಿವಾರ್ಯವಾಗಬಹುದಾದ ಅರಿವಿನ ಹಿನ್ನೆಲೆಯಲ್ಲಿ ಎಡಪಕ್ಷಗಳೂ ಯೋಚಿಸಬೇಕಾಗಿತ್ತು.

ಅಣು ಇಂಧನ ಬಳಕೆ ಕುರಿತಂತೆ ಎಡಪಕ್ಷಗಳು ಹಾಗೂ ಇತರೆ ಪಕ್ಷಗಳ ನಡುವೆ ಅಂಥ ಬಿನ್ನಾಭಿಪ್ರಾಯ ಇದ್ದಂತಿಲ್ಲ. ಆದರೆ ಅಮೇರಿಕಾದೊಂದಿಗಿನ ಅಣು ಒಪ್ಪಂದದ ಬಗ್ಗೆ ಮಾತ್ರ ಎಡ ಪಕ್ಷಗಳಿಗೆ ಒಪ್ಪಿಗೆ ಇಲ್ಲ. ಇದರಿಂದ ದೇಶದ ಸಾರ್ವಭೌಮ ತೆಗೆ ದಕ್ಕೆ ಉಂಟಾಗುತ್ತದೆಂಬ ಆತಂಕ ಎಡಪಕ್ಷಗಳನ್ನು ಕಾಡಿದೆ. ಈ ಆತಂಕಗಳನ್ನು ಸಾಮರಸ್ಯದಿಂದ ದೂರಮಾಡುವ ಪ್ರಯತ್ನ ದಲ್ಲಿ ಕಾಂಗ್ರೆಸ್ ಸೋತಿದ್ದೇ ಈ ರಾದ್ಧಾಂತಕ್ಕೆ ಕಾರಣವಾಯಿತು.

ಹಾಗೆ ನೋಡಿದರೆ ಅಣು ಒಪ್ಪಂದ ಕುರಿತ ಆತಂಕ ಕೇವಲ ಎಡಪಕ್ಷಗಳಿಗಷ್ಟೇ ಅಲ್ಲ. ದೇಶದ ಎಲ್ಲರಲ್ಲೂ ಇದೆ. ಏಕೆಂದರೆ ಅಮೇರಿಕಾ ತನ್ನ ನಡಾವಳಿಗಳಿಂದ ವಿಶ್ವಾಸಾರ್ಹ ದೇಶವಾಗಿ ಉಳಿದಿಲ್ಲ. ತನ್ನ ವ್ಯವಹಾರಿಕ ಉದ್ದೇಶಗಳಿಗಾಗಿ ಎಲ್ಲವನ್ನೂ ದುರುಪಯೋಗ ಪಡಿಸಿಕೊಳ್ಳುವ ದುಸ್ಸಾಹಸಕ್ಕೆ ಅದು ನಿರಂತರವಾಗಿ ಇಳಿದಿದೆ. ತಾನೊಬ್ಬನೇ ಜಗತ್ತಿನ ಹಿರಿಯಣ್ಣ ಎಂದು ಘೋಷಿಸಿಕೊಳ್ಳಲು ಬಡ ಮತ್ತು ಅಸಹಾಯಕ ದೇಶ ಗಳನ್ನು ನಾಶಮಾಡಲು ಅದು ಪ್ರಯತ್ನಿಸಿದೆ. ಒಂದು ರೀತಿಯಲ್ಲಿ ಹೇಳುವುದಾದರೆ ಅಭಿವೃದ್ಧಿಶೀಲ ದೇಶಗಳ ಮೊದಲ ವೈರಿ ಪಟ್ಟಿಯಲ್ಲಿ ಅಮೇರಿಕಾ ನಿಂತಿದೆ.

ಹಾಗಾಗಿಯೇ ಅಮೇರಿಕಾದೊಂದಿಗಿನ ಯಾವುದೇ ವ್ಯವ ಹಾರದ ಬಗ್ಗೆ ಅನುಮಾನಗಳು ಮೂಡುವುದು ಸಹಜ. ಅದ ರಲ್ಲೂ ಎಡಪಂಥೀಯರು ಇಂಥ ವ್ಯವಹಾರಿಕ ಸಂಬಂಧಗಳನ್ನು ವಿರೋಧಿಸುವುದೂ ಸಹಜ. ಕಾಂಗ್ರೆಸ್‌ಗೆ ಇದೆಲ್ಲ ಗೊತ್ತಿರಲಿಲ್ಲ ಎಂದು ಊಹಿಸುವುದು ಮೂರ್ಖತನವಾಗುತ್ತದೆ. ಕಾಂಗ್ರೆಸ್ ಇದೆ ಲ್ಲವನ್ನೂ ನಿರೀಕ್ಷಿಸಿಯೇ ಇತ್ತು. ಹಾಗಾಗಿ ಒಳಗೊಳಗೇ ಸಿದ್ಧತೆ ಯನ್ನು ಮಾಡಿಕೊಂಡಿತ್ತು. ತಾನಾಗಿಯೇ ವಿಶ್ವಾಸ ಮತ ಪಡೆ ಯಲು ಕಾಂಗ್ರೆಸ್ ಮುಂದಾಗಿದ್ದೇ ಈ ಸಿದ್ಧತೆ ಮಾಡಿದ ನಂತರ. ಆದರೆ ಈ ಪ್ರಕರಣದಿಂದ ಮುಖಭಂಗ ಅನುಭವಿಸಿದ್ದು ಮಾತ್ರ ಎಡರಂಗ. ದೇಶದ ಜನರ ಎದುರು ಅಭಿವೃದ್ಧಿ ವಿರೋಧಿಯೆಂಬ ಹುಸಿ ಪ್ರಚಾರಕ್ಕೆ ಅದು ಗುರಿಯಾಗಬೇಕಾಯಿತು.

ಇದಕ್ಕಿಂತಲೂ ದೊಡ್ಡ ಹಾನಿಯಾಗಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಗೆ. ಎರಡು ದಿನಗಳ ಲೋಕಸಭಾ ಕಲಾಪ ನೋಡಿದವ ರಿಗೆಲ್ಲ ಎಂಥ ಮಾನಸಿಕ ಕ್ಷೋಭೆ ಉಂಟಾಗಿತ್ತು ಎಂಬುದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆರೋಪ-ಪ್ರತ್ಯಾರೋಪಗಳಲ್ಲೇ ಮುಳುಗಿದ ಸಂಸತ್ ಸದಸ್ಯರ ವರ್ತನೆಗಳಂತೂ ಜಿಗುಪ್ಸೆ ಹುಟ್ಟಿಸು ತ್ತಿದ್ದವು. ನಿಜ ಹೇಳಬೇಕೆಂದರೆ ಅಣು ಇಂಧನ ಬಳಕೆ ವಿಚಾರದಲ್ಲಿ ಇಷ್ಟೆಲ್ಲ ರಾಜಕೀಯ ಚರ್ಚೆ ಅಗತ್ಯವಿರಲಿಲ್ಲ. ಕಾಂಗ್ರೆಸ್ ತನ್ನೆಲ್ಲ ಶಕ್ತಿಯನ್ನು ಕಳೆದುಕೊಳ್ಳುತ್ತಿರುವ ಈ ಹೊತ್ತಿನಲ್ಲಿ ತನಗೆ ಬೆಂಬಲ ನೀಡಿರುವ ಎಡಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಣು ಒಪ್ಪಂದದ ಕರಡು ಸಿದ್ಧಪಡಿಸಿದ್ದರೆ ಇದೊಂದು ಸಮಸ್ಯೆಯೇ ಆಗುತ್ತಿರಲಿಲ್ಲ. ಹಾಗೆ ಮಾಡದೆ ಏಕಪಕ್ಷೀಯವಾಗಿ ನಡೆದು ಕೊಂಡಿದ್ದೇ ಈ ಅನಾಹುತಕ್ಕೆ ಕಾರಣವಾಯಿತು.

ನನಗೆ ಬಹಳವಾಗಿ ಕಾಡಿದ ವಿಚಾರ ಎಲ್ಲ ಪಕ್ಷಗಳೂ ಸರ್ಕಾರ ಉಳಿಸಿಕೊಳ್ಳಬೇಕಾಗಿ ಬಂದಾಗ ಅನುಸರಿಸುವ ಮಾರ್ಗ. ಬಿಜೆಪಿಯ ಕೆಲವು ಲೋಕಸಭಾ ಸದಸ್ಯರು ಹಣದ ಕಟ್ಟನ್ನು ಎತ್ತಿ ತೋರಿಸಿ ಇದು ತಮಗೆ ನೀಡಿದ ಲಂಚದ ಹಣ ಎಂದು ಕೂಗಿ ದಾಗ, ನೆನಪಾದದ್ದು ಕರ್ನಾಟಕದ ಬಿಜೆಪಿ ಸರ್ಕಾರ! ಎಂಥಾ ಸಾಮ್ಯ ನೋಡಿ! ಇದೇ ಬಿಜೆಪಿ ಸರ್ಕಾರ ತನ್ನ ನೆಲೆಯನ್ನು ಭದ್ರ ಪಡಿಸಿಕೊಳ್ಳಲು ಇಲ್ಲಿ ಹಣ ನೀಡಿ ಶಾಸಕರನ್ನು ಕೊಳ್ಳುತ್ತಿದೆ. ಅದೇ ಲೋಕಸಭೆಯಲ್ಲಿ ಹಣದಿಂದ ಸಂಸತ್ ಸದಸ್ಯರನ್ನು ಕಾಂಗ್ರೆಸ್ ಕೊಳ್ಳುತ್ತಿದೆ ಎಂದು ಆರೋಪಿಸುತ್ತಿದೆ! ಬಹುಶಃ ಆಷಾಡಭೂತಿ ತನಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಇರಲಾರದೇನೊ!

ಈಗ ಕರ್ನಾಟಕಕ್ಕೇ ಬರೋಣ. ಕನಿಷ್ಠ ಮೂರು ಜನರ ಸದಸ್ಯ ಬಲದ ಕೊರತೆ ಎದುರಿಸುತ್ತಿದ್ದ ಬಿಜೆಪಿ ಸರ್ಕಾರ ಆರು ಜನ ಪಕ್ಷೇತರರನ್ನು ಒಲಿಸಿಕೊಂಡು ಸರ್ಕಾರ ರಚಿಸಿತ್ತು. ಆದರೆ ಆ ಆರು ಜನ ಪಕ್ಷೇತರರು ನಾವು ಒಂದಾಗಿದ್ದೇವೆ ಎಂದು ಹೇಳಿದ್ದೇ ದೊಡ್ಡ ಆಘಾತವಾಗಿ ಸರ್ಕಾರ ಹಡಬೆ ದನದಂತೆ ಕಂಡ ಕಂಡ ವರ ಬೇಲಿಯನ್ನೆಲ್ಲ ಹಾರತೊಡಗಿತು. ಒಂದು ಪಕ್ಷ ಪಕ್ಷೇತರರು ಕೈ ಕೊಟ್ಟರೆ ಬಿಜೆಪಿ ಸರ್ಕಾರವನ್ನು ಉಳಿಸಿಕೊಳ್ಳಲು ಅಗತ್ಯವಿರು ವಷ್ಟು ಶಾಸಕರನ್ನು ಗಳಿಸಿಕೊಳ್ಳಲು ಇತರೆ ಪಕ್ಷಗಳನ್ನು ಒಡೆಯಲು ಬಿಜೆಪಿ ಸಿದ್ಧವಾಗಿದೆ ಎಂದು ಇಂಧನ ಸಚಿವ ಈಶ್ವರಪ್ಪ ಬಾಯಿ ಬಿಟ್ಟಾಗಲೇ ಬಿಜೆಪಿ ಮೂರನ್ನೂ ಬಿಟ್ಟು ನಿಂತಿದೆ ಎನ್ನುವುದು ನಿಚ್ಚಳವಾಗಿತ್ತು. ಇದಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಬೇರೆ ಪಕ್ಷದಿಂದ ಬರುವ ಶಾಸಕರಿಗೆಲ್ಲ ಗೌರವದ ಸ್ಥಾನಮಾನ ನೀಡು ವುದಾಗಿ ಹೇಳಿದ ಮೇಲಂತೂ ಅದು ಮತ್ತಷ್ಟು ಖಚಿತವಾಯಿತು.

ಬಹುಶಃ ಕರ್ನಾಟಕದ ಮತದಾರರು ಬಿಜೆಪಿಯಿಂದ ಇಂಥ ನೀಚತನವನ್ನು ನಿರೀಕ್ಷಿಸಿರಲಿಲ್ಲ. ಅಷ್ಟೇ ಅಲ್ಲ ಬಿಜೆಪಿಯ ನಿಷ್ಠಾ ವಂತ ಕಾರ್ಯಕರ್ತರೂ ಇದರಿಂದ ಅಚ್ಚರಿ ಗೊಳ್ಳುವಂತಾಯಿತು. ದಶಕಗಳ ಕಾಲ ಭಗವಾಧ್ವಜ ಹಿಡಿದು ಪಕ್ಷ ಕಟ್ಟಿ ಬೆಳೆಸಿದ ಚೆಡ್ಡಿ ಗಳೂ ಬೆಚ್ಚಿಬಿದ್ದರು. ಯಡ್ಡಿ-ರೆಡ್ಡಿ ಬಳಗ ಪ್ರಜಾಪ್ರಭುತ್ವ ಕೊಲೆಗೆ ಸುಪಾರಿ ಹಿಡಿದು ನಿಂತಿರುವುದಂತೂ ಕರ್ನಾಟಕ, ಅಷ್ಟೇ ಏಕೆ ಇಡೀ ದೇಶವೇ ಕಂಡರಿಯದ ಘಟನೆ.

ಕೋಟಿಗಳನ್ನು ಚೆಲ್ಲಿ ಇಲ್ಲಿ ಪಕ್ಷೇತರರು ಹಾಗೂ ಇತರೆ ಪಕ್ಷದ ಶಾಸಕರನ್ನು ಕೊಂಡುಕೊಂಡ ಬಿಜೆಪಿ, ಲೋಕಸಭೆಯಲ್ಲಿ ಮಾತ್ರ ತಾನು 'ದೇಶಭಕ್ತ' ಎಂದು ಹೇಳಿಕೊಂಡು ದ್ವಿಪಾತ್ರಾಭಿ ನಯ ಮಾಡುತ್ತಿದೆ. ಅಧಿಕಾರಸ್ಥರೆಲ್ಲ ಇಂಥ ನೀಚರಾದರೆ ಜನ ಏನು ಮಾಡಬೇಕು?.

○ ಇಂದೂಧರ ಹೊನ್ನಾಪುರ

ಡಾ. ಬಿ. ಆರ್. ಅಂಬೇಡ್ಕರ್ ವರ್ತಮಾನದೊಂದಿಗೆ ಮುಖಾಮುಖಿ
ಲೇ: ಡಾ. ಬಿ. ಯು. ಸುಮಾ
ಬೆಲೆ: ರೂ. ೭೫/-

ಅಂಬೇಡ್ಕರ್ ಅವರ ವಿಚಾರಗಳನ್ನು ಎಂದಿನ ಸಾಂಪ್ರದಾಯಿಕ ದೃಷ್ಟಿಕೋನಕ್ಕಿಂತ ತುಂಬಾ ಭಿನ್ನವಾಗಿ ಪ್ರಸ್ತುತಪಡಿಸಿರುವ ಅಪರೂಪದ ಕೃತಿ ಇದು. ಅಂಬೇಡ್ಕರ್ ಅವರ ವಿಚಾರಗಳನ್ನು ವಸಾಹತೋತ್ತರ ಭಾರತದ ವಿದ್ಯಮಾನಗಳ ನೆಲೆಯಲ್ಲಿ ಹಾಗೂ ನವ ವಸಾಹತೀಕರಣವೆನ್ನುವ ಜಾಗತೀಕರಣದ ವಿದ್ಯಮಾನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿರುವುದು ಈ ಕೃತಿಯ ವಿಶೇಷ. ದಲಿತ ಚಳವಳಿಗಾರರು, ಚಿಂತಕರು ಈ ಕೃತಿಯನ್ನು ಅಗತ್ಯವಾಗಿ ಅಧ್ಯಯನ ಮಾಡಬೇಕು.

ಪ್ರಕಾಶಕರು: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು





ಅಗ್ನಿ ಕಿರೀಟ
ಲೇ: ಶಿವಕುಮಾರ ಕಂಪ್ಲಿ
ಬೆಲೆ: ರೂ. ೨೫/-

ಕವಿತೆ ಕಟ್ಟುವುದು ಸುಲಭದ ಕೆಲಸವಲ್ಲ. ಹಾಗೊಂದು ವೇಳೆ ಜಿದ್ದಿಗೆ ಬಿದ್ದು ಕವಿತೆ ಕಟ್ಟಲು ತೊಡಗಿದರೆ ಅದು ಕೇವಲ ಪದಗಳ ಸಮೂಹವಾದೀತು. ಅಂತಹ ಎಲ್ಲ ಎಚ್ಚರಿಕೆಯ ಗೆರೆಗಳನ್ನು ದಾಟಿ ಒಂದು ಸುಂದರ ಕವಿತೆ ಕಟ್ಟಿಕೊಡುವುದು ಸವಾಲಿನ ಕೆಲಸವೇ ಸರಿ. ಯುವ ಕವಿ ಕಂಪ್ಲಿಯವರ ಮೊದಲ ಸಂಕಲನ ನೋಡಿದರೆ ಇದೆಲ್ಲ ಸವಾಲನ್ನು ಮೀರಿ ಬೆಳೆಯತೊಡಗುತ್ತಲೇ ಇನ್ನಷ್ಟು ಕಾವ್ಯವನ್ನು ನೀಡುವ ಮೂಲಕ ಕಾವ್ಯ ಕ್ಷೇತ್ರವನ್ನು ಶ್ರೀಮಂತ ಗೊಳಿಸಬಲ್ಲರು ಎಂಬುದರಲ್ಲಿ ಎರಡು ಮಾತಿಲ್ಲ.

ಪ್ರಕಾಶಕರು: ಸಂಸ್ಕೃತಿ ಪ್ರಕಾಶನ ಬಳ್ಳಾರಿ-೦೨

ಹೊಸ ಪುಸ್ತಕ

ಕಾಲ್ನಡಿಗೆಯ ಪಯಣ
ಲೇ: ವಿ.ಜೆ. ನಾಯಕ
ಬೆಲೆ: ರೂ. ೧೨೦/-

ಸಮಾಜವಾದಿ ಚಿಂತಕ ವಿ.ಜೆ. ನಾಯಕರ ಆತ್ಮಕಥನ ಈ ಕೃತಿ. ಇದರಲ್ಲಿ ತಮ್ಮ ಪೂರ್ವಜರ ಇತಿಹಾಸ, ತಲೆಮಾರಿನ ಜೀವನಕ್ರಮ, ಸಮಾಜವಾದೀ ಚಿಂತನೆಗೆ ಆಕರ್ಷಿತರಾಗಿದ್ದು, ಕಲೆಯಲ್ಲೂ ಹೆಜ್ಜೆ ಮೂಡಿಸಿದ್ದಕ್ಕೆ ಸಾಕ್ಷಿಯಾಗಿ ನಿಲ್ಲುವ ಯಕ್ಷಗಾನ, ಬಯಲಾಟದ ಪ್ರಸಂಗಗಳು. ತಮ್ಮ ಮನೆತನದ ಕಸುಬಾದ ಕೃಷಿಯ ಬಗ್ಗೆ ಹೊಂದಿದ್ದ ಅಪರಿಮಿತ ಜ್ಞಾನದ ಕುರಿತು ಅವಲೋಕನ ಇಲ್ಲಿನ ವಿಶೇಷ.

ಪ್ರಕಾಶಕರು: ಪಟೇಲ್ ಜೋಗಿ ಸ್ಮಾರಕ ಗ್ರಂಥಮಾಲೆ, ಅಂಕೋಲಾ, ೫೮೧೩೫೭.

ಹದ್ದುಗಳು
ಲೇ: ಆರ್. ವಿ. ಭಂಡಾರಿ
ಬೆಲೆ: ರೂ. ೪೫/-

ತಮ್ಮ ಎರಡು ಕವನ ಸಂಕಲನಗಳ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಭಂಡಾರಿ ಅವರು, ಇಪ್ಪತ್ತು ವರ್ಷಗಳ ದೀರ್ಘ ಅಜ್ಞಾತವಾಸದಿಂದ ಹೊರಬಂದವರಂತೆ 'ಹದ್ದುಗಳು' ಕವನ ಸಂಕಲನವನ್ನು ಹೊರತಂದಿದ್ದಾರೆ. ವಿವಿಧ ಬಗೆಯ ೩೬ ಪದ್ಯಗಳ ಮೂಲಕ ಸಮಾಜದಲ್ಲಿ ಹುದುಗಿ ಹೋಗಿರುವ ಮೌಢ್ಯ, ಕಂದಾಚಾರಗಳನ್ನು ಬಯಲಿಗೆಳೆದಿದ್ದಾರೆ. ಭ್ರಾತೃತ್ವದ ಆಶಯ, ಸಮತಾವಾದದ ನಿಲುವುಗಳು ಹಾಗೂ ಜಾತ್ಯಾತೀತತೆಗಾಗಿ ಹಂಬಲಿಸುವ ಪರಿ ಇದೆಲ್ಲವೂ ಇಲ್ಲಿ ಪದ್ಯಗಳಾಗಿ ಮೈದಾಳಿವೆ.

ಪ್ರಕಾಶಕರು: ಬಂಡಾಯ ಪ್ರಕಾಶನ, ಅರೇಅಂಗಡಿ, ಹೊನ್ನಾವರ (ಉ.ಕ)

ಮಾತಾಹರಿ, ಬೆಲೆ: ರೂ. ೨೫-
ಪುಟ್ಟ ರಾಜಕುಮಾರ ಬೆಲೆ: ೪೫/-
ಬೊಕಾಷಿಯೋನ ರಸಿಕತೆಗಳು, ಬೆಲೆ: ೪೫/-
ಎಲ್ಲ ಕೃತಿಗಳ ಲೇಖಕರು: ಡಾ. ಜೆ. ಬಾಲಕೃಷ್ಣ

ಸಾಹಿತ್ಯ, ಸೂಫಿ, ಝೆನ್, ವಿಜ್ಞಾನ ಬರಹಗಳ ಮೂಲಕ ಕನ್ನಡ ಓದುಗರಿಗೆ ಚಿರಪರಿಚಿತರಾಗಿರುವ ಬಾಲಕೃಷ್ಣ ಅವರ ಅಪರೂಪದ ಕೃತಿಗಳು ಇವು. ಮಾತಾಹರಿ ಕುರಿತಾದ ರೋಚಕ ಕಥನವನ್ನು ಅಷ್ಟೇ ರೋಚಕವಾಗಿ ಇಲ್ಲಿ ನಿರೂಪಿಸಲಾಗಿದೆ. ತನ್ನ ಹುಲುಸಾದ ಕಪ್ಪುಕೂದಲು, ಹೊಳೆಯುವ ಕಣ್ಣುಗಳಿಂದ ಎದ್ದು ಕಾಣುವಂತಿದ್ದಳು. ಮೊದಲನೆಯ ವಿಶ್ವ ಯುದ್ಧದ ಸಮಯದಲ್ಲಿ ಅನೇಕ ಮಿಲಿಟರಿ ಅಧಿಕಾರಿಗಳೊಂದಿಗೆ, ಅಸಂಖ್ಯಾತ ಗೆಳೆಯರೊಂದಿಗೆ ಸಖ್ಯಹೊಂದಿದ್ದಳು. ಗೂಢಚಾರಿಣಿ ಎಂಬ ಅಪವಾದಕ್ಕೆ ಗುರಿಯಾಗಿ ಫ್ರೆಂಚ್ ಸರ್ಕಾರದಿಂದ ಮರಣದಂಡನೆಗೆ ಗುರಿಯಾದಳು. ಅವಳ ವಿಶಿಷ್ಠ ಬದುಕಿನ ಕಥಾನಕವೇ ಈ ಕೃತಿ.





ಸೇಂತ್ ಎಕ್ಸೂಪರಿ ವಿಶ್ವಯುದ್ಧದ ಸಮಯದಲ್ಲಿ ಮಿಲಿಟರಿಗೆ ಸೇರಿದ್ದ. ಅಲ್ಲಿಂದ ವಾಯುಪಡೆಗೆ ನಿಯುಕ್ತಿಗೊಂಡು ಆಫ್ರಿಕಾದ ದುರ್ಗಮ ಪ್ರದೇಶದಲ್ಲಿ ಅಪಾಯಕಾರಿ ವಿಮಾನ ಚಾಲನೆ ಮಾಡುತ್ತಿದ್ದ. ಆವಾಗಿನ ತನ್ನ ಒಂಟಿತನದ ಬವಣೆಯನ್ನು ನೀಗಿಸಿಕೊಳ್ಳಲು ಬರೆದ ಅನುಭವಗಳ ಕಥನವೇ ಈ 'ಪುಟ್ಟ ರಾಜಕುಮಾರ'. ಈ ಪುಸ್ತಕ ಈಗಾಗಲೇ ವಿಶ್ವದ ೧೫೫ ಭಾಷೆಗಳಿಗೆ ಅನುವಾದಗೊಂಡಿದೆ. ಈಗಲೂ ಪ್ರತಿವರ್ಷ ೧೦ಲಕ್ಷಕ್ಕೂ ಹೆಚ್ಚು ಪ್ರತಿ ಮಾರಾಟವಾಗುತ್ತವೆ.

೧೪ನೇ ಶತಮಾನದಲ್ಲಿ ಜಗತ್ತೇ ನಿಬ್ಬೆರಗಾಗುವಂತೆ ಗದ್ಯ ರಚಿಸಿದ್ದ ಬೊಕಾಷಿಯೋನ ಪ್ರಮುಖ ಕೃತಿ 'ಡೆಕಮೆರಾನ್' ಅನುವಾದವೇ 'ಬೋಕಾಷಿಯೋನ ರಸಿಕತೆಗಳು'. ತನ್ನ ಒಳ ನೋಟಗಳಿಂದ ಜಗತ್ತಿನ ಶ್ರೇಷ್ಠ ಸಾಹಿತ್ಯದ ಸಾಲಿನಲ್ಲಿ ಸೇರುವಂತಾಗಿದೆ. ಇದರಲ್ಲಿ ಅಂದಿನ ಇಟಲಿಯ ಆಡಳಿತದ ಪರಿಯನ್ನು ಕಾಣಬಹುದು. ಆಳುವವರ, ಧರ್ಮಗುರುಗಳ ಅಂತರಂಗ, ಬಹಿರಂಗ ಮುಖವನ್ನು ಈ ಕೃತಿಯಲ್ಲಿ ಬೊಕಾಷಿಯೋ ಯಥಾವತ್ತಾಗಿ ಚಿತ್ರಿಸಿದ್ದಾರೆ. ಮೂರೂ ಪುಸ್ತಕಗಳು ಕನ್ನಡದವೇ ಏನೋ ಎನ್ನುವಂಥ ಉತ್ತಮ ಅನುವಾದವನ್ನು ಡಾ.ಜೆ. ಬಾಲಕೃಷ್ಣ ಅವರು ಆಪ್ತವಾಗಿ ಕಟ್ಟಿಕೊಟ್ಟಿದ್ದಾರೆ.

ಮೇಲಿನ ಮೂರು ಪುಸ್ತಕಗಳ ಪ್ರಕಾಶಕರು: ಪ್ರಗತಿ ಗ್ರಾಫಿಕ್ಸ್, ಬೆಂಗಳೂರು

'ಜಾತ್ಯಾತೀತ ಹಿಂದುತ್ವ'

ಕುವೆಂಪು ವಿ.ವಿ ಸಂಶೋಧನೆ!

ಕುವೆಂಪು ವಿಶ್ವವಿದ್ಯಾನಿಲಯದ 'ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ'ದಲ್ಲಿ ನಡೆಯುತ್ತಿರುವ ಸಂಶೋಧನೆ ಬಗ್ಗೆ ಅಲ್ಲಲ್ಲಿ ಗಾಳಿಮಾತುಗಳು, ಪರೋಕ್ಷವಾದ ಅಭಿಪ್ರಾಯಗಳು ವಿವಿಯಲ್ಲಿ ಕಳೆದ ಕೆಲ ವರ್ಷಗಳಿಂದ ತೇಲಾಡುತಿತ್ತೇ ವಿನಃ, ಅಲ್ಲಿ ನಿರ್ಧಿಷ್ಟವಾಗಿ ಏನಾಗುತ್ತಿದೆ ಎಂಬುದರ ಬಗ್ಗೆ ಬಹುಶಃ ಕೇಂದ್ರದ ಹೊರಗಿರುವ ಯಾರಿಗೂ ಸ್ಪಷ್ಟವಾಗಿ ಗೊತ್ತಿರಲಿಲ್ಲ. ಡೊಮಿನಿಕ್ ಅವರ ಲೇಖನದಿಂದಾಗಿ ಕರ್ನಾಟಕದ ಜನತೆಗೆ ಈ ಕೇಂದ್ರದಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಕೊಂಚ ಮಟ್ಟಿನ ಮಾಹಿತಿಯಾದರೂ ಸಿಕ್ಕಿದೆ. ಭಾರತದಲ್ಲಿ ಜಾತಿ ಅಸಮಾನತೆ, ಅದನ್ನು ಪೋಷಿಸಿಕೊಂಡು ಬಂದಿದೆ ಎಂದು ನಂಬಲಾಗಿರುವ ಹಿಂದೂಯಿಸಂ ಕಾರಣವಲ್ಲ ಎಂಬುದು ಈ ಗುಂಪಿನ ಮೊದಲ ಪ್ರಮೇಯ. ಈ ವಾದ 'ಕನಿಷ್ಟ ಜ್ಞಾನವಿದ್ದವರಿಗೂ' ಅಸಂಬದ್ಧವಾಗಿ ಕಂಡರೆ ಅದು ಅವರ ಪಶ್ಚಿಮಮುಖೀ ಚಿಂತನಾ ಕ್ರಮದ ದೋಷ!

ಡಾ. ವಿ.ಎಸ್. ಶ್ರೀಧರ

ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ನಡೆದ 'ಜಾತಿ ಮತ್ತು ಸಾಮಾಜಿಕ ತಾರತಮ್ಯ' ಎಂಬ ವಿಚಾರ ಸಂಕಿರಣದಲ್ಲಿ ಭಾಗಿಯಾಗಿದ್ದವರಲ್ಲಿ ನಾನೂ ಒಬ್ಬ. ಈ ಬಗ್ಗೆ ಡಾ. ಡೊಮಿನಿಕ್ ಬರೆದ ವರದಿಗೆ ಡಾ. ಷಣ್ಮುಖ ಅವರು ನೀಡಿರುವ ಪ್ರತಿಕ್ರಿಯೆ ಕಳೆದ ಕೆಲ ವರ್ಷಗಳಿಂದ ಇದೇ ವಿ.ವಿಯ 'ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ'ವು (ಸಿ.ಎಸ್.ಎಲ್.ಎಸ್) ಪ್ರಸ್ತುತ ನಡೆಸುತ್ತಿರುವ ಜಾತಿ ಕುರಿತ ಸಂಶೋಧನೆ ಬಗ್ಗೆ ಹಲವು 'ಉಪಯುಕ್ತ' ಮಾಹಿತಿ ನೀಡಿದೆ.

ಈ ಕೇಂದ್ರದಲ್ಲಿ ನಡೆಯುತ್ತಿರುವ ಸಂಶೋಧನೆ ಬಗ್ಗೆ ಅಲ್ಲಲ್ಲಿ ಗಾಳಿಮಾತುಗಳು, ಪರೋಕ್ಷವಾದ ಅಭಿಪ್ರಾಯಗಳು ವಿವಿಯಲ್ಲಿ ಕಳೆದ ಕೆಲ ವರ್ಷಗಳಿಂದ ತೇಲಾಡುತಿತ್ತೇ ವಿನಃ, ಅಲ್ಲಿ ನಿರ್ಧಿಷ್ಟವಾಗಿ ಏನಾಗುತ್ತಿದೆ ಎಂಬುದರ ಬಗ್ಗೆ ಬಹುಶಃ ಕೇಂದ್ರದ ಹೊರಗಿರುವ ಯಾರಿಗೂ ಸ್ಪಷ್ಟವಾಗಿ ಗೊತ್ತಿರಲಿಲ್ಲ. ಡೊಮಿನಿಕ್ ಅವರ 'ಅರೋಪ'ದ ಸತ್ಯಾಸತ್ಯತೆ ಏನೇ ಇರಲಿ, ಅವರ ಲೇಖನದಿಂದಾಗಿ ಕರ್ನಾಟಕದ ಜನತೆಗೆ ಈ ಕೇಂದ್ರದಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಕೊಂಚ ಮಟ್ಟಿನ ಮಾಹಿತಿಯಾದರೂ ಸಿಕ್ಕಿದೆ. ಆದರೆ, ತಮ್ಮ ಕೇಂದ್ರದ ಪಕ್ಕದಲ್ಲೇ ಜರುಗಿದ, ತಮ್ಮ ಸಂಶೋಧನೆಯ ವಿಷಯಕ್ಕೇ ಸಂಬಂಧಪಟ್ಟ ವಿಚಾರ ಸಂಕಿರಣಕ್ಕೆ, ಈ ಕೇಂದ್ರದ ಯಾವ ಅಧ್ಯಾಪಕರಾಗಲೀ, ಸಂಶೋಧನಾ ವಿಧ್ಯಾರ್ಥಿಗಳಾಗಲೀ ಗಣನೀಯ ಸಂಖ್ಯೆಯಲ್ಲಿ ಬರದಿದ್ದುದು ಮಾತ್ರ ಸೋಜಿಗ. (ಬಂದಿದ್ದವರೂ ಅಲ್ಲಿ ಮಾತನಾಡಿಲ್ಲ.) ಹಾಗೆ ಚರ್ಚೆಯಲ್ಲಿ ಪಾಲ್ಗೊಂಡಿದ್ದರೆ, ಈ ಕುರಿತಂತೆ ಒಂದಷ್ಟು ವಿಚಾರ ಮಂಥನ, ಚರ್ಚೆಯಾಗಬಹುದಿತ್ತು.

ಈಗ ಡಾ. ಷಣ್ಮುಖರವರ ಲೇಖನ ಓದಿದ ಮೇಲೆ, ಈ ವಿಚಾರ ಸಂಕಿರಣವೂ ಅದೇ ಹಳೆಯದಾದ ವಸಾಹತುಶಾಹಿ "ಚೌಕಟ್ಟಿನೊಳಗೇ ತಮ್ಮ ಸಿದ್ಧಾಂತಗಳನ್ನು ಮತ್ತೆ ಮತ್ತೆ ಮುರಿದು ಕಟ್ಟುವ" ಕಲಾಯಿ ಕೆಲಸವೇ ಆಗಿರುತ್ತದೆ ಎಂಬ ಧೃಢವಾದ ನಂಬಿಕೆ (ಅಥವಾ ಐಡಿಯಾಲಜಿ) ಈ ಗುಂಪಿನವರನ್ನು ಈ ಸಭೆಯಿಂದ ಹೊರಗೆ ಇಟ್ಟಿರಬಹುದೇನೊ ಎಂಬ ಅನುಮಾನ ಉಂಟಾಗುತ್ತದೆ. ಎರಡೂ ದಿನಗಳಲ್ಲಿ ಮಂಡಿತವಾದ ಪ್ರಬಂಧಗಳು ಸಿ.ಎಸ್.ಎಲ್.ಎಸ್‌ನ ಸಂಶೋಧನೆಯನ್ನು ಟೀಕಿಸುವುದನ್ನೇ ತಮ್ಮ ಕೇಂದ್ರ ಉದ್ದೇಶವನ್ನಾಗಿ ಏನೂ ಮಾಡಿಕೊಂಡಿರಲಿಲ್ಲ. ಆದರೆ ವಿಚಾರ ಸಂಕಿರಣದ ವಿಷಯ, ಮತ್ತು ಸಿ.ಎಸ್.ಎಲ್.ಎಸ್‌ನ ಅಧ್ಯಯನ ವೆರಡೂ ಜಾತಿ ವಿಷಯವನ್ನೇ ಕುರಿತದ್ದಾದ್ದರಿಂದ, ಕೇಂದ್ರದ ಚಟುವಟಿಕೆ ಬಗ್ಗೆ ಈ ಸಂಕಿರಣದಲ್ಲಿ ಪ್ರಸ್ತಾಪವಾಗಿದ್ದು ಸಹಜ ಹಾಗೂ ಅನಿವಾರ್ಯ. ಆದ್ದರಿಂದ ಬಾಲಗಂಗಾಧರರ ನೇತೃತ್ವದ ಸಂಶೋಧನೆ ಬಗ್ಗೆ ಈ ವಿಚಾರ ಸಂಕಿರಣ 'ಚಕಾರವನ್ನೇ ಎತ್ತಲಿಲ್ಲ' ಎಂಬುದು ಸರಿಯಲ್ಲ. ಕಡೆಯ ಗೋಷ್ಠಿಯಲ್ಲಿ ಮಾತನಾಡಿದ ಪ್ರೊ.ಕಿ.ರಂ. ತಮ್ಮ ಪ್ರಸ್ತಾವನೆಯಲ್ಲಿ ಬಾಲಗಂಗಾಧರರ ಹೈಪೊಥಿಸಿಸ್ ಬಗ್ಗೆ ತಮಗಿರುವ ಭಿನ್ನಭಿಪ್ರಾಯಗಳನ್ನು ಸ್ಪಷ್ಟವಾಗಿ ಸೂಚಿಸಿದ್ದಲ್ಲದೆ, ಕನ್ನಡ ಸಾಹಿತ್ಯ-ಸಂಸ್ಕೃತಿಯ ಪರಂಪರೆಯಲ್ಲಿ ಉದ್ದಕ್ಕೂ ಹರಿದು ಬಂದಿರುವ ಜಾತಿ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆಯ ನೆಲೆ ಹಾಗೂ ಸ್ವರೂಪಗಳ ವಿವರವಾದ ಚಿತ್ರವನ್ನೇ ಬಿಡಿಸಿಟ್ಟರು.

'ಹಿಂದೂಯಿಸಂ' ಎಂಬುದು ಪಶ್ಚಿಮ ಪ್ರಣೀತ, ವಸಾಹತು-ಆಧುನಿಕತೆ ಹುಟ್ಟಿಹಾಕಿದ ತಪ್ಪು ಕಲ್ಪನೆಗಳಿಂದ ಹುಟ್ಟಿದ್ದು, ಅದಕ್ಕೂ ಜಾತಿ ವ್ಯವಸ್ಥೆ-ಜಾತಿ ಅಸಮಾನತೆಗೂ ಯಾವ ಸಂಬಂಧವೂ ಇಲ್ಲ ಎಂಬ ಬಾಲು ಅವರ ಥೀಸಿಸ್ ಅನ್ನು ವಾದಕ್ಕಾಗಿ ಒಂದು ವೇಳೆ ಒಪ್ಪಿಕೊಂಡರೂ, ವಸಾಹತು ಪೂರ್ವ ಸಾಹಿತ್ಯಗಳಲ್ಲಿ ಅದರಲ್ಲೂ ಮುಖ್ಯವಾಗಿ ವಚನ ಮತ್ತು ಭಕ್ತಿಸಾಹಿತ್ಯದಲ್ಲಿ ಇರುವ ಜಾತಿ ವ್ಯವಸ್ಥೆಗೂ, ವೈದಿಕ-ಹಿಂದೂ ಪುರೋಹಿತಶಾಹಿಗೂ ನಡುವಿನ ನಂಟಿನ ಪ್ರಸ್ತಾವನೆಗಳನ್ನು ಹೇಗೆ ಸ್ವೀಕರಿಸಬೇಕು ಎಂಬ ಪ್ರಶ್ನೆ ಹಾಗೇ ಉಳಿಯುತ್ತದೆ. ಕಿ.ರಂ ಅವರ ಭಾಷಣದ ಮುಖ್ಯ ವಸ್ತು ಈ ಪ್ರಶ್ನೆಯನ್ನು ಕುರಿತಂತೆಯೇ ಇದ್ದಿದ್ದು. ಅದಕ್ಕೆ ಬಾಲು ಗುಂಪಿನವರ ಉತ್ತರವಿದ್ದಿದ್ದರೆ, ಚರ್ಚೆ ಇನ್ನಷ್ಟು ಮುಂದುವರೆಯಬಹುದಿತ್ತು. ಆದರೆ, ಕಿ.ರಂ ಅವರೇ ಈ ವಿಷಯವನ್ನು ಪ್ರಸ್ತಾಪಿಸುತ್ತಾ, ಬಾಲು ಅವರ ಸಮಾಜಶಾಸ್ತ್ರದ ಅಧ್ಯಯನ, ಸಾಹಿತ್ಯದ ಉಲ್ಲೇಖನಗಳನ್ನಾಗಲೀ, ಪ್ರತಿಮೆಗಳನ್ನಾಗಲೀ ಒಂದು 'ಸಾಕ್ಷ್ಯ' ವೆಂದು ಪರಿಗಣಿಸಲು ನಿರಾಕರಿಸುವುದರ ಬಗ್ಗೆ, ಮತ್ತು ಈ ನಿರಾಕರಣೆ ಪ್ರಸ್ತುತ ಅಧ್ಯಯನಕ್ಕೆ ಹೇಗೆ ಮಿತಿಗಳನ್ನು ಸೃಷ್ಟಿಸಿ, ಅಚಾರಿತ್ರಿಕವನ್ನಾಗಿಸುತ್ತದೆ ಎಂಬುದರ ಬಗ್ಗೆ ಮಾತಾಡಿದರು.

ಆದರೆ, ಜಾತಿ ವ್ಯವಸ್ಥೆ ಬಗ್ಗೆ ಕಳೆದ 'ನೂರೈವತ್ತು ವರ್ಷಗಳಿಂದ ಬೆಳೆದು ಬಂದಿರುವ ಯಾವ ವಿವರಣೆ, ಥಿಯರಿಗಳೂ, ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನೆರವಾಗಿಲ್ಲ ಎಂಬ ವಾದವನ್ನು ಕೆಲವು ವರ್ಷಗಳಿಂದಲೂ ಬಾಲಗಂಗಾಧರ ಅವರು ಕರ್ನಾಟಕದ ಕೆಲವೆಡೆ, ಅದರಲ್ಲೂ ಮುಖ್ಯವಾಗಿ ಹೆಗ್ಗೋಡಿನಲ್ಲಿ, ಮುಂದಿಡುತ್ತಾ ಬಂದಿದ್ದಾರೆ. ಈ ಬಗ್ಗೆ ಹೆಗ್ಗೋಡಿನಲ್ಲಿ ಮಾತನಾಡುತ್ತಾ, ಇಡೀ ವಚನ ಸಾಹಿತ್ಯವನ್ನು ತಾವು ಅಮೂಲಾಗ್ರವಾಗಿ ಓದಿರುವುದಾಗಿಯೂ, ಅಲ್ಲಿ ಎಲ್ಲೂ ಜಾತಿ ಬಗ್ಗೆ (ಈಗ ಸಾಮಾನ್ಯವಾಗಿ ಎಲ್ಲರೂ ತಿಳಿದುಕೊಂಡಿರುವ ಥಾಗೆ) ಉಲ್ಲೇಖವೇ ಇಲ್ಲವೆಂಬುದಾಗಿಯೂ, ಇದ್ದರೂ ಅದನ್ನು ತಪ್ಪಾಗಿ ಗ್ರಹಿಸಿಸಿರುವುದಾಗಿಯೂ ಹೇಳಿ, ಅಲ್ಲಿದ್ದ ಕಿ.ರಂ, ಅನಂತಮೂರ್ತಿ ಇತ್ಯಾದಿಗಳನ್ನು ನಿಬ್ಬೆರಗಾಗಿಸಿದ್ದು ಇನ್ನೂ ನನ್ನ ನೆನಪಿನಲ್ಲಿದೆ. ಅಲ್ಲಿ ಆಗ ಮಂಡಿಸಿದ ವಾದ ಈಗ ಕುವೆಂಪು ವಿವಿಯ ಸಹಯೋಗದ ಮೂಲಕ ಒಂದು ಸಾಂಸ್ಥಿಕ ಸ್ವರೂಪ ಪಡೆದುಕೊಂಡಿದೆ.

'ನಮಗೆ ಈ (ಅಂದರೆ, ಜಾತಿ ಕುರಿತಂತೆ) ಬರವಣಿಗೆಗಳ ಬಗ್ಗೆ ಕನಿಷ್ಟ ಜ್ಞಾನವಿದ್ದರೂ ಸಾಕು, ಈ ಸಿದ್ಧಾಂತವು ವಸ್ತುಸ್ಥಿತಿಯನ್ನಾಧರಿಸಿಲ್ಲ ಎಂಬುದನ್ನು ನಾವೇ ಮನಗಾಣುತ್ತೇವೆ' ಎಂದಿರುವ ಷಣ್ಮುಖ ಅವರ ಧ್ವನಿಯ ಹಿಂದೆ ಇದೇ ಧಾರ್ಷ್ಟ್ಯ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಸಿ.ಎಸ್.ಎಲ್.ಎಸ್‌ನ ಭಾಗವಾಗಿ, ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ಹುಟ್ಟುಹಾಕಲಾಗಿರುವ 'ಕರ್ನಾಟಕ ಅಕಾಡೆಮಿ ಅಫ್ ಸೋಶಿಯಲ್ ಸೈನ್ಸಸ್ ಅನ್ಡ್ ಹುಮ್ಯಾನಿಟೀಸ್' ಎಂಬ ಹೊಸ ಸಂಸ್ಥೆ (ಇಂಗ್ಲಿಷ್‌ನಲ್ಲಿ ಇದರ ಸಂಕ್ಷಿಪ್ತ ರೂಪ "ಕ್ಯಾಷ್" ! ಇದು ಕೇವಲ ಅಕಸ್ಮಿಕವಲ್ಲದೇ ಇರಬಹುದು.) ಈಗ ಇಂಜಿನಿಯರಿಂಗ್ ವಿಧ್ಯಾರ್ಥಿಗಳಿಗೆ ಸಮಾಜ ಶಾಸ್ತ್ರ ಮತ್ತು ಮಾನವಿಕ ವಿಷಯಗಳನ್ನು ಕುರಿತಂತೆ ಕೋರ್ಸುಗಳನ್ನು ಪ್ರಾರಂಭಿಸುವ ಯೋಜನೆ ಹಾಕಿಕೊಂಡಿದೆ. ಇದು ಸ್ವಾಗತಾರ್ಹವೇ. ಈ ಬಗ್ಗೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಸಿ.ಎಸ್.ಎಲ್.ಎಸ್‌ನ ನಿರ್ದೇಶಕ ಪ್ರೊ. ಸದಾನಂದ ಅವರು 'ಸಮಾಜ ಶಾಸ್ತ್ರ ಮತ್ತು ಮಾನವಿಕ ವಿಷಯಗಳಲ್ಲಿ ವಿಶೇಷವಾದ ಪರಿಣಿತಿ ಇರುವ ಅಧ್ಯಾಪಕರ ಸಂಖ್ಯೆ ಅತ್ಯಂತ ಕಮ್ಮಿಯಿರುವುದರಿಂದ ಹಾಗೂ ಈ ವಿಷಯಗಳನ್ನು ಇಂಜಿನಿಯರಿಂಗ್ ವಿಧ್ಯಾರ್ಥಿಗಳಿಗೆ ಪಾಠಮಾಡಲು ಬೇಕಾದ ಕೌಶಲ್ಯ ಈಗ ಇರುವ ಸಮಾಜ ಶಾಸ್ತ್ರ ಮತ್ತು ಮಾನವಿಕ ಅಧ್ಯಾಪಕರಿಗೆ

ಚರ್ಚೆ

ಜಾತಿ ಧರ್ಮ ತಾರತಮ್ಯ

ಇಲ್ಲದಿರುವುಧರಿಂದ', ಈ ಹೊಸ ಅಕಾಡೆಮಿ ಹೊಸ ಪಠ್ಯಗಳ ಮಾಡ್ಯೂಲುಗಳನ್ನು ಹಾರ್ವರ್ಡ್ ಮತ್ತಿತರೆ ಯೂರೋಪಿಯನ್ ವಿಶ್ವವಿದ್ಯಾನಿಲಯಗಳಿಂದ ಪಡೆಯಲಿದೆ ಎಂಬ ಹೇಳಿಕೆ ನೀಡಿದ್ದಾರೆ (ದಿ ಟೈಮ್ಸ್ ಅಫ್ ಇಂಡಿಯ, ಜುಲೈ ೫). ಮೇಲೆ ಸೂಚಿತವಾಗಿರುವ ಧೋರಣೆ ಇಲ್ಲೂ ಧ್ವನಿಸುತ್ತಿರುವುದು ಕೇವಲ ಕಾಕತಾಳೀಯವೇನೂ ಅಲ್ಲ.

ಇರಲಿ, ಭಾರತದಲ್ಲಿ ಜಾತಿ ಅಸಮಾನತೆ, ಜಾತಿ ಅಧಾರಿತ ಅನ್ಯಾಯ–ಹಿಂಸೆ ಅಸ್ತಿತ್ವದಲ್ಲಿದೆ; ಆದರೆ ಅದಕ್ಕೆ ಜಾತಿ ವ್ಯವಸ್ಥೆಯಾಗಲೀ, ಅದನ್ನು ಪೋಷಿಸಿಕೊಂಡು ಬಂದಿದೆ ಎಂದು ನಂಬಲಾಗಿರುವ ಹಿಂದೂಯಿಸಂ ಆಗಲೀ ಕಾರಣವಲ್ಲ ಎಂಬುದು ಈ ಗುಂಪಿನ ಮೊದಲ ಪ್ರಮೇಯ. ಈ ವಾದ 'ಕನಿಷ್ಟ ಜ್ಞಾನವಿದ್ದವರಿಗೂ' ಅಸಂಬದ್ಧವಾಗಿ ಕಂಡರೆ ಅದು ಅವರ ಪಶ್ಚಿಮಮುಖೀ ಚಿಂತನಾಕ್ರಮದ ದೋಷ! ಅಂದರೆ ಇಂದು ಸಾಮಾನ್ಯ ಜ್ಞಾನವಾಗಿ ಎಲ್ಲರ ಪ್ರಜ್ಞೆಯಲ್ಲೂ ಹೂತು ಹೋಗಿರುವ ಜಾತಿ ವ್ಯವಸ್ಥೆ ಕುರಿತ ಈ ಪರಿಜ್ಞಾನ ವಸಾಹತುಶಾಹಿ ತಂದೊಡ್ಡಿರುವ ಒಂದು ವಿಕೃತಿ: ನಮ್ಮ ಸಮಾಜದ "ನೈಜ" ಸ್ಥಿತಿಯನ್ನೇ ತಿರುಚಿಹಾಕಿರುವ ಒಂದು ವಿದ್ಯಮಾನ. ಬೇರೆಲ್ಲಾ ಸಮಾಜಶಾಸ್ತ್ರಜ್ಞರು, ಚಿಂತಕರು ಈ ವಸಾಹತುಶಾಹಿ ಜ್ಞಾನೀಯಮಾರ್ಗದ ಅಡಿಯಾಳಾಗಿ, ಅದರ ವಶೀಕರಣಕ್ಕೆ ಒಳಗಾಗಿದ್ದರೆ, ಬಾಲು ಗುಂಪಿನವರು ಮಾತ್ರ ಈ ಪ್ರಭಾವದಿಂದ 'ಹೇಗೋ' ತಪ್ಪಿಸಿಕೊಂಡು ನವ– ನಿರ್ವಸಾಹತೀಕರಣದ ಅನ್ವೇಷಕರಾಗಿ, ಜಾತಿವ್ಯವಸ್ಥೆಗೆ ಹೊಸ ವ್ಯಾಖ್ಯಾನವನ್ನು ಬರೆಯಲ್ಲು ಹೊರಟಿರುವುದು ಪ್ರಶಂಸಾರ್ಹವೇ.

ಆದರೆ ಈ ವಾದದಲ್ಲಿ ಎರಡು ರೀತಿಯ ಸಮಸ್ಯೆಗಳಿವೆ. ಒಂದು ಮೆಥೆಡಾಲಜಿಗೆ ಸಂಬಂಧ ಪಟ್ಟಿದ್ದರೆ, ಇನ್ನೊಂದು , ರಾಜಕೀಯಕ್ಕೆ ಸಂಬಂಧಿಸಿದ್ದು. ನಮ್ಮ ಜ್ಞಾನಮಾರ್ಗ, ವೈಚಾರಿಕತೆ, ಬದುಕಿನ ಕ್ರಮ, ಸಾಮಾಜಿಕ ಸಮಸ್ಯೆಗಳಿಗೆ ನಾವು ಕಂಡುಕೊಳ್ಳಬೇಕಾದ ರಾಜಕೀಯ ಪರಿಹಾರಗಳು ಇತ್ಯಾದಿಗಳು ನಿರ್ವಸಾಹತೀಕರಣದತ್ತ ಸಾಗಬೇಕೆನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ನಿರ್ವಸಾಹತೀಕರಣ ಎಂದರೇನು ಎಂಬ ಪ್ರಶ್ನೆಯನ್ನು ಮೂಲಭೂತವಾಗಿ ನಿರ್ವಹಿಸದೇ ಇದ್ದರೆ ಅದು ಗತಕಾಲದ ವೈಭವೀಕರಣದ ಇನ್ನೊಂದು ರೀತಿಯ ಆಂತರಿಕ ವಸಾಹತು ಧೋರಣೆಗೆ ನಮ್ಮನ್ನು ಕರೆದೊಯ್ಯಬಹುದಲ್ಲವೇ? ಷಣ್ಮುಖ ಅವರ ಲೇಖನದ ಹಿಂದಿನ ವಾದ ನೋಡಿದರೆ, ಪಾಶ್ಚಿಮಾತ್ಯ ಜ್ಞಾನಶಾಖೆಗಳು ಶತಮಾನಗಳಿಂದ ನಮ್ಮ ಮನಸ್ಸುಗಳ ಮೇಲೆ ಹೊದಿಸಿಕೊಂಡು ಬಂದಿರುವ ಪಶ್ಚಿಮ ಪ್ರಣೀತ ವೈಚಾರಿಕತೆಯ ಹೊದಿಕೆಗಳನ್ನು ಒಂದೊಂದಾಗಿ ತೆಗೆಯುತ್ತಾ ಬಂದರೆ, ಕಡೆಗೆ ನಮ್ಮ "ನೈಜ" ಸಂಸ್ಕೃತಿಯ ದರ್ಶನವಾಗ ಬಹುದು ಎನ್ನುವ ನಂಬಿಕೆ ಇಲ್ಲಿ ಕೆಲಸ ಮಾಡುತ್ತಿದೆ ಎಂದನಿಸುತ್ತದೆ. ಹೀಗೆ ಸಾಮಾಜಿಕ ವಾಸ್ತವವನ್ನು ಅದರ ಅಥೆಂಟಿಕ್ ಸ್ವರೂಪದಲ್ಲಿ ಕಾಣಬಹುದು ಎಂಬುದೇ ಒಂದು ಯೂರೋಕೇಂದ್ರಿತ ಸಿದ್ಧಾಂತವಲ್ಲವೇ? ಅಂದರೆ ಮತ್ತೆ ಅದೇ ಯೂರೋಕೇಂದ್ರಿತ ಹತಾರಗಳನ್ನು ಬಳಸಿ, ಪಾಶ್ಚಿಮಾತ್ಯ ಐಡಿಯಾಲಜಿಗೆ ಹೊರತಾದ 'ಇತರ ಸಂಸ್ಕೃತಿಯ ಜನರನ್ನು ನೈಜವಾಗಿ ವಿವರಿಸುವಂಥ ವೈಜ್ಞಾನಿಕ ವಿವರಣೆ' ಗಳನ್ನು ಪಡೆಯಲು ಸಾಧ್ಯವೇ?

ಇದಕ್ಕೆ ಪುರಾವೆಗಾಗಿ ಈ ಗುಂಪು ಸಾಮಾಜಿಕ ಸರ್ವೆಮಾಡಿ ಜನಾಭಿಪ್ರಾಯವನ್ನು ಸಂಗ್ರಹಿಸುವುದರ ಮೂಲಕ ಇಡೀ ಜಾತಿ ವ್ಯವಸ್ಥೆಗೆ ಹೊಸ ಭಾಷ್ಯ ಬರೆಯಲು ಹೊರಟಿರುವುದು ಹಾಸ್ಯಾಸ್ಪದದ ವಿಚಾರ. ಹಳ್ಳಿಗಳಿಗೆ ಹೋಗಿ 'ನಿಮ್ಮ ಜಾತಿನಂಬಿಕೆಗೆ ಯಾವ ಶಾಸ್ತ್ರ ಗ್ರಂಥಗಳು ಆಧಾರವಾಗಿದೆ?' ಎಂದು ಕೇಳಿದರೆ ಯಾರೂ 'ವೇದೊಪನಿಷತ್ತುಗಳು' ಅಥವಾ 'ಮನುಧರ್ಮ ಪಾಲನೆಗಾಗಿ ನಾವು ಜಾತಿಯಲ್ಲಿ ನಂಬಿಕೆಯನ್ನಿಟ್ಟುಕೊಂಡಿದ್ದೇವೆ' ಎಂದು ಹೇಳುವುದಿಲ್ಲ. ಕಂಬಾಲಪಲ್ಲಿಯಲ್ಲಿ ದಲಿತರ ಮಾರಣ ಹೋಮ ಮಾಡಿದ ಯಾವ ರೆಡ್ಡಿಯೂ ಇದಕ್ಕೆ ಹಿಂದೂಯಿಸಂನಲ್ಲಿ ನಮಗೆ ಇರುವ ನಂಬಿಕೆಯಿಂದ ಮಾಡಿದ್ದೇ ವಿನಃ ನಮಗೆ ದಲಿತರ ಬಗ್ಗೆ ಯಾವುದೇ ದ್ವೇಷವಿಲ್ಲ ಎಂದು ಹೇಳಲಾರರು. ಆದರೆ ಮಡಿ ಬ್ರಾಹ್ಮಣರಿಗೆ 'ನೀವು ಯಾಕೆ ದಲಿತರ ಜತೆ ಕೂತು ಉಣ್ಣುವುದಿಲ್ಲ?' ಎಂದು ಕೇಳಿದರೆ ಬರುವ ಉತ್ತರ ಖಂಡಿತಾ ಬೇರೆಯದೇ ಆಗಿರುತ್ತದೆ. ಇವೆಲ್ಲ ಇರಲಿ, ಪಾಶ್ಚಿಮಾತ್ಯ ಜ್ಞಾನ ರೂಪಗಳಿಂದ ಬಿಡುಗಡೆ ಪಡೆಯಲು ಯತ್ನಿಸುತ್ತಿರುವ ಅಧ್ಯಯನ ಯಾಕೆ ಅದೇ ಪಾಶ್ಚಿಮಾತ್ಯ ಸಮಾಜ ಶಾಸ್ತ್ರದ ಸಂಶೋಧನಾ ಮಾರ್ಗ ವಾದ 'ಪ್ರಶ್ನಾವಳಿ', 'ಕ್ಷೇತ್ರಾಧ್ಯಯನ' ಇತ್ಯಾದಿ ಮಾದರಿಗಳನ್ನು ಅನುಸರಿಸುತ್ತಿದೆ? ಇದರಿಂದ ಬರುವ ಉತ್ತರಗಳು ಮತ್ತೆ ಅದೇ ಪಶ್ಚಿಮಮುಖೀ ಜ್ಞಾನ ಸ್ವರೂಪಗಳನ್ನು ಪುನರ್ಸೃಷ್ಟಿಸುವುದಿಲ್ಲ ಎಂಬ ಗ್ಯಾರಂಟಿ ಏನು?

ಇನ್ನು ರಾಜಕೀಯದ ಪ್ರಶ್ನೆಗೆ ಬಂದರೆ, ವಸಾಹತುಶಾಹಿ ಭಾರತದ ಸಮಾಜದ ಮೇಲೆ ಉಂಟುಮಾಡಿರುವ ಅನಾಹುತದ ಜತೆಜತೆಗೇ ಅದರೊಟ್ಟಿಗೇ ಬಂದಿರುವ ವಿವಿಧ ರೀತಿಯ ಆಧುನಿಕತೆಗೂ ನಮ್ಮ ಸಮಾಜ ತೆರೆದು ಕೊಂಡಿದೆ ಎಂಬುದನ್ನು ಯಾವ ನಿರ್ವಸಾಹತುಶಾಹಿ ಥಿಯರಿಯಿಂದಲೂ ಅಲ್ಲಗಳೆಯಲಾಗುವುದಿಲ್ಲ. ಪೌರತ್ವ, ನಾಗರಿಕ ಹಕ್ಕುಗಳು, ಎಲ್ಲರಿಗೂ ಸಮಾನ ಅವಕಾಶ ಇತ್ಯಾದಿ ಆಶಯಗಳು ಒಂದು ಕಡೆ, ಆಶಯಗಳಾಗಿಯೇ ಉಳಿದುಕೊಂಡಿದ್ದರೆ, ಇನ್ನೊಂದು ಕಡೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಸಿಕೊಂಡು ಬಂದಿರುವ ಚುನಾವಣೆ ರಾಜಕೀಯದಿಂದಾಗಿ ಜಾತಿ ಪದ್ಧತಿ ಆಧಾರಿತ ಅಸಮಾನತೆ, ವೈಷಮ್ಯ, ಹಿಂಸೆ ಇಂದು ಗಟ್ಟಿಯಾಗಿ ಈ ನೆಲದಲ್ಲಿ ಬೇರೂರಿವೆ. ಇದಕ್ಕೆ ಹಿಂದೂಯಿಸಂ ಕಾರಣವಲ್ಲ ಎಂದ ಮಾತ್ರಕ್ಕೆ, ಜಾತಿ ಪದ್ಧತಿಯಾಗಲೀ, 'ಹಿಂದೂ ಧರ್ಮ'ದ ಒಳಗೇ ಹಾಸುಹೊಕ್ಕಾಗಿ ತಳುಕುಹಾಕಿಕೊಂಡಿರುವ ಅನಿಷ್ಟಗಳಾಗಲೀ ನಿವಾರಣೆಯಾಗದು. ಆದರೆ ಈ ಸಂಶೋಧನೆಯಿಂದ ಒಂದಂತೂ ಲಾಭವಿದೆ. ಇದರ ಪಲಿತಾಂಶವಾಗಿ, ಜಾತಿವ್ಯವಸ್ಥೆಯ ಶಾಪದಿಂದ 'ಹಿಂದೂಯಿಸಂ' ಬಿಡುಗಡೆ ಪಡೆದುಕೊಂಡುಬಿಟ್ಟರೆ, ಅದರಿಂದ ದಲಿತರಿಗೆ ಏನೂ ಲಾಭವಾಗದಿದ್ದರೂ, ಕಟ್ಟಾ ಹಿಂದುತ್ವವಾದಿಗಳಾಗಿರುವ ಸಂಘಪರಿವಾರದ ವಟುಗಳಿಗೆ, ತಮ್ಮ ಹಿಂದುತ್ವವಾದಕ್ಕೆ ಹೊಸ ಸಮರ್ಥನೆ ದೊರೆಯುವುದರಿಂದ, ದಾರಿ ಸುಲಭವಾಗುವುದಂತೂ ಖಂಡಿತ. ಈ ಹಿನ್ನೆಲೆಯಲ್ಲಿ ೨೦, ೨೦೦೭ರ 'ದಿ ಹಿಂದು' ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಓದಿಕೊಳ್ಳುವುದು ಅಗತ್ಯ.

Kuvempu University has entered into an agreement with Ghent University of Belgium to set up a Centre for Study of Local Cultures (CSLC), which is proposed to be subsequently converted into Karnataka Academy of Social Sciences and Humanities (KASSH) with its jurisdiction over eight universities in the State.

The first memorandum of understanding (MoU) for the CSLC was signed by Vice-Chancellor of Kuvempu University B.S. Sherigara and the then Registrar Shivanna on behalf of the university and a team from Ghent University led by Head of the Department of Science of Comparative Cultures Balagangadhar Rao, who is its rector, four months ago at the latter university. The second memorandum of understanding is expected to be signed between Ghent University and the State Government on sharing the cost of the academy equally every year for the next 10 years.

The Government is reported to have agreed in principle to allocate yearly matching grant, which is expected to be Rs. 4.5 crore, for 10 years. Ghent University has agreed to release its share of matching grant. A decision in this regard was taken at a meeting of the Inter-University Board (IUB) held in Bangalore on Sunday under the Chairmanship of Minister for Higher Education D.H. Shankaramurthy, according to reports received here. The Minister and the Vice-Chancellors, who attended the meeting, appreciated the initiative taken by Kuvempu University in getting a major project sanctioned after Kaushik Mukherjee, Principal Secretary, Higher Education, explained its significance.

ಈ ಸಂಶೋಧನೆ ಕೊಡಮಾಡುವ ಹಿಂದುತ್ವದ ರಾಜಕೀಯ ಲಾಭಕ್ಕೂ, ಶಂಕರಮೂರ್ತಿಯವರು ಶಿಕ್ಷಣಮಂತ್ರಿಗಳಾಗಿದ್ದಾಗಲೇ ಸರ್ಕಾರ ಕುವೆಂಪು ವಿವಿಯಲ್ಲಿ 'ಕ್ಯಾಷ್' ಹೆಸರಿನ ಸಮಾಜಶಾಸ್ತ್ರ ಅಕಾಡೆಮಿಗೆ ನೆರವು ನೀಡಿರುವುದಕ್ಕೂ ಸಂಬಂಧವಿರುವುದು ಕೇವಲ ಆಕಸ್ಮಿಕವಲ್ಲ ಎಂಬ ವಿಚಾರ ವಸಾಹತುಶಾಹಿಯ ಮೋಡಿಗೆ ಒಳಗಾಗಿ ಸ್ವಂತ ವಿಚಕ್ಷಣೆಯನ್ನು ಕಳೆದುಕೊಂಡಿರುವ ಮೂರ್ಖರಿಗೂ ಗೊತ್ತಾಗಿರುವುದು ಮಾತ್ರ ಸತ್ಯ! □

> **ಓರಿಯಂಟಲಿಸಂನ ದೃಷ್ಟಿಕೋನದಿಂದ ಜಾತಿಯನ್ನು ವಿವರಿಸ ಹೊರಟ ಕೂಡಲೇ ಅನ್ಯಾಯಕ್ಕೆ, ಅಸಮಾನತೆಗೆ ಗುರಿಯಾಗಿರುವ ಜಾತಿಗಳು, ಕುಲ ಸಮುದಾಯಗಳು ಆತಂಕಕ್ಕೆ ಒಳಗಾಗುವುದು ಸಹಜ. ಏಕೆಂದರೆ ಓರಿಯಂಟಲಿಸಂ ಪಶ್ಚಿಮದ ಅಧಿಕಾರವನ್ನು ವಿರೋಧಿಸುವ ನೆಲೆಯಲ್ಲಿಯೇ ಆಧುನಿಕತೆ, ತರ್ಕ, ಕಾರ್ಯ-ಕಾರಣ ಸಂಬಂಧ, ವೈಜ್ಞಾನಿಕ ಮನೋಭಾವ ಮತ್ತು ಉದಾರ ಪ್ರಜಾಸತ್ತಾತ್ಮಕ ನೆಲೆಗಳನ್ನು ವಿರೋದಿಸುವ ಸ್ವರೂಪವನ್ನು ಒಳಗೊಂಡಿದೆ. ಓರಿಯಂಟಲಿಸಂನ ಪ್ರತಿಪಾದಕರ ಉದ್ದೇಶವೇನಾದರೂ ಆಗಲಿ, ಭಾರತದ ಮಟ್ಟಗಂತೂ ಸನಾತನಿಗಳು ಮತ್ತು ಬ್ರಾಹ್ಮಣ ಧರ್ಮದ ಅನುಯಾಂಯಿಗಳು ಈ ಸಿದ್ಧಾಂತವನ್ನು ಭಾರತೀಯ ಸಮಾಜದ ಮೇಲೆ ಬ್ರಾಹ್ಮಣ್ಯದ ಯಜಮಾನಿಕೆಯನ್ನು ಪುನರ್ನವೀಕರಿಸಲು ಬಳಸುತ್ತಿದ್ದಾರೆ. ಬಾಲಗಂಗಾಧರರ ವಿಚಾರಗಳು ಓರಿಯಂಟಲಿಸಂನ ಮುಂದುವರಿದ ತಾತ್ವಿಕ ಪ್ರಣಾಳಿಕೆಯಂತೆ ಕಾಣುತ್ತವೆ.**

ಜುಲೈ ತಿಂಗಳ ಸಂವಾದ ಮಾಸ ಪತ್ರಿಕೆಯಲ್ಲಿ ಡಾ. ಡೊಮಿನಿಕ್‌ರವರ "ಜಾತಿ ಮತ್ತು ತಾರತಮ್ಯ" ಎನ್ನುವ ಲೇಖನಕ್ಕೆ ಪ್ರತಿಕ್ರಿಯೆ ಬಂದಿರುವುದು ಸ್ವಾಗತಾರ್ಹ. ಆ ಪ್ರತಿಕ್ರಿಯೆಗೆ ನೀಡಲಾದ ಶಿರ್ಷಿಕೆ ಹೀಗಿದೆ 'ಸಾಮಾಜಿಕ ಅನ್ಯಾಯ ಅಸಮಾನತೆ ಹಾಗೂ ಜಾತಿ ವ್ಯವಸ್ಥೆ'. ಇದನ್ನು ಓದಿ ಸಂತೋಷವಾಯಿತು. ಅದಕ್ಕೆ ಎರಡು ಕಾರಣಗಳಿವೆ: ಒಂದು, ಬಾಲಗಂಗಾಧರರ ವಿಚಾರಗಳನ್ನು ತಕ್ಕ ಮಟ್ಟಿಗೆ ಸಂಗ್ರಹಿಸಿ ಕನ್ನಡದಲ್ಲಿ ಬರೆದಿರುವುದು. ಎರಡು, ಡಾ. ಷಣ್ಮುಖ, ಅವರ ಗುರು ಬಾಲಗಂಗಾಧರರಂತೆ ಇಂಗ್ಲಿಷಿನಲ್ಲಿ ಬರೆಯದೆ ಗುರುವಿನ ಮಿತಿಯನ್ನು ಮೀರಿರುವುದು.

ನಾನು ಈ ಲೇಖನ ಬರೆಯುತ್ತಿರುವ ಉದ್ದೇಶ ಷಣ್ಮುಖರ ಲೇಖನಕ್ಕೆ ಪ್ರತಿಕ್ರಿಯೆಗಾಗಲೀ ಡಾ.ಡೊಮಿನಿಕ್‌ರವರ ಅಭಿಪ್ರಾಯಗಳ ಸಮರ್ಥನೆಗಾಗಲೀ ಅಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತೇನೆ. "ನಮ್ಮ ಕುರಿತು ಗುಮಾನಿ ಇರುವವರು ಸುಮ್ಮನೆ ಇಲ್ಲಸಲ್ಲದ ಆರೋಪಗಳನ್ನು ಮಾಡುವುದರಲ್ಲಿ ಕಾಲಹರಣ ಮಾಡದೆ ವಿಷಯವನ್ನು ಸರಿಯಾಗಿ ತಿಳಿದುಕೊಂಡು ಅದಕ್ಕೆ ಪ್ರಸ್ತುತವಾದ ಪ್ರಶ್ನೆಗಳನ್ನು ಎತ್ತಿದಲ್ಲಿ ನಮಗೂ ಹಾಗೂ ನಮ್ಮ ಸಮಾಜಕ್ಕೂ ಉಪಯೋಗವಾಗುತ್ತದೆ ಎಂಬುದು ನಮ್ಮ ಭಾವನೆ" ಡಾ ಷಣ್ಮುಖರ ಈ ಮಾತನ್ನು ಅಕ್ಷರಶಃ ಪಾಲಿಸುತ್ತಾ ನನಗೆ ಜಾತಿಯ ಬಗೆಗೆ ತಿಳಿದಿರುವ ಕೆಲವು ವಿಚಾರಗಳನ್ನು ಹಂಚಿಕೊಳ್ಳ ಬಯಸುತ್ತೇನೆ. ಅದೂ ಷಣ್ಮುಖರ ಲೇಖನದ ವ್ಯಾಪ್ತಿಗೆ ಸೀಮಿತವಾದುದು ಮಾತ್ರ.

ಓರಿಯಂಟಲಿಸಂನ ದೃಷ್ಟಿಕೋನದಿಂದ ಜಾತಿಯನ್ನು ವಿವರಿಸ ಹೊರಟ ಕೂಡಲೇ ಅನ್ಯಾಯಕ್ಕೆ, ಅಸಮಾನತೆಗೆ ಗುರಿಯಾಗಿರುವ ಜಾತಿಗಳು, ಕುಲಸಮುದಾಯಗಳು ಆತಂಕಕ್ಕೆ ಒಳಗಾಗುವುದು ಸಹಜ. ಏಕೆಂದರೆ ಓರಿಯಂಟಲಿಸಂ ಪಶ್ಚಿಮದ ಅಧಿಕಾರವನ್ನು ವಿರೋಧಿಸುವ ನೆಲೆಯಲ್ಲಿಯೇ ಆಧುನಿಕತೆ, ತರ್ಕ, ಕಾರ್ಯ-ಕಾರಣ ಸಂಬಂಧ, ವೈಜ್ಞಾನಿಕ ಮನೋಭಾವ ಮತ್ತು ಉದಾರ ಪ್ರಜಾಸತ್ತಾತ್ಮಕ ನೆಲೆಗಳನ್ನು ವಿರೋಧಿಸುವ ಸ್ವರೂಪವನ್ನು ಒಳಗೊಂಡಿದೆ. ಓರಿಯಂಟಲಿಸಂನ ಪ್ರತಿಪಾದಕರ ಉದ್ದೇಶವೇನಾದರೂ ಆಗಲಿ, ಭಾರತದ ಮಟ್ಟಗಂತೂ ಸನಾತನಿಗಳು ಮತ್ತು ಬ್ರಾಹ್ಮಣ ಧರ್ಮದ ಅನುಯಾಯಿಗಳು ಈ ಸಿದ್ಧಾಂತವನ್ನು ಭಾರತೀಯ ಸಮಾಜದ ಮೇಲೆ ಬ್ರಾಹ್ಮಣ್ಯದ ಯಜಮಾನಿಕೆಯನ್ನು ಪುನರ್ನವೀಕರಿಸಲು ಬಳಸುತ್ತಿದ್ದಾರೆ. ಆದುದರಿಂದ ಒಂದು ಕೋನದಿಂದ ಬಾಲಗಂಗಾಧರರ ವಿಚಾರಗಳು ಓರಿಯಂಟಲಿಸಂನ ಮುಂದುವರಿದ ತಾತ್ವಿಕ ಪ್ರಣಾಳಿಕೆಯಂತೆ ಕಾಣುತ್ತವೆ.

ಆದುದರಿಂದ ಮೇಲ್ನೋಟಕ್ಕೆ ಅವರ ವಿಚಾರಗಳನ್ನು 'Blind' ಮತ್ತು 'Blunt' ಆಗಿ ಟೀಕಿಸಿದರೆ ಅದು ಸಾಮಾಜಿಕ ನ್ಯಾಯದ ಪರ ಇರುವ ದನಿಯಂತೆ ಕೇಳಿಸಿದರೆ ಆಶ್ಚರ್ಯವಿಲ್ಲ. ಅದಲ್ಲದೆ, ಬಾಲಗಂಗಾಧರರ ಶಿಷ್ಯರು ಅವರ ತತ್ವಪ್ರಣಾಳಿಕೆಯನ್ನು ಅರ್ಥ ಮಾಡಿಕೊಳ್ಳದೆ, ತಮ್ಮ ಗುರುಗಳನ್ನು ಟೀಕಿಸುತ್ತಿದ್ದಾರೆ ಎಂದು ಆರ್ತನಾದ ಗೈಯ್ಯುತ್ತಿದ್ದಾರೆ. ಇಂತಹ ಅನಾಹುತಕ್ಕೆ ಬಾಲಗಂಗಾಧರರೇ ಕಾರಣ. ಸ್ವತಃ ಕನ್ನಡಿಗನಾಗಿದ್ದು, ಕನ್ನಡದಲ್ಲಿ ಓದಲು ಬರೆಯಲು ಗೊತ್ತಿದ್ದು, ಅಭಿವ್ಯಕ್ತಿ ಮಾಧ್ಯಮವಾಗಿ ಇಂಗ್ಲಿಷನ್ನು ಬಳಸಿರುವುದು ಬಾಲಗಂಗಾಧರರ ಮೂಲ ಪ್ರಮೇಯದ ವಿರೋಧಾಭಾಸದಂತೆ ಕಾಣುತ್ತದೆ. ಡಾ.ಷಣ್ಮುಖ ಹೇಳುವಂತೆ "ಬಾಲಗಂಗಾಧರ ವಿವರಿಸುವಂತೆ ಯೂರೋಪಿಯನ್ನರು ಅನ್ಯ ಸಂಸ್ಕೃತಿಯ ಜನರನ್ನು ವಿವರಿಸುವಾಗ ತಮ್ಮದೇ ಆದ ಸಾಂಸ್ಕೃತಿಕ ಹಿನ್ನೆಲೆಯ ಪರಿಕಲ್ಪನೆಗಳ ಮೂಲಕ ವಿವರಿಸುತ್ತಾ ಹೋದರಾದ್ದರಿಂದ, ಅವರ ಭಾರತೀಯ ಸಾಂಸ್ಕೃತಿಕ ಮತ್ತು ಸಾಮಾಜಿಕ ರಚನೆಯ ವಿವರಗಳು ವಾಸ್ತವಿಕ ಚಿತ್ರವಾಗಿರದೆ ಅವರ ಸಾಂಸ್ಕೃತಿಕ ಅನುಭವಗಳ ವಿವರಣೆ ಮಾತ್ರವೇ ಆಗಿದೆ......"

ದುರಾದೃಷ್ಟವಶಾತ್ ಬಾಗಂ (ಬಾಲಗಂಗಾಧರ ಹೆಸರಿನ ಗಿಡ್ಡ ರೂಪ) ಕೂಡ ವಸಾಹತುಶಾಹಿ ಭಾಷೆಯನ್ನು ಬಳಸುವ ಮೂಲಕ ಮತ್ತೊಂದು ವಸಾಹತು ರಚನೆಯನ್ನು ಕಟ್ಟಿಕೊಡುತ್ತಿದ್ದಾರೆಯೇ ಹೊರತು ಅದರಲ್ಲಿ ವಿಶೇಷವೇನೂ ಇಲ್ಲ. ಆಧುನಿಕೋತ್ತರ ಚಿಂತಕ ಮಿಶೆಲ್ ಫೂಕೋ ತಮ್ಮ ದೇಶಿ ಭಾಷೆಯಲ್ಲಿಯೇ ಚಿಂತನೆಗಳನ್ನು ಕಟ್ಟಿಕೊಟ್ಟರು. ಹಾಗೆಯೇ ಬಾಗಂ ದೇಶಿ ಭಾಷೆಯನ್ನು ಬಳಸಿದ್ದರೆ ಅವರ ವಾದವೇನು? ಯಾವ ನೆಲೆಯಲ್ಲಿ ಅವರ ವಾದ ತಪ್ಪು ಅಥವಾ ಸರಿ ಎಂಬುದನ್ನು ಹತ್ತಾರು ಕನ್ನಡಿಗರಾದರೂ ಅರ್ಥಮಾಡಿಕೊಳ್ಳುತ್ತಿದ್ದರು. ವಸಾಹತುಶಾಹಿ ಭಾಷೆಯಲ್ಲಿ ಬರೆದ ಸ್ವಯಂಕೃತ ಅಪರಾಧಕ್ಕೆ ಇತರರನ್ನು ಹೊಣೆಯಾಗಿಸಿ, ಬಾಗಂರ ಸಂಶೋಧನೆಯ ಬಗೆಗೆ ಯಾರೂ ಚಕಾರವೆತ್ತಲಿಲ್ಲ ಎಂದು "ಇತರರನ್ನು" ಅಪರಾಧಿಗಳನ್ನಾಗಿಸುವುದು ಅಷ್ಟೇನು ಸರಿಯಲ್ಲ ಎಂಬುದು ನನ್ನ ನಮ್ರ ಸೂಚನೆ. ಆದರೂ ಡಾ.ಷಣ್ಮುಖ ಸಂವಾದದ ತಮ್ಮ ಲೇಖನದಲ್ಲಿ ಪ್ರತಿನಿಧಿಸಿರುವ ಬಾಗಂರವರ ವಾದಗಳನ್ನು ಪರಿಶೀಲಿಸುವ:

ಮೊದಲನೆಯದಾಗಿ:

1. ಭಾರತದಲ್ಲಿ ಜಾತಿಗಳಿವೆ ನಿಜ. ಆದರೆ ಇಡೀ ಭಾರತದ ಸಮಾಜಕ್ಕೆ ಆಧಾರಭೂತವಾಗಿ ಕಾರ್ಯನಿರ್ವಹಿಸುವ ಒಂದು ವ್ಯವಸ್ಥೆ ಇದೆ ಎಂಬುದು ಸಮಸ್ಯಾತ್ಮಕವಾದುದಾಗಿದೆ.

2. ಭಾರತದಲ್ಲಿ ಹಿಂದೂಯಿಸಂ ಎಂಬ ರಿಲಿಜನ್ ಒಂದಿದೆ. ಅದೇ ಜಾತಿ ವ್ಯವಸ್ಥೆಗೆ ಆಧಾರ. ಹಾಗೆ ನೋಡಿದರೆ ಈ ಸಿದ್ಧಾಂತಗಳಿಗೆ 'ಹಿಂದೂ' ಎಂಬ ರಿಲಿಜನ್ ಇಲ್ಲದೆ ಜಾತಿ ವ್ಯವಸ್ಥೆ ಇದೆ ಎಂದು ಸಾಧಿಸಲಾಗುವುದಿಲ್ಲ. ಜಾತಿ ವ್ಯವಸ್ಥೆ ಹಿಂದೂಯಿಸಂನ ಒಂದು ವಿಶಿಷ್ಟ ಲಕ್ಷಣ ಅಥವಾ ಜಾತಿ ವ್ಯವಸ್ಥೆಯ ಅಸ್ತಿತ್ವಕ್ಕೆ ಹಿಂದೂಯಿಸಂ ಮೂಲ ಕಾರಣ ಎಂದು ಪ್ರತಿಪಾದಿಸುವ ಮೊದಲು ಹಿಂದೂಯಿಸಂ ಎನ್ನುವ ರಿಲಿಜನ್ ಅಸ್ತಿತ್ವದಲ್ಲಿದೆ ಎಂಬುದನ್ನು ಪ್ರಾಯೋಗಿಕವಾಗಿ ಸಾಧಿಸಿ ತೋರಿಸಬೇಕಾಗುತ್ತದೆ.

3. ಜಾತಿ ವ್ಯವಸ್ಥೆ ಮತ್ತು ಹಿಂದೂ ರಿಲಿಜನ್ ಎನ್ನುವುದು ಯೂರೋಪಿಯನ್ ಅನುಭವದ ಹಿನ್ನೆಲೆಯ ಭಾರತೀಯ ಸಮಾಜದ ಕುರಿತ ವಿವರಣೆಗಳೇ ಹೊರತು ನೈಜ ಸ್ಥಿತಿಯಲ್ಲ.

ಎರಡನೆಯದಾಗಿ:

ಬಾಗಂ ತಂಡ ಕರ್ನಾಟಕದಲ್ಲಿ ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಕೆಲವು ಅಂಶಗಳನ್ನು ಕಂಡುಹಿಡಿದಿದೆ ಎಂದು ಹೇಳುವ ಡಾ.ಷಣ್ಮುಖ ಅವುಗಳನ್ನು ಕೆಳ ಕಂಡಂತೆ ಪಟ್ಟಿ ಮಾಡುತ್ತಾರೆ:

1. ಭಾರತೀಯ ಸಮಾಜದಲ್ಲಿ ಮೇಲ್‌ಜಾತಿ ಮತ್ತು ಕೆಳಜಾತಿಗಳ ವರ್ಗೀಕರಣ ಇರುವುದು ನಿಜ. ಆದರೆ ಅವು ನಿರ್ದಿಷ್ಟ ಶ್ರೇಣೀಕರಣಕ್ಕೆ ಒಳಪಡುವುದಿಲ್ಲ.

2. ಜಾತಿಗೆ ಸಂಬಂಧಿಸಿದ ಯಾವುದೇ ಸಂಪ್ರದಾಯವಾಗಲೀ, ಆಚರಣೆಯಾಗಲೀ ಹಿಂದೂ ರಿಲಿಜನ್‌ನ ನಿರ್ಬಂಧ ಅಥವಾ ನಿರ್ದೇಶನಕ್ಕೆ ಒಳಪಡುತ್ತದೆ ಎನ್ನುವ ಜನಜನಿತ ನಂಬಿಕೆಗೆ ಯಾವುದೇ ಪುರಾವೆಗಳು ದೊರಕುವುದಿಲ್ಲ. ಜೊತೆಗೆ ಜಾತಿ ಆಚರಣೆಗಳಿಗೆ ವರ್ಣಧರ್ಮ, ಜಾತಿ ವ್ಯವಸ್ಥೆ ಮತ್ತು ಹಿಂದೂ ರಿಲಿಜನ್ ಕಾರಣವಾಗಿವೆ ಎಂಬುದನ್ನು ತೋರಿಸಲು ಯಾವುದೇ ಪ್ರಾಯೋಗಿಕ ಪುರಾವೆ ದೊರೆಯುವುದಿಲ್ಲ.

ನಾನು ಗ್ರಹಿಸಿದಂತೆ ಡಾ.ಷಣ್ಮುಖ ವಿಶ್ಲೇಷಣೆಗೆ

ಡಾ. ಸಿ.ಜಿ. ಲಕ್ಷ್ಮಿಪತಿ
ಸಮಾಜಶಾಸ್ತ್ರಜ್ಞರು

ಭಾರತವೂ ಇಲ್ಲ... ಸಂವಿಧಾನವೂ ಇಲ್ಲ...

ಒಳಪಡಬೇಕಾದ ಮೂಲ ಪ್ರಮೇಯ ಮತ್ತು ಆ ಪ್ರಮೇಯವನ್ನು ಸಾಧಿಸಿ ತೋರಿಸಲು ಅಗತ್ಯವಾದ ಪ್ರತ್ಯಕ್ಷ ಪ್ರಮಾಣ ವಾದವನ್ನು ಮಂಡಿಸುತ್ತಾರೆ. ಜೊತೆಗೆ ಕ್ಷೇತ್ರಕಾರ್ಯ ಕೈಗೊಂಡಿರುವುದಾಗಿ ಹೇಳಿದ್ದಾರೆ.

ಬಾಗಂರ ಮೂಲ ಪ್ರಮೇಯವನ್ನು ವಿಶ್ಲೇಷಣೆಗೆ ಒಳಪಡಿಸುವ. ಭಾರತದಲ್ಲಿ ಜಾತಿಗಳಿವೆ ನಿಜ. ತಮ್ಮ ಸಂಶೋಧನೆಯ ಮೂಲಕ ಬಾಗಂ ತಂಡ ಕಂಡುಹಿಡಿದಿರುವ ಈ ಸತ್ಯವನ್ನು ಯಾವುದೇ ವಿವಾದವಿಲ್ಲದೆ ಒಪ್ಪಿಕೊಳ್ಳಬಹುದು. ಆದರೆ, ಇಡೀ "ಭಾರತದ ಸಮಾಜ"ಕ್ಕೆ ಆಧಾರಭೂತವಾದ ಒಂದು ಕಾರ್ಯ ವ್ಯವಸ್ಥೆ ಇದೆ ಎಂಬುದು ಸಮಸ್ಯಾತ್ಮಕವಾಗಿದೆ ಎಂಬ ಪ್ರಮೇಯವೇ ಸಮಸ್ಯಾತ್ಮಕವಾಗಿದೆ. ಈ ಸಮಸ್ಯೆಯನ್ನು ಗ್ರಹಿಸಲು ಇದಕ್ಕೆ ಪೂರಕವಾದ ಎರಡನೇ ಪ್ರಮೇಯವನ್ನು ಗ್ರಹಿಸುವ. ಅದೇನೆಂದರೆ ಯೂರೋಪಿಯನ್ನರು ತಮ್ಮ ಸಾಂಸ್ಕೃತಿಕ ಪರಿಭಾಷೆಯಲ್ಲಿ ಹಿಂದೂಯಿಸಂ ಎಂಬ ರಿಲಿಜನ್ ಇದೆ ಎಂದು ಗುರುತಿಸುವುದು ಮತ್ತು ಅದರಿಂದಾಗಿಯೇ ಜಾತಿ ವ್ಯವಸ್ಥೆ ಇದೆ ಎಂದು ಗ್ರಹಿಸುವುದು.

ಮೊದಲನೆಯ ಸಮಸ್ಯೆ ಎಂದರೆ ಭಾರತೀಯ ಎಂಬ ಕಲ್ಪಿತ ಬೃಹತ್ ನಿರೂಪಣೆಯೊಂದನ್ನು ಕಟ್ಟುವುದು. ಭಾರತದ ಸಮಾಜ ಎಂಬ ಈ ಏಕರೂಪಿ ಸಮುದಾಯವನ್ನು ನಿರ್ಮಿಸಿಕೊಳ್ಳುವುದು. ಬಾಗಂರ ಪ್ರಮೇಯದ ಮೂಲ ಸಮಸ್ಯೆ ಇದೇ ಆಗಿದೆ. ಏಕೆಂದರೆ ಅವರು ಭಾರತೀಯ ಪಾನ್ ಇಂಡಿಯನ್ ಸಾಂಸ್ಕೃತಿಕ ಗಡಿಯನ್ನು ಮೊದಲು ಗುರುತಿಸಿಕೊಳ್ಳಬೇಕಾಗುತ್ತದೆ. ಬಾಗಂ ಸೂಚಿಸುವ ಭಾರತೀಯ ಕಲ್ಪನೆ ಮರೆಮಾಚಿದ ಅನೇಕ ಅರ್ಥಗಳನ್ನು ಹೊರಡಿಸುತ್ತದೆ. ಭಾರತೀಯ ಚಿಂತನಾ ಕ್ರಮ, ಪಾಶ್ಚಾತ್ಯ ಎಂಬ ಜ್ಞಾನ ವಿಭಜನೆಯ ಹಿಂದಿರಬಹುದಾದ 'ರಾಜಕೀಯ' ಏನು? ಪಾನ್ ಇಂಡಿಯನ್ ಮಟ್ಟದಲ್ಲಿ ವಿವಿಧ ಕುಲ ಸಮುದಾಯಗಳು, ಬುಡಕಟ್ಟುಗಳು, ಬೌದ್ಧ, ಜೈನ, ಇಸ್ಲಾಂ, ಸೂಫಿ, ಶೈವ, ವೈಷ್ಣವ, ಬ್ರಾಹ್ಮಣ ಮೊದಲಾದ ಪರಂಪರೆಗಳು ರೂಪಿಸಿದ ಒಂದು ವಿಶಾಲವಾದ ವೈವಿಧ್ಯಪೂರ್ಣವಾದ ಜ್ಞಾನ ವ್ಯವಸ್ಥೆಗಳನ್ನು 'ಓರಿಯಂಟಲಿಸಂ'ನ ಬಡಿಗೆಯಿಂದ ಬಡಿದು ಪಶ್ಚಿಮದಿಂದ ರೂಪಿಸಿದ ಜ್ಞಾನವೆಂದು ಕರೆದು ಸಾರ್ವತ್ರೀಕರಿಸುವುದು, ಏಕರೂಪಿ ಸತ್ಯವನ್ನು ಹೊರಡಿಸುವುದು ಎಷ್ಟರ ಮಟ್ಟಿಗೆ ಸರಿ.

ಅದಕ್ಕಿಂತ ಅಪಾಯಕಾರಿ ಎಂದರೆ 'ಭಾರತೀಯ' ಎಂಬ ಮತ್ತೊಂದು ಜ್ಞಾನದ ಅಧಿಕಾರ ಕೇಂದ್ರವನ್ನು ತೆರೆಯುತ್ತಿರುವುದು. ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳದ ಹೊರತು ಬಾಗಂರ ಮೂಲ ಪ್ರಮೇಯಕ್ಕೆ ಅಷ್ಟೇನು ತಾತ್ವಿಕ ಗಾಂಭೀರ್ಯ ಒದಗಲಾರದು. ಹಿಂದೂಯಿಸಂ ಎಂಬುದು ತೀರ ಇತ್ತೀಚಿನ ಶತಮಾನಗಳಲ್ಲಿ ಸಂಘಟಿತವಾದ ಒಂದು ಪರಿಕಲ್ಪನೆ ಎಂಬುದನ್ನು ಚರಿತ್ರಕಾರರು, ಸಮಾಜ ವಿಜ್ಞಾನಿಗಳು ಆಧಾರ ಸಹಿತವಾಗಿ ನಿರೂಪಿಸಿದ್ದಾರೆ. ಈ ಪ್ರಮೇಯವನ್ನು ಮತ್ತಷ್ಟು ಕ್ಷೇತ್ರಕಾರ್ಯ ಮಾಹಿತಿಯೊಡನೆ ದೃಢಪಡಿಸಿಕೊಳ್ಳುವುದಕ್ಕೆ ಅಡ್ಡಿಯೇನಿಲ್ಲ. ಆದ್ದರಿಂದ ಇದೊಂದು ಬೌದ್ಧಿಕ ತಿಣುಕಾಟದಂತೆ ತೋರುತ್ತಿದೆಯೇ ಹೊರತು 'ಭಾರತೀಯ' ಎಂದು ಕರೆಯಲ್ಪಡುತ್ತಿರುವ ಸಾಮಾಜಿಕ ವಿದ್ಯಮಾನಗಳ ಗ್ರಹಿಕೆಯಲ್ಲಿ ಒಂದು ಹೆಜ್ಜೆಯನ್ನು ಮುಂದಿಟ್ಟಂತಾಗುವುದಿಲ್ಲ.

ಡಾ.ಷಣ್ಮುಖ ಪ್ರತಿನಿಧಿಸಿರುವ ಬಾಗಂರ ತಾತ್ವಿಕ ತೆಲುಹಂದರ ಅವರು ಕ್ಲೈಮ್ ಮಾಡುವಂತೆ ನಮ್ಮ ಸಮಾಜದ ತಾತ್ವಿಕ ಸಮಸ್ಯೆಗಳ ಮೇಲೆ ಕ್ಷಕಿರಣಗಳನ್ನೇನು ಬಿಡಲಾರದು. ಅವರು ಕಲ್ಪಿಸಿಕೊಂಡಿರುವ 'ಪಶ್ಚಿಮದ ಅಧಿಕಾರ' ಎಂಬ ಪರಿಕಲ್ಪನೆ ಮತ್ತು ಬಾಗಂರ ಪ್ರಕಾರ ಯೂರೋಪಿನ ಸಾಂಸ್ಕೃತಿಕ ಪರಿಭಾಷೆಯಲ್ಲಿ ರಚಿತವಾಗಿರುವ ಮತ್ತು ನಿಜವಾಗಿಯೂ ಅಸ್ತಿತ್ವದಲ್ಲಿರದ ಹಿಂದೂಯಿಸಂ ಮತ್ತು ಜಾತಿ ವ್ಯವಸ್ಥೆಯನ್ನು ಸಮಸ್ಯೀಕರಿಸಿ ಅದನ್ನು ಬೃಹತ್ ಚರ್ಚೆಯ ವಸ್ತುವನ್ನಾಗಿರಿಸಿರುವುದು ಈ ಪ್ರಮೇಯಗಳ ಮುಖ್ಯ ಸಾಧನೆ ಇರಬಹುದು!

ಈ ಮೂಲ ಪ್ರಮೇಯಗಳು ರಚಿತವಾಗಿರುವುದಾದರು ಹೇಗೆ? ವಸಾಹತು ಪಠ್ಯಗಳನ್ನು ಓದುವ ರೀತಿ ಮತ್ತು ಅರ್ಥೈಸುವ ಕ್ರಮದ ಆಧಾರದ ಮೇಲೆ. ವಸಾಹತು ಪಠ್ಯಗಳನ್ನು ಬಾಗಂ ಓದಿರುವ ಮತ್ತು ಅರ್ಥೈಸುವ ಕ್ರಮದ ಆಧಾರದ ಮೇಲೆ ಅವರ ಇಡೀ ತರ್ಕ ಮತ್ತು ತಾತ್ವಿಕತೆ ನಿಂತಿದೆ.

ಪಶ್ಚಿಮದ ವಸಾಹತು ಪಠ್ಯವನ್ನು ಒಂದು 'ಉಂಡೆ'ಯಂತೆ ಗ್ರಹಿಸುತ್ತಿರುವುದೇ ಅವರ ಪ್ರಮೇಯಗಳ ಮೂಲ ಸಮಸ್ಯೆ. ಯೂರೋಪಿನ ವಿವಿಧ ಸಮುದಾಯಗಳು, ಮಹಿಳೆಯರು, ಪ್ರವಾಸಿಗರು, ವಸಾಹತುಶಾಹಿಯನ್ನು ಒಳಗಿನಿಂದಲೇ ವಿರೋಧಿಸಿದವರು ವಸಾಹತು ಜನ ಸಮುದಾಯಗಳ ಸ್ವಾತಂತ್ರ್ಯಕ್ಕೆ, ದುಃಖ – ದುಃಮ್ಮಾನಗಳಿಗೆ ಪಾಲುದಾರರಾದವರು ರೂಪಿಸಿರುವ ವೈವಿಧ್ಯಮಯ ನಿರೂಪಣೆಗಳನ್ನು ಮತ್ತು ಪಠ್ಯಗಳನ್ನು ಪಶ್ಚಿಮ ಅಧಿಕಾರ ಎಂಬ ತರ್ಕಕ್ಕೆ ಒಗ್ಗಿಸುವುದು ಅಸಂಗತವಾದ ತಾತ್ವಿಕವಾದ ನಡೆಯಾಗಿದೆ. 'ಪಶ್ಚಿಮದ ಪಠ್ಯಗಳು' ಬರುವ ಮೊದಲು ಚೀನಾದ ಹ್ಯುಯೆನ್ ತ್ಸಾಂಗ್ ಮೊದಲಾದವರ ಪಠ್ಯಗಳನ್ನು ಹೇಗೆ ಓದುವುದು? ಭಾರತದಲ್ಲಿ ಒಂದು ಜಾತಿ ಮತ್ತೊಂದು ಜಾತಿಯ ಕುರಿತು, ಸಮುದಾಯವನ್ನು ಕುರಿತು ದಿನನಿತ್ಯ ರೂಪಿಸುತ್ತಿರುವ ಸಾವಿರಾರು ಪಠ್ಯಗಳನ್ನು ಮರೆತು ವಸಾಹತುಶಾಹಿ ಪಠ್ಯಕ್ಕೆ ಜೋತು ಬೀಳುವುದು ಪಠ್ಯ ರಚಿತವಾಗುವ ಬಗೆಯನ್ನು ಕುರಿತ ಸೀಮಿತವಾದ, ಸಂಕುಚಿತವಾದ ದೃಷ್ಟಿಕೋನವಲ್ಲವೇ?

ಈ ಸಂದರ್ಭದಲ್ಲಿ ವಸಾಹತುಶಾಹಿ ಪಠ್ಯಗಳನ್ನು ಕುರಿತ ಚಿಂತಕರಲ್ಲಿ ಮುಖ್ಯರಾದ ಹೋಮಿಬಾಬಾರ ಅಭಿಪ್ರಾಯಗಳನ್ನು ಗಮನಿಸುವುದು ಸೂಕ್ತ. ಅವರ ಪ್ರಕಾರ ವಸಾಹತುಶಾಹಿ ಮತ್ತು ವಸಾಹತುಶಾಹಿಗೊಳಪಟ್ಟ ವ್ಯಕ್ತಿಯ ನಡುವೆ ಏರ್ಪಡುವ ಸಂಪರ್ಕ ಮತ್ತು ಅದರಿಂದುಂಟಾಗುವ ಕಸಿಯ ಬಗೆಗೆ ಗಮನಸೆಳೆಯುತ್ತಾರೆ. ಪೋಸ್ಟ್ ಸ್ಟ್ರಕ್ಚರಲಿಸ್ಟ್ ಚಿಂತಕ ಲಕಾನ್ ವ್ಯಕ್ತಿನಿಷ್ಠ ಅಭಿವ್ಯಕ್ತಿ ರೂಪುಗೊಳ್ಳುವುದು ಇತರರ ಪ್ರತಿಕ್ರಿಯಿಸುವಿಕೆ ಮತ್ತು ಗುರುತಿಸುವಿಕೆಯ ಆಧಾರದ ಮೇಲೆ ನಮ್ಮ ಚಹರೆಯನ್ನು ಗುರುತಿಸಿಕೊಳ್ಳುತ್ತೇವೆ. ಇದು ಪಶ್ಚಿಮ ಮತ್ತು ಪೂರ್ವಗಳೆರಡರಲ್ಲೂ ಸಂಭವಿಸಿರುವ ಸಾಧ್ಯತೆಗಳನ್ನು ಮಸುಕು ಮಾಡುವುದು ಬಾಗಂರ ಪ್ರಮೇಯಗಳ ಮಿತಿಯಾಗಿದೆ.

ಬಾಗಂರನ್ನು ಪ್ರತಿನಿಧಿಸುತ್ತಿರುವ ಡಾ.ಷಣ್ಮುಖರ

ಚರ್ಚೆ

ಜಾತಿ ಧರ್ಮ ತಾರತಮ್ಯ

ಎರಡನೇ ವಾದವನ್ನು ಪರಿಶೀಲಿಸುವ: ಈಗಾಗಲೇ ಬಾಗಂರ ಪ್ರಮೇಯಗಳಾದ ಹಿಂದೂಯಿಸಂ ಎನ್ನುವುದು ಇಲ್ಲ. ಅದರಿಂದ ನಿರ್ಮಾಣವಾಗಿರುವ ಜಾತಿ ವ್ಯವಸ್ಥೆ ಇಲ್ಲ. ಮನುಸ್ಮೃತಿ ಮೊದಲಾದ ಗ್ರಂಥಗಳಲ್ಲಿ ವಿಧಿಸಲ್ಪಟ್ಟ ನಿರ್ಬಂಧಗಳಿಂದ ಪ್ರಭಾವಿತವಾಗಿಲ್ಲ ಎಂಬುದನ್ನು ಕ್ಷೇತ್ರಕಾರ್ಯದಿಂದ ಕಂಡುಹಿಡಿದಿರುವುದಾಗಿ ಹೇಳುವ ಡಾ.ಷಣ್ಮುಖ ತಮ್ಮ ಗುರುವಿನ ಪ್ರಮೇಯಗಳಿಗೆ ಎಂಪಿರಿಕಲ್ ಸಮರ್ಥನೆಗಳನ್ನು ನೀಡಿದ್ದಾರೆ. ಈ ಸಂದರ್ಭದಲ್ಲಿ ಯಾವುದೇ ಸಮಾಜ ವಿಜ್ಞಾನಿಗೆ, ಉತ್ತಮ ಸಮಾಜಶಾಸ್ತ್ರಜ್ಞನಿಗೆ ಆಘಾತ ಉಂಟುಮಾಡುವ ನಿಲುವನ್ನು ಡಾ. ಷಣ್ಮುಖ ತಳೆಯುತ್ತಾರೆ. ಏನೆಂದರೆ ಸಾಮಾಜಿಕ ವಿದ್ಯಮಾನವೊಂದನ್ನು ಕುರಿತು ಪ್ರಮೇಯ ಒಂದನ್ನು ರೂಪಿಸಿಕೊಳ್ಳುವುದು. ಆ ಪ್ರಮೇಯಕ್ಕನುಗುಣವಾಗಿ ಮಾಹಿತಿ ಹುಡುಕಿಕೊಳ್ಳುವುದು. ಇದರಲ್ಲಿ ಸಂಶೋಧನೆ ಏನು ಬಂತು. 'Vulgar Empiricism'ಗೆ ಇದಕ್ಕಿಂತ ಉತ್ಕರ್ಷ ಮಾದರಿ ಬೇರೆಲ್ಲೂ ಸಿಗುವುದಿಲ್ಲ.

ಹಿಂದೂ ಧರ್ಮ ಇದೆಯೋ ಇಲ್ಲವೋ ಅದು ಬೇರೆ ಪ್ರಶ್ನೆ. ಆದರೆ ನಾನು ಜಾತಿಯನ್ನು ಕುರಿತು ಸಂಶೋಧನೆ ಮಾಡಿದಾಗ ಬ್ರಾಹ್ಮಣ ಧರ್ಮ ಎಂದು ಕರೆಯಲ್ಪಡುವ ಜಾತಿಯೂ, ಜಾತಿಯೆಂದು ಕರೆಯಲ್ಪಡುವ ಧರ್ಮವೂ ಆಧಾರ ಸಹಿತವಾಗಿ ದೊರಕಿದೆ. ಬ್ರಾಹ್ಮಣ ಧರ್ಮದ ಅನುಯಾಯಿಗಳು ಮನುಧರ್ಮ ಶಾಸ್ತ್ರವನ್ನು 'Word of the Law'ಆಗಿ ಮತ್ತು 'Spirit of the Law' ಆಗಿ ಅನುಸರಿಸುವುದು ಮೇಲ್ನೋಟಕ್ಕೆ ಗೋಚರವಾಗುತ್ತದೆ. (ವಿವರಗಳಿಗೆ ನೋಡಿ, **ಕ್ಯಾಸ್ಟ್ ಕೆಮಿಸ್ಟ್ರಿ** (ಡಾ. ಲಕ್ಷ್ಮಿಪತಿ), **ಸಖಿ ಪ್ರಕಾಶನ, ಹೊಸಪೇಟೆ**). ಆದುದರಿಂದ ಬಾಗಂ ತಂಡ ಕ್ಷೇತ್ರಕಾರ್ಯ ಮಾಡುವಾಗ ಬ್ರಾಹ್ಮಣ ಧರ್ಮ/ಜಾತಿಗಳಿಗೆ ಒತ್ತು ನೀಡಿ ಅಧ್ಯಯನ ಮಾಡುವುದು ಒಳಿತು. ಅದು ಬಿಟ್ಟು ಬ್ರಾಹ್ಮಣ ಧರ್ಮ/ಜಾತಿಗೆ ಒಳಪಡದ ಸಮುದಾಯಗಳನ್ನು ಕ್ಷೇತ್ರಕಾರ್ಯಕ್ಕೆ ಒಳಪಡಿಸುವುದು ಎಷ್ಟು ಸರಿ?

ಇಲ್ಲಿ ಮತ್ತೊಂದು ಉದಾಹರಣೆಯೊಂದನ್ನು ತೆಗೆದುಕೊಳ್ಳುವ–ಭಾರತದಲ್ಲಿ ನಾವೆಲ್ಲರೂ ನಂಬಿರುವಂತೆ 'ಸಂವಿಧಾನ'ವೊಂದು ಜಾರಿಯಲ್ಲಿದೆ. ಭಾರತ ಎಂಬ ರಾಜಕೀಯ ಗಡಿಯುಳ್ಳ ದೇಶವೊಂದಿದೆ. ನಾವು ಭಾರತೀಯರು ಎಂದುಕೊಂಡಿರುವ ಲಕ್ಷಾಂತರ ಜನರನ್ನು ಕ್ಷೇತ್ರ ಕಾರ್ಯಕ್ಕೊಳಪಡಿಸಿದರೆ ಕನಿಷ್ಠ 25%ರಷ್ಟು ಜನರಿಗೆ 'ಸಂವಿಧಾನ'ವೊಂದಿದೆ, ನಾವು ಭಾರತ ಎಂಬ ರಾಷ್ಟ್ರದಲ್ಲಿ ವಾಸಿಸುತ್ತಿದ್ದೇವೆ ಎಂಬುದು ತಿಳಿಯದೇ ಇರುವ ಸಾಧ್ಯತೆಗಳು ನಿಶ್ಚಿತವಾಗಿಯೂ ಹೊರಬೀಳುತ್ತವೆ. ಬಾಗಂ ತಂಡದ ಕ್ಷೇತ್ರಕಾರ್ಯ ವಿಧಾನವನ್ನು ನಂಬಿಬಿಟ್ಟರೆ 'ಭಾರತವೂ ಇರುವುದಿಲ್ಲ. ಭಾರತದ ಸಂವಿಧಾನವೂ ಇರುವುದಿಲ್ಲ!' □

ಜಾತಿ ಮತ್ತು ತಾರತಮ್ಯ ಕುರಿತಂತೆ...

ಡಾ. ಡೊಮಿನಿಕ್. ಡಿ

ಚಾರಿತ್ರಿಕ ನಿರಂತರತೆಯಲ್ಲಿ ಜಾತಿ, ಸಾಮಾಜಿಕ ಅವಮಾನ ಇವುಗಳ ವಿರುದ್ಧ ಒಂದು ಆಧ್ಯಾತ್ಮಿಕವಾದ ಪ್ರತಿಭಟನೆ ನಡೆದಿದೆ. ಇದು ಆಗ ಇದ್ದ ವರ್ಣಾಶ್ರಮದ ವಿರುದ್ಧದ ಪ್ರತಿಭಟನೆಯೂ ಹೌದು. ಅಂದರೆ ಅಲ್ಲೊಂದು ಆಧ್ಯಾತ್ಮಿಕವಾದ ಅಥವಾ ಭಕ್ತಿಕೇಂದ್ರವಾದ ವಿಶಿಷ್ಟವಾದ ಸಂಸ್ಕೃತಿ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ. ಆದರೆ ಈ ಸಂಗತಿಯನ್ನು ರಾಷ್ಟ್ರೀಯ ಚಳುವಳಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಭಗವದ್ಗೀತೆ ಮುಖ್ಯವಾಯಿತೇ ವಿನಃ ಜನಸಂಸ್ಕೃತಿಯ ಆಧ್ಯಾತ್ಮಿಕತೆಯ ಅಭಿವ್ಯಕ್ತಿಯ ಬಿಂಬಗಳಾದ ಒರಿಸ್ಸಾದ ಮಹಿಮಾ, ತುಕಾರಾಮ್, ಕರ್ನಾಟಕದ ಕೈವಾರ ತಾತಯ್ಯ, ಶಿಶುನಾಳ ಶರೀಫ ಮುಂಥಾದವರು ಮುಖ್ಯವಾಗಲಿಲ್ಲ. ಇವರೆಲ್ಲಾ ಜಾತಿ ಕೇಂದ್ರಿತವಾಗಿದ್ದ ಅಸ್ಪೃಶ್ಯತೆಯ ವಿರುದ್ಧ ಪ್ರತಿಭಟಿಸಿದ್ದಾರೆ. ಹೀಗೆ ಅನೇಕರು ಬಹುರೂಪಿಯ ಸೂಕ್ಷ್ಮಗಳಲ್ಲಿ ವಸಾಹತುಶಾಹಿಗೆ ಪ್ರತಿಕ್ರಿಯಿಸಿದ್ದಾರೆ.

1. ಜೂನ್ ತಿಂಗಳಲ್ಲಿ ಪ್ರಕಟವಾದ ಲೇಖನಕ್ಕೆ 'ಸಾಮಾಜಿಕ ಅನ್ಯಾಯ, ಅಸಮಾನತೆ ಹಾಗೂ ಜಾತಿ ವ್ಯವಸ್ಥೆ' ಎಂಬ ಪ್ರತಿಕ್ರಿಯೆ ಬಂದಿರುವುದನ್ನು ಸ್ವಾಗತಿಸುತ್ತೇನೆ. ಈ ಪ್ರತಿಕ್ರಿಯೆಯನ್ನು ನೀಡಿರುವ 'ವಿಧ್ವಂಸ' ಮಹಾಶಯರು ಪ್ರಮೇಯಗಳನ್ನು ಮತ್ತು ಗ್ರಹೀತಗಳನ್ನು ಮಾತ್ರ 'ಹಿಂದೂಯಿಸಂ ಮತ್ತು ಜಾತಿ ತಾರತಮ್ಯ' ಕುರಿತಂತೆ ವ್ಯಕ್ತಪಡಿಸಿದ್ದಾರೆ. ಆದರೆ ಈ ಪ್ರಮೇಯಗಳು ಮತ್ತು ಗ್ರಹೀತಗಳಿಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಕಾರಣ ಅವುಗಳು ಕೇವಲ ಪ್ರಮೇಯಗಳು ಮತ್ತು ಗ್ರಹೀತಗಳಷ್ಟೇ ಆಗಿವೆಯೇ ಹೊರತು, ಜ್ಞಾನ ಮೀಮಾಂಸ ಪ್ರಕ್ರಿಯೆಯಲ್ಲಿ ಮಂಡಿತವಾದ ಸಿದ್ಧಾಂತವೇನೂ ಅಲ್ಲ. ಅಲ್ಲದೆ, ಈ ಪ್ರಮೇಯಗಳು ಮತ್ತು ಗ್ರಹೀತಗಳು ಮುಂದೆ ಕೈಗೊಳ್ಳಬೇಕಾದ ಸಂಶೋಧನೆಯನ್ನಷ್ಟೆ ಸೂಚಿಸುತ್ತವೆ. ಅಂಥ ಸೂಚನೆಗಳಿಗೆ ಅಗತ್ಯವಾದ ವೇದಿಕೆಯನ್ನಾಗಿ 'ಸಾಮಾಜಿಕ ಅನ್ಯಾಯ, ಅಸಮಾನತೆ ಹಾಗೂ ಜಾತಿ ವ್ಯವಸ್ಥೆ' ಎಂಬ ಪ್ರತಿಕ್ರಿಯಾತ್ಮಕ ಲೇಖನ ಬಂದಿದೆಯಷ್ಟೆ. ಈ ಸಂಶೋಧನಾ ಪ್ರಮೇಯಗಳು ಮತ್ತು ಗ್ರಹೀತಗಳು ಈಗಾಲೇ ಸಾಧಿಸಬೇಕಾಗಿರುವ ಸಂಗತಿಗಳನ್ನು ಸಾಧಿಸಿಬಿಟ್ಟಂತೆ ತರ್ಕ ಮಂಡಿಸಿರುವುದು 'ಜ್ಞಾನ ಮೀಮಾಂಸೆ'ಯ ಅಥವಾ ಸಂಶೋಧನೆಯ ಲಕ್ಷಣವಲ್ಲ.

2. ಈ ಪ್ರತಿಕ್ರಿಯೆಯ ಬಹು ಮುಖ್ಯವಾದ ಸಂಗತಿಯೆಂದರೆ 'ಜಾತಿ ಅಸಮಾನತೆ ಮತ್ತು ಹಿಂದೂಯಿಸಂ' ಕುರಿತಂತೆ ಬಾಲಗಂಗಾಧರ್‌ರವರ ಪ್ರಮೇಯಗಳು ಮತ್ತು ಗ್ರಹೀತಗಳನ್ನು ಮಾತ್ರ ಅತ್ಯುತ್ಸಾಹದಲ್ಲಿ ಹೇಳುವಂಥದ್ದಾಗಿದೆ. ಹೀಗೆ ಮಾಡುವಾಗ ಲೇಖಕರು 'ಜಾಣ ಕುರುಡುತನ' ವ್ಯಕ್ತ ಪಡಿಸಿದ್ದಾರಲ್ಲದೆ, ಓದುಗರನ್ನು ತಮ್ಮ ಗ್ರಹೀತಗಳತ್ತ ಅಂದರೆ ಬಾಲಗಂಗಾಧರರವರ ವಿಚಾರಗಳತ್ತ ಆಕರ್ಷಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಇಲ್ಲಿರುವ ತರ್ಕವೆಂದರೆ 'ಪ್ರತಿವಾದಿ'ಯ ತಪ್ಪುಗಳನ್ನು ಪ್ರತಿಪಾದಿಸುತ್ತಲೇ ತಮ್ಮ ವಿಚಾರಗಳಿಗೆ 'ಅವಕಾಶ'ವನ್ನು ಪಡೆದುಕೊಳ್ಳುವುದು. ಆದರೆ ಜೂನ್ ತಿಂಗಳು ಪ್ರಕಟವಾದ 'ಜಾತಿ ಮತ್ತು ತಾರತಮ್ಯ' ಎಂಬ ಲೇಖನದಲ್ಲಿ ಅನೇಕ ವಿಚಾರಗಳು ಜಾತಿ, ಹಿಂದೂ ಧರ್ಮ, ಅಸಮಾನತೆ, ಅಸ್ಪೃಶ್ಯತೆ ಮುಂತಾದುಗಳ ಬಗ್ಗೆ ಗಂಭೀರ ಚರ್ಚೆಯನ್ನು ಮಾಡುತ್ತದೆ. ಅವುಗಳೆಲ್ಲವನ್ನು ನಮ್ಮ 'ಘನ ವಿದ್ವಾಂಸರು' ಬದಿಗೆ ಸರಿಸಿರುವುದರ ಬಗ್ಗೆ ಏನು ಹೇಳಬೇಕೋ ತಿಳಿಯದು.

3. ಏಪ್ರಿಲ್ ತಿಂಗಳಲ್ಲಿ ಕುವೆಂಪು ವಿ.ವಿ.ಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ 'ಬಾಲಗಂಗಾಧರ್‌ರವರ ಬಗ್ಗೆಯಾಗಲೀ, ಅಥವಾ ಪೌರಾಸ್ತ್ಯವಾದದ ಬಗ್ಗೆಯಾಗಲೀ ಎಲ್ಲೂ ಯಾರೊಬ್ಬರೂ ಸಹ ಚಕಾರವೆತ್ತಲಿಲ್ಲ. ಅವೆಲ್ಲಾ ನನ್ನ ಕಲ್ಪಿತ ಆರೋಪ ಎಂದಿದ್ದಾರೆ. ಆದರೆ ಡಾ. ಜಿ. ಅಲೇಶಿಯಸ್ ಅವರ ಗೋಷ್ಠಿಯಿಂದ ಹಿಡಿದು, ಪ್ರೊಫೆಸರ್ ಕಿ.ರಂ.ನಾಗರಾಜ್‌ರವರ ತನಕ 'ಆಧುನಿಕತೆ ಮತ್ತು ಪೌರಾಸ್ತ್ಯವಾದ'ಕ್ಕೆ ಸಂಬಂದಿಸಿದಂತೆ ಅನೇಕ ವಿಚಾರಗಳು ಲೇಖನದಲ್ಲಿ ಮಂಡಿತವಾಗಿವೆ. ಉದಾಹರಣೆಗೆ ಪ್ರೊಫೆಸರ್. ಕಿ. ರಂ. ನಾಗರಾಜರವರು ಮಂಡಿಸಿದ ಪ್ರಬಂಧದಲ್ಲಿ 'ವಸಾಹತುಶಾಹಿಪೂರ್ವ ಕರ್ನಾಟಕದಲ್ಲಿ ಜಾತಿ ಸ್ವರೂಪ' ಎನ್ನುವ ವಿಷಯ ಚರ್ಚೆಗೊಳ್ಳುತ್ತದೆ. "ಅವರು ತಮ್ಮ ವಿಷಯ ರೂಪುಗೊಂಡ ಹಿನ್ನೆಲೆಯನ್ನು ಮೊದಲಿಗೆ ಚರ್ಚೆಗೆ ತೆಗೆದುಕೊಂಡರು: **ಬಾಲಗಂಗಾಧರ ಮತ್ತು ಅವರ ಪರಿವಾರ ಜಾತಿಯನ್ನು ವಿಭಿನ್ನವಾಗಿ ವಿವರಿಸುತ್ತಿದ್ದಾರೆ. ಅವರ ಪ್ರಕಾರ, ವಸಾಹತ್ತೋತ್ತರ ಸಂದರ್ಭದಲ್ಲಿ ಜಾತಿಯನ್ನು ಕುರಿತ ನಿರ್ವಚನಗಳೆಲ್ಲಾ ವಸಾಹತುಶಾಹಿ ಸಂದರ್ಭದಲ್ಲೇ ನಿರೂಪಿತಗೊಂಡವಾಗಿವೆ. ಅಂದರೆ ಜಾತಿಯನ್ನು ಕುರಿತ ವಿಚಾರಗಳೆಲ್ಲವೂ ಸಹ ಪಶ್ಚಿಮದ ಸಮಾಜಶಾಸ್ತ್ರದಿಂದ ಹೊರಹೊಮ್ಮಿದ್ದು, ಜಾತಿಯ ಚರ್ಚೆ ಎನ್ನೋದು ಆ ಪಶ್ಚಿಮದ ಮರುಉತ್ಪಾದನೆಯೇ ಆಗುತ್ತದೆ. ಆದರೆ ಜಾತಿಯ ನಿರ್ವಚನ ವಸಾಹತುಶಾಹಿಪೂರ್ವದಲ್ಲಿ ಹೀಗೆ ಇರಲಿಲ್ಲ ಎನ್ನುವಂಥ ನಿಲುವುಗಳು ನಿಜವೇ? ಹಾಗದರೆ ಈ ಪೌರಾಸ್ತ್ಯವಾದವನ್ನು ಮೀರುವ ಕ್ರಮಗಳು ನಮ್ಮಲ್ಲಿ ಇವೆಯೇ?.**

ಮೇಲಿನ ಪ್ರಶ್ನೆಗಳನ್ನು ವಿವರಿಸಿಕೊಳ್ಳುವಾಗ ನಮ್ಮೆದುರು 1000 ವರ್ಷಗಳಿಗೂ ಮೇಲ್ಪಟ್ಟು ಉಳಿದುಕೊಂಡಿರುವ ಕೃತಿಗಳನ್ನು ಗಮನಿಸಬೇಕಾಗುತ್ತದೆ. ಈ ಕೃತಿಗಳೆಲ್ಲಾ ಜಾತಿ, ಧರ್ಮ ಮತ್ತು ಪ್ರಭುತ್ವವನ್ನು ಕುರಿತು ಚರ್ಚೆ ಮಾಡಿವೆ. ಅಲ್ಲಿ ಎಲ್ಲ ವಿಧವಾದ ಜಡತ್ವವನ್ನು ಪ್ರತಿಪಾದಿಸುವ ಮತ್ತು ಅವನ್ನು ಪ್ರತಿರೋಧಿಸುವ ಸಾಹಿತ್ಯ ರಚನೆಗೊಂಡಿವೆ. ಕನ್ನಡದ ಆದಿ ಕವಿ ಪಂಪ ಆ ಕಾಲದಲ್ಲಿ ಇದ್ದ ಜಾತಿ, ಪ್ರಭುತ್ವ ಮತ್ತು ಗಂಡು-ಹೆಣ್ಣು ಸಂಬಂಧಗಳನ್ನು ಪ್ರಶ್ನಿಸಿದಲ್ಲದೆ, ಅಂದಿನ ಯಜಮಾನ ಮೌಲ್ಯಗಳನ್ನು ಪ್ರಭಟಿಸಿರುವುದನ್ನು ನಾವು ಕಾಣುತ್ತೇವೆ. ಹಾಗೆಯೇ 12ನೇ ಶತಮಾನ ಮತ್ತು ಅನಂತರದಲ್ಲಿ ಜಾತಿ ಪ್ರಶ್ನೆ ಮತ್ತೆ ಮತ್ತೆ ಸಮಾಜದಲ್ಲಿ ಕಾಣಿಸಿಕೊಂಡಿದೆ. ಅಲ್ಲಿನ ಜಾತಿಯ ಜಡತ್ವ ಬ್ರಾಹ್ಮಣ್ಯದ ಕ್ರೌರ್ಯ, ದೇವಾಲಯ ಕೇಂದ್ರಿತ ಮೇಲು-ಕೀಳು ಮುಂತಾದವುಗಳನ್ನು ಎಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ಪ್ರಭಟಿಸಿದ್ದಾರೆ. ಹೀಗೆ ಶಿಷ್ಟಭಾಷೆಯ ಮಿತಿಯನ್ನು ಮೀರಿ ಜನ ಭಾಷೆ ಬೆಳೆಯಿತು. ಆದ್ದರಿಂದ ಸಾಹಿತ್ಯ ಕೇವಲ ಸಾಹಿತ್ಯವಾಗಿರದೆ ಅದರೊಳಗಿನಿಂದಲೇ ಮೇಲಿನ ಪ್ರಶ್ನೆಗಳನ್ನು ನಿರ್ವಹಿಸಿಕೊಂಡು ಬಂದಿರುವಕ್ರಮವನ್ನು ಕಾಣಬಹುದಾಗಿದೆ. ಅದು ಕರ್ನಾಟಕದ ಚರಿತ್ರೆಯೊಡನೆ ಒಟ್ಟಾಗಿಯೇ ಸಾಗಿಬಂದಿದೆ.

ಅಲ್ಲದೆ, ದಾಸ ಸಾಹಿತ್ಯವೂ ಕೂಡ ಈ ಜಾತಿ ಪ್ರಶ್ನೆಯನ್ನು ಎದುರಿಸಿದೆ. ಆದ್ದರಿಂದ ಜಾತಿಯ ಪ್ರಶ್ನೆ ಒಂದು ಸಾತತ್ಯೆಯ ನಿರಂತರ ಪ್ರಶ್ನೆಯಾಗಿಯೇ ಬಂದಿದೆ. ಇಲ್ಲಿ ಒಂದು ಸಂಗತಿ ಮುಖ್ಯವಾಗುತ್ತದೆ. ಓರಿಯಂಟಲಿಸ್ಟರು ಹೇಳುವಂತ ಭೂತದ ಬೆಳಕನ್ನು ವರ್ತಮಾನಕ್ಕೆ ತರುವುದು ಎಂದು ಅರ್ಥವಲ್ಲ. ಬದಲು ಅಲ್ಲಿದ್ದ ಜಾತಿ ವೈರುಧ್ಯಗಳನ್ನು ಜನ ಹೇಗೆ ನಿಭಾಯಿಸಿದರು ಎನ್ನುವುದು ಮುಖ್ಯವಾಗುತ್ತದೆ. ಚಲನಶೀಲವಾದ ಮತ್ತು ಪರಿವರ್ತನಾಶೀಲವಾದ ಆಕೃತಿಗಳು ಕನ್ನಡ ಸಾಹಿತ್ಯದಲ್ಲಿ ಮತ್ತು ಜನಬದುಕಿನಲ್ಲಿ ಹಾಸುಹೊಕ್ಕಾಗಿವೆ. ಈ ಪ್ರಕ್ರಿಯೆಯಲ್ಲಿ ಕೆಳ ಜಾತಿಗಳು ಹೇಗೆ ಸಂಘಟನೆಗೊಂಡವು, ಮತ್ತು ಜಾತಿಯ ವಿರುದ್ಧ ಪ್ರತಿಭಟಿಸಿದವು ಎಂಬುದನ್ನು 19ನೇ ಶತಮಾನದ ಕೊನೆತನಕವೂ ಕಾಣುತ್ತೇವೆ.

ಅಂದರೆ ಈ ಚಾರಿತ್ರಿಕ ನಿರಂತರತೆಯಲ್ಲಿ ಜಾತಿ, ಸಾಮಾಜಿಕ ಅವಮಾನ ಇವುಗಳ ವಿರುದ್ಧ ಒಂದು ಆಧ್ಯಾತ್ಮಿಕವಾದ ಪ್ರತಿಭಟನೆ ನಡೆದಿದೆ. ಇದು ಆಗ ಇದ್ದ ವರ್ಣಾಶ್ರಮದ ವಿರುದ್ಧದ ಪ್ರತಿಭಟನೆಯೂ ಹೌದು. ಅಂದರೆ ಅಲ್ಲೊಂದು ಆಧ್ಯಾತ್ಮಿಕವಾದ ಅಥವಾ ಭಕ್ತಿಕೇಂದ್ರವಾದ ವಿಶಿಷ್ಟವಾದ ಸಂಸ್ಕೃತಿ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ. ಆದರೆ ಈ ಸಂಗತಿಯನ್ನು ರಾಷ್ಟ್ರೀಯ ಚಳುವಳಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಭಗವದ್ಗೀತೆ ಮುಖ್ಯವಾಯಿತೇ ವಿನಃ ಜನ ಸಂಸ್ಕೃತಿಯ ಆಧ್ಯಾತ್ಮಿಕತೆಯ ಅಭಿವ್ಯಕ್ತಿಯ ಬಿಂಬಗಳಾದ ಒರಿಸ್ಸಾದ ಮಹಿಮಾ, ತುಕಾರಾಮ್, ಕರ್ನಾಟಕದ ಕೈವಾರ ತಾತಯ್ಯ, ಶಿಶುನಾಳ ಶರೀಫ ಮುಂಥಾದವರು ಮುಖ್ಯವಾಗಲಿಲ್ಲ. ಇವರೆಲ್ಲಾ ಜಾತಿ ಕೇಂದ್ರಿತವಾಗಿದ್ದ ಅಸ್ಪೃಶ್ಯತೆಯ ವಿರುದ್ಧ ಪ್ರತಿಭಟಿಸಿದ್ದಾರೆ. ಹೀಗೆ ಅನೇಕರು ಬಹುರೂಪಿಯ ಸೂಕ್ಷ್ಮಗಳಲ್ಲಿ ವಸಾಹತುಶಾಹಿಗೆ ಪ್ರತಿಕ್ರಿಯಿಸಿದ್ದಾರೆ. ಉದಾಹರಣೆಗೆ ಶಿಶುನಾಳ ಶರೀಫ ಹೇಳುವ

‘ಜಿಡ್ಡಿಯ ಹುಳು’, ‘ಹೊತ್ತಿತು ಇಂಗ್ಲೇಂಡ್ ದೇಶಕ ಬೆಂಕಿಯ ಮಳೆ’ ಮುಂತಾದುವು ಹಿಡಿದಿಟ್ಟುಕೊಂಡಿರುವ ಪ್ರತಿಭಟನಾ ಸ್ವರೂಪವನ್ನು ನಾವು ಇನ್ನೂ ಗಮನಿಸಿಲ್ಲ. ಹೀಗಿರುವಾಗ ರಾಷ್ಟ್ರೀಯ ಚಳುವಳಿ ಕೆಳವರ್ಗದ ಈ ಆಧ್ಯಾತ್ಮಿಕವಾದ ನುಡಿಗಟ್ಟನ್ನು ಸಂಪೂರ್ಣವಾಗಿ ನಿರಾಕರಿಸಿ, ಅದಕ್ಕೆ ಬದಲಾಗಿ ಪಾನ್–ಇಂಡಿಯನ್ ಆದ ಮಧ್ಯಮವರ್ಗದ ನುಡಿಗಟ್ಟನ್ನು ಕಟ್ಟಿಕೊಡಲಾಗಿದೆ.

ಹೀಗೆ ಗ್ರಾಮೀಣ ಬದುಕಿನ ಆಧ್ಯಾತ್ಮವಾದಿ ಸಂಸ್ಕೃತಿಯು ವಾಸ್ತವವಾದಿ ವಿಶ್ಲೇಷಣೆಗೆ ಸಿಗುವುದಿಲ್ಲ. ಕರ್ನಾಟಕದ ದಕ್ಷಿಣದ 5–6 ಜಿಲ್ಲೆಗಲಲ್ಲಿ ಇಂದಿಗೂ ಜನ ಬದುಕಿನ ಭಾಗವಾಗಿರುವ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರ ಪರಂಪರೆಗಳು ಶರಣ ಚಳುವಳಿಯಿಂದ ಅನೇಕ ಸಂಕೇತ ಮತ್ತು ಮೋಟಿಫ್‌ಗಳನ್ನು ತೆಗೆದುಕೊಂಡಿವೆ. 15 ನೇ ಶತಮಾನದಲ್ಲಿದ್ದುಕೊಂಡೇ 12ನೇ ಶತಮಾನದ ಬಸವಣ್ಣನೊಡನೆ ಮಂಟೇಸ್ವಾಮಿ ಒಂದು ಸಂವಾದ ಸಾಧಿಸುತ್ತಾನೆ. ಹೇಗೆ ಶರಣ ಚಳುವಳಿ ಮತ್ತೆ ಮಡಿ–ಮೈಲಿಗೆಯನ್ನು ಸ್ಥಾಪಿಸಿಕೊಳ್ಳುತ್ತದೆ ಮತ್ತು ಅದಕ್ಕೆ ಪ್ರತಿಭಟನೆಯಾಗಿ ಈ ಪರಂಪರೆಗಳು ಹುಟ್ಟಿ ಬಂದವು ಎನ್ನುವುದನ್ನು ಇಂದಿಗೂ ಕಾಣುತ್ತೇವೆ. ಈ ಮಂಟೇಸ್ವಾಮಿ ಜಾತ್ರೆ ಇಂದಿಗೂ ಜನತೆಯ ಒಂದು ಮಹಾನ್ ಕಾವ್ಯವಾಗಿಯೇ ಉಳಿದುಕೊಂಡಿದೆ. ಹಾಗಾಗಿ ಈ ಪರಂಪರೆಗಳನ್ನು ನಾವು ವ್ಯಕ್ತಿಗತ ನೆಲೆಯಲ್ಲಿ ನೋಡಲಾಗದು. ಅವು ಆಚಾರದ ಮೇಲಿನ ಅಧಿಕಾರವನ್ನು ಕಿತ್ತೊಗೆಯುತ್ತವೆ. ವೈದಿಕ ಪರಂಪರೆಗಳು ಸಾಂಪ್ರದಾಯಿಕ ಬ್ರಾಹ್ಮಣ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದರೆ, ಈ ಮಂಟೇಸ್ವಾಮಿ ಮತ್ತು ಮಲೆಮದೇಶ್ವರ ಪರಂಪರೆಗಳು ಬ್ರಾಹ್ಮಣ್ಯವನ್ನು ನಿರಾಕರಿಸಿ ನಿಲ್ಲುತ್ತವೆ.

ಆದ್ದರಿಂದ ಸಾಹಿತ್ಯ ಕೇವಲ ಭಾಷೆಗೆ ಸಂಬಂಧಿಸಿದ್ದುದ್ದಲ್ಲ. ಅದು ಚರಿತ್ರೆ ಮತ್ತು ದೇಶಿತನವನ್ನು ತನ್ನೊಳಗೇ ಒಳಗೊಂಡಂಥ ಪ್ರಶ್ನೆಯನ್ನು ಎದುರಿಸುತ್ತದೆ. ಇಡೀ ಜೀವ ಸಂಕುಲವೇ ವಸಾಹತುಶಾಹಿಯ ದಟ್ಟ ಪ್ರಭಾವಗಳಿಗೆ ಒಳಗಾಗುತ್ತದೆ. ಆದರೆ ವಸಾಹತುಪೂರ್ವದ ಕ್ರೌರ್ಯದ ನಿರಾಕರಣೆ ಎಂದೂ ಮಾಡಲಾಗುವುದಿಲ್ಲ ಎಂಬುದನ್ನು ಜನಬದುಕು ತೋರಿಸಿಕೊಟ್ಟಿದೆ. ಆದರೆ ಗ್ರಾಮ ಸ್ವರಾಜ್ಯವನ್ನು ಪ್ರತಿಪಾದಿಸಿದ ಗಾಂಧಿಯೂ ಸಹ ಗ್ರಾಮೀಣ ಬದುಕಿನ ಇಂಥ ಆಧ್ಯಾತ್ಮಿಕವಾದ ಸೂಕ್ಷ್ಮಗಳನ್ನು ಗಮನಿಸುವುದಿಲ್ಲ. ಹಾಗೆಯೇ ರಾಷ್ಟ್ರೀಯ ಚಳುವಳಿ ಇಂಥ ಅನೇಕ ಸೂಕ್ಷ್ಮಗಳನ್ನು ಮೌನಿಯಾಗಿಸುತ್ತದೆ. ಈ ಸಂಗತಿ ಅಂಬೇಡ್ಕರವರೂ ಸಹ ಗಮನಿಸಿದರೂ ಸಹ ಅದನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುವುದಿಲ್ಲ. ಇದಕ್ಕೆ ಕಾರಣ ಅಲ್ಲಿದ್ದಂಥ ಜಾತಿಯೇ ಆಗಿದೆ. ಆದ್ದರಿಂದ ವಸಾಹತುಶಾಹಿಪೂರ್ವ ಎಂದಾಕ್ಷಣ ಅಲ್ಲಿರುವ ಭೂತವನ್ನು ಮರುಸ್ಥಾಪಿಸದೆ, ಚರಿತ್ರೆಯ ನಿರಂತರತೆಯನ್ನು ಅರಿವುದೇ ಆಗುತ್ತದೆ.ಹಾಗೂ ಅಂಥ ಚರಿತ್ರೆಯಲ್ಲಿರುವ ಕ್ರೌರ್ಯವನ್ನು ಹೇಗೆ ಜನಸಮುದಾಯಗಳು ಪ್ರತಿಭಟಿಸಿ, ತಮ್ಮ ಆಧ್ಯಾತ್ಮಿಕವಾದ ಸಾತತ್ಯವನ್ನು ಉಳಿಸಿಕೊಂಡಿವೆ ಎನ್ನುವುದನ್ನು ಅರಿಯುವುದೇ ಆಗಿದೆ.” ಈ ಸಂಗತಿಗಳನ್ನು ಡಾ.ಷಣ್ಮುಖರವರು ಏಕೆ ಗಮನಿಸುವುದಿಲ್ಲ? ಬದಲಾಗಿ ಅವರ ಪ್ರತಿಕ್ರಿಯೆಯಲ್ಲಿ ಹೀಗೆನ್ನುತ್ತಾರೆ, “....ಆದರೆ, ಇಡೀ ವಿಚಾರ ಸಂಕಿರಣದಲ್ಲಿ ಎಲ್ಲೂ ಯಾರೊಬ್ಬರೂ ಬಾಲಗಂಗಾದರವರ ವಾದವೇನು? ಯಾವ ನೆಲೆಯಲ್ಲಿ ಅವರ ವಾದ ತಪ್ಪು ಎಂಬುದನ್ನು ಪ್ರಶ್ನಿಸುವುದಿರಲಿ, ಅವರ ಬಗೆಗಾಗಲೀ ಅಥವಾ ಅವರ ‘ಗುಂಪು’ ಕುವೆಂಪು ವಿ.ವಿ.ಯಲ್ಲಿ ಮಾಡುತ್ತಿರುವ ಸಂಶೋಧನೆಯ ಬಗೆಗಾಗಲೀ ಚಕಾರವನ್ನು ಏಕೆ ಎತ್ತಲಿಲ್ಲ ಎಂಬುದು ಆಶ್ಚರ್ಯದ ಸಂಗತಿಯಾಗಿದೆ.” ಇಂಥ ಹೇಳಿಕೆಗಳು ಏನನ್ನು ಸೂಚಿಸುತ್ತವೆ ಎನ್ನುವುದನ್ನು ಓದುಗರ ತೀರ್ಮಾನಕ್ಕೆ ಬಿಟ್ಟುಬಿಡುತ್ತೇನೆ.

4. ಪ್ರತಿಕ್ರಿಯೆ ಲೇಖನದ ಕೊನೆಯಲ್ಲಿ ‘ಅಂದಿನ ಕರ್ನಾಟಕ ಸರ್ಕಾರದಲ್ಲಿದ್ದ ಶಂಕರಮೂರ್ತಿಯವರು ಕುವೆಂಪು ವಿ.ವಿ.ಯಲ್ಲಿ ಸ್ಥಾಪನೆಯಾಗಲಿರುವ ಕರ್ನಾಟಕ ಅಕಾಡೆಮಿ ಆಫ್ ಸೋಶಿಯಲ್ ಸಯನ್ಸ್ ವಿಭಾಗಕ್ಕೆ ಅನುದಾನ ನೀಡಿಲ್ಲ’ ಅದು ನನ್ನ ಕಪೋಲ ಕಲ್ಪಿತ’ ಎಂದಿರುವುದರ ಬಗ್ಗೆ ಕೆಲವು ವಿಚಾರಗಳನ್ನು ಓದುಗರ ಮುಂದೆ ತರಲು ಇಚ್ಛಿಸುತ್ತೇನೆ. ಮೊದಲನೆಯದು ವಿಧಾನಸೌದದಲ್ಲಿ ಪತ್ರಿಕಾ ಹೇಳಿಕೆಯನ್ನು ನೀಡಿದ ಶಂಕರಮೂರ್ತಿಯವರು ಕುವೆಂಪು ವಿ.ವಿಯಲ್ಲಿ ಸ್ಥಾಪಿಸಲಿರುವ ಅಕಾಡೆಮಿಯ ಬಗ್ಗೆ ಸರ್ಕಾರದ ಅನುದಾನದ ಬಗ್ಗೆ ನೀಡಿದ ಹೇಳಿಕೆಯನ್ನು ಹಿಂದೂ ಪತ್ರಿಕೆಯಲ್ಲಿ ಪ್ರಕಟಿಸಿರಲಿಲ್ಲವೇ? ಅಲ್ಲದೆ ಶಿಕ್ಷಣ ಕಾರ್ಯದರ್ಶಿಯಾಗಿರುವ ಕೌಶಿಕ್ ಮುಖರ್ಜಿಯವರು ಕುವೆಂಪು ವಿ.ವಿ.ಯಲ್ಲಿ ಎಲ್ಲಾ ವಿಭಾಗಗಳ ಮುಖ್ಯಸ್ಥರನ್ನೊಳಗೊಂಡಂತೆ ಸಭೆ ನಡೆಸಿ, ‘ಕರ್ನಾಟಕ ಅಕಾಡೆಮಿ ಆಫ್ ಸೋಶಿಯಲ್ ಸೈನ್ಸ್’ ಘಟಕಕ್ಕೆ ಅನುದಾನದ ಬಗ್ಗೆ ಭರವಸೆ ನೀಡಿದ್ದು ಸುಳ್ಳೆ? ಇಲ್ಲಿ ಒಂದು ವಿಚಾರವನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ – ಯಾವುದೇ ರೀತಿಯ ಸಂಶೋಧನೆ ಅಥವಾ ಜ್ಞಾನ ಮೀಮಾಂಸೆ ‘ಅಧಿಕಾರ ರಾಜಕಾರಣ’ವನ್ನು ಒಳಗೊಂಡಿರುತ್ತದೆ. ಈ ‘ಜ್ಞಾನ–ಅಧಿಕಾರ’ದ ಡಿಸ್ಕೋರ್ಸ್‌ನ್ನು ಬಿಟ್ಟು ‘ವಸ್ತುನಿಷ್ಠತೆ’ಯ ಸೋಗಿನಲ್ಲಿ ವಾದ ಮಂಡಿಸುವುದು ಅಥವಾ ಚರ್ಚಿಸುವುದೆಂದರೆ ಮತ್ತದೇ ‘ವ್ಯಕ್ತಿನಿಷ್ಠತೆ’ಯನ್ನು ಎತ್ತಿಹಿಡಿದು ಸಾಂಸ್ಕೃತಿಕ ಅಧಿಕಾರವನ್ನು ಹೇರುವಂಥದ್ದೇ ಆಗುತ್ತದೆ. ಆದ್ದರಿಂದ

ನನ್ನ ಲೇಖನದಲ್ಲಿ ಎತ್ತಿರುವ ವಿಚಾರಗಳನ್ನು ಚರ್ಚೆ ಮಾಡಲು ತಯಾರಾದಲ್ಲಿ ಅಂಥ ಚರ್ಚೆಯ ಜ್ಞಾನ ಮೀಮಾಂಸಾ ನೆಲೆಗಳನ್ನು/ಪ್ರಸ್ಥಾನಗಳನ್ನು ಚರ್ಚಿಸಲು ನಾನು ಸಹ ತಯಾರಿದ್ದೇನೆ. ಅಲ್ಲದೆ ನನ್ನ ಸಂಶೋಧನೆ “ಕರ್ನಾಟಕ ಜಾತಿಗಳ ಸಾಂಸ್ಕೃತಿಕ ಪ್ರತಿನಿಧೀಕರಣ ಮತ್ತು ವಸಾಹತುಶಾಹಿ ಅನುಭವ” ಜಾತಿ ವ್ಯವಸ್ಥೆಯ ಬಗೆಗಿನ ಥಿಯರಿಗಳು ಮತ್ತು ಅವುಗಳ ಸಾಂಸ್ಕೃತಿಕ ರಾಜಕಾರಣವನ್ನು ಬಯಲಿಗೆಳೆಯಲಾಗಿದೆ. ಆದ್ದರಿಂದ ಇದೇ ಮಣ್ಣಲ್ಲಿ ಜೀವಂತವಾಗಿರುವ ಬೌದ್ಧ ಮೀಮಾಂಸೆಯನ್ನು ಮತ್ತೆ ಕಟ್ಟುವ ಕಾರ್ಯ ಆಗಬೇಕಿದೆ.

ಚರ್ಚೆ
ಜಾತಿ ಧರ್ಮ ತಾರತಮ್ಯ

ವ್ಯಕ್ತಿನಿಷ್ಠ ಮತ್ತು ನಿರ್ದಿಷ್ಟತೆಯನ್ನು ಮರೆತಲ್ಲಿ ಸಾಮಾಜಿಕವಾಗಿರುವ ‘ಅನ್ಯಾಯ’ವನ್ನು ಬಚ್ಚಿಟ್ಟಂತೆಯೇ ಆಗುತ್ತದೆ. ಆದ್ದರಿಂದ ಪ್ರತಿಕ್ರಿಯೆ ನೀಡಿದವರು ಮತ್ತು ಓದುಗರು ಈ ‘ಜ್ಞಾನ–ಅಧಿಕಾರ’ ಸುಳಿಯನ್ನು ಮೀರಿ ‘meaning’ ಅನ್ನು ಉತ್ಪಾದಿಸುತ್ತಾರೆಂದು ಭಾವಿಸುವ ಪಂಥಕ್ಕೆ ನಾನು ಸೇರುವುದಿಲ್ಲ.

5. ‘ಜಾತಿ ಮತ್ತು ಹಿಂದೂ ಧರ್ಮದ’ ಬಗ್ಗೆ ಕ್ಷೇತ್ರ ಕಾರ್ಯ ಮಾಹಿತಿಯನ್ನು ಹಂಚಿಕೊಳ್ಳುವಾಗ ಜನ ಸಾಮಾನ್ಯರು ಮತ್ತು ಶಿಕ್ಷಿತರಾದವರು ಎಂಬ ವಿರೋಧಗಳನ್ನು ಡಾ. ಷಣ್ಮುಖರವರು ಮಂಡಿಸುತ್ತಾರೆ. ಕ್ಷೇತ್ರಕಾರ್ಯ ಮಾಡುವಾಗ ಜನಸಾಮಾನ್ಯರು ‘ಜಾತಿ ಮತ್ತು ಹಿಂದೂಯಿಸಂಗೆ ಸಂಬಂಧ ಕಲ್ಪಿಸಲು ಆಗಲಿಲ್ಲ’ ಎನ್ನುವಾಗ ‘ಜನ ಸಾಮಾನ್ಯರನ್ನು’ ಹೇಗೆ ಪರಿಭಾವಿಸಲಾಗಿದೆ ಎನ್ನುವುದು ತಿಳಿಯುತ್ತದೆ. (ಡಾ. ಷಣ್ಮುಖರವರ ಮಾತುಗಳು ಹೀಗಿವೆ: **“ಹಾಗೆಯೇ, ಅಸ್ಪೃಶ್ಯ ಜಾತಿಗಳವರು ತಾವೇ ತಮ್ಮ ಹಳ್ಳಿಯಲ್ಲಿ ಅತ್ಯಂತ ಕೆಳಜಾತಿಗಳೆಂದು ಒಪ್ಪುತ್ತಾರೆ. ಹಾಗೆಯೆ ಮೇಲ್‌ಜಾತಿಯವರು ಅವುಗಳನ್ನೇ ಕೆಳಜಾತಿಗಳೆಂದೂ ಗುರುತಿಸುತ್ತಾರೆ. ....ಅವುಗಳ ಅಸ್ತಿತ್ವದ ಬಗ್ಗೆಯೇ ಶೇ. 90 ರಿಂದ 95 ರಷ್ಟು ಜನರಿಗೆ ಅರಿವಿಲ್ಲ. ಅರಿವಿರುವವರೂ (ಮುಖ್ಯವಾಗಿ ಆಧುನಿಕ ಶಿಕ್ಷಣ ಪಡೆದವರು) ಅವುಗಳೇ ನಮ್ಮ ಸಾಮಾಜಿಕ ಜೀವನವನ್ನು ನಿರ್ದೇಶಿಸುವ ಪವಿತ್ರಗ್ರಂಥಗಳೆಂದು ಭಾವಿಸಿಯೂ ಇಲ್ಲ.)**

ಇದನ್ನು ಗಮನಿಸಿದರೆ, ಮತ್ತದೇ ಜಾತಿ ತಾರತಮ್ಯವನ್ನು ಅವರ ಮೇಲೆ ಹೇರಿದಂತೆ ಆಗುತ್ತದೆಯಲ್ಲವೇ? ಈ ಸೂಕ್ಷ್ಮವನ್ನು ಎಂಥ ಸಂಶೋಧಕನೂ ಸಹ ಗಮನಿಸಲೇಬೇಕಾಗಿದೆ. ಇಲ್ಲವಾದಲ್ಲಿ ಅದು ಸಂಶೋಧನೆ ಎನಿಸಿಕೊಳ್ಳುವುದೂ ಇಲ್ಲ. ಆದ್ದರಿಂದ ಸಂವಾದ ಮತ್ತು ಕನ್ನಡ ಟೈಮ್ಸ್‌ನಲ್ಲಿ ಪ್ರಕಟವಾದ ನನ್ನ ಲೇಖನದಲ್ಲಿ ಎತ್ತಿರುವ ವಿಚಾರಗಳನ್ನು ಚರ್ಚೆ ಮಾಡಲು ತಯಾರಾದಲ್ಲಿ ಅಂಥ ಚರ್ಚೆಯ ಜ್ಞಾನ ಮೀಮಾಂಸಾ ನೆಲೆಗಳನ್ನು/ಪ್ರಸ್ಥಾನಗಳನ್ನು ಚರ್ಚಿಸಲು ನಾನು ಸಹ ತಯಾರಿದ್ದೇನೆ. ಅಲ್ಲದೆ ನನ್ನ ಸಂಶೋಧನೆ “ಕರ್ನಾಟಕ ಜಾತಿಗಳ ಸಾಂಸ್ಕೃತಿಕ ಪ್ರತಿನಿಧೀಕರಣ ಮತ್ತು ವಸಾಹತುಶಾಹಿ ಅನುಭವ” ಜಾತಿ ವ್ಯವಸ್ಥೆಯ ಬಗೆಗಿನ ಥಿಯರಿಗಳು ಮತ್ತು ಅವುಗಳ ಸಾಂಸ್ಕೃತಿಕ ರಾಜಕಾರಣವನ್ನು ಬಯಲಿಗೆಳೆಯಲಾಗಿದೆ. ಆದ್ದರಿಂದ ಇದೇ ಮಣ್ಣಲ್ಲಿ ಜೀವಂತವಾಗಿರುವ ಬೌದ್ಧ ಮೀಮಾಂಸೆಯನ್ನು ಮತ್ತೆ ಕಟ್ಟುವ ಕಾರ್ಯ ಆಗಬೇಕಿದೆ. ಅಂಥದ್ದನ್ನು ಬಿಟ್ಟು ಮತ್ತೇನನ್ನೋ ಮಾಡುವುದು ಪ್ರಜ್ಞಾವಂತರ ಕೆಲಸವಲ್ಲ ಎಂದುಕೊಂಡಿದ್ದೇನೆ. ಅಲ್ಲದೆ, ಇಂದಿನ ಜರೂರು ಇರುವುದು ತಳಸಮುದಾಯಗಳ ಐಡೆಂಟಿಟಿಗಳನ್ನು ಬಲಪಡಿಸಿ, ಆ ಸಮುದಾಯಗಳು ಕಳೆದುಕೊಂಡಿರುವ ಅವಕಾಶಗಳನ್ನು ಮತ್ತೆ ಆ ಸಮುದಾಯಗಳು ಪಡೆಯುವಂತೆ ಮಾಡುವುದು ಮುಖ್ಯ. ಅದರ ಬದಲು ಉಳ್ಳವರ ಅನುಕೂಲಗಳನ್ನು ಮತ್ತೆ ಸ್ಥಿರೀಕರಿಸುವಂಥ ಸಿದ್ಧಾಂತ ಮತ್ತು ಸಿದ್ಧಾಂತಿಗಳನ್ನು ಹುಟ್ಟುಹಾಕುವುದು ಅಲ್ಲ. □

ಶ್ರೀ ಸಿದ್ಧರಾಮಯ್ಯ ಅವರಿಗೊಂದು ಬಹಿರಂಗ ಪತ್ರ

ತತ್‌ಕ್ಷಣದ ಲಾಭಕ್ಕಿಂತ ಮೌಲ್ಯ ದೊಡ್ಡದು

ಪ್ರಿಯ ಶ್ರೀ ಸಿದ್ಧರಾಮಯ್ಯ ಅವರಿಗೆ ಸಪ್ರೇಮ ವಂದನೆಗಳು,

ಮುಂದಿನ ದಿನಗಳಲ್ಲಿ ರಾಜಕೀಯವಾಗಿ ನೀವು ತೆಗೆದುಕೊಳ್ಳುತ್ತೀರೆಂದು ಪ್ರಚಾರ ಮಾಡುತ್ತಿರುವ ಮಾಧ್ಯಮಗಳಲ್ಲಿ ಊಹಾಪೋಹಗಳಲ್ಲಿ ಮಾತ್ರ ತೊಡಗಿದ್ದಾರೆ ಎಂದು ನಾವುಗಳು ಅನೇಕರು, ನಿಮ್ಮ ಸ್ನೇಹಿತರು, ನಂಬಿದ್ದೇವೆ. ಗಾಳಿಯಲ್ಲಿ ಕೂಡ ಅನೇಕ ಮಾತುಗಳು ತೇಲಿಬರುತ್ತಿವೆ. ಕಿವಿ ಕೊಟ್ಟರೆ ಖಂಡಿತ ಆತಂಕವುಂಟು ಮಾಡುವುದಂತೂ ಖಂಡಿತ. ಆದರೆ ನಾವುಗಳು ಇವುಗಳನ್ನೂ ಕೂಡ Devils workshop ನಲ್ಲಿ ಉತ್ಪಾದನೆಗೊಂಡ ಹಸಿಹಸಿ ಸುಳ್ಳುಗಳು ಎಂದು ತಿರಸ್ಕರಿಸುತ್ತಿದ್ದೇವೆ. ಆದರೆ ಇಂಥ ಮಾತುಗಳು ಕಿವಿಗಳಿಗೆ ಬೀಳುತ್ತಿದ್ದಂತೆ ಆಗೊಮ್ಮೆ ಈಗೊಮ್ಮೆ ನಿಮ್ಮ ಮುಖವನ್ನು ಟಿ.ವಿ. ಯಲ್ಲಿ ನೋಡಿದರೆ ಕೊಂಚ ಆತಂಕವಷ್ಟೇ ಅಲ್ಲ ದಿಗಿಲೇ ಆಗುತ್ತದೆ.

ಮೊದಲಿನ ಆತ್ಮವಿಶ್ವಾಸದ ಜೀವಕಳೆ ಹೊಮ್ಮಿಸುವ, ಸ್ಥೈರ್ಯ ನಂಬಿಕೆಗಳ ಮುಖಭಾವವಲ್ಲ ಅದು. ರಕ್ತವೆಲ್ಲ ಬಸಿದುಹೋದ ನಿರ್ಜೀವ ಕಳೆ ಕಾಣುತ್ತದೆ. ಮಾತುಗಳಲ್ಲಿ ದೃಢತೆಯಿಲ್ಲ. ನಿರಾಸೆ, ನಿರುತ್ಸಾಹಗಳು ಸೂಸುವ ಮುಖವಾಗಿಬಿಟ್ಟಿದೆ. ಇದು ಕೂಡ ನಮ್ಮ ಭ್ರಮೆಯೇ ಹೊರತು ನಿಜವಾಗಿ ಇಂಥ ಅನುಮಾನಗಳಿಗೆ ಕಾರಣವೇ ಇಲ್ಲ ಎಂದೂ ಅನಿಸುತ್ತದೆ. ಆದ ಆತಂಕ ಸಮರ್ಥನೀಯವೋ ಅಥವಾ ಇದೆಲ್ಲ ಕೇವಲ ನಮ್ಮ ಭ್ರಮೆ ಅನ್ನುವುದು ಸತ್ಯವೋ ಗೊತ್ತಾಗದೇ ತುಂಬ ಗೊಂದಲವಾಗುತ್ತದೆ. ಅಲ್ಲದೆ ಕಾಣ ಸಿಗಬೇಕಾದ ಸಂದರ್ಭ, ಸ್ಥಳಗಳಲ್ಲಿ ನಿಮ್ಮ ಮುಖ ಕಾಣದೆ ಮತ್ತಷ್ಟು ಗೊಂದಲವಾಗುತ್ತದೆ. ಕಾಂಗ್ರೆಸ್ ನಿಯೋಗಗಳಲ್ಲಿ ನೀವು ಕಾಣಿಸುವುದಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ ಮುಖ್ಯವಾದ ಸಭೆಗಳಲ್ಲೂ ನೀವು ಗೈರು ಹಾಜರಾಗಿರುತ್ತೀರಿ. ವಿಧಾನಸಭೆಗೂ ನಿಮ್ಮ ಹಾಜರಾತಿಯಲ್ಲಿ ಏರುಪೇರುಗಳು ಕಣ್ಣಿಗೆ ರಾಚುತ್ತವೆ.

ಈ 'ಊಹಾ ಪೋಹ'ಗಳನ್ನು, ಇವನ್ನೆಲ್ಲ ಕೇವಲ ಊಹಾಪೋಹಗಳೆಂದು ಹೇಳುವಾಗ ನಿಮ್ಮ ಧ್ವನಿ ಟೊಳ್ಳಾಗಿ ಕೇಳುತ್ತದೆ. ಇದನ್ನು ಕೂಡ ನಮ್ಮ ಶ್ರವಣದೋಷ ಎಂದು ನಂಬಲಿಕ್ಕೆ ನಮಗೆ ಆಸೆ. ಆದರೆ ಸತ್ಯವಿರಬಹುದೇನೋ ಎಂಬ ಅಂಜಿಕೆ ಮಾತ್ರ ಮನಸ್ಸನ್ನು ಕೊರೆಯುವುದು ನಿಜ. ಜೊತೆಗೆ ನಿಮ್ಮ ರಾಜಕೀಯ ಅನುಯಾಯಿಗಳು ನೀಡುತ್ತಿರುವ ಹೇಳಿಕೆಗಳು ಕೂಡ ಏನೂ ಉತ್ತೇಜನಕರವಾಗಿಲ್ಲ. ಇವೆಲ್ಲ ಕೇವಲ ನಮ್ಮ ಕಲ್ಪನೆಗಳು ಮಾತ್ರವಾಗಿದ್ದರೆ ನಿಮ್ಮ ಅನುಯಾಯಿಗಳು ಹೇಳುತ್ತಿರುವ 'ಸಿದ್ಧರಾಮಯ್ಯನವರು ಎಲ್ಲಿರುತ್ತಾರೋ ನಾವು ಅಲ್ಲಿ' ಎಂಬ ಮಾತಿಗೆ ಅರ್ಥವೇನು? ಈಗ ನೀವು ಕಾಂಗ್ರೆಸ್ಸಿನಲ್ಲಿರುವುದು ಗೊತ್ತಿಲ್ಲವೆ? ಆ ಪಕ್ಷದಿಂದ ಗೆದ್ದು ಬಂದು ಶಾಸಕರಾಗಿದ್ದು ಗೊತ್ತಿಲ್ಲವೆ? ಹಾಗಿದ್ದ ಮೇಲೆ ಅವರ ಮಾತಿಗೆ ಅರ್ಥವೇನು?

ಈಗ ಕಾಂಗ್ರೆಸ್ ಸೋತು ವಿರೋಧಪಕ್ಷದಲ್ಲಿ ಕೂತಿದೆ. ಸೋಲಲು ಕಾರಣಗಳೇನು ಎಂದು ನೀವು ಧೈರ್ಯವಾಗಿ, ಪ್ರಾಮಾಣಿಕವಾಗಿ, ಯೋಚಿಸಿರಲೇಬೇಕು. ಈ ಸೋಲಿನಲ್ಲಿ ನಿಮ್ಮದೂ ಪಾಲು ಸಾಕಷ್ಟು ಇದೆ ಅಲ್ಲವೆ? ಕಾಂಗ್ರೆಸ್ಸನ್ನು ಗೆಲ್ಲಿಸಿ ಅಧಿಕಾರದಲ್ಲಿ ಕೂಡಿಸುತ್ತೇವೆ ಎಂದು ಯಾರಾದರೂ ಶಕುನ ನುಡಿದಿದ್ದರೇನು? ಅಥವಾ ಜನಗಳೇ ಆಶ್ವಾಸನೆ ನೀಡಿದ್ದರೋ? ಪ್ರತಿಬಾರಿ ಕಾಂಗ್ರೆಸ್ ಸೋತಾಗಲೂ ಸ್ವಾತಂತ್ರ್ಯಸಂಗ್ರಾಮ ಕಾಲದಿಂದ ದೇಶಸೇವೆ ಮಾಡಿ ದಣಿದ ಪಕ್ಷ ಎಂದು ಜನಗಳೇ ಮರುಕದಿಂದ ನೀಡಿದ ವಿಶ್ರಾಂತಿ ಎಂದೇ ನಂಬಿದಂತೆ ನಡೆಯುತ್ತದೆ ಈ ಪಕ್ಷ. ಹಾಗಾಗಿ 2004 ರಲ್ಲಿ ಬಹುಮತ ಸಿಗದೆ, 2006 ರಲ್ಲಿ ಅಧಿಕಾರ ಕಳೆದುಕೊಂಡ ತಕ್ಷಣ ಮುಂದಿನ ಚುನಾವಣೆಯಲ್ಲಿ ಜನಕ್ಕೆ ಕಾಂಗ್ರೆಸ್‌ಗೆ ಮೊರೆ ಹೋಗದೇ ವಿಧಿಯೇ ಇಲ್ಲ ಎಂಬಂತೆ, ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕು ಎಂಬ ನಂಬಿಕೆಯಲ್ಲಿ ಮುಖ್ಯಮಂತ್ರಿ ಪದವಿಗಾಗಿ ಪೈಪೋಟಿ ನಡೆಸಿದ ರೀತಿ ಹಾಸ್ಯಾಸ್ಪದವಲ್ಲ. ರಾಜ್ಯದ ಮತ್ತು ಪ್ರಜಾಪ್ರಭುತ್ವದ ದೃಷ್ಟಿಯಲ್ಲಿ ದುರಂತಮಯವಾಗಿತ್ತು. ಮುಗುಮ್ಮಾಗಿದ್ದುಕೊಂಡು ಮುಖ್ಯಮಂತ್ರಿ ಸಿಂಹಾಸನದ ಮೇಲೆ ಕಣ್ಣು ಹಾಯಿಸಿದವರು ಒಂದು ಹತ್ತು ಹದಿನೈದು ಜನವಿದ್ದರೆ, ಸಾರ್ವಜನಿಕವಾಗಿ ತಮ್ಮ ಹೆಸರುಗಳನ್ನು ಘೋಷಿಸಿಕೊಂಡವರು ಮತ್ತೊಂದು ಹತ್ತು ಜನ. ಯಾವ ವಿಶ್ವಾಸದಲ್ಲಿ ಜನ ನಿಮ್ಮ ಪಕ್ಷಕ್ಕೆ ಮತ ನೀಡಬೇಕು ನೀವೇ ಹೇಳಿ? ಕಾಂಗ್ರೆಸ್ ಪಕ್ಷ ಕಳೆದ ನಾಲ್ಕು ವರ್ಷಗಳು ಒಂದು ಪಕ್ಷವಾಗಿ ಒಂದೇ



ಎಲ್ಲಿ ಹೋಯಿತು ಆ ಗತ್ತು ಗೈರತ್ತು ?

ಸ್ಥಾನಮಾನವಿದ್ದರೆ ಮಾತ್ರ ನಾನು ಜನಸೇವೆ ಮಾಡಬಲ್ಲೆ ಎಂಬುದು ಒಬ್ಬ ನಾಯಕನ ಲಕ್ಷಣ ಅಲ್ಲ; ಒಬ್ಬ ಮುತ್ಸದ್ದಿಯ ಲಕ್ಷಣವಲ್ಲ. ಹಾಗೆಂದಾಕ್ಷಣ ಮೂಲೆ ಗುಂಪಾಗಿಯೇ ಉಳಿಯಬೇಕೆಂದಾಗಲೀ, ಪರರ ರಾಜಕೀಯ ಚದುರಂಗದಾಟದಲ್ಲಿ ಕಾಯಿಗಳಾಗಿ ಮಾತ್ರ ಉಳಿಯಬೇಕೆಂದಾಗಲೀ ನಾನು ಹೇಳುತ್ತಿಲ್ಲ. ಆಸೆ, ಮಹತ್ವಾಕಾಂಕ್ಷೆ ಇರಬಾರದೆಂದು ಕೂಡ ನಾನು ಹೇಳುತ್ತಿಲ್ಲ. ಆದರೆ ಎಲ್ಲ ಯತ್ನಗಳೂ, ಪರಸ್ಪರ ಮನವೊಲಿಕೆಯ ಪ್ರಯತ್ನಗಳೂ ನಮ್ಮ ನಮ್ಮ ನಿಲುವುಗಳ ಸ್ಪಷ್ಟನೆ ಎಲ್ಲವೂ ಮುಗಿದು ಪ್ರಜಾಪ್ರಭುತ್ವ ರೀತಿಯಲ್ಲಿ ಶಾಸಕಾಂಗ ಪಕ್ಷ ನಿರ್ಧಾರ ತೆಗೆದುಕೊಂಡ ಮೇಲೆ ನಾವು ಮಾನ್ಯ ಮಾಡಬೇಕಲ್ಲವೆ? ಈ ಪಕ್ಷದ ನಿರ್ಧಾರ ನೂರಕ್ಕೆ ನೂರರಷ್ಟು ಪರಿಪೂರ್ಣವೂ, ತೃಪ್ತಿಕರವೂ, ದೋಷರಹಿತವೂ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಹಾಗೆ ನೋಡಿದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವ ನಿರ್ಧಾರದ ಬಗ್ಗೆಯೂ ಹಾಗೆ ಹೇಳಲಿಕ್ಕೆ ಸಾಧ್ಯವಿಲ್ಲ.

ಜಿ. ಕೆ. ಗೋವಿಂದರಾವ್

ಒಂದು ಸಾರ್ಥಕ ಕಾರ್ಯಕ್ರಮ ಹಾಕಿಕೊಂಡದ್ದು ಕಾಣಲಿಲ್ಲ. ನಿರ್ಜೀವವಾಗಿ ಉಳಿದು, ನೂರು ವರ್ಷಗಳ ಇತಿಹಾಸದ ವೈಭವವೇ ತಮ್ಮನ್ನು ಗೆಲ್ಲಿಸುತ್ತದೆ ಎಂಬ ಅತ್ಯಂತ ಬಾಲಿಶ ಕಲ್ಪನೆಯಲ್ಲಿ ಮೈಮರೆತು ಕೂತ ಸೋಗಲಾಡಿ ಪಕ್ಷವಾಗಿ ಉಳಿದಿದೆ.

ನಿಮ್ಮ ಪಕ್ಷದೊಳಗಿನ ವೈಯಕ್ತಿಕ ಸ್ನೇಹ, ದ್ವೇಷಗಳು, ಪರಸ್ಪರ ಸಂಶಯ ಭೀತಿಗಳು, ಯಾರ್ಯಾರ ಹಿಂದೆ ಯಾರ್ಯಾರ ಕತ್ತಿ ಚಾಕುಗಳು ಸಮಯ ಕಾಯುತ್ತಿದ್ದವು. ಇವುಗಳ ಕುರಿತು ಜನಸಾಮಾನ್ಯರಲ್ಲಿ ಸಾಕಷ್ಟು ಕಿವಿಯಿಂದ ಕಿವಿಗೆ ಹಬ್ಬಿದ ಸುದ್ದಿಗಳಿವೆ. ಇವುಗಳೆಲ್ಲದರ ಸತ್ಯಾಸತ್ಯತೆಗಳನ್ನು ನೀವೇ ದೃಢಪಡಿಸಬೇಕು. ನನಗೆ ಆಸಕ್ತಿ ಇದೆ ಎಂದಲ್ಲ ಪಕ್ಷದ ಹಿತದೃಷ್ಟಿಯಿಂದ. ಈಗ ಸೋತ ಮೇಲೂ ಪಕ್ಷದಲ್ಲಿ ಒಗ್ಗಟ್ಟಿಲ್ಲ ಎಂದು ಸಾಬೀತಾಗಿದೆ. ಯಾರು ವಿರೋಧ ಪಕ್ಷದ ನಾಯಕರಾಗಿದ್ದರೆ ಚೆನ್ನಾಗಿತ್ತು, ಯಾರಿಗಿಂತ ಯಾರು ಸಮರ್ಥರು ಈ ಪ್ರಶ್ನೆಗಳನ್ನು ನಾನು ಇಲ್ಲಿ ಎತ್ತುವುದಿಲ್ಲ. ಅದು ನಮ್ಮ ಮಟ್ಟಿಗೆ ಅಪ್ರಸ್ತುತ ಕೂಡ. ಆದರೆ ನಿಮಗೆ ಪತ್ರ ಬರೆಯುತ್ತಿರುವುದರಿಂದ ಎಷ್ಟು ಅವಶ್ಯವೋ ಅಷ್ಟು ಮಾತ್ರ ಬರೆಯುತ್ತೇನೆ.

ಸ್ಥಾನಮಾನವಿದ್ದರೆ ಮಾತ್ರ ನಾನು ಜನಸೇವೆ ಮಾಡಬಲ್ಲೆ ಎಂಬುದು ಒಬ್ಬ ನಾಯಕನ ಲಕ್ಷಣ ಅಲ್ಲ; ಒಬ್ಬ ಮುತ್ಸದ್ದಿಯ ಲಕ್ಷಣವಲ್ಲ. ಒಬ್ಬ ಸ್ವಾರ್ಥ, ಆತ್ಮರತ ರಾಜಕಾರಣಿಯ ಲಕ್ಷಣವಷ್ಟೇ. ಹಾಗೆಂದಾಕ್ಷಣ ಮೂಲೆ ಗುಂಪಾಗಿಯೇ ಉಳಿಯಬೇಕೆಂದಾಗಲೀ, ಪರರ ರಾಜಕೀಯ ಚದುರಂಗದಾಟದಲ್ಲಿ ಕಾಯಿಗಳಾಗಿ ಮಾತ್ರ ಉಳಿಯಬೇಕೆಂದಾಗಲೀ ನಾನು ಹೇಳುತ್ತಿಲ್ಲ. ಆಸೆ, ಮಹತ್ವಾಕಾಂಕ್ಷೆ ಇರಬಾರದೆಂದು ಕೂಡ ನಾನು ಹೇಳುತ್ತಿಲ್ಲ. ಆದರೆ ಎಲ್ಲ ಯತ್ನಗಳೂ, ಪರಸ್ಪರ ಮನವೊಲಿಕೆಯ ಪ್ರಯತ್ನಗಳೂ ನಮ್ಮ ನಮ್ಮ ನಿಲುವುಗಳ ಸ್ಪಷ್ಟನೆ ಎಲ್ಲವೂ ಮುಗಿದು ಪ್ರಜಾಪ್ರಭುತ್ವ ರೀತಿಯಲ್ಲಿ ಶಾಸಕಾಂಗ ಪಕ್ಷ ನಿರ್ಧಾರ ತೆಗೆದುಕೊಂಡ ಮೇಲೆ ನಾವು ಮಾನ್ಯ ಮಾಡಬೇಕಲ್ಲವೆ? ಈ ಪಕ್ಷದ ನಿರ್ಧಾರ ನೂರಕ್ಕೆ ನೂರರಷ್ಟು ಪರಿಪೂರ್ಣವೂ, ತೃಪ್ತಿಕರವೂ, ದೋಷರಹಿತವೂ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ.

ಹಾಗೆ ನೋಡಿದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವ ನಿರ್ಧಾರದ ಬಗ್ಗೆಯೂ ಹಾಗೆ ಹೇಳಲಿಕ್ಕೆ ಸಾಧ್ಯವಿಲ್ಲ. ಎಲ್ಲ ರೀತಿಯ ಊನಗಳೂ ಅಲ್ಲಿ ಇರಲಿಕ್ಕೆ ಸಾಧ್ಯ. ಜಾತಿ, ಪ್ರದೇಶ, ಸೇವಾ ಹಿರಿತನ, ಗುಂಪುಗಾರಿಕೆ ಇಂಥ ನೂರೆಂಟು. ಇವೆಲ್ಲ ಪ್ರಜಾತಂತ್ರ ವ್ಯವಸ್ಥೆಯ ಪ್ರಾಥಮಿಕ ಸತ್ಯಗಳು. ನಾನು ಇವುಗಳ ಕುರಿತು ನಿಮಗೆ ಪ್ರವಚನ ನೀಡಬೇಕಾಗಿಲ್ಲ. ಆದರೆ ಅದನ್ನೇ ದೊಡ್ಡದು ಮಾಡಿಕೊಂಡು, ಮುಖ ಊದಿಸಿಕೊಂಡು ದೂರ ಉಳಿದು ಬಿಡುವುದು ಅಥವಾ ಶಾಶ್ವತವಾಗಿ ದೂರವೇ ಉಳಿದುಬಿಡುವುದು ಚುನಾಯಿಸಿ ಕಳಿಸಿದ ಜನಗಳಿಗೆ ಬಗೆದ ದ್ರೋಹ ಎಂದು ಮಾತ್ರ ನಮ್ರವಾಗಿ ನಿಮಗೆ ಹೇಳಬಯಸುತ್ತೇನೆ. ಇಷ್ಟೆಲ್ಲ ನಾನು ಹೇಳಿಯೂ ಕೂಡ ನನಗೆ ಉತ್ತರ ರೂಪವಾಗಿ ನೀವು ಅಥವಾ ಮತ್ಯಾರೊ ರಾಜಕಾರಣಿ ಹೇಳುವ ಮಾತೊಂದು ಇದೆ ಎಂದು ನನಗೆ ಗೊತ್ತು; 'ಇದು ರಾಜಕಾರಣ ಸಾರ್ ; ನಿಮಗೆ ತಿಳಿಯೋಲ್ಲ; ನೀವೆಲ್ಲ ನಿಮ್ಮ ಭಾವಲೋಕದಲ್ಲಿ ಮುಳುಗಿ ಮಾತನಾಡುತ್ತೀರಿ, practical politics ನಿಮಗೆ ಅರ್ಥವಾಗೋಲ್ಲ' ಇತ್ಯಾದಿ. ಇಂಥ ಮೂಗನ್ನೆ

ನಮಗೆಲ್ಲ ತಿಳಿದಿರುವ ಮಟ್ಟಿಗೆ, ನಿಮ್ಮ ಒಂದು ದೊಡ್ಡ ತಕರಾರು ಕಾಂಗ್ರೆಸ್ ಪಕ್ಷ ಮಾಡಿಕೊಳ್ಳಬಹುದಾದ ಜೆ.ಡಿ.ಎಸ್ ನೊಡನೆಯ ಮೈತ್ರಿ ಹಾಗೂ ಚುನಾವಣಾ ಹೊಂದಾಣಿಕೆಗಳು. ಜೆ.ಡಿ.ಎಸ್.ನ ವರಿಷ್ಠ ದೇವೇಗೌಡರು ನಂಬಿಕೆಗೆ ಅನರ್ಹರು, ಅವರು ದ್ರೋಹ ಬಗೆಯುವುದರಲ್ಲಿ ನಿಷ್ಣಾತರು, ಅವರೊಡನೆ ಸ್ನೇಹವೆಂದರೆ ಮೈಗೆ ಸೀಮೆಎಣ್ಣೆ ಸುರಿದುಕೊಂಡು ಅವರ ಕೈಗೆ ಗೀರಿದ ಕಡ್ಡಿ ಕೊಟ್ಟಂತೆ. ಈ ಯಾವ ಮಾತನ್ನೂ ನಾನು ಅಲ್ಲಗಳೆಯುವುದಿಲ್ಲ. ನಿಮಗಿಂತ ಒಂದು ಹೆಜ್ಜೆ ಮುಂದೆ ಹೋಗಿ ನಾನು ಹೇಳುವ ಮಾತೊಂದಿದೆ. ದೇವೇಗೌಡರ ನಲವತ್ತು ವರ್ಷಗಳ ದೀರ್ಘ ರಾಜಕೀಯ ಜೀವನದ ಸಾಧನೆಯೆಂದರೆ ಕರ್ನಾಟಕಕ್ಕೆ ಬಿ.ಜೆ.ಪಿ ಸರಕಾರವನ್ನು ದಯಪಾಲಿಸಿದ್ದು. ಅತ್ಯಂತ ಕೀಳು ದರ್ಜೆಯ, ಸ್ವಾರ್ಥ ಹಾಗೂ ಪುತ್ರವ್ಯಾಮೋಹದ ನೀಚ ರಾಜಕಾರಣ ಅವರದ್ದು. ಜಾತ್ಯತೀತ ಪಕ್ಷವೆಂದು ಹೇಳಿಕೊಂಡು ಅಲ್ಪಸಂಖ್ಯಾತರು, ದಲಿತರು, ಹಿಂದುಳಿದವರು ಇವರೆಲ್ಲರ ಮತಗಳಿಸಿ ಚುನಾಯಿತರಾಗಿ ಏಕಾಏಕಿ ಸಾರಾಸಗಟಾಗಿ ಅವರಿಗೆಲ್ಲ ದ್ರೋಹ ಬಗೆದು ಕೋಮುವಾದಿಗಳೊಡನೆ ಸಖ್ಯ ಮಾಡಿದ್ದು ಅವರು ನಿಮಗೆ ಎಸಗಿರಬಹುದಾದ ದ್ರೋಹಕ್ಕಿಂತ ನೂರು ಪಾಲು ದೊಡ್ಡ ದ್ರೋಹ,

ಆಕಾಶಕ್ಕೇರಿಸಿ ಅತ್ಯಂತ ಮರುಕದಿಂದ ನಮ್ಮಂಥವರ ಬಗ್ಗೆ ಆಡುವ ಮಾತಿಗೂ ನನ್ನ ನಮ್ರ ಉತ್ತರ ಕೊಡಲು ಬಯಸುತ್ತೇನೆ. ನನಗೆ ನಿಮ್ಮ ಅರ್ಥದ practical ರಾಜಕಾರಣ ಅರ್ಥವಾಗಬೇಕಾದ್ದಿಲ್ಲ.

ಎಷ್ಟೇ ದುಸ್ಸಾಧ್ಯವೆನಿಸಿದರೂ ಆದರ್ಶದ ಪ್ರಜಾಪ್ರಭುತ್ವದ ಕಲ್ಪನೆ, ಅದು ನಿಜವಾಗಲಿ ಎಂಬ ಹಾರೈಕೆ, ನಿಜವಾಗಲು ನಮ್ಮ ಕೈಲಾದಷ್ಟು ಯತ್ನ ಇಷ್ಟನ್ನು ಮಾಡುವುದಷ್ಟೇ ನನಗೆ ಗೊತ್ತಿರುವುದು. ಮಾನಸಿಕ ಭ್ರಷ್ಟತನವಿಲ್ಲದೆ, ದಿನನಿತ್ಯದ ರಾಜಕಾರಣ ಸಾಧ್ಯವಿಲ್ಲ ಎಂಬ 'ರಾಜಕೀಯ ವಿವೇಕದ' ಉಪದೇಶ ನನ್ನ ದೃಷ್ಟಿಯಲ್ಲಿ ತಿರಸ್ಕಾರಾರ್ಹ ಹಾಗೂ ಅಸಹ್ಯಕರ.

ನಮಗೆಲ್ಲ ತಿಳಿದಿರುವ ಮಟ್ಟಿಗೆ, ನಿಮ್ಮ ಒಂದು ದೊಡ್ಡ ತಕರಾರು ಕಾಂಗ್ರೆಸ್ ಪಕ್ಷ ಮಾಡಿಕೊಳ್ಳಬಹುದಾದ ಜೆ.ಡಿ.ಎಸ್ ನೊಡನೆಯ ಮೈತ್ರಿ ಹಾಗೂ ಚುನಾವಣಾ ಹೊಂದಾಣಿಕೆಗಳು. ಜೆ.ಡಿ.ಎಸ್.ನ ವರಿಷ್ಠ ದೇವೇಗೌಡರು ನಂಬಿಕೆಗೆ ಅನರ್ಹರು, ಅವರು ದ್ರೋಹ ಬಗೆಯುವುದರಲ್ಲಿ ನಿಷ್ಣಾತರು, ಅವರೊಡನೆ ಸ್ನೇಹವೆಂದರೆ ಮೈಗೆ ಸೀಮೆಎಣ್ಣೆ ಸುರಿದುಕೊಂಡು ಅವರ ಕೈಗೆ ಗೀರಿದ ಕಡ್ಡಿ ಕೊಟ್ಟಂತೆ.

ಈ ಯಾವ ಮಾತನ್ನೂ ನಾನು ಅಲ್ಲಗಳೆಯುವುದಿಲ್ಲ. ನಿಮಗಿಂತ ಒಂದು ಹೆಜ್ಜೆ ಮುಂದೆ ಹೋಗಿ ನಾನು ಹೇಳುವ ಮಾತೊಂದಿದೆ. ದೇವೇಗೌಡರ ನಲವತ್ತು ವರ್ಷಗಳ ದೀರ್ಘ ರಾಜಕೀಯ ಜೀವನದ ಸಾಧನೆಯೆಂದರೆ ಕರ್ನಾಟಕಕ್ಕೆ ಬಿ.ಜೆ.ಪಿ ಸರಕಾರವನ್ನು ದಯಪಾಲಿಸಿದ್ದು. ಅತ್ಯಂತ ಕೀಳು ದರ್ಜೆಯ, ಸ್ವಾರ್ಥ ಹಾಗೂ ಪುತ್ರವ್ಯಾಮೋಹದ ನೀಚ ರಾಜಕಾರಣ ಅವರದ್ದು. ಜಾತ್ಯತೀತ ಪಕ್ಷವೆಂದು ಹೇಳಿಕೊಂಡು ಅಲ್ಪಸಂಖ್ಯಾತರು, ದಲಿತರು, ಹಿಂದುಳಿದವರು ಇವರೆಲ್ಲರ ಮತಗಳಿಸಿ ಚುನಾಯಿತರಾಗಿ ಏಕಾಏಕಿ ಸಾರಾಸಗಟಾಗಿ ಅವರಿಗೆಲ್ಲ ದ್ರೋಹ ಬಗೆದು ಕೋಮುವಾದಿಗಳೊಡನೆ ಸಖ್ಯ ಮಾಡಿದ್ದು ಅವರು ನಿಮಗೆ ಎಸಗಿರಬಹುದಾದ ದ್ರೋಹಕ್ಕಿಂತ ನೂರು ಪಾಲು ದೊಡ್ಡ ದ್ರೋಹ,

ಆತ್ಮವಂಚನೆ ಮತ್ತು ಪ್ರಜಾತಂತ್ರ ವಂಚನೆ. ಯಡಿಯೂರಪ್ಪ ಮತ್ತು ಅವರ ಪಕ್ಷ ಬೊಬ್ಬೆ ಹಾಕುತ್ತಿದ್ದ 'ವಿಶ್ವಾಸ ದ್ರೋಹ' ಎಂಬ ಶಬ್ದಕ್ಕೆ ಚಿಕ್ಕಾಸಿನ ಬೆಲೆಯಿಲ್ಲ. ಹೀಗಾಗಿ ದೇವೇಗೌಡರ ಬಗೆಗಿನ ನಿಮ್ಮ ಅನುಮಾನ, ಅಪನಂಬಿಕೆಗಳು ನಮ್ಮವೂ ಕೂಡ. ಆದರೆ ವ್ಯಕ್ತಿ ಎಷ್ಟೇ ಬಲಶಾಲಿಯಾಗಿದ್ದರೂ, ಪ್ರಭಾವಿಯಾಗಿದ್ದರೂ ಅವನೇ ಪಕ್ಷವಲ್ಲ. ಪಕ್ಷಕ್ಕೆ ತನ್ನದೇ ಅಂತಃಸತ್ವವಿರುತ್ತದೆ. ಅದು ಗುಟ್ಟಾಗಿ ವಿಕಾಸವಾಗುತ್ತಿರುತ್ತದೆ. ಹಾಗೆ ಅಂತಃಸತ್ವವಿಲ್ಲದೆಯೇ ಒಬ್ಬ ವ್ಯಕ್ತಿಯನ್ನು ಮಾತ್ರ ಅವಲಂಬಿಸಿದ್ದರೆ ಅಂಥ ಪಕ್ಷ ಆ ವ್ಯಕ್ತಿಯೊಡನೆ ಕೊನೆಯುಸಿರು ಎಳೆಯುತ್ತದೆ. ವ್ಯಕ್ತಿ ಎಷ್ಟೇ ದೊಡ್ಡವನಾದರೂ ಅವನು ನಶ್ವರನೇ. ನಶ್ವರರೊಡನೆ ಹೋರಾಟ, ಅವರೊಡನೆ ಸೇಡಿನ ಸೆಣೆಸಾಟ, ಅವರಿಗೆ 'ಪಾಠ ಕಲಿಸುವುದು' ಇವೆಲ್ಲ ಆತ್ಮದ್ರೋಹದ ಮಾತುಗಳು; ಸದ್ಯದ ಸಂದರ್ಭದಲ್ಲಿ ಪ್ರಜಾಪ್ರಭುತ್ವಕ್ಕೆ ದ್ರೋಹ ಬಗೆದಂತೆ. ಸೆಣಸಬೇಕಾದದ್ದು ದೇವೇಗೌಡರ ವಿರುದ್ಧವೋ ಅಥವಾ ಸಂಘ ಪರಿವಾರದ ಸಿದ್ಧಾಂತ ತತ್ವಗಳು ಇವುಗಳ ವಿರುದ್ಧವೋ ಎಂಬುದು ನಮ್ಮ ಮುಂದಿರಬೇಕಾದ ಪ್ರಶ್ನೆ.

ಸಂಘ ಪರಿವಾರ, ಬಿ.ಜೆ.ಪಿ ಮತ್ತು ಅದರ ಅಂಗ ಸಂಸ್ಥೆಗಳು ಇವುಗಳು ಶಾಶ್ವತವಾಗಿ ನಮ್ಮನ್ನು ಕೆಣಕುವ ಸಮಸ್ಯೆಗಳು. ನಾವು ಸಶಕ್ತವಾಗಿ ಪ್ರಯತ್ನಿಸದೇ ಹೋದರೆ ಅಜರಾಮರವಾಗಿ ಉಳಿದುಬಿಡಬಹುದಾದ ರೋಗಗಳು. ದೇವೇಗೌಡರಾಗಲೀ, ಯಾವುದೇ ವ್ಯಕ್ತಿಯಾಗಲೀ – ನೀವೂ ನಾನೂ ಸೇರಿದ ಹಾಗೆ – ಎಲ್ಲರೂ ನಶ್ವರರು. ಮನಸ್ಸಿಗೆ ಒಪ್ಪಿಕೊಳ್ಳಲು ಅಷ್ಟೊಂದು ಆಪ್ಯಾಯಮಾನಕರ ವಿಷಯವಲ್ಲ; ಆದರೆ ಸತ್ಯ ಎಂಬುದು ನಮಗೆಲ್ಲ ಗೊತ್ತು. ಹೀಗಿರುವಾಗ ನಶ್ವರರೊಡನೆ ಕಾದಾಟವೇಕೆ? ಚೈತನ್ಯ, ಸಮಯ, ಇಡೀ ಜೀವನ ವ್ಯರ್ಥ. ಬದಲಿಗೆ ನಾವು ಹೋರಾಡಬೇಕಾದದ್ದು ಪ್ರಜಾಪ್ರಭುತ್ವ ವಿರೋಧಿ ಸಂಘ ಪರಿವಾರದ ಸಿದ್ಧಾಂತಗಳ ವಿರುದ್ಧ. ನಾವು ಎದುರಿಸಬೇಕಾಗಿರುವುದು ಅವರು ಈ ದೇಶವನ್ನು ಕೊಂಡೊಯ್ಯಲು ಯತ್ನಿಸುತ್ತಿರುವ ಮಾರ್ಗವನ್ನು, ಅವರ ಕಾರ್ಯ ವಿಧಾನವನ್ನು, ಅವರು ಹಬ್ಬಿಸುತ್ತಿರುವ

[illegible] ಎಂದು ಮಾತನಾಡುವವರೊಡನೆ ನಮ್ಮ ಸಹನೆ, ಸಖ್ಯ ಹೇಗೆ ಸಾಧ್ಯ?

ಎಂದಿಗೂ ನನಗೆ ಅಚ್ಚರಿಯುಂಟು ಮಾಡುವ ಸಂಗತಿಯೆಂದರೆ ದಲಿತರೂ, ಹಿಂದುಳಿದವರೂ, ಮಹಿಳೆಯರೂ ಹೇಗೆ ಈ ಪಕ್ಷದ ಸದಸ್ಯರಾಗುವುದಿರಲಿ, ಸಹಾನುಭೂತಿಯನ್ನಾದರೂ ತೋರಲು ಸಾಧ್ಯ ಎಂದು. ಸಂಘ ಪರಿವಾರದ ತತ್ವ ಸಿದ್ಧಾಂತಗಳು ಅವರುಗಳಿಗೆ ಗೊತ್ತಿಲ್ಲವೆ! ಮನು ಈಗ ಕೂಡ ಅವರುಗಳ ಆರಾಧ್ಯ ಗುರು ಮತ್ತು ಮನು ಪ್ರಜಾಪ್ರಭುತ್ವದಲ್ಲಿ ಅತ್ಯಂತ ದೊಡ್ಡ ಪಿಡುಗು; ಪ್ರಜಾತಂತ್ರದ ಮೈಗೆ ತಾಗಿ ನೆತ್ತರು ಸ್ರವಿಸುವ ಮುಳ್ಳು. ಉಚ್ಚ ವರ್ಗದ ಪ್ರಕಾರ ಪ್ರತಿಭೆಯುಳ್ಳವರು, merited class ಮಾತ್ರ ಅಧಿಕಾರದ ಸೂತ್ರಗಳನ್ನು ಹಿಡಿಯಬೇಕು. ಈ ಪ್ರತಿಭೆ, ಈ meritಗಳ ವಿವರಣೆಗಳನ್ನು ಏನಾದರೂ ವೈಜ್ಞಾನಿಕವಾಗಿ, ಮಾನವೀಯ ದೃಷ್ಟಿಯಿಂದ ನೋಡಿದ್ದಾರೇನು? ದಮನಕಾರೀ ಸಂಸ್ಕೃತಿಯ ವಕ್ತಾರ ಮನು. ಅವನ ಆರಾಧಕರು ಸಂಘ ಪರಿವಾರದ ಜನ. ಇದು ಗೊತ್ತಿದ್ದೂ ನಮ್ಮ ಹಿಂದುಳಿದ ಶೋಷಿತ ಜನ ಈ ಪಕ್ಷಕ್ಕೆ ಮನ ಸೋತಿರುವುದು ಒಂದು ಐತಿಹಾಸಿಕ ಅಣಕ ಮಾತ್ರವಲ್ಲ, ಮಹಾ ವಿಷಾದಕರ ಅನಾಹುತ ಕೂಡ. ನಿಮ್ಮ ಹೆಸರನ್ನು ಬಿ.ಜೆ.ಪಿಯೊಂದಿಗೆ ಕೂಡಿಸಿ ಮಾತನಾಡಲು ಸಾಧ್ಯವಾದದ್ದೇ ನಾನು ಇತ್ತೀಚೆಗೆ ಅನುಭವಿಸಿದ ಭಯಂಕರ ದಿಗ್ಭ್ರಾಂತಿಗಳಲ್ಲಿ ಒಂದು. ಬಿ.ಜೆ.ಪಿ ಸರಕಾರ ಬಹುಮಟ್ಟಿಗೆ ಪಾರದರ್ಶಕವಾಗಿ ಕೆಲಸ ಮಾಡಬಹುದು; ಅಥವಾ ಆ ಭಾವನೆ ಮೂಡಿಸುವ ಹಾಗೆ ನಡೆದುಕೊಳ್ಳಬಹುದು.

ಆದರೆ ನಮಗೆ ಇರಬೇಕಾದ ಎಚ್ಚರ ಅವರ ಪರಿವಾರದ ಮಿಕ್ಕ ಸಂಘಟನೆಗಳ ಕುರಿತಾಗಿ – ಆರ್.ಎಸ್.ಎಸ್, ಭಜರಂಗದಳ ಮತ್ತು ಇನ್ನೂ ಹಲವು ಹತ್ತು ಜೊತೆಗೆ ಕಾವಿ ಧರಿಸಿದ ಸಂಘ ಪರಿಹಾರದ ಮುಖವಾಣಿಗಳಾದ ಖೋಟಾ ಧರ್ಮಗುರುಗಳದ್ದು. ನಮ್ಮ ಹೋರಾಟ ಇವರೊಡನೆ, ಈ ಸಿದ್ಧಾಂತ ಸಂಸ್ಕೃತಿಯೊಡನೆ ಹೀಗಾಗಿ ನಮ್ಮ ಎಲ್ಲ ವೈಯಕ್ತಿಕ ರಾಗದ್ವೇಷಗಳನ್ನು ಈಗ ಮರೆಯಬೇಕು. ನಮ್ಮ ಮೊಮ್ಮಕ್ಕಳ ಕಾಲಕ್ಕಾದರೂ ಈ ರಾಜ್ಯ, ಈ ದೇಶ ಈ ರೋಗದಿಂದ ಮುಕ್ತವಾಗುತ್ತಿರುವ ಸ್ಪಷ್ಟ ಸೂಚನೆಗಳು ಕಾಣುತ್ತಿವೆ ಎಂಬ ಭರವಸೆ ಮೂಡುವಂತಾಗಬೇಕು.

ಈಗ ನಾವು ಎಚ್ಚರಗೊಳ್ಳದಿದ್ದರೆ ಗುಜರಾತಿನಲ್ಲಿಯಂತೆಯೇ ಒಂದಾದ ನಂತರ ಮತ್ತೊಂದು ಚುನಾವಣೆ ಗೆಲ್ಲುತ್ತ ಹೋಗುತ್ತಿರುವ ಮೋದಿಯಂತೆ ಇಲ್ಲಿಯೂ ಕೂಡ ಒಬ್ಬ ಮೋದಿ ಹುಟ್ಟಿಬರುತ್ತಾನೆ. ಆಗ ಗುಜರಾತಿನಲ್ಲಿಯಂತೆ ಇಲ್ಲಿ ಕೂಡ ಕಾಂಗ್ರೆಸ್ ಬಹುಸಂಖ್ಯಾತರ ಓಟಿಗಾಗಿ ಬಿ.ಜೆ.ಪಿ, ಆರ್.ಎಸ್.ಎಸ್ ಭಾಷೆಯನ್ನು ಸೂಕ್ಷ್ಮವಾಗಿ, ನವಿರಾಗಿ ತುಂಬ ಕುಶಲತೆಯಿಂದ ಬಳಸುತ್ತ, ಬಿ.ಜೆ.ಪಿ ವಿಜಯಕ್ಕೆ ಪರೋಕ್ಷವಾಗಿ ಸಂಘ ಪರಿವಾರದ ಅನಧಿಕೃತ ಕಾರ್ಯಕರ್ತರ ಪಡೆಯಾಗಿ ಮಾತ್ರ ಉಳಿದು ಬಿಡುವ ಹೀನಾಯ ಸ್ಥಿತಿ ಮುಟ್ಟಿ ಬಿಡುತ್ತದೆ.

ಚುನಾಯಿತರಾದ ಪಕ್ಷದಿಂದ ಬಿ.ಜೆ.ಪಿಗೆ ಜಿಗಿಯುವುದಕ್ಕೆ ಸಮರ್ಥನೆಯೆಂಬಂತೆ ಈ ಜನದ್ರೋಹಿ ಶಾಸಕರು ಒಂದು ದೊಡ್ಡ 'ಜನಪರ' ವಾದವನ್ನು ಮಂಡಿಸುತ್ತಿದ್ದಾರೆ. 'ನಮ್ಮ ಕ್ಷೇತ್ರಕ್ಕೆ ಒಳ್ಳೆಯದಾಗಬೇಕೆಂದಿದ್ದರೆ ಆಡಳಿತ ಪಕ್ಷದೊಡನೆ ಇದ್ದರೆ ಮಾತ್ರ ಸಾಧ್ಯ ಎಂದು ಮನಗಂಡು ಪಕ್ಷಾಂತರ ಮಾಡುತ್ತಿದ್ದೇವೆ' ಎಂದು ಹೀಗಾಗಿ ಅವರ

ಪಕ್ಷಾಂತರ ಜನಹಿತಕ್ಕಾಗಿ ಸ್ವಂತ ಹಿತಕ್ಕಾಗಿ ಅಲ್ಲವೇ ಅಲ್ಲ ಎಂದು ನಂಬಿಸಲು ಯತ್ನಿಸುತ್ತಿದ್ದಾರೆ. ನೂರಾರು ವರ್ಷಗಳ ಪ್ರಜಾತಂತ್ರದ ಇತಿಹಾಸದಲ್ಲಿ ಯಾವ ರಾಷ್ಟ್ರದ ಯಾವ ನಾಯಕನೂ ಇದುವರೆವಿಗೆ ಕಂಡುಕೊಳ್ಳದಿದ್ದ ಸತ್ಯ ತಮಗೆ ಹೊಳೆದಿದೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ವ್ಯಾಖ್ಯಾನಕ್ಕೆ ತಾವು ನೀಡುತ್ತಿರುವ ಹೊಸ ಆಯಾಮ ಎಂಬ ಕೃತಾರ್ಥ ಭಾವದಲ್ಲಿ ಬೀಗುತ್ತಿದ್ದಾರೆ ಈ ನಾಯಕರುಗಳು.

ನಮ್ಮ ಮಾತುಗಳಿಂದ ಯಾರನ್ನು ನಂಬಿಸಲು ಯತ್ನಿಸುತ್ತಿದ್ದೇವೆ ಎಂದು ನಾವು ಯೋಚಿಸಬೇಕು. ನಂಬಿಸುವುದಿಲ್ಲ ಇದು, ವಂಚಿಸುವುದು, ಬೆನ್ನಿಗೆ ಚೂರಿ ಹಾಕುವುದು ಎಂದು ನಮಗೆ ತಿಳಿಯಬೇಕು. ಹೀಗೆ 'ಜನಪರ' ನಿಲುವುಗಳನ್ನು ತೆಗೆದುಕೊಂಡು ಪಕ್ಷಾಂತರ

ಸದ್ಯದ ನಿಮ್ಮ ಪಕ್ಷದಲ್ಲಿ ನಿಮಗೆ ತೃಪ್ತಿಕರವಾಗಿ ಕೆಲಸ ಮಾಡಲು ಸಾಧ್ಯವಿಲ್ಲ ಅನ್ನಿಸಿದರೆ ನೀವು ಬೇರೆ ಪಕ್ಷವನ್ನಾದರೂ ಕಟ್ಟುತ್ತೀರಿ, ಬಿ.ಜೆ.ಪಿ ಯತ್ತ ಯಾವ ಕಾರಣಕ್ಕೂ ಕಣ್ಣು ಹಾಯಿಸುವುದಿಲ್ಲ ಎಂಬ ನಂಬಿಕೆಯೂ ನಮಗೆಲ್ಲ ಇದೆ. ಇಂಥ ನಿರ್ಧಾರ, ಅಂದರೆ ಹೊಸ ಪಕ್ಷದ ನಿರ್ಮಾಣ, ನೀವು ತೆಗೆದುಕೊಂಡರೆ ನಮ್ಮೆಲ್ಲರ ಸಹಕಾರ ಬೆಂಬಲ ಇದ್ದೇ ಇರುತ್ತದೆ ಎಂಬ ಆಶ್ವಾಸನೆಯನ್ನು ವಿನಯದಿಂದ ಹೇಳಲು ಬಯಸುತ್ತೇನೆ. ಇಷ್ಟೂ ಹೇಳಿದ ಮೇಲೂ ನಾನು ಹೇಳಿರುವುದೆಲ್ಲ ಸ್ವಕಪೋಲಕಲ್ಪಿತ ಅನುಮಾನಗಳು, ಭೀತಿ ಆತಂಕಗಳು ಎಂದು ನನಗೆ, ಈ ನಾಡಿಗೆ, ನೀವು ಹೇಳಿಬಿಟ್ಟರೆ ಅತ್ಯಂತ ಸಂತೋಷವಾಗುತ್ತದೆ. ನೆಮ್ಮದಿಯಾಗುತ್ತದೆ.

ಮಾಡಿ ಕತ್ತಿನ ಸುತ್ತ ಕೇಸರಿ ವಲ್ಲಿಯನ್ನು ಉರುಳಾಗಿ ಸುತ್ತಿಕೊಂಡು ಗಜಗಾತ್ರದ ಹಾರಗಳಿಗೆ ಕತ್ತು ನೀಡುತ್ತ ಕಿವಿಯಿಂದ ಕಿವಿಯವರೆವಿಗೆ ಹಲ್ಲು ಕಿರಿಯುವ ಈ ನಾಯಕರುಗಳ ಹಿಂದೆ ಒಂದು ಸಾಮಾನ್ಯ ಅಂಶವಾಗಿ ಕಾಣಿಸುವ ಬಿಗಿ ಮೊಗದ ಗಣಿ ಮಾಲೀಕರು ಯಾಕೆ ವಿರಾಜಮಾನರಾಗಿರುತ್ತಾರೆ ಎಂದು ಜನ ಅಚ್ಚರಿ ಪಟ್ಟರೆ ತಪ್ಪಲ್ಲವಲ್ಲವೆ?

ತಾವು ಕಂಡುಕೊಂಡ ಘನಘೋರ ಸತ್ಯ ಸಾಕ್ಷಾತ್ಕಾರಕ್ಕೆ ಕಬ್ಬಿಣದ ಅದುರಿನ ಎಷ್ಟು ಧೂಳು ಉಸಿರು ಕಟ್ಟಿಸಿತು ಎಂದು ಇವರುಗಳು ಸ್ಪಷ್ಟಪಡಿಸದೇ ಹೋದರೂ ಇದೇ ರಾಜ್ಯಕ್ಕೆ ಜಗಜ್ಜಾಹೀರಾಗಿರುವುದು ಸತ್ಯವಲ್ಲವೆ? ನಾನು ಆರಿಸಿ ಕಳಿಸಿದ್ದು ನಾಯಕರುಗಳನ್ನೇ, ಧೀಮಂತರನ್ನು, ನಂಬಿಕೆ ಸಿದ್ಧಾಂತಗಳ ಪರ ನಿಲ್ಲುವ ಧೀರರನ್ನೂ ಎಂದು ವಿಶ್ವಾಸವಿಟ್ಟಿದ್ದ ಜನಗಳಿಗೆ 'ನಾವು ಸ್ವಾರ್ಥ ದುರಾಸೆಗಳ ಕ್ಷುಲ್ಲಕ ಕ್ರಿಮಿಗಳು' ಎಂದು ಮಾತ್ರ ರುಜುವಾತುಪಡಿಸಿ ಜನತೆಗೆ ತಮ್ಮ ನಿಜವಾದ ಸ್ವರೂಪವನ್ನು ತೋರುತ್ತಿರುವ ಈ 'ನಾಯಕರುಗಳು' ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ನೀಚ ಸ್ಥಾನಗಳಿಗಾಗಿ ಪೈಪೋಟಿ ನಡೆಸಿದ್ದಾರೆಂಬುದರಲ್ಲಿ ಅಚ್ಚರಿಯಿಲ್ಲ. ಇಂಥ ರಾಜಕಾರಣಕ್ಕೆ, ಇಂಥ ಬೆನ್ನೆಲೆಬು ಮುರಿದುಕೊಂಡ ನಾಯಕರುಗಳಿಗಾಗಿಯೇ ಕಾಯುತ್ತಿರುವುದು ಸಂಘ ಪರಿವಾರ ಮತ್ತು ಅಷ್ಟೇ ಅಪಾಯಕಾರಿ ನಕ್ಸಲ ಪರಿವಾರ. ವ್ಯವಸ್ಥೆ ತಳ ಮುಟ್ಟಿದಷ್ಟು ಇವರುಗಳು ಹೆಚ್ಚು ಹೆಚ್ಚು ಚಿಗಿತುಕೊಳ್ಳುತ್ತಾರೆ. ಈಗ ವಿಧಾನಸೌಧದಲ್ಲಿಯೇ ಪ್ರತಿಷ್ಠಿತರಾದ ಸಂಘ ಪರಿವಾರವೂ, ಕಾಡಿನಿಂದ ನಾಡಿನತ್ತ ಸುಳಿಯುತ್ತಿರುವ ನಕ್ಸಲ ಪರಿವಾರವೂ ಎರಡೂ ಕೂಡ ಪ್ರಜಾತಂತ್ರದ ನೆತ್ತರನ್ನೇ ಬಸಿದು ಬಿಡುತ್ತಾರೆ.

ಇವಕ್ಕೆಲ್ಲ ನಮ್ಮ ಸ್ವಾರ್ಥ, ನಮ್ಮ ಮೌನ, ನಮ್ಮ ನಿಷ್ಕ್ರಿಯತೆ, ನಮ್ಮ ಆತ್ಮ ಸುರಕ್ಷೆಯ ಬಗ್ಗೆ ವಿಪರೀತ ಕಾಳಜಿಗಳು ಇವುಗಳಿಂದ ನಾವೇ ಜವಾಬ್ದಾರರಾಗುತ್ತೇವೆ. ನೀವು ಅನುಭವೀ ರಾಜಕಾರಣಿಗಳಲ್ಲಿ ಒಬ್ಬರು. ನಿಮ್ಮ ಬಗ್ಗೆ ನಮ್ಮೆಲ್ಲ ಅಭಿಮಾನವಿದೆ, ನಂಬಿಕೆಯಿದೆ, ಗೌರವವಿದೆ. ನಿಮಗೆ ಭವಿಷ್ಯದ ಕುರಿತಾದ ಕ್ರಿಯಾಶೀಲ ಕಲ್ಪನೆಗಳಿವೆ ಎಂಬ ವಿಶ್ವಾಸವಿದೆ. ಹಿಂದುಳಿದ ಜನಾಂಗಕ್ಕೆ ಸೇರಿದ ನಿಮಗೆ ನಿಮ್ಮ ಜನಗಳ ಪ್ರಗತಿಯ ಕುರಿತಾದ ಕಳಕಳಿಯಿದೆ ಎಂಬ ಖಂಡಿತವಿದೆ. ನೀವು ಸದ್ಯದ, ಲಾಭಕ್ಕಾಗಿ ಚಿರಂತದ ಮೌಲ್ಯಗಳು, ಸತ್ಯಗಳು ಇವುಗಳನ್ನು ಬಲಿಕೊಡುವುದಿಲ್ಲ ಎಂಬ ಸಂಪೂರ್ಣ ನಂಬಿಕೆಯಿದೆ.

ಸದ್ಯದ ನಿಮ್ಮ ಪಕ್ಷದಲ್ಲಿ ನಿಮಗೆ ತೃಪ್ತಿಕರವಾಗಿ ಕೆಲಸ ಮಾಡಲು ಸಾಧ್ಯವಿಲ್ಲ ಅನ್ನಿಸಿದರೆ ನೀವು ಬೇರೆ ಪಕ್ಷವನ್ನಾದರೂ ಕಟ್ಟುತ್ತೀರಿ, ಬಿ.ಜೆ.ಪಿ ಯತ್ತ ಯಾವ ಕಾರಣಕ್ಕೂ ಕಣ್ಣು ಹಾಯಿಸುವುದಿಲ್ಲ ಎಂಬ ನಂಬಿಕೆಯೂ ನಮಗೆಲ್ಲ ಇದೆ. ಇಂಥ ನಿರ್ಧಾರ, ಅಂದರೆ ಹೊಸ ಪಕ್ಷದ ನಿರ್ಮಾಣ, ನೀವು ತೆಗೆದುಕೊಂಡರೆ ನಮ್ಮೆಲ್ಲರ ಸಹಕಾರ ಬೆಂಬಲ ಇದ್ದೇ ಇರುತ್ತದೆ ಎಂಬ ಆಶ್ವಾಸನೆಯನ್ನು ವಿನಯದಿಂದ ಹೇಳಲು ಬಯಸುತ್ತೇನೆ.

ಇಷ್ಟೂ ಹೇಳಿದ ಮೇಲೂ ನಾನು ಹೇಳಿರುವುದೆಲ್ಲ ಸ್ವಕಪೋಲಕಲ್ಪಿತ ಅನುಮಾನಗಳು, ಭೀತಿ ಆತಂಕಗಳು ಎಂದು ನನಗೆ, ಈ ನಾಡಿಗೆ, ನೀವು ಹೇಳಿಬಿಟ್ಟರೆ ಅತ್ಯಂತ ಸಂತೋಷವಾಗುತ್ತದೆ. ನೆಮ್ಮದಿಯಾಗುತ್ತದೆ.

ಇತಿ ತಮ್ಮ ವಿಶ್ವಾಸಿ,

(ಸಹಿ/ ಜಿ. ಕೆ. ಗೋವಿಂದ ರಾವ್)

09.07.08

ಧೂಳಿನ ಪಾತ್ರೆ.



ಇವು ನಮ್ಮವೇ ಹೊಲಗಳು
ಅರಳುವ ಹೂಗಳೆಲ್ಲಿ ಹೋದವು!
ಪುಟಿಯುವ ಕಾಳಿನ ರಾಶಿ?
ಈಗ ಗಾಳಿಯೊಂದಿಗೆ ಭೂಮಿಯೂ ಚಲಿಸುತ್ತಿದೆ.

ಈ ಬೋಳು ಮರಗಳಲ್ಲಿ
ಹಕ್ಕಿಗಳೀಗ ಗೂಡುಕಟ್ಟುವುದಿಲ್ಲ
ಹಣ್ಣು ತೊನೆಯುವುದಿಲ್ಲ
ಬಿಸಿಲಿಗೆ ಕರಕಲಾಗಿವೆ ಹಸಿರು ರೆಂಬೆಗಳು.

ಧೂಳು ಹಾರುತ್ತದೆ, ಭಾರಕ್ಕೆ ಕುಸಿಯುತ್ತದೆ
ಒಣಗಿದ ನಮ್ಮ ಬಾಯಿಗಳ ತುಂಬುತ್ತದೆ.
ಧೂಳು ಚಲಿಸುತ್ತದೆ
ಮೇಲೆ, ಕೆಳಗೆ ಎಲ್ಲೆಂದರಲ್ಲಿ

ನಮ್ಮ ಎಚ್ಚರದಲ್ಲಿ, ಧ್ಯಾನದಲ್ಲಿ
ನಮ್ಮ ಕನಸುಗಳಲ್ಲಿ.

ಮೂಲ: ಲ್ಯಾಂಗ್‌ಸ್ಟನ್ ಹ್ಯೂಸ್
ಕನ್ನಡಕ್ಕೆ: ಡಾ॥ ಜೆ. ಬಾಲಕೃಷ್ಣ

ಕನಸು

ನನ್ನ ಕೈಗಳ ಚೆಲ್ಲಿ
ಈ ಜಗತ್ತಿನ ಯಾವುದೇ ಭಾಗದಲ್ಲಿ
ಗಿರಗಿರನೆ ತಿರುಗಿ ನರ್ತಿಸಬೇಕು
ಬಿಳಿಯ ಹಗಲು ಮರೆಯಾಗುವವರೆಗೆ.
ತಂಪಾದ ಸಂಜೆಯಲ್ಲಿ
ದೊಡ್ಡ ಮರದ ನೆರಳಿನಲ್ಲಿ
ವಿಶ್ರಮಿಸುವಾಗ ಕತ್ತಲು
ಸಾವಕಾಶ ಆವರಿಸಬೇಕು
ನನ್ನಂಥ ಕಪ್ಪು ಕತ್ತಲು–
ಅದೇ ನನ್ನ ಕನಸು!

ನನ್ನ ಕೈಗಳ ಚೆಲ್ಲಿ
ಸುಡುವ ಸೂರ್ಯನ ಎದುರಿಸಿ
ನರ್ತಿಸಬೇಕು! ಗಿರಗಿರನೆ ತಿರುಗಿ!
ಅವಸರದ ಹಗಲು ಮುಗಿಯುವವರೆಗೆ.
ಮುಸ್ಸಂಜೆ ವಿಶ್ರಮಿಸಬೇಕು...
ಉದ್ದನೆ ನೀಳ ಮರ...
ಸಂತೈಸುವಂತೆ ಕತ್ತಲು ಆವರಿಸುತ್ತದೆ
ನನ್ನಂಥಹುದೇ ಕಪ್ಪನೆ ಕತ್ತಲು



ಗೋರಕ್ಷಣೆಯ ಕೂಗೋ ತಳಿ ನಾಶದ ಯಜ್ಞವೋ ?

ಬಲಿ ಎಂಬ ಹೆಸರಲ್ಲಿ ತಮ್ಮ ಜೀವನಾಧಾರವಾದ ಶಂಕರಗಂಡ / ಸಂಕರಗಂಡ(ಭತ್ತ) ನನ್ನು ಬೆಳೆದುಕೊಡುವ ಗದ್ದೆ ಬಯಲನ್ನೇ ಅಮವಾಸ್ಯೆಯ ಕತ್ತಲೊಳಗೆ ದೀಪದ ಬೆಳಕಿನಲ್ಲಿ ಬೆಳಗಿಸಿ ಹಿಟ್ಟು ಹಾಕಿ, ಹೂವಿರಿಸಿ ಹೊಲಿ .ದೇವರನ್ನು ಕರೆದು ಕೂಗಿ ಆರಾಧಿಸಿ, ಶ್ರಮ ಸಂಸ್ಕೃತಿಯ ಪ್ರಾಣಿ ಮೂಲವನ್ನೂ ಮರೆಯದೆ ಮೊರದಲ್ಲಿ ಹಿಟ್ಟರಿಸಿ, ಮಣ್ಣಿನ ಹಣತೆಯ ಸಣ್ಣ ಬೆಳಕಿನಲ್ಲಿ ಹಸುವಿನ ಮುಂದಿಟ್ಟು ನಮ್ಮ ಮಣ್ಣಿನ ಮಕ್ಕಳು ಬೇಡಿಕೊಳ್ಳುವ ಬಗೆ ಹೀಗೆ

ಆಸಾಡಿ ಹಬ್ಬದ್ ಆಸಿ ಕಂಡೆ
ದೀಪೋಳಿ ಹಬ್ಬದ್ ದೀಪ ಕಂಡೆ
ಮುಂದ್ ಬತ್ತ್ ಕೊಡಿ ಕಾಣ್

ಹಾಗೆಯೇ ಮನೆಯ ಎದುರಿಗಿನ ತುಳಸಿಕಟ್ಟೆಗೆ ವಸಂತ ಮಾಡಿ ಬಿಳಿಯ ಪಂಚೆಯನ್ನು ಅಡ್ಡಲಾಗಿ ಹಿಡಿದು ಬೇಡುವುದು "ಪಾವು ತೀರ್ಥವನ್ನು ಮಂದಾಲಗಿರಿಗೆ ಸೇರಿಸಿಕೊಂಡು ನಮ್ಮ ಎತ್ತು-ಬಿತ್ತು, ಮಕ್ಕಳು-ಮರಿಯನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಪಾಡು" ಎಂದು. ಇನ್ನು ತಾವು ನಂಬುವ ಸ್ಥಾವರವಲ್ಲದ ದೈವಾರಾಧನೆಯಲ್ಲಿಯೂ ಉಂಟು ಮಾಡಿಕೊಂಡು (ದರ್ಶನ) ಬೇಡುವುದು, " ನನ್ನ ನಾಕ್ ಕಾಲ್ ಮುಂಬನ್ನೂ, ಮಕ್ಕಳ್ ಮರಿಯನ್ನು ಕಾದುಕೊಡು" ಎಂದು.

ಈ ಮೇಲಿನ ಉದಾಹರಣೆಗಳಲ್ಲಿ ಆಚರಣೆ, ಹರಕೆ ಇವುಗಳೊಳಗೆ ಗೋ ಸಂಪತ್ತಿನ ಕುರಿತಾದ ಅತಿಯಾದ ಕಾಳಜಿ ಮತ್ತು ಭಯವನ್ನು ಕಾಣುತ್ತೇವೆ. ಈ ಭಯಕ್ಕೆ ಮುಖ್ಯವಾದ ಕಾರಣ ರೋಗ ರುಜಿನಗಳು ಮತ್ತು ಹುಲಿ-ಚಿರತೆಗಳಂತಹ ಆಕ್ರಮಣಕಾರಿ ಪ್ರಾಣಿಗಳು. ಹಟ್ಟಿ ತುಂಬಿಕೊಂಡಿದ್ದು ಹೊಸ ಕರು-ಮರಿಗಳು ಆಗುತ್ತ ಹಳೆತನದ ರೋಗದ ಬಾಧೆಯಲ್ಲಿ ಹೊರೆಯಾಗದ ಹಾಗೆ ತುಂಬುತ್ತಾ, ಸವೆಯುತ್ತಲೇ ಭಾರವಾಗದಂತೆ ನೇಪಥ್ಯಕ್ಕೆ ಸರಿದು ನಿರಂತರ ಉತ್ಪಾದನೆ ಪ್ರಗತಿಯನ್ನು ಕಾಣುತ್ತಾ ಮುಂದುವರೆಯುವ ಗೋಧನ ಕೃಷಿಕರ ಪಾಲಿನ ಜೀವಧನ.

ಕೃಷಿ ಸಂಸ್ಕೃತಿ ಗೋವನ್ನು ಆರಾಧಿಸುತ್ತದೆ ಮಾತ್ರವಲ್ಲ ಉತ್ಪಾದನಾ ಸಾಧನವಾಗಿಯೂ ಬಳಸುತ್ತದೆ. ಆ ಸಂಸ್ಕೃತಿಯ ಪಾಲಿಗೆ ಅದೊಂದು ಮೌಲಿಕವಾದ ಸಾಧನ ಹಾಗೆಯೇ ತನ್ನ ಬದುಕಿನ ಆಧಾರ ಬಿಂಬ. ಅದನ್ನೊಂದು ಧಾರ್ಮಿಕತೆಯ ಲಾಂಛನವಾಗಿ, ಕೇವಲ ಆರಾದನೆಯ ಸಂಗತಿಯಾಗಿ ಅದೆಂದೂ ಪರಿಭಾವಿಸುವುದಿಲ್ಲ. ದೈನಂದಿನ ಒಡನಾಟದಲ್ಲಿ ಈ ಮೂಕಪ್ರಾಣಿಯೊಂದಿಗೆ ಪ್ರೀತಿ-ಸ್ನೇಹವನ್ನು ಹಂಚಿಕೊಳ್ಳುತ್ತಲೇ ದುಡಿಸಿಕೊಂಡು ಪೂಜೆಯ ಗೌರವವನ್ನೂ ಸಲ್ಲಿಸಿ ತನ್ನ ಅಂಕೆಯಲ್ಲಿ ಇರಿಸಿಕೊಳ್ಳುವ ವಿಶಿಷ್ಠ ಆಯಾಮದ ಜೀವನ ಪ್ರೀತಿ ಅದರದ್ದು. ನೇಗಿಲು ದೇವರೆಂದು ಹೊಸ್ತಿನ ವೇಳೆ ಕದಿರುಕಟ್ಟಿ ಪೂಜಿಸುವ ಕೃಷಿಲೋಕ ಅದು ನಿರುಪಯುಕ್ತ (ಮುಂಡು)ವಾದಾಗ ನರಕ ಚತುರ್ದಶಿಯ ಬೂದು ನೀರು ಸ್ನಾನಕ್ಕಾಗಿ ಆಚಾರವೆಂಬಂತೆ ಉರಿಯುವ ಒಲೆಗೆ ಇಕ್ಕಿ ನೀರು ಕಾಯಿಸಿ ಮೀಯುವ ಪರಂಪರೆಯುಳ್ಳದ್ದು. ತಾನೇ ಬಳಸುವ ಬಹಳಪೂಜ್ಯವಾದ ವಸ್ತುವನ್ನೂ ಅದರ ನಿರರ್ಥಕ ಅವಸ್ಥೆಯಲ್ಲಿ ಮ್ಯೂಸಿಯಂನಲ್ಲಿಟ್ಟು ಚೆಂದ ನೋಡುವ ಟೊಳ್ಳು ಆರಾಧನಾವಲಯ ಅದಲ್ಲ. ತಾನೇ ಸಾಕಿದ ಹಸುವು ಹಾಲು ಕೊಡದೇ ಹೋದಾಗ ಬಲಾತ್ಕರಿಸಿ ಒತ್ತಾಯ ಪೂರ್ವಕವಾಗಿ ಹಾಲು ಹಿಂಡುವ, ಅದರ ಕರುವಿಗೆ ಅದರ ಅವ್ವನ ಹಾಲು ಕುಡಿಯದಂತೆ ಕಸರತ್ತು ಮಾಡುವ, ಉಳುವ

ಕೃಷಿ ಸಂಸ್ಕೃತಿ ಗೋವನ್ನು ಆರಾಧಿಸುತ್ತದೆ ಮಾತ್ರವಲ್ಲ ಉತ್ಪಾದನಾ ಸಾಧನವಾಗಿಯೂ ಬಳಸುತ್ತದೆ. ಆ ಸಂಸ್ಕೃತಿಯ ಪಾಲಿಗೆ ಅದೊಂದು ಮೌಲಿಕವಾದ ಸಾಧನ ಹಾಗೆಯೇ ತನ್ನ ಬದುಕಿನ ಆಧಾರ ಬಿಂಬ. ಅದನ್ನೊಂದು ಧಾರ್ಮಿಕತೆಯ ಲಾಂಛನವಾಗಿ, ಕೇವಲ ಆರಾಧನೆಯ ಸಂಗತಿಯಾಗಿ ಅದೆಂದೂ ಪರಿಭಾವಿಸುವುದಿಲ್ಲ. ದೈನಂದಿನ ಒಡನಾಟದಲ್ಲಿ ಈ ಮೂಕಪ್ರಾಣಿಯೊಂದಿಗೆ ಪ್ರೀತಿ-ಸ್ನೇಹವನ್ನು ಹಂಚಿಕೊಳ್ಳುತ್ತಲೇ ದುಡಿಸಿಕೊಂಡು ಪೂಜೆಯ ಗೌರವವನ್ನೂ ಸಲ್ಲಿಸಿ ತನ್ನ ಅಂಕೆಯಲ್ಲಿ ಇರಿಸಿಕೊಳ್ಳುವ ವಿಶಿಷ್ಠ ಆಯಾಮದ ಜೀವನ ಪ್ರೀತಿ ಅದರದ್ದು. ನೇಗಿಲು ದೇವರೆಂದು ಹೊಸ್ತಿನ ವೇಳೆ ಕದಿರುಕಟ್ಟಿ ಪೂಜಿಸುವ ಕೃಷಿಲೋಕ ಅದು ನಿರುಪಯುಕ್ತವಾದಾಗ ನರಕ ಚತುರ್ದಶಿಯ ಬೂದು ನೀರು ಸ್ನಾನಕ್ಕಾಗಿ ಆಚಾರವೆಂಬಂತೆ ಉರಿಯುವ ಒಲೆಗೆ ಇಕ್ಕಿ ನೀರು ಕಾಯಿಸಿ ಮೀಯುವ ಪರಂಪರೆಯುಳ್ಳದ್ದು.

ಜಯಪ್ರಕಾಶ್ ಶೆಟ್ಟಿ ಹೆಚ್

ಜಾನುವಾರು ಕಳಿ (ಉಳುವಾಗ ಮಧ್ಯೆ ಮಲಗುವುದು) ಹಾಕಿದಾಗ ನಿರ್ದಯವಾಗಿ ದಂಡಿಸುವ ಕ್ಷಣಗಳಲ್ಲಿ ಬದುಕಿನ ಅನಿವಾರ್ಯತೆಯನ್ನು ಒಪ್ಪಿಕೊಳ್ಳುವ ಕೃಷಿ ಸಂಸ್ಕೃತಿಗೆ ಪ್ರೀತಿಯ ಜೊತೆಗೂ ಇರುವ ಉಪಯೋಗ ಬುದ್ಧಿಯ ಸ್ಪಷ್ಟ ದರ್ಶನ ಸಿಗುತ್ತದೆ. ತನ್ನ ಈ ಮೂಲಧನ ಅದಕ್ಕೆ ಪ್ರದರ್ಶನ ಬೊಂಬೆಯಲ್ಲ, ಬದುಕಿನ ಸರಕು. ಹಾಗೆಯೇ ತನ್ನದಲ್ಲದ ಗೋಕುಲವನ್ನು ತನ್ನ ಬದುಕಿನ ಆಧಾರವಾದ ಬೆಳೆಗೆ ದಾಳಿಯಿಟ್ಟಾಗ (ಗುಲಗಂಜಿಯ ಸೊಪ್ಪಿನ ವಿಷಯುಕ್ತವಾದ ರಸದಲ್ಲಿ ಅದ್ದಿದ ಕೋಲಿನಿಂದ ಗಾಯವಾಗುವಂತೆ ಹೊಡೆದು ನಿಧಾನ ಸಾವಿಗೆ ಕಾರಣವಾಗುವಂತೆ) ತೀಕ್ಷ್ಣವಾಗಿ ದಂಡಿಸುವ ಈ ಜೀವನಕ್ರಮ ದುಡಿಮೆ ಮತ್ತು ಬದುಕಿನ ಸಹಜತೆಯ ಅರಿವಿಲ್ಲದವರಿಗೆ ಅನಾಗರೀಕವಾಗಿ ಕಂಡರೂ ಆಶ್ಚರ್ಯವಿಲ್ಲ. ಗೋಮಯ–ಗೊಬ್ಬರಗಳೆರಡರ ಅರಿವಿರುವವರಿಗೆ ಮಾತ್ರ ಹಸುಗಳೊಂದಿಗಿನ ಮಣ್ಣಿನ ಮಕ್ಕಳ ಸಂಬಂಧ ಅರ್ಥವಾದೀತು ಅಷ್ಟೆ.

ಇದೇ ಸಂದರ್ಭದಲ್ಲಿ ಕೃಷಿ ಸಂಸ್ಕೃತಿಯೊಂದಿಗೆ ಆ ಮಣ್ಣು ಮೆತ್ತಿಕೊಂಡೇ ಬಂದ ನನ್ನಂತಹ ಅನೇಕರಿಗೆ ಕಾಡುತ್ತಿರುವ ಪ್ರಶ್ನೆ, ನಮ್ಮ ಹಟ್ಟಿಗಳಲ್ಲಿ ಇರುತ್ತಿದ್ದ ಕೆಂಪಿ, ಬುಡ್ಡಿ, ಬೆಳ್ಳಿಯಂತಹ ದನಗಳಾಗಲಿ , ಕೆಂಪಣ್ಣ, ಕರಿಯ, ನೀಲಿರಂತಹ ಎತ್ತುಗಳಾಗಲಿ ಈಗೀಗ ಯಾಕೆ ಮಾಯವಾಗುತ್ತಾ ಸಾಗಿದೆ ? ವರ್ಷಕ್ಕೊಂದರಂತೆ ಕಿರು ಗಾತ್ರದ ಕರುಗಳನ್ನು ಹಾಕುತ್ತಾ ಹೊಲ–ಮನೆಗಳಲ್ಲಿ ಮೆಂದು ಬರುತ್ತಿದ್ದ ಈ 'ಅಪ್ಪಟ ಹಸು'ಗಳು ಕಣ್ಮರೆಯಾಗುತ್ತಿರುವುದರ ಹಿಂದಿನ ಕಾರಣಗಳೇನು? ಸಾಗುವಳಿಯ ಕುರುಹು ಎಂಬಂತೆ ಮನೆಯ ಕೊಟ್ಟಿಗೆಯಲ್ಲಿ ಇರಲೇ ಬೇಕಾಗಿದ್ದ ಜೋಡು (ಎತ್ತು ಯಾ ಕೋಣನ ಜೊತೆ)ಗಳು ನಾಪತ್ತೆಯಾಗಿ ಅರ್ಧ್ದಾಡಿ ಹೊಟ್ಟು ಸುಡುವ ಕ್ರಮವೇ ಕೈತಪ್ಪಿ ಬರಿ ಹೊಟ್ಟು ಸುಡುವ ಪದ್ಧತಿ ರೂಢಿಗತವಾಗುತ್ತಿರುವುದರ ಹಿಂದಿನ ಕಾರಣಗಳು ಯಾವುವು? ಈ ಜೋಡುಗಳು ನಾಪತ್ತೆಯಾಗುತ್ತಿದ್ದಂತೆಯೇ ಯಾಂತ್ರಿಕ ಸಾಧನಗಳನ್ನು ಬಳಸಲಾರದ ಚಿಕ್ಕ ಹಿಡುವಳಿದಾರರ ಭೂಮಿಗಳು ಹಡು ಬೀಳುತ್ತಿರುವುದು ಮತ್ತು ದೊಡ್ಡ ಕೃಷಿ ಗುತ್ತಿಗೆದಾರರು ಇಂತಹ ಹಡು ಬಿದ್ದ ನೆಲದಲ್ಲಿ ಶುಂಠಿ, ಬಾಳೆ, ಹುಲ್ಲೆಣ್ಣೆಗಳನ್ನು ಬೆಳೆಸುವ ಗುತ್ತಿಗೆಪಡೆಯುತ್ತಿರುವುದು ಕೇವಲ ಕಾಕತಾಳೀಯವೇ? ಅನ್ನ ಬೆಳೆಯುವ ಭೂಮಿಯ ಬಟ್ಟಲು ಹೀಗೆ ಪರಭಾರೆಯಾಗಿ ಕೃಷಿಕ ಕೂಲಿಗಾರನಾಗುತ್ತಿರುವುದರ ಹಿಂದಿನ ಕಾರಣಗಳು ಯಾವುವು? ಇದಕ್ಕೆಲ್ಲಾ ಆಧುನಿಕತೆ ಮಾತ್ರವೇ ಕಾರಣವೇ? ಅಥವಾ ಜಾಗತೀಕರಣವನ್ನು ನೆಲೆಗೊಳಿಸುವ ಸಣ್ಣ ಸಣ್ಣ ಒಳದಾರಿಗಳೆ ಇವುಗಳು? ಈ ಒಳದಾರಿಗಳನ್ನು ರಾಜಮಾರ್ಗವಾಗಿಸುತ್ತಿರುವ ಶಕ್ತಿಗಳು ಯಾವುವು? ಅವುಗಳ ಮುಖವಾಡ ಯಾವುದಿರಬಹುದು? ರಕ್ಷಣೆ ಹೆಸರು ಹೇಳುತ್ತಲೇ ನಮ್ಮನ್ನು ಮುಕ್ಕುವ ಅಧಿಕಾರ ರಾಜಕಾರಣದ ಭಾಗವೇ ಇದು? ಹೀಗೆ ಹತ್ತು ಹಲವು ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ.

ನಾನು ಚಿಕ್ಕಂದಿನಿಂದ ಕೇಳಿಸಿಕೊಂಡು ಬಂದ ಮತ್ತು ಈಗಲೂ ಜೂನ್ ಆರಂಭಕ್ಕೆ ಮುನ್ನ ನನ್ನ ಮರು ನೆನಕೆಗೆ ಕಾರಣವಾಗುವ 'ಹೋರ್ ಸತ್ತೋವ್ಯೋ' ಎಂಬ ಹಕ್ಕಿಯ ಕಥೆ ಮತ್ತು ಕೂಗು ಇಲ್ಲಿ ಉಲ್ಲೇಖನೀಯ. ಈ ಕಥೆ ಬೆಳೆಗಾರನೊಬ್ಬ ಹೋರಿ

> **ಈ ದೇಶದ ಅಲ್ಪಸಂಖ್ಯಾತರೂ ಸೇರಿ ದಂತೆ ಬಹು ಸಂಖ್ಯಾತ ಮಂದಿಯ ಆಚಾರ ಸಂಸ್ಕೃತಿಯಲ್ಲಿ ಭಿನ್ನತೆ ಇದ್ದರೂ ಆಹಾರ ಸಂಸ್ಕೃತಿಯಲ್ಲಿ ಹೆಚ್ಚು–ಕಡಿಮೆ ಸಾಮ್ಯತೆ ಇದೆ. ಹಾಗೆಯೇ ಸಾಮಾಜಿಕ, ಆರ್ಥಿಕ ಸ್ಥಿತಿಗಳಲ್ಲಿಯೂ ಈ ವರ್ಗ ಸಾಮ್ಯತೆ ತೋರುತ್ತದೆ. ಹೀಗೆ ಬಹಳಷ್ಟು ಮೂಲಭೂತ ವ್ಯತ್ಯಾಸಗಳಿಲ್ಲದೆ ಗಟ್ಟಿ ಗೊಂಡಂತಿದ್ದ ತಳ ಸಮುದಾಯದ ಒಗ್ಗಟ್ಟು ಸಾಂಸ್ಥಿಕ ಧರ್ಮದ ಪಟ್ಟಭದ್ರರಿಗೆ ಯಾವತ್ತೂ ಆತಂಕದ ವಿಷಯವೇ. ಈ ಒಗ್ಗಟ್ಟನ್ನು ಒಡೆಯದೇ ಅದು ಆಳ ಲಾಗದು. ತರಕಾರಿಯೇತರ ಆಹಾರ ಸಂಸ್ಕೃತಿಯ ಸಮುದಾಯಗಳೊಳಗೆ ಮಾಂಸ ಮೂಲದ ನೆಲೆಯಲ್ಲಿ ಈ ವೈಷಮ್ಯವನ್ನು ಬಿತ್ತಬೇಕಾದರೆ ಅದರ ಸಹಜ ಸಂಸ್ಕೃತಿಯ ನೆನಪುಗಳನ್ನು ಖಾಲಿ ಮಾಡಿ ಪ್ರತಿಗಾಮಿ ಮೌಲ್ಯಗಳನ್ನು ತುಂಬಿ ಭಾವನಾತ್ಮಕ ಹುಳಿ ಹಿಂಡಬೇಕು. ಗೋ ರಕ್ಷಣೆಯ ಮಹಾಭಿಯಾನ ಇಂತಹದೊಂದು ಯಶಸ್ವೀ ಕಾರ್ಯಾಚರಣೆ. ಇದರಲ್ಲಿ ದೊಣ್ಣೆ ಹಿಡಿದು ಹೆದ್ದಾರಿ ಕಾವಲು ಕಾಯುವ ಮಂದಿ ತಮ್ಮದೇ ಆಹಾರ ಸಂಸ್ಕೃತಿಯ ಮಾದರಿಯನ್ನು ಭಾವನಾತ್ಮಕ ಕಾರಣಕ್ಕಾಗಿ ವಿರೋಧಿಸುವವರು.**

ಜೋಡನ್ನು ತಂದು ಬದುಕಿಸಿಕೊಳ್ಳಲಾರದೇ ಹಕ್ಕಿಯಾಗಿ ಹಾರಿ ಹೋದುದನ್ನು ಹೇಳುತ್ತದೆ. ನನ್ನ ಸ್ಥಳೀಯರು ನಂಬುವಂತೆ ಇಂದು ಕೂಡ ಮಳೆಗಾಲದ ಆರಂಭಕ್ಕೆ ಆತ ತನ್ನ ಸಾಗುವಳಿ ಮಾಡಲಾಗದ ವೇದನೆಯನ್ನು 'ಹೋರ್ ಸತ್ತೋ ಯ್ಯೋ' ಎಂಬ ಕೂಗಿನ ಮೂಲಕ ತೋಡಿಕೊಳ್ಳುತ್ತಿದ್ದಾನಂತೆ. ರೈತನ ಆತ್ಮಹತ್ಯೆ ಇವತ್ತು ಗೊಬ್ಬರದ ಹೆಸರಿನಲ್ಲಿ ಗುಂಡಿನ ರೂಪದಲ್ಲೊ ವಿಷದ ರೂಪದಲ್ಲೋ ಆಗುತ್ತಿದೆಯಾದರೆ, ಈ ಕಥೆಯಲ್ಲಿ ಬೆಳೆ ಬೆಳೆಯಲು ಅನಿವಾರ್ಯದ ಸಂಗತಿಯಾದ ಜೋಡಿನ ಸಾವಿನ ಸರಣಿಯಿಂದಾಗಿ ಆಗುತ್ತದೆ. ಸಾಮಾನ್ಯವಾಗಿ ಉಳುವ ಜಾನುವಾರುಗಳಿಗೆ ಆಯುರ್ಮಾನದಲ್ಲಿ ನಿರ್ದಿಷ್ಟ ಅವಧಿಯವರೆಗೆ ಆ ಶಕ್ತಿ ಇರುತ್ತದೆ. ಎಳಮೆಯಲ್ಲಿ, ಯೌವನದಲ್ಲಿ ತೋರುವ ಉಮೇದನ್ನು ಅವು ವಯಸ್ಸಾದಂತೆ ತೋರಲಾರವು. ವಯಸ್ಸಾದಂತೆ ಅವುಗಳ ಬೆಲೆಯು ಕಡಿಮೆಯಾಗುತ್ತ ಸಾಗುತ್ತದೆ. ಬಡ ಸಾಮಾನ್ಯ ರೈತರಿಗೆ ದೊಡ್ಡ ಮೊತ್ತದ ಹೂಡಿಕೆ ಸಾಧ್ಯವಾಗದೇ ಹೋದಾಗ ಸಿಗಬಹುದಾದುದು ಇಂತಹ ಜೋಡುಗಳೇ. ಒಂದೋ–ಎರಡೊ ಸಾಗುವಳಿ ಮಾಡಿದ ಮೇಲೆ ಇವುಗಳನ್ನು ಉಳುವವರಿಗೆ ಕೊಡಲಾಗದು, ಬದಲಾಗಿ ತಿನ್ನುವವರಿಗೆ ಕೊಡಬೇಕು. ಒಂದು ವೇಳೆ ಕೊಡದೇ ಉಳಿಸಿಕೊಂಡಲ್ಲಿ ಉಳಲೂ ಆಗದೇ ಸಾಯುವ ತನಕ ಸಾಕಿ ಇಡ್‌ಗಂಟು ಕಳೆದುಕೊಳ್ಳಬೇಕಾಗುತ್ತದೆ. ಆಗ ಈ ಕಥೆಯ ಪಾತ್ರ ವಾಸ್ತವವಾಗುತ್ತದೆ. ಹೀಗಾಗಿ ಹಳ ಜೋಡು ತರುವಾತನಿಗೆ, ಹಾಗೆಯೇ ಅಕಾಲ ದುರಂತಗಳಿಗೆ ತುತ್ತಾದ ಅಸಮರ್ಥ ಜೋಡು ಹೊಂದುವಾತನಿಗೆ ಅವುಗಳನ್ನು ಮಾಂಸದ ಕಾರಣಕ್ಕಾಗಿ ವಿಕ್ರಯಿಸುವವನು ನೀಡುವ ಮೊತ್ತ ಮುಂದಿನ ಜೋಡು ತರಲು ಮೂಲಧನವಾಗುತ್ತದೆ. ಹಾಗೆಯೇ ಆರೋಗ್ಯದ ದೃಷ್ಟಿಯಿಂದ ಉತ್ತಮವಾದರೂ ಅತ್ಯಂತ ಕಡಿಮೆ ಪ್ರಮಾಣದ ಹಾಲು ನೀಡುವ ಕಿರುಗಾತ್ರದ ಹಸುಗಳು ಈಯುವ ಚಿಕ್ಕ ಗಾತ್ರದ ಗಂಡು ಕರುಗಳು ಕೃಷಿಕರ ಪಾಲಿಗೆ ಲಾಭದಾಯಕವಲ್ಲ. ಇವುಗಳನ್ನು ಉಳುವುದಕ್ಕಾಗಲಿ, ಕೃಷಿಯ ಬೇರಾವುದೇ ಚಟುವಟಿಕೆಗಾಗಲಿ ಬಳಸಲಾಗದು. ಜೊತೆಗೆ ಇವುಗಳು ಬಲಿಯುವವರೆಗೆ ಇರಿಸಿಕೊಂಡಲ್ಲಿ ಇವುಗಳಿಂದ ಹುಟ್ಟುವ ಮುಂದಿನ ಸಂತತಿ ಹಾಗೆಯೇ ಚಿಕ್ಕ ಗಾತ್ರದವುಗಳೇ ಆಗುತ್ತದೆ. ಮಾತ್ರವಲ್ಲ ಕಸೆ ಮಾಡದೇ ಹೋದಲ್ಲಿ ಹಾಯಲು ಬರುವಂತೆ ಸೊಕ್ಕಿ ಹೋಗುವ ಇವುಗಳನ್ನು ಹದ್ದು ಬಸ್ತಿನಲ್ಲಿಡುವುದು ದುಸ್ತರ. ಅದೇ ರೀತಿ ಗೊಡ್ಡು ಹಸುಗಳು ಕೂಡಾ ಕೃಷಿಕರ ಪಾಲಿಗೆ ಹೊರೆಯೆ. ಹಟ್ಟಿಯ ಒಳಗಡೆ ಕಟ್ಟಿಕೊಂಡು ಇವಕ್ಕೆಲ್ಲಾ ಮೇವು ಪೂರೈಸಬೇಕೆಂದರೆ ಅದು ಕಷ್ಟದ ಮಾತು. ಹೊರಗೆ ಬಿಟ್ಟರೆ ಮಿಕ್ಕವರ ಗದ್ದೆ ಬಯಲಿಗೆ ನುಗ್ಗಿ ವಾರೀಸುದಾರರು ಗದ್ದೆಯ ಮಾಲೀಕರಿಂದ ತಿನ್ನ ಬೇಕಾದ ಬೈಗುಳಗಳು ಅಷ್ಟಿಷ್ಟಲ್ಲ. ಇದೆ ಕಾರಣಕ್ಕಾಗಿ ಎಷ್ಟೋ ಮನೆವ್ಯಾಜ್ಯ ತಗಾದೆಗಳು ನಡೆದಿರುವುದುಂಟು. ಹೀಗೆ ಹಣದ ಅಥವಾ ಗಂಟಿನ ಆವರ್ತನೆ ಅಥವಾ ಚಲನೆಯಿಲ್ಲದೆ ಹಸುವನ್ನು ಕೇವಲ ದೇವರೆಂಬ ಕಾರಣಕ್ಕಾಗಿ ಸಾಕುವಷ್ಟು ಅವಕಾಶವಾಗಲೀ, ಆರ್ಥಿಕ ಸದೃಢತೆಯಾಗಲೀ ಹೊಂದಿರದ ಕೃಷಿಕ ಸಮುದಾಯ ಸಹಜವಾಗಿಯೇ ತನಗೆ ಅನುಪಯುಕ್ತವಾದುದನ್ನು ವಿಲೇವಾರಿ ಮಾಡಿ ತನ್ನ ಭಾರವನ್ನು ಕಡಿಮೆಗೊಳಿಸಿಕೊಳ್ಳುತ್ತದೆ. ಮನೆ ಸ್ವಚ್ಛ ಮಾಡಲು ಬಳಸುವ ಸಗಣಿಯನ್ನು ಗೊಬ್ಬರವಾಗಿ ಉಪಯೋಗಿಸುವ ಕೃಷಿಕ ಅದನ್ನೇ ತಿಂದು ಬದುಕಲಾರ ಅಲ್ಲವೇ?

ಕರಾವಳಿ ಭಾಗದ ರೈತರ ಈ ಭಾರವನ್ನು ಕಡಿಮೆ ಮಾಡುತ್ತಿದ್ದ ಬಹುಮುಖ್ಯವಾದ ಮೂಲವೆಂದರೆ ಮಾಂಸಕ್ಕಾಗಿ ಅವುಗಳನ್ನು ಕೊಂಡುಕೊಳ್ಳುತ್ತಿದ್ದ ಮುಸಲ್ಮಾನರ "ಗಂಟಿ ವ್ಯವಹಾರ" ಮಾನವ ಸಂತತಿಯಲ್ಲಿ ಚಾಲ್ತಿಯಲ್ಲಿರುವಂತೆ ಹಸುಗಳ ಜನನ ಪ್ರಮಾಣವನ್ನು ನಿಯಂತ್ರಿಸುವುದಾಗಲೀ ಅನುಪಯುಕ್ತವೆನಿಸಬಹುದಾದ ಗಂಡು ಭ್ರೂಣದ ಹತ್ಯೆಯಾಗಲೀ ಸಾಧ್ಯವಲ್ಲದ ಕಾರಣದಿಂದ ಹುಟ್ಟಿದವುಗಳನ್ನು ಹಟ್ಟಿಯಲ್ಲಿ ಕಟ್ಟಿಕೊಂಡು ಮೇವಿಲ್ಲದೇ ಕೊಲ್ಲಲಾಗದು. ಹಾಗೆಯೇ ಅವುಗಳನ್ನು ಹೊರಗೆಬಿಟ್ಟು ಯಾರದೋ ಪೈರು ಹಾಳುಮಾಡಿ ಶಾಪ ಹಾಕಿಸಿಕೊಳ್ಳಲಾಗದು ಎಂದಾಗ ಏನು ಮಾಡಬೇಕು ?

[illegible] ಕೊಂದುಕೊಳ್ಳುವುದು [illegible] ! ? ಅಥವಾ [illegible] !? ಇವರಿಗೆ [illegible] ಕೊಂಡು ಕೊಳ್ಳುವ [illegible] ಅದರ [illegible] (ದನ [illegible]) [illegible].

ಆದರೆ ಇತ್ತೀಚಿನ ವರ್ಷಗಳಲ್ಲಿ ವಿಶೇಷವಾಗಿ ಕರಾವಳಿ ಭಾಗವನ್ನು ಗಮನಿಸಿ ಹೇಳುವುದಾದರೆ ಗೋರಕ್ಷಕರ ಸ್ವಯಂ ಘೋಷಿತ ಪಡೆಗಳು ತಯಾರಾಗಿ ಹೆದ್ದಾರಿ ಕಾವಲು ಶುರುವಾಗುತ್ತಿದ್ದಂತೆಯೇ ನಮ್ಮ ಹಟ್ಟಿಗಳಲ್ಲಿರುವ ಕೆಂಪಣ್ಣನ ಬದಲಿಗೆ ಬಿಳಿ. ಬೆಳ್ಳಿಯ ಬಣ್ಣದ [illegible] ಆಗಮನವಾಗುತ್ತಿದ್ದ ಪ್ರಕ್ರಿಯೆ ನಿಂತು ಹೋಗ ತೊಡಗಿವೆ. ರಕ್ಷಣೆಯ ಹೆಸರಿನಲ್ಲಿ ಧರ್ಮಯುದ್ಧದ ಜವಾಬ್ದಾರಿ ಹೊರಲ್ಬಟ್ಟ ಎಳೆಯ ಹುಡುಗರ ತಲೆಗೆ ಸಮುದಾಯ ದ್ವೇಷದ ಅಮಲು ಬಿತ್ತಲಾಗುತ್ತಿದೆ. ಗೋಮಾಂಸ ಭಕ್ಷಣೆಯನ್ನು ಬಹುಸಂಖ್ಯಾತ (?) ಸಮುದಾಯದ ಧಾರ್ಮಿಕ ಸಂಕೇತದ ಮೇಲಿನ ದಾಳಿ ಎಂಬಂತೆ ಬಿಂಬಿಸಲಾಗುತ್ತಿದೆ. ಈ ಯತ್ನಕ್ಕೆ ಮತ್ತಷ್ಟು ಪ್ರೇರಣೆ ನೀಡುವಂತೆ ಅಲ್ಪ ಸಂಖ್ಯಾತ ಸಮುದಾಯದ ಕೆಲ ಪುಂಡರೂ ಅಮಾನವೀಯ ಸಾಹಸ ಮಾಡುತ್ತಿದ್ದಾರೆ. ಹಟ್ಟಿಯಿಂದ ಮತ್ತು ಹೊರಗಡೆ ಸಿಕ್ಕ ದನಗಳನ್ನು ಕದಿಯುವ ಹಾಗೂ ಅತ್ಯಂತ ಅಮಾನವೀಯವಾಗಿ ಪಶುಗಳ ಕೈಕಾಲುಕಟ್ಟಿ ಮಾರುತಿ ವ್ಯಾನ್ ಮುಂತಾದ ಮುಚ್ಚಿದ ವಾಹನಗಳಲ್ಲಿ ಸಾಗಿಸುವ ಸಾಹಸ ಮಾಡಿ ಸಿಕ್ಕಿಬಿದ್ದು ಕ್ಷುಲ್ಲಕ ಗಲಭೆಗಳಿಗೆ ಕಾರಣವಾಗುತ್ತಿದ್ದಾರೆ, ಆ ಮೂಲಕವಾಗಿ ವಿಚಾರ ಮಾಡದ ಹುಂಬ ಯುವಕರ ಅನಧಿಕೃತ ಹೆದ್ದಾರಿ ಕಾವಲುಪಡೆಗೆ ತರ್ಕ ಒದಗಿಸುತ್ತಿದ್ದಾರೆ.

ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ಈ ದೇಶದ ಅಲ್ಪಸಂಖ್ಯಾತರೂ ಸೇರಿದಂತೆ ಬಹು ಸಂಖ್ಯಾತ ಮಂದಿಯ ಆಚಾರ ಸಂಸ್ಕೃತಿಯಲ್ಲಿ ಭಿನ್ನತೆ ಇದ್ದರೂ ಆಹಾರ ಸಂಸ್ಕೃತಿಯಲ್ಲಿ ಹೆಚ್ಚು-ಕಡಿಮೆ ಸಾಮ್ಯತೆ ಇದೆ. ಹಾಗೆಯೇ ಸಾಮಾಜಿಕ, ಆರ್ಥಿಕ ಸ್ಥಿತಿಗಳಲ್ಲಿಯೂ ಈ ವರ್ಗ ಸಾಮ್ಯತೆ ತೋರುತ್ತದೆ. ಹೀಗೆ ಬಹಳಷ್ಟು ಮೂಲಭೂತ ವ್ಯತ್ಯಾಸಗಳಿಲ್ಲದೆ ಗಟ್ಟಿಗೊಂಡಂತಿದ್ದ ತಳ ಸಮುದಾಯದ ಒಗ್ಗಟ್ಟು ಸಾಂಸ್ಥಿಕ ಧರ್ಮದ ಪಟ್ಟಭದ್ರರಿಗೆ ಯಾವತ್ತೂ ಆತಂಕದ ವಿಷಯವೇ. ಈ ಒಗ್ಗಟ್ಟನ್ನು ಒಡೆಯದೇ ಅದು ಆಳಲಾಗದು. ತರಕಾರಿಯೇತರ ಆಹಾರ ಸಂಸ್ಕೃತಿಯ ಸಮುದಾಯಗಳೊಳಗೆ ಮಾಂಸ ಮೂಲದ ನೆಲೆಯಲ್ಲಿ ಈ ವೈಷಮ್ಯವನ್ನು ಬಿತ್ತಬೇಕಾದರೆ ಅದರ ಸಹಜ ಸಂಸ್ಕೃತಿಯ ನೆನಪುಗಳನ್ನು ಖಾಲಿ ಮಾಡಿ ಪ್ರತಿಗಾಮಿ ಮೌಲ್ಯಗಳನ್ನು ತುಂಬಿ ಭಾವನಾತ್ಮಕ ಹುಳಿ ಹಿಂಡಬೇಕು. ಗೋ ರಕ್ಷಣೆಯ ಮಹಾಭಿಯಾನ ಇಂತಹದೊಂದು ಯಶಸ್ವೀ ಕಾರ್ಯಾಚರಣೆ. ಇದರಲ್ಲಿ ದೊಣ್ಣೆ ಹಿಡಿದು ಹೆದ್ದಾರಿ ಕಾವಲು ಕಾಯುವ ಮಂದಿ ತಮ್ಮದೇ ಆಹಾರ ಸಂಸ್ಕೃತಿಯ ಮಾದರಿಯನ್ನು ಭಾವನಾತ್ಮಕ ಕಾರಣಕ್ಕಾಗಿ ವಿರೋಧಿಸುವವರು. ಹೀಗಾಗಿ ಇಲ್ಲಿಯ ನಿಜವಾದ ಅನಾಥರು ಮುಸಲ್ಮಾನರಲ್ಲ. ಹಾಗೆಯೇ ಪುರೋಹಿತಶಾಹಿಯ ನಿಜವಾದ ಗುರಿಗಳೂ ಅವರಲ್ಲ.

ಪುರೋಗಾಮಿಯಲ್ಲದ ಪ್ರತಿಗಾಮಿ ಶಕ್ತಿಯ ಒಂದೊಂದು ಆಟಕ್ಕೂ ನಿರ್ದಿಷ್ಟ ಉದ್ದೇಶಗಳು ಇರುತ್ತವೆ. ಅದು ದಿಢೀರ್ ಫಲಿತಾಂಶ ಬರದೆ ಹೋದಾಗ ಸೊರಗಿ ಹೋಗುವುದಿಲ್ಲ. ವಿಷವನ್ನು ಕಿಂಚಿತ್ ಮಾತ್ರವೇ ವರ್ಧಿಸುತ್ತ ಕಾರ್ಕೋಟಕವಾಗಿಸುವ ಎಲ್ಲಾ ತಂತ್ರಗಳು ಅದಕ್ಕೆ ಕರಗತ. ಈ ತಂತ್ರಗಳ ಸೋಲಿನಿಂದ ಅದು ಕಳೆದುಕೊಳ್ಳುವುದು ಏನೂ ಇಲ್ಲ. ಆದರೆ ಗೆಲುವಿನಿಂದ ಸಾಧಿಸುವ ಶಕ್ತಿ ಅಪಾರ. ಸಾಂಸ್ಥಿಕ ಧರ್ಮದ ಪಟ್ಟಭದ್ರ ನೆಲೆಯನ್ನು ಆಕ್ರಮಿಸಿಕೊಳುವ ಅದು ತನಗೆ ನಂಬಿಗೆ ಇಲ್ಲದೆಯೂ ಜನರನ್ನು ನಂಬುವಂತೆ ಪ್ರಬೋಧಿಸುತ್ತದೆ. ಜನರ ನಡುವೆ ಅಪನಂಬುಗೆ, ಆತಂಕ , ಅಭದ್ರತೆ ಇದ್ದಷ್ಟೂ ಅಧಿಕಾರ ರಾಜಕಾರಣದ ಕೇಂದ್ರಕ್ಕೆ ಸಾಗುವ ಅದರ ಯತ್ನ ಫಲಿಸುತ್ತದೆ. ತನ್ನ ತಂತ್ರದ ಭಾಗವಾಗಿ ತಮ್ಮ ಜೀವನ ಸಂಸ್ಕೃತಿಯ ಅಭಿನ್ನ ರೂಪಗಳಾದ ಆಹಾರ, ಆಚರಣೆ, ಉದ್ಯೋಗ, ಯೋಚನಾಕ್ರಮಗಳಲ್ಲಿ ಒಂದಾಗಿರುವ ಸಮುದಾಯವನ್ನು ಒಡೆದು ಪರಸ್ಪರ ಕೊಡು-ಕೊಡುಗೆಗಳನ್ನು ಇಲ್ಲವಾಗಿಸಿ ಅಕ್ಷರಶಃ ದ್ವೀಪಗಳಾಗಿಸುತ್ತದೆ. ಇಂತಹ ಸ್ಥಿತಿ0ುಲ್ಲಿ ಅನಾಥತೆಯನ್ನು ಅನುಭವಿಸುವ ಒಡೆದ ಅವಸ್ಥೆಯಲ್ಲಿರುವ ಸಮಾಜದ ಘಟಕಗಳು ಅನಿವಾರ್ಯವಾಗಿ ತಮ್ಮ ತಮ್ಮ ಸಾಂಸ್ಥಿಕ ಧರ್ಮದ ಅಧಿಕಾರ ರಾಜಕಾರಣದ ಕೇಂದ್ರದಲ್ಲಿರುವವರನ್ನು ಆಶ್ರಯಿಸುತ್ತಾ ಮತ್ತಷ್ಟು ಅನಾಹುತವನ್ನು ಆಹ್ವಾನಿಸುತ್ತವೆ.

ಬದಲಾಗಿ ಒಂದು ಆಹಾರಕ್ರಮ, ಜೀವನಕ್ರಮ, ಆರ್ಥಿಕ ಸಾಮ್ಯತೆಯ ಕಾರಣದಿಂದ ಒಟ್ಟಾಗಿ ದುಡಿಯಬಹುದಾಗಿದ್ದ "ಸಾಮಾನ್ಯವರ್ಗ" ಪುರೋಹಿತಶಾಹಿಯ ನಿಜವಾದ ಶತ್ರು. ಈ ವರ್ಗದ ದಿನಬದುಕಿನ ಸಮಸ್ಯೆಗಳು ದುಡಿತಕ್ಕೆ ಸಂಬಂಧಿಸಿದ್ದಾಗಿರದೆ, ಅವರದ್ದಲ್ಲದ ಭಾವನಾತ್ಮಕ ಸಂಗತಿಯದ್ದಾದಾಗ ಇವರು ಮೂಲಭೂತವಾದಿ ಲೂಟಿಕೋರರ ಆಜ್ಞಾಧಾರಿ ಪಡೆಯಂತೆ ಬಹುಸುಲಭವಾಗಿ ಬದಲಾಗಿ ಹೋಗುತ್ತಾರೆ.

ಹಟ್ಟಿಯಲ್ಲಿರುವ ಹಸುವನ್ನು ಬೆಳೆಸದೆ ಚಿತ್ರದ ಹಸುವಿಗೆ ಪೂಜೆ ಸಲ್ಲಿಸುತ್ತ ತಮ್ಮ ಹೊಲದ ದುಡಿಮೆಯ ಪರಿಕರವೊಂದನ್ನು ನಾಪತ್ತೆಯಾಗಿಸಿ ಬಹುರಾಷ್ಟ್ರೀಯ ಕಂಪೆನಿಗಳ ಜವಾನರಾಗುತ್ತಾರೆ.

ಒಂದು ಕಡೆಯಿಂದ ನಮ್ಮ ಗೋ ಸಂತತಿ ಇಂತಹ ವಾಸ್ತವಿಕ ಕಾರಣಗಳಿಂದ ದೂರವಾಗುತ್ತಿರುವ ಹೊತ್ತಿನಲ್ಲಿಯೇ ಆ ಸಮಸ್ಯೆಯ ಕಾರಣೀಕರ್ತರು ವಿಶ್ವ ಗೋ ಸಮ್ಮೇಳನ ನಡೆಸುವ ಜವಾಬ್ದಾರಿ ಹೊರುತ್ತಾರೆ. ಮೂಕ ಹಸುವೂ ಇವರಿಗೆ ಸರಕಾರದ ಖಜಾನೆಯ ಹಾಗೂ ಸಿರಿವಂತರ ತಿಜೋರಿಯ ಹಣದೊಂದಿಗೆ ಬಡವರ ಭಾವನೆಯನ್ನು ನಗದೀಕರಿಸುವ ಸಾಧನವಾಗುತ್ತದೆ. ಕೆಸರು ಮೆಟ್ಟಿ-ಮುಟ್ಟಿ ಹುಲ್ಲು ಬೆಳೆದು ಸಗಣಿ ಎತ್ತಿ ಹಸು ಸಾಕಬೇಕಾದ ಸಾಮಾನ್ಯ ಜನ ವರ್ಗಕ್ಕೆ ಕೆಸರು ಮತ್ತು ಮಣ್ಣಿನ ಅರಿವಿರದ ಈ ವರ್ಗ ಹಸು ಸಾಕಣೆಯ ಬೋಧನೆ ನೀಡುತ್ತದೆ. ನಮ್ಮ ಹಟ್ಟಿಗಳಲ್ಲಿಯ ಕೆಂಪಣ್ಣ, ಬುಡ್ಡಿಯರು ನಾಪತ್ತೆಯಾಗಿ ಹೋಗುತ್ತಿರುವ ಮತ್ತು ಹೊಸತಲೆಮಾರಿನ ಎಳೆಕರುಗಳು ಕೂಗದಂತಾಗಿರುವ ವಾಸ್ತವವನ್ನು ಬೂಟಾಟಿಕೆಯ ಮಾತಿನ ಮೂಲಕ ಮರೆಸಿ, ಯಾವುದೋ ಅನಿವಾರ್ಯ ಜವಾಬ್ದಾರಿಯೊಂದನ್ನು ಹೊತ್ತು ನಮ್ಮನ್ನು ಉದ್ಧರಿಸುತ್ತಿದೆ ಎಂಬ ಭಾವನೆಯನ್ನು ಬಿತ್ತುತ್ತದೆ.

ಪುರೋಗಾಮಿಯಲ್ಲದ ಪ್ರತಿಗಾಮಿ ಶಕ್ತಿಯ ಒಂದೊಂದು ಆಟಕ್ಕೂ ನಿರ್ದಿಷ್ಟ ಉದ್ದೇಶಗಳು ಇರುತ್ತವೆ. ಅದು ದಿಢೀರ್ ಫಲಿತಾಂಶ ಬರದೆ ಹೋದಾಗ ಸೊರಗಿ ಹೋಗುವುದಿಲ್ಲ. ವಿಷವನ್ನು ಕಿಂಚಿತ್ ಮಾತ್ರವೇ ವರ್ಧಿಸುತ್ತ ಕಾರ್ಕೋಟಕವಾಗಿಸುವ ಎಲ್ಲಾ ತಂತ್ರಗಳು ಅದಕ್ಕೆ ಕರಗತ. ಈ ತಂತ್ರಗಳ ಸೋಲಿನಿಂದ ಅದು ಕಳೆದುಕೊಳ್ಳುವುದು ಏನೂ ಇಲ್ಲ. ಆದರೆ ಗೆಲುವಿನಿಂದ ಸಾಧಿಸುವ ಶಕ್ತಿ ಅಪಾರ. ಸಾಂಸ್ಥಿಕ ಧರ್ಮದ ಪಟ್ಟಭದ್ರ ನೆಲೆಯನ್ನು ಆಕ್ರಮಿಸಿಕೊಳುವ ಅದು ತನಗೆ ನಂಬಿಗೆ ಇಲ್ಲದೆಯೂ ಜನರನ್ನು ನಂಬುವಂತೆ ಪ್ರಬೋಧಿಸುತ್ತದೆ. ಜನರ ನಡುವೆ ಅಪನಂಬುಗೆ, ಆತಂಕ , ಅಭದ್ರತೆ ಇದ್ದಷ್ಟೂ ಅಧಿಕಾರ ರಾಜಕಾರಣದ ಕೇಂದ್ರಕ್ಕೆ ಸಾಗುವ ಅದರ ಯತ್ನ ಫಲಿಸುತ್ತದೆ. ತನ್ನ ತಂತ್ರದ ಭಾಗವಾಗಿ ತಮ್ಮ ಜೀವನ ಸಂಸ್ಕೃತಿಯ ಅಭಿನ್ನ ರೂಪಗಳಾದ ಆಹಾರ, ಆಚರಣೆ, ಉದ್ಯೋಗ, ಯೋಚನಾಕ್ರಮಗಳಲ್ಲಿ ಒಂದಾಗಿರುವ ಸಮುದಾಯವನ್ನು ಒಡೆದು ಪರಸ್ಪರ ಕೊಡು-ಕೊಡುಗೆಗಳನ್ನು ಇಲ್ಲವಾಗಿಸಿ ಅಕ್ಷರಶಃ ದ್ವೀಪಗಳಾಗಿಸುತ್ತದೆ. ಇಂತಹ ಸ್ಥಿತಿಯಲ್ಲಿ ಅನಾಥತೆಯನ್ನು ಅನುಭವಿಸುವ ಒಡೆದ ಅವಸ್ಥೆಯಲ್ಲಿರುವ ಸಮಾಜದ ಘಟಕಗಳು ಅನಿವಾರ್ಯವಾಗಿ ತಮ್ಮ ತಮ್ಮ ಸಾಂಸ್ಥಿಕ ಧರ್ಮದ ಅಧಿಕಾರ ರಾಜಕಾರಣದ ಕೇಂದ್ರದಲ್ಲಿರುವವರನ್ನು ಆಶ್ರಯಿಸುತ್ತಾ ಮತ್ತಷ್ಟು ಅನಾಹುತವನ್ನು ಆಹ್ವಾನಿಸುತ್ತವೆ. ಈ ತೆರನಾದ ಅವಲಂಬನೆಯ ಸ್ಥಿತಿಯನ್ನೇ ಜಾಗತೀಕರಣವೂ ಅಪೇಕ್ಷಿಸುತ್ತದೆಯಾದ್ದರಿಂದ ಧರ್ಮದ ವಿಕೃತ ರೂಪವಾದ ಮೂಲಭೂತವಾದ ಮತ್ತು ಮನುಷ್ಯ ಬದುಕಿನ ಸಮಾನತೆಯ ಆಶಯವನ್ನೇ ನಾಶಗೊಳಿಸುವ ಜಾಗತೀಕರಣ / ಮುಕ್ತ ಆರ್ಥಿಕ ನೀತಿಗಳು ಅಣ್ಣ-ತಮ್ಮಂದಿರಿದ್ದಂತೆ. ವಿಷಾದದ ಸಂಗತಿ ಎಂದರೆ ಇಲ್ಲಿ ಬೇಟೆಗಾರರಾಗಿ ಪಳಗಿಸಲ್ಪಡುವವರೇ ಬೇಟೆಯ ಬಲಿಗಳಾಗುತ್ತಿರುವುದು. □

ಪ್ರತಿಭಟನೆಯ ಅಸ್ತ್ರವಾಗಿ ಅಹಿಂಸಾತ್ಮಕ ಹೋರಾಟ

> **ಸ್ವಾತಂತ್ರ್ಯ ಗಳಿಸಿದ ತರುವಾಯ ಅನೇಕ ರೀತಿಯ ಅನ್ಯಾಯಗಳ ವಿರುದ್ಧ ಸಂಘಟನೆಗಳು ಹಾಗೂ ಚಳುವಳಿಗಳು ಸತ್ಯಾಗ್ರಹದ ಹಾದಿ ಹಿಡಿದು, ಪ್ರತಿಭಟನೆಯನ್ನು ವ್ಯಕ್ತಪಡಿಸಿರುವುದಕ್ಕೆ ವಿಪುಲ ನಿದರ್ಶನಗಳಿವೆ. ಉಪವಾಸ ಸತ್ಯಾಗ್ರಹವನ್ನಂತೂ ಮಹಾತ್ಮಾ ಗಾಂಧೀಜಿಯವರು ಆಗಾಗ್ಗೆ ಪ್ರಯೋಗಿಸಿ ಅತ್ಯಂತ ಬಲಿಷ್ಠ ಕರಾಳ ಶಕ್ತಿಯೆನಿಸಿದ್ದ ಬ್ರಿಟೀಷರನ್ನು ಹಲವು ಬಾರಿ ಮಣಿಸಿದರು. ಅವರ ನೇತ್ರತ್ವವಿದ್ದ ಅಹಿಂಸಾ ಹೋರಾಟಗಳಿಗೆ ಅಪಾರ ಜನಬೆಂಬಲವಿತ್ತು. ಈ ಬಗೆಯ ಅಹಿಂಸಾತ್ಮಕ ಹೋರಾಟಗಳು ವಿಶ್ವದ ಇತರ ಕೆಲವು ದೇಶಗಳಿಗೂ ಮಾದರಿಯಾದವು. ದಕ್ಷಿಣ ಆಫ್ರಿಕಾದಲ್ಲಿ ನೆಲ್ಸನ್‌ಮಂಡೆಲಾ ಹಾಗೂ ಇತರರು, ಅಮೇರಿಕೆಯಲ್ಲಿ ನಿಗ್ರೋಗಳ ಹಕ್ಕುಗಳಿಗಾಗಿ ಶ್ರಮಿಸಿದ ಮಾರ್ಟಿನ್ ಲೂಥರ್ ಕಿಂಗ್ ಇವುಗಳಿಂದ ಪ್ರೇರೆಪಿತರಾದರು.**
>
> **○ ಮ.ಶ್ರೀ. ಮುರಳಿಕೃಷ್ಣ**

ಅಹಿಂಸಾತ್ಮಕ ಹೋರಾಟದಲ್ಲಿ ಪ್ರಮುಖ ಮಜಲು ಸತ್ಯಾಗ್ರಹ. ಮಹಾತ್ಮಾ ಗಾಂಧೀಜಿಯವರು ಪ್ರಬಲ ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಯಾಗಿದ್ದ ಬ್ರಿಟೀಷರನ್ನು ಸದೆಬಡಿಯುವುದರಲ್ಲಿ ಈ ಅಸ್ತ್ರವನ್ನು ಬಳಸಿದ್ದು ತಿಳಿದ ವಿಷಯವೇ ಸರಿ. ಸಮಾಜದ ಎಲ್ಲಾ ವರ್ಗಗಳ ಜನರನ್ನು ಒಗ್ಗೂಡಿಸಿ ನಮ್ಮ ರಾಷ್ಟ್ರದ ಸ್ವಾತಂತ್ರ್ಯ ಆಂದೋಲನದಲ್ಲಿ ತೊಡಗಿಸುವಂತೆ ಮಾಡಿದ್ದು ಈ ಅಹಿಂಸಾತ್ಮಕ ಹೋರಾಟದ ತಂತ್ರದ ವಿಶೇಷ ಆಯಾಮವೆನ್ನಬಹುದು. ಈ ಅಸ್ತ್ರವನ್ನು ಬಳಸುವಾಗ ತಾದ್ಯಾತ್ಮ, ಸಹನೆ ಹಾಗೂ ಸ್ಥೈರ್ಯ ಇರಬೇಕಾದದ್ದು ತೀರ ಅವಶ್ಯ. ಏಕೆಂದರೆ ಈ ಅಹಿಂಸಾತ್ಮಕ ಹೋರಾಟದಲ್ಲಿ ಬದ್ಧತೆಯಿಂದ ಭಾಗವಹಿಸುವ ವ್ಯಕ್ತಿಯು ಅನೇಕ ಅಗ್ನಿ ಪರೀಕ್ಷೆಗಳನ್ನು ಎದುರಿಸಲು ಸಿದ್ಧರಾಗಿರಬೇಕು. ಸಾರ್ವಜನಿಕ ಜೀವನದ ಜೊತೆಗೆ ವೈಯಕ್ತಿಕ ಬದುಕಿನಲ್ಲೂ ಅನೇಕ ಬಗೆಯ ಅಡಚಣೆಗಳೊಡನೆ ಮುಖಾಮುಖಿಯಾಗಬೇಕು. ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇಂಥಾ ಅಸಂಖ್ಯ ವ್ಯಕ್ತಿಗಳು ತಮ್ಮ ತ್ಯಾಗ, ಬಲಿದಾನಗಳಿಂದ ಅನನ್ಯ ಕೊಡುಗೆಗಳನ್ನು ನೀಡಿ ಇತಿಹಾಸದ ಕಾಲಗರ್ಭವನ್ನು ಸೇರಿಹೋಗಿದ್ದಾರೆ.

ಸ್ವಾತಂತ್ರ್ಯ ಗಳಿಸಿದ ತರುವಾಯ ಅನೇಕ ರೀತಿಯ ಅನ್ಯಾಯಗಳ ವಿರುದ್ಧ ಸಂಘಟನೆಗಳು ಹಾಗೂ ಚಳುವಳಿಗಳು ಸತ್ಯಾಗ್ರಹದ ಹಾದಿ ಹಿಡಿದು, ಪ್ರತಿಭಟನೆಯನ್ನು ವ್ಯಕ್ತಪಡಿಸಿರುವುದಕ್ಕೆ ವಿಪುಲ ನಿದರ್ಶನಗಳಿವೆ. ಉಪವಾಸ ಸತ್ಯಾಗ್ರಹವನ್ನಂತೂ ಮಹಾತ್ಮಾ ಗಾಂಧೀಜಿಯವರು ಆಗಾಗ್ಗೆ ಪ್ರಯೋಗಿಸಿ ಅತ್ಯಂತ ಬಲಿಷ್ಠ ಕರಾಳ ಶಕ್ತಿಯೆನಿಸಿದ್ದ ಬ್ರಿಟೀಷರನ್ನು ಹಲವು ಬಾರಿ ಮಣಿಸಿದರು. ಅವರ ನೇತ್ರತ್ವವಿದ್ದ ಅಹಿಂಸಾ ಹೋರಾಟಗಳಿಗೆ ಅಪಾರ ಜನಬೆಂಬಲವಿತ್ತು. ಎಂಬುದು ಮನನ ಯೋಗ್ಯ ಸಂಗತಿ.

ಈ ಬಗೆಯ ಅಹಿಂಸಾತ್ಮಕ ಹೋರಾಟಗಳು ವಿಶ್ವದ ಇತರ ಕೆಲವು ದೇಶಗಳಿಗೂ ಮಾದರಿಯಾದವು. ದಕ್ಷಿಣ ಆಫ್ರಿಕಾದಲ್ಲಿ ನೆಲ್ಸನ್‌ಮಂಡೇಲಾ ಹಾಗೂ ಇತರರು, ಅಮೇರಿಕೆಯಲ್ಲಿ ನಿಗ್ರೋಗಳ ಹಕ್ಕುಗಳಿಗಾಗಿ ಶ್ರಮಿಸಿದ ಮಾರ್ಟಿನ್ ಲೂಥರ್ ಕಿಂಗ್ ಹಾಗೂ ಇನ್ನೂ ಅನೇಕ ಆಂದೋಲನಗಳು ಮತ್ತು ನೇತಾರರು ಇವುಗಳಿಂದ ಪ್ರೇರೆಪಿತರಾದರು. ಕಾರ್ಮಿಕರು, ದಲಿತರು, ಮಹಿಳೆಯರು, ಬುಡಕಟ್ಟು ಜನರು ಹಾಗೂ ಇನ್ನೂ ಹತ್ತು ಹಲವು ಮಂದಿಗಳ ಕಲ್ಯಾಣಕ್ಕಾಗಿ ಮತ್ತು ಪರಿಸರ ಜಾಗೃತಿ, ಗ್ರಾಹಕರ ಹಿತರಕ್ಷಣೆ, ದಮನಕಾರಿ ಕಾನೂನುಗಳ ಜಾರಿ, ಶಾಂತಿ ಇತ್ಯಾದಿ ವಿಚಾರಗಳ ಬಗೆಗೆ ಅಹಿಂಸಾತ್ಮಕ ಹೋರಾಟದ ನಾನಾ ವಿಧಾನಗಳನ್ನು ಚಳುವಳಿಗಳು, ಸಂಘಟನೆಗಳು ಬಳಸುತ್ತ ಬಂದಿರುವುದನ್ನು ಕಾಣಬಹುದು.

ಆದರೆ ಉಪವಾಸ ಸತ್ಯಾಗ್ರಹದಂಥ ವಿಧಾನದ ಬಗೆಗೆ ಹರೀಶ್ ಸಾಲ್ವೆಯಂಥ ಖ್ಯಾತ ವಕೀಲರು ಕ್ಯಾತೆ ತೆಗೆದಿದ್ದಾರೆ. ನಿರಶನ ಪ್ರತಿಭಟನೆಯಲ್ಲಿ ತೊಡಗಿರುವ ವ್ಯಕ್ತಿ ಪ್ರಭುತ್ವ ತನ್ನ ವಿಚಾರವನ್ನು ಮನ್ನಿಸಲೇಬೇಕು, ತಪ್ಪಿದಲ್ಲಿ ತಾನು ಮರಣಕ್ಕೀಡಾಗುವೆನೆಂಬ ಬ್ಲಾಕ್‌ಮೈಲ್ ತಂತ್ರವನ್ನು ಬಳಸುವುದರಿಂದ ಈ ಹೋರಾಟದ ವಿಧಾನವನ್ನೇ ಕೈಬಿಡಬೇಕೆಂಬುದು ಅವರ ನಿಲುವು. ಇದಕ್ಕೆ ಪರ್ಯಾಯವಾಗಿ ನ್ಯಾಯಾಂಗದ ಚೌಕಟ್ಟಿನಲ್ಲೇ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕೆಂದು ಅವರ ದೃಢ ಅಭಿಪ್ರಾಯ. ಆದರೆ ವರ್ಷಗಳು ಉರುಳುತ್ತಿರುವಂತೆ ಸಮಾಜದ ಇತರ ಅಂಗಗಳಲ್ಲಿ ಕಂಡು ಬರುತ್ತಿರುವ ಮೌಲ್ಯದ ಕುಸಿತವು ನ್ಯಾಯಾಂಗದಲ್ಲೂ ಆಗಿದೆ. ಹಾಗೂ ಅದು ಎಲಿಟಿಸ್ಟ್ ಹಾದಿ ಹಿಡಿಯುತ್ತಿದೆ ಎಂಬ ದನಿಗಳೂ ಕೇಳಿಬರುತ್ತಿವೆ. 'ಬಂದ್' ಬಗೆಗೆ ಕೂಡ ಮಿಶ್ರ ಅಭಿಮತಗಳು ವ್ಯಕ್ತವಾಗಿರುವುದನ್ನು ಗಮನಿಸಬಹುದು. ನಮ್ಮ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ 'ಬಂದ್' ಬಗೆಗೆ ತನ್ನ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತ, ಅದರ ಆಚರಣೆಯಿಂದ ಆಗುವ ಹಾನಿಯ ಮೌಲ್ಯವನ್ನು 'ಬಂದ್' ಸಂಘಟಕರು ತುಂಬಿಕೊಡಬೇಕೆಂದು ತೀರ್ಪಿತ್ತಿರುವುದು ಗಮನಾರ್ಹ ಸಂಗತಿ. ರಾಜಕೀಯ ಪಕ್ಷಗಳು 'ಬಂದ್' ಅಸ್ತ್ರವನ್ನು ಸ್ವ-ಕೇಂದ್ರಿತ ಹಿತಾಸಕ್ತಿಗಳಿಗಾಗಿ ದುರುಪಯೋಗ ಪಡಿಸಿಕೊಂಡಿರುವ ನಿದರ್ಶನಗಳು ನಮ್ಮ ಮುಂದಿವೆ. ಅದರ ಆಚರಣೆಯಿಂದ ದಿನಗೂಲಿ ದುಡಿಮೆಗಾರರು ಹಾಗೂ ಸಮಾಜದ ಅಂಚಿನಲ್ಲಿರುವವರು ಹೆಚ್ಚು ಬಂಧಿತರಾಗುವವರು ಎಂಬುದು ವಾಸ್ತವ ಸಂಗತಿಯೇ ಸರಿ. ಆದರೆ ವರ್ಗ, ಸಮುದಾಯ ತನ್ನ ಉಳಿವಿಗಾಗಿ ಎಲ್ಲ ಹೋರಾಟದ ವಿಧಾನಗಳನ್ನು ಪ್ರಯೋಗಿಸಿ, ಆಳುವ ವರ್ಗದಿಂದ ರವಷ್ಟು ಪ್ರತಿಕ್ರಿಯೆ ಬಾರದಿದ್ದಾಗ, ನ್ಯಾಯಸಮ್ಮತ ಬೇಡಿಕೆಗಳಿಗಾಗಿ 'ಬಂದ್' ಆಚರಿಸಲೇಬೇಕಾದ ಪರಿಸ್ಥಿತಿ ಉದ್ಭವಿಸಿದರೆ, ಅದಕ್ಕೆ ಹೊಣೆಗಾರರು ಯಾರು? ಎಂಬ ಅಂಶದ ಬಗೆಗೆ ಮಾನವ ಹಕ್ಕು ಚಳುವಳಿಗಾರರು ಬೊಟ್ಟು ಮಾಡಿ ತೋರಿಸುತ್ತಾರೆ. ಈ ರೀತಿಯ ನಿರ್ಬಂಧ ವಿಧಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಗೇ ಮಾರಕವಲ್ಲವೇ? ಎಂಬುದು ಅವರ ಆತಂಕ.



ಅನೇಕ ಪುರೋಗಾಮಿ, ಜನಪರ ಆಂದೋಲನಗಳು ತೃಣಮೂಲ ಮಟ್ಟದಲ್ಲಿ ಅಹಿಂಸಾತ್ಮಕ ಹೋರಾಟಗಳ ಅನೇಕ ಕಾರ್ಯ ತಂತ್ರಗಳನ್ನು ರೂಪಿಸಿ, ಜಯ-ಅಪಜಯಗಳನ್ನು ಪಡೆದಿವೆ. ಆದರೆ ನಮ್ಮ ರಾಷ್ಟ್ರದಲ್ಲಿ ರಾಜ್ಯಪಾಲನೆ (Governance) ಕುಸಿಯುತ್ತಿರುವುದು ಶುಭಸೂಚಕ ಬೆಳವಣಿಗೆಯಲ್ಲ. ಪ್ರಜೆಗಳ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಕಿಂಚಿತ್ತೂ ಗೌರವ ಕೊಡದೆ, ಅವರೊಡನೆ ಯಾವ ರೀತಿಯ ಸಂವಾದ ನಡೆಸದೆ, ಅವರನ್ನು ಸಂಪೂರ್ಣವಾಗಿ ಕಡೆಗಣಿಸಿ ಅನೇಕ ಯೋಜನೆಗಳು ಜಾರಿಯಾಗುತ್ತಿವೆ. ಇಂತಹ ಜನವಿರೋಧಿ ಕಾರ್ಯಕ್ರಮಗಳಿಗೆ ಹೆಚ್ಚಾಗಿ ಬಲಿಯಾಗುತ್ತಿರುವವರು ಸಮಾಜದ ಕೆಳ ಪದರುಗಳ ವ್ಯಕ್ತಿಗಳು ಎಂಬುದು ಗಮನೀಯ ಅಂಶ.

ಆದುದರಿಂದ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ತನ್ನ ನೈಜಾರ್ಥದಲ್ಲಿ ಸ್ಥಾಪನೆಗೊಂಡಿಲ್ಲ ಎಂದು ಅಪಸ್ವರ ಎತ್ತುವವರು ಸಾಕಷ್ಟು ಮಂದಿ ಇದ್ದಾರೆ. ಜನರ ಹೋರಾಟಗಳಿಂದ ಮಾತ್ರ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ನ್ಯೂನತೆಗಳನ್ನು ಶಮನಗೊಳಿಸಬಹುದು. ಅಹಿಂಸಾತ್ಮಕ ಹೋರಾಟಗಳಿಂದ ಪ್ರಜಾಪ್ರಭುತ್ವ ಕ್ರಾಂತಿ (Democratic Revoletion) ಸಂಭವಿಸುವುದರ ಬಗೆಗೆ ನಕ್ಸಲ್‌ವಾದಿಗಳು ಹಾಗೂ ಇತರರು ತೀವ್ರ ಸಂಶಯ ವ್ಯಕ್ತಪಡಿಸುತ್ತಾರೆ. ಆದರೆ ಯಾವುದೇ ಕ್ರಾಂತಿ ಸಂಭವಿಸಲು ಆಯಾಯ ಸಮಾಜದ ಜನರ ಸಂಪೂರ್ಣ ಪ್ರಾತಿನಿಧ್ಯವಿರಬೇಕೆಂಬುದರ ಕುರಿತು ಇತಿಹಾಸದಲ್ಲಿ ಅನೇಕ ಉದಾಹರಣೆಗಳಿವೆ. ಅವರು ಸಾಮಾಜಿಕ, ರಾಜಕೀಯ, ಸಾಸ್ಕೃತಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಜರುಗುವ ಪಲ್ಲಟಗಳಲ್ಲಿ ಪ್ರಮುಖ ಪಾತ್ರಧಾರಿಗಳು ಎಂಬುದನ್ನು ಮರೆಯಬಾರದು. ಹಾಗೆಯೇ ಅಹಿಂಸಾತ್ಮಕ ಹೋರಾಟಗಳಿಗೂ ಆಧಾರಸ್ತಂಭರು. □

ಪ್ರಮಾಣ ವಚನ- ನೆಲೆ ಬೆಲೆ

ಜ.ಹೊ. ನಾರಾಯಣಸ್ವಾಮಿ

ಪ್ರಮಾಣವಚನಕ್ಕೆ ಒಂದು ಪಾವಿತ್ರ್ಯವಿದೆ, ಅದನ್ನು ಗೌರವಿಸಬೇಕು. ಅದರ ಬಗ್ಗೆ ಪೂಜ್ಯಭಾವನೆ ಇರಬೇಕು. ಬೋಧಿಸುವವರ ಹಾಗೂ ಸ್ವೀಕರಿಸುವವರ ಹೃದಯದಲ್ಲಿ ನಂಬಿಕೆ ನೆಲೆ ನಿಂತಿರಬೇಕು, ಪವಿತ್ರ ಭಾವನೆ ಇರಬೇಕು. ಆದರೆ ಈ 'ಪ್ರಮಾಣವಚನ' ಎಂಬುದು ಆ ನಂಬಿಕೆ ಹಾಗೂ ಪಾವಿತ್ರ್ಯದಿಂದ ದೂರ ಉಳಿದು ಕೇವಲ ಔಪಚಾರಿಕ ಕ್ರಿಯೆಯಾಗುತ್ತಿರುವದು ಸ್ವೇಚ್ಛಾಚಾರಕ್ಕೆ ಹಾಗೂ ದುರಂತಗಳಿಗೆ ಕಾರಣವಾಗುತ್ತಿದೆ. ಕರ್ನಾಟಕ ಉಚ್ಛನ್ಯಾಯಾಲಯದ ನ್ಯಾಯಾಧೀಶರುಗಳೆ ಕೆಲವು ಸಂದರ್ಭಗಳಲ್ಲಿ ಸುಳ್ಳು ಪ್ರಮಾಣಪತ್ರಗಳನ್ನು ಸಲ್ಲಿಸಿ ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾದ ಉದಾಹರಣೆಗಳಿವೆ. ನ್ಯಾಯಾಧೀಶರಾಗಿ ನೇಮಕವಾಗುವಾಗ ಪ್ರಮಾಣ ವಚನ ಸ್ವೀಕರಿಸಿಯೇ ಆ ಪವಿತ್ರ ಸ್ಥಾನವನ್ನು ಅಲಂಕರಿಸಿದವರು.

ಮನುಷ್ಯನನ್ನು ನಿಜದ ನೆಲೆಯಲ್ಲಿ ನಿಲ್ಲಿಸಿ ಅವನಿಂದ ಸತ್ಯ [illegible] ಮಾಡಿಕೊಂಡು ಬಂದಿರುವ ಪ್ರಯತ್ನಗಳು ನೂರಾರು. ಅವರಲ್ಲಿ ಈ ಪ್ರಮಾಣವಚನ ಬೋಧನೆಯೂ ಒಂದು. ಸತ್ಯವನ್ನು ಹೊರಗೆಡುವಲು ಸ್ವರ್ಗ-ನರಕಗಳ ಕಲ್ಪನೆಯನ್ನು ಹುಟ್ಟುಹಾಕಿ ಸತ್ಯವನ್ನು ನುಡಿದರೆ ಸ್ವರ್ಗ, ಸುಳ್ಳು ನುಡಿದರೆ ನರಕ ಎಂದೂ ಪ್ರಚುರಪಡಿಸಲಾಗಿದೆ.

ಮನುಷ್ಯನ ಅಂತಸಾಕ್ಷಿಗೆ ಅನುಗುಣವಾಗಿ ನುಡಿಯಲು ಪ್ರೇರಣೆಯಾದ ಈ ಪ್ರಮಾಣವಚನ 'ಪ್ರಮಾಣ' ಮತ್ತು 'ವಚನ' ಎಂಬ ಎರಡು ಪದಗಳಿಂದ ಕೂಡಿದೆ. ಈ ವಿಭಿನ್ನ ಪದಗಳು ತಮ್ಮದೇ ಆದ ಅರ್ಥ ವ್ಯಾಪ್ತಿಯನ್ನೂ ಹೊಂದಿವೆ.

'ಪ್ರಮಾಣ' ಒಂದರ ಆಧಾರದ ಮೇಲೆ ಕೊಡುವಂಥದ್ದು, 'ವಚನ'-ಕೊಡುವ ವ್ಯಕ್ತಿಯ ಅಂತ:ಸಾಕ್ಷಿಗೆ ಸಂಬಂಧಪಟ್ಟದ್ದು. ಆ ಕಾರಣದಿಂದಲೇ 'ದೇವರ' ಮೇಲೆ ಪ್ರಮಾಣಮಾಡಿ ವಚನ ಕೊಡುವದು ರೂಢಿಯಲ್ಲಿ ಬಂದಿದೆ.

ಈ ಯಮಳ ಪದಗಳು ಒಂದಾಗಿ ಸೇರಿ ಮನುಷ್ಯನ ಅಂತಃಸಾಕ್ಷಿಗೆ ಮತ್ತೊಂದು ಗುರುತರ ಸ್ಥಾನವನ್ನು ತಂದುಕೊಡುವ ಈ ಪ್ರಮಾಣ ವಚನ, ಅದರ ಉದ್ದೇಶ, ವ್ಯಾಪ್ತಿ ಇತ್ಯಾದಿಗಳ ಅಧ್ಯಯನ ಹಾಗೂ ಅರಿವು ಇಂದು ಎಂದರೆ ಸಾಮಾಜಿಕವಾಗಿ ಮನುಷ್ಯನ ಅಂತ:ಸಾಕ್ಷಿಯೆ ಇಲ್ಲವಾಗುತ್ತಿದೆ ಎನ್ನುವ ಈ ಪರ್ವ ಕಾಲದಲ್ಲಿ ಅತ್ಯಂತ ಅನಿವಾರ್ಯವೂ ಅಗತ್ಯವೂ ಆಗಿದೆ. ಏಕೆಂದರೆ ತ್ರೇತೆ ವರ್ಗ ಸಂಘರ್ಷದ, ದ್ವಾಪರ ದಾಯಾದಿಗಳ ನಡುವಿನ ಸಂಘರ್ಷದ ಯುಗಗಳಾದರೆ ಕಲಿಯುಗ ಕ್ಷಣ ಕ್ಷಣದಲ್ಲಿ ಅಂತ:ಸಾಕ್ಷಿಯನ್ನು ಕೊಲ್ಲುವ ಯುಗವಾಗಿ ಪರಿಣಮಿಸಿದೆ.

ಕ್ರಿಪೂ. ೪೬೦-೩೭೦ ರಲ್ಲಿ ಜೀವಿಸಿದ್ದ 'ಹಿಪ್ಪೋಕ್ರೇಟ್ಸ್' ಗ್ರೀಸ್ ದೇಶದವನು. ವೈದ್ಯ ವಿಜ್ಞಾನದ ಜನಕ ಎಂದು ಆತನನ್ನು ಕರೆಯಲಾಗುತ್ತದೆ. ಖಾಯಿಲೆಗಳಿಗೆ ದೈವಶಕ್ತಿಯ ಕಾರಣ ಎಂದು ನಂಬಿದ್ದ ಚರ್ಚಿನ ಪಾದ್ರಿಗಳ ನಂಬಿಕೆಯನ್ನು ಬುಡಮೇಲು ಮಾಡಿದವ. ಪಾದ್ರಿಗಳ ವಲಯದಿಂದ ಮದ್ದನ್ನು ಮುಕ್ತಗೊಳಿಸಿದವ. ಅಂತಃಸಾಕ್ಷಿಯ ಜಾಗೃತಿಗೆ ಪ್ರೇರಣೆ ನೀಡುವ ಪ್ರಮಾಣ ವಚನವನ್ನು ಮೊಟ್ಟಮೊದಲಿಗೆ ಬೋಧಿಸಿ ಜಾರಿಗೆ ತಂದ ಕೀರ್ತಿ ಇವನದು.

ಪ್ರಜಾಪ್ರತಿನಿಧಿಗಳಿಗೆ, ಉನ್ನತ ಹುದ್ದೆಯನ್ನು ಅಲಂಕರಿಸುವವರಿಗೆ, ವಕೀಲಿ, ವೈದ್ಯಕೀಯ ಮುಂತಾದ ವೃತ್ತಿನಿರತರಿಗೆ 'ಪ್ರಮಾಣವಚನ' ವನ್ನು ಬೋಧಿಸಲಾಗುತ್ತದೆ. ರೋಟರಿ ಮುಂತಾದ ಸಂಸ್ಥೆಗಳೂ ತಮ್ಮ ಪದಾಧಿಕಾರಿಗಳಿಗೆ ಪ್ರಮಾಣವಚನವನ್ನು ಬೋಧಿಸುತ್ತವೆ. ರಾಷ್ಟ್ರರಕ್ಷಣೆ ಮಾಡುವ ಅಧಿಕಾರಿಗಳು, ಸೈನಿಕರೂ ಇದರಿಂದ ಹೊರತಾಗಿಲ್ಲ.

ರಾಷ್ಟ್ರದ ಉನ್ನತ ಹುದ್ದೆಗಳನ್ನು ಅಲಂಕರಿಸುವವರಿಗೆ, ಪ್ರಜಾಪ್ರತಿನಿಧಿಗಳಿಗೆ 'ಪ್ರಮಾಣವಚನ'ಬೋಧಿಸುವ ವಿಧಿವಿಧಾನಗಳನ್ನು ಹಾಗೂ ಮಾದರಿಯನ್ನು ನಮ್ಮ ಸಂವಿಧಾನದಲ್ಲಿ ನಮೂದಿಸಲಾಗಿದೆ. ೬೦ನೇ ಪರಿಚ್ಛೇದದಲ್ಲಿ ರಾಷ್ಟ್ರಪತಿಗೆ, ೬೯ನೆ ಪರಿಚ್ಛೇದದಲ್ಲಿ ಉಪರಾಷ್ಟ್ರಪತಿಗೆ, ೯೯ನೇ ಪರಿಚ್ಛೇದದಲ್ಲಿ ಲೋಕಸಭಾ ಸದಸ್ಯರಿಗೆ, ೧೫೯ನೇ ಪರಿಚ್ಛೇದದಲ್ಲಿ ರಾಜ್ಯಪಾಲರಿಗೆ, ೧೮೮ನೇ ಪರಿಚ್ಛೇದದಲ್ಲಿ ಶಾಸಕರಿಗೆ, ೨೧೯ನೇ ಪರಿಚ್ಛೇದದಲ್ಲಿ ನ್ಯಾಯಾಧೀಶರಿಗೆ ಇತ್ಯಾದಿ ನಿಗದಿಪಡಿಸಲಾಗಿದೆ. ಅಲ್ಲದೆ ಸಂವಿಧಾನದ ૩ನೇ ಅನುಸೂಚಿಯಲ್ಲಿ ಪ್ರಮಾಣವಚನದ ಮಾದರಿಗಳನ್ನು ಕೊಡಲಾಗಿದೆ.

ಪ್ರಮಾಣವಚನಕ್ಕೆ ಒಂದು ಪಾವಿತ್ರ್ಯವಿದೆ, ಅದನ್ನು ಗೌರವಿಸಬೇಕು. ಅದರ ಬಗ್ಗೆ ಪೂಜ್ಯಭಾವನೆ ಇರಬೇಕು. ಬೋಧಿಸುವವರ ಹಾಗೂ ಸ್ವೀಕರಿಸುವವರ ಹೃದಯದಲ್ಲಿ ನಂಬಿಕೆ ನೆಲೆ ನಿಂತಿರಬೇಕು, ಪವಿತ್ರ ಭಾವನೆ ಇರಬೇಕು. ಆದರೆ ಈ 'ಪ್ರಮಾಣವಚನ' ಎಂಬುದು ಆ ನಂಬಿಕೆ ಹಾಗೂ ಪಾವಿತ್ರ್ಯದಿಂದ ದೂರ ಉಳಿದು ಕೇವಲ ಔಪಚಾರಿಕ ಕ್ರಿಯೆಯಾಗುತ್ತಿರುವದು ಸ್ವೇಚ್ಛಾಚಾರಕ್ಕೆ ಹಾಗೂ ದುರಂತಗಳಿಗೆ ಕಾರಣವಾಗುತ್ತಿದೆ. ಕರ್ನಾಟಕ ಉಚ್ಛನ್ಯಾಯಾಲಯದ ನ್ಯಾಯಾಧೀಶರುಗಳೆ ಕೆಲವು ಸಂದರ್ಭಗಳಲ್ಲಿ ಸುಳ್ಳು ಪ್ರಮಾಣಪತ್ರ ಗಳನ್ನು ಸಲ್ಲಿಸಿ ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾದ ಉದಾಹರಣೆಗಳಿವೆ. ನ್ಯಾಯಾಧೀಶರಾಗಿ ನೇಮಕವಾಗುವಾಗ ಪ್ರಮಾಣ ವಚನ ಸ್ವೀಕರಿಸಿಯೇ ಆ ಪವಿತ್ರ ಸ್ಥಾನವನ್ನು ಅಲಂಕರಿಸಿದವರು.

ಇನ್ನೂ ರಾಜಕಾರಣಿಗಳ ವಿಚಾರವನ್ನಂತೂ ಹೇಳಲೇಬೇಕಾಗಿಲ್ಲ. ರಕ್ಷಣಾಧಿಕಾರಿಗಳೂ ರಾಷ್ಟ್ರದ ಗೌಪ್ಯಗಳನ್ನು ಅನ್ಯ ರಾಷ್ಟ್ರಗಳಿಗೆ ರವಾನಿಸುವ ಉದಾಹರಣೆಗಳಿಗೆ ಕೊರತೆಇಲ್ಲ.ಅಂತಃಸಾಕ್ಷಿಗೆ ವಿರುದ್ಧವಾಗಿ ಅಧಿಕಾರಿಗಳು ಅಧಿಕಾರ ದುರುಪಯೋಗ ಪಡಿಸಿಕೊಳ್ಳುತ್ತಿರುವುದಂತೂ ಸ್ಪಟಿಕ ಸ್ಪಷ್ಟವಾಗಿದೆ. ಹಾಗಾದರೆ ಈ ಪ್ರಮಾಣ ವಚನದ ನೆಲೆ ಬೆಲೆ ಏನು?

ಬ್ರಿಟೀಷರ ಕಾಲದಲ್ಲಿ 'ದಿ ಇಂಡಿಯನ್ ಓತ್'ಆಕ್ಟ ೧೮೭೩ರಲ್ಲಿ ಜಾರಿಗೆ ಬಂತು. ಅದನ್ನು ಸ್ವತಂತ್ರ ಭಾರತ ನಿರಸನಗೊಳಿಸಿ ೧೯೬೯ ರಲ್ಲಿ 'ದಿ ಇಂಡಿಯನ್ ಓತ್ ಆಕ್ಟ' ಅನ್ನು ಜಾರಿಗೆ ತಂದಿದೆ. ಸದರಿ ಕಾಯ್ದೆಯಲ್ಲಿ ಪ್ರಮಾಣ ವಚನದ ಬಗ್ಗೆ ಮಾಹಿತಿ ಇದ್ದು ಸಾಕ್ಷಿಗಾರ, ನ್ಯಾಯಾಧೀಶ, ಪ್ರಮಾಣ ಪತ್ರಿಕೆ ಹಾಜರ್ಪಡಿಸುವನು. ದುಭಾಷಿ ಇವರುಗಳು ಯಾವ ಯಾವ ರೀತಿ ಪ್ರಮಾಣ ವಚನ ಸ್ವೀಕರಿಸಬೇಕು ಎಂಬುದನ್ನು ಆಯಾಯ ರಾಜ್ಯಗಳ ಉಚ್ಛ ನ್ಯಾಯಾಲಯಗಳಿಗೆ ನಿಗದಿಪಡಿಸಲಾಗಿದೆ.

ಎಂಬತ್ತರ ದಶಕದಲ್ಲಿ ದೆಹಲಿಯಲ್ಲಿ ಆದ ಅಂಕುರ ಪ್ರಾಯದ ಒಂದು ಘಟನೆ ಸರ್ವೋಚ್ಛ ನ್ಯಾಯಾಲಯದಿಂದ ಹಿಡಿದು ರಾಷ್ಟ್ರದ



ಎಲ್ಲ ನ್ಯಾಯವಾದಿಗಳು ಮುಷ್ಕರ ಹೂಡುವಂತೆ ಮಾಡಿದ ವಿವಾದಗಳಿಗೆ ಎಡೆಮಾಡಿತು. ಅದಕ್ಕೆ ಹಿನ್ನೆಲೆ ಎಂದರೆ ವಕೀಲರಾದ ರಾಜೇಶ್‌ಕುಮಾರ್ ಅಗ್ನಿಹೋತ್ರಿ ದೆಹಲಿ ಹೆಣ್ಣುಮಕ್ಕಳ ಕಾಲೇಜೊಂದರ ವಿದ್ಯಾರ್ಥಿನಿಯ ಕೈ ಚೀಲವನ್ನು ಕದ್ದ ಎನ್ನುವ ಕಾರಣಕ್ಕಾಗಿ ಪೋಲೀಸ್ ಅಧಿಕಾರಿಯಾಗಿದ್ದ ಕಿರಣ್‌ಬೇಡಿ ಆತನಿಗೆ ಕೈಕೋಳ ತೊಡಿಸಿ ಕರೆದುಕೊಂಡು ಹೋದರು ಎನ್ನುವದು.

ಈ ಘಟನೆ ವಕೀಲ ಕಳ್ಳತನ ಮಾಡಿದನೆ ಎನ್ನುವ ಪ್ರಶ್ನೆಗಿಂತ ಹೆಚ್ಚಾಗಿ ಆತನಿಗೆ ಕೈಕೋಳ ತೊಡಿಸಿದ ಕಿರಣ್‌ಬೇಡಿಯ ಕ್ರಮದ ಬಗ್ಗೆ ಒತ್ತು ಕೊಟ್ಟು ನ್ಯಾಯವಾದಿಗಳ ಹಾಗೂ ಪೋಲೀಸ್ ಅಧಿಕಾರಿಯ ನಡುವಿನ ಗೌರವದ ಪ್ರಶ್ನೆಯಾಗಿ ಉದ್ಭವಿಸಿತು. ನಂತರ ವಕೀಲರಲ್ಲಿ ಎರಡು ಗುಂಪುಗಳಾಗಿ ಪ್ರತಿಭಟನೆ ಒಂದು ಹಂತಕ್ಕೆ ತಲುಪಿದ ಮೇಲೆ ಸರ್ಕಾರ ಕಿರಣ್‌ಬೇಡಿಯ ಕ್ರಮ ಕುರಿತು ಆಕೆಯ ಮೇಲೆ ಹಾಗೂ ಸಬ್ ಇನ್ಸಪೆಕ್ಟರ್ ಜಿಂದರ್‌ಸಿಂಗ್ ಮೇಲೆ ತನಿಖೆ ಮಾಡುವಂತೆ ದೆಹಲಿಯ ಉಚ್ಛ ನ್ಯಾಯಾಲಯದ ನ್ಯಾಯಾಧೀಶರಾದ ಡಿ.ಪಿ.ವಾದ್ವ ಅವರುಗಳನ್ನು ನೇಮಿಸಿ ಆಯೋಗವನ್ನು ರಚಿಸಿತು. ಆಯೋಗದ ಮುಂದೆ ಬಂದ ಕಿರಣ್‌ಬೇಡಿ ಹಾಗೂ ಜಿಂದರ್‌ಸಿಂಗ್ ಸಾಲಿಸಿಟರ್ ಜನರಲ್ ಆದ ಜಿ.ರಾಮಸ್ವಾಮಿಯ ಸಲಹೆಯ ಮೇರೆಗೆ ಪ್ರಮಾಣ ವಚನ ಸ್ವೀಕರಿಸಲು ನಿರಾಕರಿಸಿದರು. ಅದಕ್ಕೆ ಕಾರಣ ಆಯೋಗದ ಮುಂದೆ ಪ್ರಮಾಣ ಮಾಡಿ ನಾವು ಹೇಳಿಕೆ ಕೊಡಬೇಕೆನ್ನುವದು ಕ್ರಮವಲ್ಲ, ಯಾರು ನಮ್ಮ ಮೇಲೆ ಆರೋಪ್ ಹೊರಿಸಿದ್ದಾರೆಯೋ ಮೊದಲು ಅವರು ಹೇಳಿಕೆ ನೀಡಲಿ ಎಂದು. ಕಿರಣ್‌ಬೇಡಿ ಹಾಗೂ ಸಿಂಗ್ ನಿರಾಕರಿಸಿದ್ದರ ಮೇಲೆ ಆಯೋಗ ಅವರ ಮೇಲೆ ಮೊಕದ್ದಮೆ ಹೂಡಲು ಆದೇಶಿಸಿತು. ಆ ಆದೇಶದ ಮೇಲೆ ಕಿರಣ್‌ಬೇಡಿ ಹಾಗೂ ಸಿಂಗ್ ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದರು.

ಸರ್ವೋಚ್ಛ ನ್ಯಾಯಾಲಯದ ಮೂರು ಜನ ನ್ಯಾಯಾಧೀಶರನ್ನೊಳಗೊಂಡ ಬೆಂಚ್‌ನಲ್ಲಿದ್ದ ನ್ಯಾಯಾಧೀಶರಾದ ಇ.ಎಸ್. ವೆಂಕಟರಾಮಯ್ಯ ಇಲ್ಲಿ ಪಕ್ಷಪಾತವಾಗಿದೆ. ಕಿರಣ್‌ಬೇಡಿ ಮತ್ತು ಸಿಂಗ್ ಅವರನ್ನು ಪಾಟಿಸವಾಲು ಮಾಡುವ ಮುನ್ನ ಮತ್ತೊಂದು ಪಕ್ಷದ ಪೂರ್ಣ ಹೇಳಿಕೆಯನ್ನು ಪಡೆದುಕೊಳ್ಳಬೇಕೆಂದು ಆಜ್ಞೆ ಮಾಡಿ ಕಿರಣ್‌ಬೇಡಿ ಹಾಗೂ ಸಿಂಗ್ ಅವರ ಮೇಲ್ಮನವಿಯನ್ನು ಪುರಸ್ಕರಿಸಿತು.

ಆದರೆ ಎಸ್.ಎನ್. ಗೋಸ್ವಾಮಿ ಅವರು ಆಯೋಗಕ್ಕೆ ರಾಜೀನಾಮೆ ಇತ್ತರು.ಅದಕ್ಕೆ ಕಾರಣ ಸರ್ವೋಚ್ಛ ನ್ಯಾಯಾಲಯ ತನ್ನ ಆಜ್ಞೆಯಲ್ಲಿ 'ಆಯೋಗದ ಆಜ್ಞೆಯನ್ನು ಅನಕ್ಷರನಾದ ಒಬ್ಬ ಹಳ್ಳಿಯ ಮುಖ್ಯಸ್ಥನೂ ಕೂಡ ಆಚೆ ಎಸೆಯುತ್ತಿದ್ದ'ಎಂದು ಟೀಕೆ ಮಾಡಿದೆ ಎಂದು. ಈ ನಡುವೆ ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರಾದ ಇ.ಎಸ್. ವೆಂಕಟರಾಮಯ್ಯ ಎನ್.ಎಸ್. ಗೋಸ್ವಾಮಿಯವರಿಗೆ ಒಂದು ಬಹಿರಂಗ ಪತ್ರ ಬರೆದು ಆ ಟೀಕೆಯ ಉದ್ದೇಶ ಅವಮಾನಿಸುವದಲ್ಲ. ಆ ಆಜ್ಞೆಯನ್ನು ಹಾಗೆ ಭಾವಿಸಬಾರದೆಂದೂ, ಅದರಿಂದ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುವದಾಗಿ ಬರೆದು ಒಂದು ಉದಾತ್ತ ಪರಂಪರೆಯನ್ನು ಹುಟ್ಟು ಹಾಕಿದರು.

ಪ್ರಮಾಣ ವಚನಕ್ಕೆ ಸಂಬಂಧಿಸಿದಂತೆ ಭಾರತ ದಂಡ ಸಂಹಿತೆ ೧೮೬೦, ಪ್ರಕರಣ ೫೧ರಲ್ಲಿ ಉಲ್ಲೇಖವಿದೆ. ಸಾರ್ವಜನಿಕ ಕೆಲಸವನ್ನು ನಿರ್ವಹಿಸುವ ಅಧಿಕಾರಿಯ ಅಥವಾ ನ್ಯಾಯಾಂಗದಲ್ಲಿ ನ್ಯಾಯ ವಿತರಣೆ ಮಾಡುವ ನ್ಯಾಯಾಧೀಶರ ಮುಂದೆ ಪ್ರಾಮಾಣಿಕವಾಗಿ ಅಥವಾ ಪ್ರಜ್ಞಾಪೂರ್ವಕವಾಗಿ ಹೇಳಬೇಕೆನ್ನುವ ನಿಯಮವಿದೆ. ಒಂದು ಕಾಲದಲ್ಲಿ ಪ್ರಮಾಣ ವಚನವನ್ನು ಬೋಧಿಸುವಾಗ ಗ್ರಂಥಗಳನ್ನು ಅಥವಾ ಅವರವರ ನಂಬಿಕೆಗೆ ಆಧಾರವಾಗಿದ್ದರ ಮೇಲೆ ಪ್ರಮಾಣ ಮಾಡಿಸುವ ಪದ್ಧತಿ ಇದ್ದುದು ಕಂಡುಬರುತ್ತದೆ. ಅದರ ಉದ್ದೇಶ ಸತ್ಯವನ್ನು ಅಭಿವ್ಯಕ್ತಿಸಲು ಪೂರಕವಾಗುವ ಒಂದು ರೀತಿಯ ಉದ್ದೀಪನೆ. ಆ ಹಿನ್ನೆಲೆಯಲ್ಲಿ ಅವರವರಿಗೆ ಪಾವಿತ್ರ್ಯವೆಂದು ಪರಿಗಣಿತವಾಗಿದ್ದರ ಮೇಲೆ ಪ್ರಮಾಣ ಮಾಡಿಸುವದು. ಹೀಗಾಗಿ ಕ್ರಿಶ್ಚಿಯನ್ನರು ಬೈಬಲ್ ಮೇಲೆ ಮಾಡಿಸಿದರೆ ಮುಸಲ್ಮಾನರು ಕುರಾನ್ ಮೇಲೆ ಸ್ವೀಕರಿಸುವ ರೂಢಿ ಇತ್ತು.

ನ್ಯಾಯಾಲಯಗಳಲ್ಲಿ ಸಾಕ್ಷ್ಯ ನೀಡಲು ಬರುವ ಸಾಕ್ಷಿಗಳಿಗೆ ನಿಗದಿ ಪಡಿಸಿರುವ ಪ್ರಮಾಣ ವಚನ ಮಾದರಿ ಇಂತಿದೆ; "ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯವಾಗಿ ಹೇಳುತ್ತೇನೆ, ಸತ್ಯವನ್ನಲ್ಲದೆ ಬೇರೆನೂ ಹೇಳುವದಿಲ್ಲ, ನಾನು ಹೇಳುವುದೆಲ್ಲಾ ಸತ್ಯ". ಹಾಗೆ ಮತ್ತೊಂದು ಮಾದರಿಯಲ್ಲಿ; ಸತ್ಯವಾಗಿ ಹೇಳುತ್ತೇನೆ, ಸತ್ಯವಲ್ಲದೆ ಬೇರೇನೂ ಹೇಳುವದಿಲ್ಲ, ನಾನು ಹೇಳುವದೆಲ್ಲ ಸತ್ಯ". ಈ ಮಾದರಿಯಲ್ಲಿ ಇಂಗ್ಲಿಷ್ ಮಾದರಿಯಲ್ಲಿರುವ "ಶ್ರದ್ಧಾಪೂರ್ವಕವಾಗಿ ಮತ್ತು ಪ್ರಾಮಾಣಿಕವಾಗಿ" ಎನ್ನುವ ಪದವನ್ನು ಕನ್ನಡದಲ್ಲಿ ಸೇರಿಸಿರುವದಿಲ್ಲ. ಅದಕ್ಕೆ ಕಾರಣ ತಿಳಿಯದು.

ನ್ಯಾಯಾಲಯಗಳಲ್ಲಿ ಪ್ರಮಾಣ ವಚನ ಸ್ವೀಕರಿಸುವಾಗ ಕೆಲವು ಆಕ್ಷೇಪಗಳು ಉದ್ಭವವಾಗುವುದುಂಟು. "ದೇವರ ಮೇಲೆ ಪ್ರಮಾಣ ಮಾಡಿ" ಎಂದು ಹೇಳಬೇಕೆಂದು ನ್ಯಾಯಾಲಯ ಆದೇಶಿಸಿದಾಗ ದೇವರ ಅಸ್ಥಿತ್ವದಲ್ಲಿ ನಂಬಿಕೆ ಇರದ ಸಾಕ್ಷಿ ಹಾಗೆ ಪ್ರಮಾಣ ವಚನ ತೆಗೆದುಕೊಳ್ಳಲು ನಿರಾಕರಿಸುವದು ಸಹಜ. ಅಂತಃಸಾಕ್ಷಿ ಇಲ್ಲವಾಗುತ್ತಿರುವ ಮತ್ತೊಂದು ಮುಖವೇ ಅಂತಃಸಾಕ್ಷಿಯ ಎಚ್ಚರವೂ ಆಗಿರುತ್ತದೆ. ಇಂತಹ ಸಂದರ್ಭಗಳ ಸೂಕ್ಷ್ಮ ವಿವೇಚನೆಯ ಅಗತ್ಯವಿದೆ.

ವಚನ ಇಂದಿನದಲ್ಲ. ಅದು ಮನುಷ್ಯನ ಚಿಂತನ ಶಕ್ತಿ ಪ್ರಾರಂಭವಾದ ಕಾಲದಿಂದ ಒಂದಲ್ಲ ಒಂದು ರೀತಿಯಲ್ಲಿ ವ್ಯಕ್ತಿಯ, ಸಮಾಜದ ನಡುವೆ ನಡೆದು ಬಂದದ್ದೇ ಆಗಿದೆ. ಇದು ಎಲ್ಲ ದೇಶ ಕಾಲಗಳಲ್ಲೂ ಆಗಿರುವಂಥದ್ದು. ರಾಮಾಯಣದಲ್ಲಿ ದಶರಥ ಕೈಕೆಗೆ ಕೊಡುವ ವರ ರೂಪದ ವಚನವಾಗಲೀ,ಜಗತ್ತಿನಲ್ಲಿ ಅದ್ವಿತೀಯ ಬಿಲ್ಲುಗಾರನನ್ನಾಗಿ ಮಾಡುತ್ತೇನೆಂದು ದ್ರೋಣಾಚಾರ್ಯರು ಅರ್ಜುನನಿಗೆ ಇತ್ತ ವಚನವಾಗಲೀ, ತೊಟ್ಟ ಬಾಣವನ್ನು ಮತ್ತೆ ತೊಡುವದಿಲ್ಲ ಎಂದು ಕರ್ಣ ತನ್ನ ತಾಯಿ ಕುಂತಿಗೆ ಇತ್ತ ವಚನವಾಗಲೀ ಇವು ಔಚಿತ್ಯದ ಪ್ರಜ್ಞೆಯಿಂದ ದೂರವಾದವುಗಳು, ಅಷ್ಟೇ ಅಲ್ಲ ಅದರ ದುಷ್ಪರಿಣಾಮದ ಅರಿವಿದ್ದೂ 'ವಚನಭ್ರಷ್ಟ' ಎನ್ನುವ ಲೋಕಾಪವಾದಕ್ಕೆ ಗುರಿಯಾಗುವ ಭಯದ ಹಿನ್ನೆಲೆಯಲ್ಲಿ ಆವರಿಸಿದ್ದು. ಅದರಲ್ಲಿ ಅನುಕೂಲಕ್ಕಿಂತ ಹೆಚ್ಚಾಗಿ ಅನರ್ಥ, ಉಪಯೋಗಕ್ಕಿಂತ ಹೆಚ್ಚಾಗಿ ವ್ಯಕ್ತಿತ್ವದ ಉಪೇಕ್ಷೆ ಇತ್ಯಾದಿ ಮಾನವ ವಿರೋಧಿ ಪರಿಣಾಮಗಳಿರುವದನ್ನು ಕಾಣುತ್ತೇವೆ.

ಈ 'ವಚನ'ಗಳು ಜನಸಾಮಾನ್ಯರ ಚಿಂತನೆಯ ಅಗ್ನಿ ಪರೀಕ್ಷೆಗೆ ಒಳಗಾಗಿ ತಂತ್ರ ಮೇಲುಗೈ ಪಡೆದು ಕುತಂತ್ರವೇ ವಾಸ್ತವ ಎನ್ನುವ ಅರಿವು ಮೂಡಿದಾಗ ಈ ವಚನದ ಪುಷ್ಠಿಗೆ 'ಪ್ರಮಾಣ'ದ ಬೆಂಬಲವನ್ನು ಪಡೆಯಲಾಯ್ತು. ಯಾವ ಅಥವಾ ಯಾವುದರ ಪ್ರಮಾಣದ ಮೇಲೆ ವಚನ ತೆಗೆದುಕೊಂಡರೆ ಅವನ ಅಂತಃಸಾಕ್ಷಿಗೆ ವಿರುದ್ಧವಾಗದ ರೀತಿ ಸತ್ಯವನ್ನು ಅಭಿವ್ಯಕ್ತಗೊಳಿಸಲು ಸಾಧ್ಯವಾಗುತ್ತದೆ. ಎಂಬ ಚಿಂತನೆಯ ಹಿನ್ನೆಲೆಯಲ್ಲಿ ಈ 'ಪ್ರಮಾಣ' ತನ್ನ ಪ್ರವೇಶ ಪಡೆದಿದೆ.

ಮನುಸ್ಮೃತಿಯ ಕಾಲದಲ್ಲಿ ಜಾತಿಗಳ ಆಧಾರದ ಮೇಲೆ ಪ್ರಮಾಣವಚನ ಅಥವಾ ಆಣೆ ಅಥವಾ ಶಪಥ ಮಾಡಿಸುತ್ತಿದ್ದುದು ಕಂಡುಬರುತ್ತದೆ. ಉದಾಹರಣೆಗೆ (೧) ನ್ಯಾಯಪತಿಯು ಸಾಕ್ಷಿದಾರ ಕ್ಷತ್ರಿಯನಾಗಿದ್ದರೆ ಅವನಿಗೆ "ಸತ್ಯಹೇಳು" ಎನ್ನಬೇಕು;ಶೂದ್ರನಿಗೆ "ಪಾಪವಿದೆ ಸತ್ಯಹೇಳು" ಎನ್ನಬೇಕು; ಬ್ರಾಹ್ಮಣನಿಗೆ "ಹೇಳು" ಎಂದರೆ ಸಾಕು......(ಮನುಸ್ಮೃತಿ ೮-೮೮).(೨) "ಶೂದ್ರನನ್ನು ಪಾಪಗಳ, ವೈಶ್ಯನನ್ನು ಧನಧಾನ್ಯಗಳ, ಕ್ಷತ್ರಿಯನನ್ನು ವಾಹನಾಯುದ್ಧಗಳ, ಬ್ರಾಹ್ಮಣನನ್ನು ಸತ್ಯದ ಆಣೆಯಾಗಿ ಶಪಥ ಮಾಡಿಸಬೇಕು...." (ಮ.ಸ್ಮೃ ೮-೧೧೩)

ಇದರಿಂದ ನಮಗೆ ಅರಿವಾಗುವ ಒಂದಂಶ ಎಂದರೆ ಯಾರು ಯಾರಿಗೆ ಯಾವ ಯಾವುದರ ಮೇಲೆ ನಂಬಿಕೆ ಇದ್ದಯೋ ಅಥವಾ ಯಾರು ಯಾರು ಯಾವ ಯಾವ ವೃತ್ತಿಯನ್ನು ಅವಲಂಬಿಸಿದ್ದರೋ ಆ ವಸ್ತುಗಳ, ಜೀವಗಳ ಮೇಲೆ ಆಣೆ ಮಾಡಿಸುವದರಿಂದ ನಿಜವನ್ನ ನೆಲೆ ನಿಲ್ಲಿಸಿ ಸತ್ಯವನ್ನು ಅಭಿವ್ಯಕ್ತಿಗೊಳಿಸಲು ಯತ್ನಿಸಿರುವುದು. ಕ್ಷತ್ರಿಯನ ವೃತ್ತಿ ರಕ್ಷಣೆ ಆದ್ದರಿಂದ ಅವನ ಆತ್ಮ ವಾಹನ ಹಾಗೂ ಆಯುಧ, ಅವುಗಳ ಮೇಲೆ ಪ್ರಮಾಣ ಮಾಡಿಸುವದು; ವೈಶ್ಯನ ವೃತ್ತಿಗೆ ಅನುಗುಣವಾಗಿ ಚಿನ್ನ, ಬೀಜ, ಧನ ಧಾನ್ಯಗಳೆ ಅವನ ಆತ್ಮವಾಗಿರುವದರಿಂದ ಅವುಗಳ ಮೇಲೆ ಆಣೆ ಮಾಡಿಸುವದು; ಬ್ರಾಹ್ಮಣನ ವೃತ್ತಿ 'ಜ್ಞಾನ' ಆದ್ದರಿಂದ ಸತ್ಯದ ಆಣೆಯಾಗಿ ಶಪಥ ಮಾಡಿಸುವದು ಸರಿಯಾದದ್ದೆ. ಆದರೆ ಶೂದ್ರನ ವೃತ್ತಿ ಸೇವೆ ಎಂದು ಇಟ್ಟುಕೊಂಡರೂ ಅವನು "ಪಾಪಗಳ" ಮೇಲೆ ಏಕೆ ಆಣೆ ಮಾಡಬೇಕು?

ಬ್ರಾಹ್ಮಣನ 'ಆತ್ಮ' [illegible]ವಾಗಿರುವಂತೆ ಶೂದ್ರನಿಗೆ "ಶಾಪ" ಆತನೇ? ಅಲ್ಲ. ಎಲ್ಲರ ಹೃದಯ ಮೂಲವೂ ಒಂದೇ ಎನ್ನುವದು ಸತ್ಯ. ಎಲ್ಲರ ಪಯಣವೂ ಸತ್ಯದ ಕಡೆಗೇ. ಆದರೆ ಬಹುಸಂಖ್ಯಾತ ಶೂದ್ರರಿಗೆ, ಸ್ತ್ರೀಯರಿಗೆ ಪಾಪಪ್ರಜ್ಞೆಯನ್ನೇ ಆತ್ಮವಾಗಿಸಿದ ಕ್ರೂರತೆಯನ್ನು ಇಲ್ಲಿ ಕಾಣಬಹುದು. ಈ ಜಾತಿಯ ಕ್ರೌರ್ಯವೇ ಭಾರತದ ಆತ್ಮವನ್ನು ಕುಗ್ಗಿ ಕುಸಿಯುವಂತೆ ಮಾಡಿ ಅದರ ನಾಡಿಯೇ ಆಡದಂತೆ ಮಾಡುತ್ತಿದೆ.

ಪ್ರಮಾಣ ವಚನಕ್ಕೆ ಸಂಬಂಧಿಸಿದಂತೆ ಭಾರತ ದಂಡ ಸಂಹಿತೆ ೧೮೬೦, ಪ್ರಕರಣ ೫೧ರಲ್ಲಿ ಉಲ್ಲೇಖವಿದೆ. ಸಾರ್ವಜನಿಕ ಕೆಲಸವನ್ನು ನಿರ್ವಹಿಸುವ ಅಧಿಕಾರಿಯ ಅಥವಾ ನ್ಯಾಯಾಂಗದಲ್ಲಿ ನ್ಯಾಯ ವಿತರಣೆ ಮಾಡುವ ನ್ಯಾಯಾಧೀಶರ ಮುಂದೆ ಪ್ರಾಮಾಣಿಕವಾಗಿ ಅಥವಾ ಪ್ರಜ್ಞಾಪೂರ್ವಕವಾಗಿ ಹೇಳಬೇಕೆನ್ನುವ ನಿಯಮವಿದೆ. ಒಂದು ಕಾಲದಲ್ಲಿ ಪ್ರಮಾಣ ವಚನವನ್ನು ಬೋಧಿಸುವಾಗ ಗ್ರಂಥಗಳನ್ನು ಅಥವಾ ಅವರವರ ನಂಬಿಕೆಗೆ ಆಧಾರವಾಗಿದ್ದರ ಮೇಲೆ ಪ್ರಮಾಣ ಮಾಡಿಸುವ ಪದ್ಧತಿ ಇದ್ದುದು ಕಂಡುಬರುತ್ತದೆ. ಅದರ ಉದ್ದೇಶ ಸತ್ಯವನ್ನು ಅಭಿವ್ಯಕ್ತಿಸಲು ಪೂರಕವಾಗುವ ಒಂದು ರೀತಿಯ ಉದ್ದೀಪನೆ. ಆ ಹಿನ್ನೆಲೆಯಲ್ಲಿ ಅವರವರಿಗೆ ಪಾವಿತ್ರ್ಯವೆಂದು ಪರಿಗಣಿತವಾಗಿದ್ದರ ಮೇಲೆ ಪ್ರಮಾಣ ಮಾಡಿಸುವದು, ಹೀಗಾಗಿ ಕ್ರಿಶ್ಚಿಯನ್ನರು ಬೈಬಲ್ ಮೇಲೆ ಮಾಡಿಸಿದರೆ ಮುಸಲ್ಮಾನರು ಕುರಾನ್ ಮೇಲೆ ಸ್ವೀಕರಿಸುವ ರೂಢಿ ಇತ್ತು.

ಚೈನಾ ದೇಶದಲ್ಲಿದ್ದ ರೂಢಿ ಸ್ವಾರಸ್ಯಕರವಾಗಿದೆ. ಚೈನಾದೇಶದ ಪ್ರಜೆಯ 'ಪ್ರಮಾಣ'ಕ್ಕೆ 'ಚೀನಾ ಸಾಸರ್' ಕೊಡಬೇಕಾಗಿತ್ತು. ಆತ ಅದನ್ನೇ ತೆಗೆದುಕೊಂಡು ಚೂರು ಚೂರಾಗಿ ಒಡೆದು ಹೀಗೆ ಹೇಳುತ್ತಿದ್ದ"ನಾನು ಸತ್ಯವನ್ನು ಹೇಳುತ್ತೇನೆ. ನಾನು ಹೇಳುವದೆಲ್ಲ ಸತ್ಯವೇ. ನಾನು ಸತ್ಯವನ್ನು ಹೇಳದಿದ್ದರೆ ಚೂರು ಚೂರಾದ ಸಾಸರಿನಂತೆ ನನ್ನ ಆತ್ಮ ಒಡೆದು ಚೂರು ಚೂರಾಗಲಿ" ಪ್ರಮಾಣ ವಚನದ ದೀರ್ಘ ಪಯಣದಲ್ಲಿ ಇವು ಕೆಲವು ಮೈಲಿಗಲ್ಲುಗಳು ಅಷ್ಟೆ.

ಈ ಪದ್ಧತಿ ನಡೆದುಕೊಂಡು ಬರುತ್ತಿದ್ದ ಕಾಲದ ದಾವೆಯೊಂದರಲ್ಲಿ ಒಂದು ಕುತೂಹಲಕರ ಘಟನೆ ನಡೆದಿದೆ. ಬಹುಶಃ ಅದು ಒಂದು ನೂರು ವರ್ಷಗಳಿಗೂ ಹಿಂದಿನದಿರಬೇಕು. ಆ ದಾವೆ ಓಮಿಚಂದ್ ವಿರುದ್ಧ ಬಾರ್ಕರ್ ಇವರ ನಡುವೆ ೧ ಎ.ಟಿ.ಕೆ. ೨೧ರಲ್ಲಿ ನಡೆದಿರುವದು. ಅದರಲ್ಲಿ ಪ್ರಮಾಣ ವಚನ ಸ್ವೀಕರಿಸುವಾಗ ಹಿಂದೂ ಆದವನು "ಗೀತೆಯ ಮೇಲೆ ಆಣೆ ಇಟ್ಟು ಅಥವಾ ಬ್ರಾಹ್ಮಣನ ಪಾದ ಮುಟ್ಟಿ" ಪ್ರಮಾಣ ವಚನ ಸ್ವೀಕರಿಸಬೇಕೆಂದು ಉಲ್ಲೇಖವಿದೆ.(Hindu way swear on the Gita or Touching the feet of a brahmin ;omichand v/s Barker, 1, Atk, 21- The penal Law of india, vol, 1 by gour; second edition-1917. p-299)

ಇಲ್ಲಿ ಎರಡು ಅಂಶಕ್ಕೆ ಒತ್ತು ಇದೆ. ಒಂದು ಭಗವದ್ಗೀತೆ ಮತ್ತೊಂದು ಬ್ರಾಹ್ಮಣನ ಪಾದ . ಇಲ್ಲಿ ಗಮನಿಸಬೇಕಾದ್ದು ಬ್ರಾಹ್ಮಣ ಪದವಿಗಿದ್ದ ಪಾವಿತ್ರ್ಯ ಹಾಗೂ ಔನ್ನತ್ಯ. ಆದರೆ ಆ ಪಾವಿತ್ರ್ಯವನ್ನೊಳಗೊಂಡ ಬ್ರಾಹ್ಮಣ ಭಾರತದಲ್ಲಿ ಇದ್ದಾನೆಯೆ? ಅಲ್ಲದೆ "ಆತ್ಮವತ್ ಸರ್ವ ಭೂತೇಷು" ಎನ್ನುವ ಸಮಾನವಾದ, ಸಾರ್ವತ್ರಿಕವಾದ,

ಯಾವ ಧರ್ಮ ಗ್ರಂಥಗಳು ಹಾಗೂ ಅವುಗಳ ಅಧ್ಯಯನದಿಂದ ಮಾನವನ ಹೃದಯ ವಿಕಾಸ ಹೊಂದಿ ಅಂತಃ ಸಾಕ್ಷಿಯ ಜಾಗೃತಿಯಾಗಬೇಕಿತ್ತೋ ಅದೇ ಧರ್ಮ ಗ್ರಂಥಗಳು ಮುಗ್ಧ ಮಾನವನ ಮೌಢ್ಯಕ್ಕೆ ಕಾರಣವಾಗಿ ಅವನಿಗೆ ಭಯದ ಪ್ರತಿರೂಪವಾಗಿ ಪರಿಣಮಿಸಿರುವದು ಜನಾಂಗದ ಅವನತಿಯ ಕುರುಹಾಗಿದೆ. 'ಗ್ರಂಥಾಲಯಗಳನ್ನು ಸುಟ್ಟು ಹಾಕಿ, ಏಕೆಂದರೆ ಅವುಗಳ ಬೆಲೆ ಈ ಒಂದು ಪುಸ್ತಕದಲ್ಲಿದೆ–ಅದೇ ಕುರಾನ್' ಎಂದು ಹೇಳುವ ಅಲೆಕ್ಸಾಂಡ್ರಿಯಾವನ್ನು ವಶಪಡಿಸಿಕೊಂಡ ಒಂದನೆ ಒಮರ್‌ನ ಮೌಢ್ಯಕ್ಕೆ ಕಾರಣವಾಗಿತ್ತದೆ. ವಿವೇಕಾನಂದರು "ಸಿದ್ಧಾಂತಗಳೆಲ್ಲ ಗ್ರಂಥದಿಂದ ಬರುವವು, ಮತಾಂಧತೆ, ಅನ್ಯಧರ್ಮೀಯರನ್ನು ಹಿಂಸಿಸುವದು ಇವಕ್ಕೆಲ್ಲ ಗ್ರಂಥಗಳೇ ಕಾರಣ. ಇಂದಿನ ಕಾಲದಲ್ಲಿ ಗ್ರಂಥಗಳು ಎಲ್ಲ ಕಡೆಗಳಲ್ಲಿಯೂ ಕಪಟಗಳನ್ನು ಉಂಟುಮಾಡುತ್ತಿರುವವು." ಎಂದರೆ ರಾಷ್ಟ್ರಕವಿ ಕುವೆಂಪು ಅವರು " ಯಾವ ಒಂದು ಗ್ರಂಥವೂ 'ಏಕೈಕ ಪರಮಪೂಜ್ಯ' ಧರ್ಮಗ್ರಂಥ ವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ 'ದರ್ಶನ' ವನ್ನು ತಾನೇ ನಿರ್ಣಯಿಸಿ ಕಟ್ಟಿಕೊಳ್ಳಬೇಕು." ಎಂದಿದ್ದಾರೆ.

ಸಾರ್ವಕಾಲೀಕವಾದ, ಸರ್ವಮಾನ್ಯವಾದ ನಿತ್ಯ ಸತ್ಯ ಪ್ರಕೃತಿಯ ಅಂತರಂಗವಾಗಿರುವಾಗ ಯಾರ ಪಾದವೇ ಆಗಲಿ ಅದು ಎಷ್ಟೇ ಶ್ರೇಷ್ಠ, ಪವಿತ್ರ ಎಂದರೂ ಅದರ ಆಚರಣೆ ವಿವೇಕ ರಹಿತವಾದದ್ದು, ತರ್ಕಶೂನ್ಯವಾದದ್ದು. ಅದು ಇತ್ತೀಚೆಗೆ ನ್ಯಾಯಾಲಯದ ದಾವೆಯೊಂದರಲ್ಲಿ ಉಲ್ಲೇಖವಾಗಿರುವದಂತೂ ಅವಿವೇಕದ ಪರಮಾವಧಿ. ಅಷ್ಟೇ ಅಲ್ಲ, ಅದು ಯಾವ ಮಾನವೀಯ ಹೃದಯವೂ ಸಹಿಸಲಸಾಧ್ಯವಾದ ಅತ್ಯಂತ ಅಸಹ್ಯ ಕೂಡ. ಏಕೆಂದರೆ ಅದು ಮಾನವ ವಿರೋಧಿ ಹಾಗೂ ಜಾತಿಯ ನೆಲೆಯಲ್ಲಿ ನಿಂತಿರುವಂಥದ್ದು. ಈ ದೇಶದಲ್ಲಿ ನಿಜವಾದ ಬ್ರಾಹ್ಮಣ ಸತ್ತು ಯುಗ ಯುಗಗಳೇ ಕಳೆದಿವೆ. ಇದನ್ನು ಸ್ಪಷ್ಟವಾಗಿ ಘೋಷಿಸಿರುವವರು ವಿವೇಕಾನಂದರು:–" ಬ್ರಾಹ್ಮಣರೇ– ನಿಮ್ಮ ಜಾತಿ ಕುಲಗಳ ಹೆಮ್ಮೆ ವ್ಯರ್ಥ. ಅದರಿಂದ ಪಾರಾಗಿ, ನಿಮ್ಮ ಶಾಸ್ತ್ರ ಪ್ರಕಾರದ ಬ್ರಾಹ್ಮಣ ನಿಮ್ಮಲ್ಲಿ ಇಂದು ಇಲ್ಲ." ಈ ನಿಜ ಸ್ಥಿತಿಯ ಅರಿವೇ ಸರ್ವೋದಯದ ಗುರು.

ಯಾವ ಧರ್ಮ ಗ್ರಂಥಗಳು ಹಾಗೂ ಅವುಗಳ ಅಧ್ಯಯನದಿಂದ ಮಾನವನ ಹೃದಯ ವಿಕಾಸ ಹೊಂದಿ ಅಂತಃಸಾಕ್ಷಿಯ ಜಾಗೃತಿಯಾಗಬೇಕಿತ್ತೋ ಅದೇ ಧರ್ಮ ಗ್ರಂಥಗಳು ಮುಗ್ಧ ಮಾನವನ ಮೌಢ್ಯಕ್ಕೆ ಕಾರಣವಾಗಿ ಅವನಿಗೆ ಭಯದ ಪ್ರತಿರೂಪವಾಗಿ ಪರಿಣಮಿಸಿರುವದು ಜನಾಂಗದ ಅವನತಿಯ ಕುರುಹಾಗಿದೆ. 'ಗ್ರಂಥಾಲಯಗಳನ್ನು ಸುಟ್ಟು ಹಾಕಿ, ಏಕೆಂದರೆ ಅವುಗಳ ಬೆಲೆ ಈ ಒಂದು ಪುಸ್ತಕದಲ್ಲಿದೆ–ಅದೇ ಕುರಾನ್" ಎಂದು ಹೇಳುವ ಅಲೆಕ್ಸಾಂಡ್ರಿಯಾವನ್ನು ವಶಪಡಿಸಿಕೊಂಡ ಒಂದನೆ ಒಮರ್‌ನ ಮೌಢ್ಯಕ್ಕೆ ಕಾರಣವಾಗಿತ್ತದೆ. ವಿವೇಕಾನಂದರು "ಸಿದ್ಧಾಂತಗಳೆಲ್ಲ ಗ್ರಂಥದಿಂದ ಬರುವವು, ಮತಾಂಧತೆ, ಅನ್ಯಧರ್ಮೀಯರನ್ನು ಹಿಂಸಿಸುವದು ಇವಕ್ಕೆಲ್ಲ ಗ್ರಂಥಗಳೇ ಕಾರಣ. ಇಂದಿನ ಕಾಲದಲ್ಲಿ ಗ್ರಂಥಗಳು ಎಲ್ಲ ಕಡೆಗಳಲ್ಲಿಯೂ ಕಪಟಗಳನ್ನು ಉಂಟುಮಾಡುತ್ತಿರುವವು." ಎಂದರೆ ರಾಷ್ಟ್ರಕವಿ ಕುವೆಂಪು ಅವರು " ಯಾವ ಒಂದು ಗ್ರಂಥವೂ 'ಏಕೈಕ ಪರಮಪೂಜ್ಯ' ಧರ್ಮಗ್ರಂಥ ವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ 'ದರ್ಶನ' ವನ್ನು ತಾನೇ ನಿರ್ಣಯಿಸಿ ಕಟ್ಟಿಕೊಳ್ಳಬೇಕು." ಎಂದಿದ್ದಾರೆ. ಯಾವುದೇ ಧರ್ಮ ಗ್ರಂಥ ಆಗಿರಲಿ ಅಲ್ಲಿಯ ಪುರೋಹಿತರಾದಿಯಾಗಿ ಯಾರೂ ಮುಕ್ತ ಮನಸ್ಸನ್ನು ಒಳಗೊಳದ ಕಾರಣ ಆ ಧರ್ಮ ಗ್ರಂಥಗಳು ಅವರ ಶೋಷಣೆಯ ಅಸ್ತ್ರವಾಗಿ ಪರಿಣಮಿಸಿ ಅವುಗಳ ಅಧ್ಯಯನಕ್ಕಿಂತ ಅಂಧ ಆಚರಣೆಯ ಕಿರಾತ ನರ್ತನ ನಿರಂತರ ನಡೆಯುತ್ತದೆ. ಅದರಿಂದ ಬಿಡುಗಡೆ ಹೊಂದುವ ವ್ಯಕ್ತಿಗತ ಜಾಗೃತಿ ಎಷ್ಟು ಜಾಗ್ರತೆ ಆಗುತ್ತದೆಯೋ ಮನುಕುಲಕ್ಕೆ ಅಷ್ಟು ಒಳಿತು.

ಒಂದು ರಾಜಿ ಸಂದರ್ಭದಲ್ಲಿ ಶಾಸಕರೋರ್ವರು ಹೇಳಿದ ಮಾತು ಆಶ್ಚರ್ಯ ತರುತ್ತದೆ. ಅದು ಅವರು ಸ್ವೀಕರಿಸುವ ಪ್ರಮಾಣವಚನದ ಪಾವಿತ್ರ್ಯತೆಗೆ ಹಿಡಿದ ಕನ್ನಡಿಯಾಗಿದೆ. ಒಂದು ಹಳ್ಳಿಯ ಎರಡು ಗುಂಪಿನವರನ್ನು ರಾಜಿಮಾಡಿಸಿ ಆಲೂರಿನ ಗ್ರಾಮದೇವತೆ 'ಬೆಂಕಿಯಮ್ಮ'ಳಿಗೆ ಮಂಗಳಾರತಿ ಮಾಡಿಸಿದರು. ರಾಜಿ ಆದವರಿಗೆ ಆ ದೇವತೆ ಹೆಸರಿನಲ್ಲಿ ಪ್ರಮಾಣ ಮಾಡಿ ಎಂದು ಹೇಳುತ್ತಾ ಆ ಶಾಸಕರು "ಹೇಳಿ ಕೇಳಿ ಬೆಂಕಿಯಮ್ಮ; ನಿಜವಾಗಿ ಪ್ರಮಾಣ ಮಾಡಿ. ನಾವು ವಿಧಾನಸೌದದಲ್ಲಿ ಸುಮ್ ಸುಮ್ನೆ ಮಾಡ್ತೀವಲ್ಲ ಹಂಗೆ ಮಾಡ್ಬೇಡಿ" ಎಂದರು. ಈ ಮಾತು ಏನನ್ನು ಹೇಳುತ್ತದೆ? ಅದು ಹೇಳುವದು ಅವರ ಭಗ್ನಗೊಂಡ ಹೃದಯವನ್ನ, ಆತ್ಮವಂಚಕ ಸಂಸ್ಕೃತಿಯನ್ನ.

ನ್ಯಾಯಾಲಯಗಳಲ್ಲಿ ದಾವಾ ನಡೆಯುವ ಸಂದರ್ಭಗಳಲ್ಲಿ ಕೆಲವು ಸ್ವಾರಸ್ಯಕರ ಘಟನೆಗಳು ಜರುಗುತ್ತವೆ.

೧. ಒಬ್ಬ ಮುಸ್ಲಿಂ ಮಹಿಳೆಗೂ ಮತ್ತೊಬ್ಬ ಮುಸ್ಲಿಂನಿಗೂ ಕೋಳಿಯ ವಿಷಯದಲ್ಲಿ ಜಗಳವಾಯ್ತು. ಅವನಿಗೆ ಬುದ್ಧಿ ಕಲಿಸಬೇಕೆಂದು ಆಕೆ ತೀರ್ಮಾನಿಸಿದಳು. ಈಕೆಗೂ ಆತನಿಗೂ ಹಣದ ವ್ಯವಹಾರವಿತ್ತು. ಪ್ರೋನೋಟ್ ಬರೆಸಿಕೊಂಡಿದ್ದ ಆಕೆಗೆ ಆತ ಹಣ ಪಾವತಿಸಿದ್ದರೂ ನಂಬಿಕೆಯ ಮೇಲೆ ಆತ ಪ್ರೋನೋಟ್ ಮೇಲೆ ಷರಾ ಬರೆದಿರಲಿಲ್ಲ. ಅದನ್ನು ಬಂಡವಾಳ ಮಾಡಿಕೊಂಡು ಆಕೆ ಹಣ ಬರಬೇಕೆಂದು ಆತನ ಮೇಲೆ ದಾವಾ ಹೂಡಿದಳು.

ವಿಚಾರಣೆಗೆ ಬಂದಾಗ ಆತ ನ್ಯಾಯಾಧೀಶರ ಮುಂದೆ "ಹಣಕೊಟ್ಟಿಲ್ಲ ಎಂದು ಆಕೆ ಮಸೀದಿಯಲ್ಲಿ ಪ್ರಮಾಣ ಮಾಡಲಿ, ನಾನು ಕೊಡುತ್ತೇವೆ" ಎಂದ. ಆಕೆ ಮಾಡ್ತೀನಿ ಎಂದು ಕೋರ್ಟ್ ಕಮೀಶನರ್ ಜೊತೆ ಹೊರಟಳು. ಮಸೀದಿ ಹತ್ತಿರ ಹತ್ತಿರ ಬರುತ್ತಿದ್ದಂತೆ ಆಕೆ ತನ್ನ ವಕೀಲರಿಗೆ ಹೇಳಿದಳು "ನಾನು ಪ್ರಮಾಣ ಮಾಡಲ್ಲ ಸ್ವಾಮಿ, ಅವನು ದುಡ್ಡು ಕೊಟ್ಟಿದ್ದಾನೆ" ಎಂದಳು. ದಾವಾ ವಜಾ ಆಯ್ತು.

೨. ಹೆಂಡತಿಯನ್ನು ಕಳೆದುಕೊಂಡಿದ್ದ ಒಬ್ಬ ಕ್ರಿಶ್ಚಿಯನ್ ಮತ್ತೊಬ್ಬ ಮಹಿಳೆಯನ್ನು ಇಟ್ಟುಕೊಂಡಿದ್ದ. ಆತ ತನ್ನ ತೋಟದಲ್ಲಿ ನಾಯಿಯನ್ನು ಹಿಡಿದುಕೊಂಡು ಹೋಗುತ್ತಿದ್ದಾಗ "ನಾಯಿಗೆ ಒಂದು ನಾಯಿ" ಎಂದು ಬೈದ ವ್ಯಕ್ತಿಯ ಮೇಲೆ ಮಾನನಷ್ಟ ಮೊಕದ್ದಮೆ ಹಾಕಿದ. ನ್ಯಾಯಾಲಯದಲ್ಲಿ ಎದುರು ವಕೀಲರು ಹಾಕಿದ ಪ್ರಶ್ನೆಗಳಿಗೆ ಸುಳ್ಳು ಹೇಳದೆ "ಹೌದು, ನಾನು ಮಹಿಳೆಯನ್ನು ಇಟ್ಟುಕೊಂಡಿದ್ದೇನೆ. ಆಕೆಗೆ ಇಂತಿಂಥ ಆಸ್ತಿಗಳನ್ನು ಬರೆದಿದ್ದೇನೆ" ಎಂದು ನಿಜ ಹೇಳಿದ. ಅಮೇರಿಕದ ಅಧ್ಯಕ್ಷನಾಗಿದ್ದ ಬಿಲ್ ಕ್ಲಿಂಟನ್ ಲೆವೆನ್ಸ್ಕಿ ಕೇಸಿನಲ್ಲಿ ಸುಳ್ಳು ಹೇಳದೆ ಒಪ್ಪಿಕೊಂಡದ್ದು ಆತ ನಿಜವಾದ ಕ್ರಿಶ್ಚಿಯನ್ ಎಂಬುದನ್ನು ಸಾಬೀತು ಪಡಿಸಿದೆ.

೩. ಹಿಂದೂ ಒಬ್ಬ ತನ್ನಜಾತಿಯವನ ಮೇಲೆ ಹಣ ಬರಬೇಕೆಂದು ದಾವಾ ಹಾಕಿದ್ದ. ಎದುರು ಕಕ್ಷಿದಾರ ನ್ಯಾಯಾಲಯದಲ್ಲಿ ನಾನು ಹಣ ಕೊಡಬೇಕಾಗಿಲ್ಲ ಎಂದ. ಆಗ ವಾದಿ "ಹಾಗಂತ ಸಿದ್ದೇಶ್ವರ ದೇವಸ್ಥಾನದಲ್ಲಿ ದೇವರ ಮೇಲೆ ಪ್ರಮಾಣ ಮಾಡಲಿ, ಬಿಟ್ಟು ಬಿಡುತ್ತೇನೆ" ಎಂದ. ಎದುರು ಕಕ್ಷಿದಾರ ನಾಳೆ ಮಾಡುತ್ತೇನೆ ಎಂದ. ಮಾರನೆ ದಿನ ಎದುರು ಕಕ್ಷಿದಾರ ಕೋರ್ಟ್ ಕಮೀಶನರ್ ಜೊತೆ ಹೋದ. " ನಾನು ಹಣ ಕೊಡಬೇಕಾಗಿಲ್ಲ" ಎಂದು ದೇವರ ಮುಂದೆ ಪ್ರಮಾಣ ಮಾಡಿದ. ಆತನ ವಕೀಲರು ಪ್ರತ್ಯೇಕವಾಗಿ ಕರೆದು ನೀನು ಇದನ್ನು ನಿನ್ನೆಯೇ ಮಾಡಬಹುದಿತ್ತು, ಏಕೆ ಇವತ್ತಿಗೆ ಹಾಕಿಸಿಕೊಂಡೆ ಎಂದು ಕೇಳಿದರು. ಅದಕ್ಕೆ ಕಕ್ಷಿದಾರ ಹೇಳಿದ "ಇಲ್ಲಾ ಸ್ವಾಮಿ, ನಿನ್ನೆ ಸಂಜೆ ಬಂದು ದೇವರಿಗೆ ಹರಕೆ ಕಟ್ಟಿಕೊಂಡಿದ್ದೀನಿ. ನಾಳೆ ಸುಳ್ಳೇಳ್ಳಿ ಹರಕೆ ತೀರುಸ್ತೀನಿ ಅಂತ" ಎಂದ.

ಇವು ನಿಜವಾದ ಧಾರ್ಮಿಕ ವ್ಯಕ್ತಿಗೂ, ಸ್ವಾರ್ಥಕ್ಕಾಗಿ ಧರ್ಮ, ದೇವರುಗಳನ್ನು ಬಳಸಿಕೊಳ್ಳುವವನಿಗೂ ಇರುವ ವ್ಯತ್ಯಾಸವನ್ನು, ಆಂತರಿಕ ನೆಲೆಗಟ್ಟನ್ನ ತಿಳಿಯಪಡಿಸುತ್ತವೆ.

ಯಾರೇ ಆಗಿರಲಿ ಆತ ತೊಡಗಿಸಿಕೊಳ್ಳುವ ವೃತ್ತಿಯ ಪಾವಿತ್ರ್ಯತೆಗೆ ಧಕ್ಕೆ ಬರದಂತೆ ಆತನ ಅಂತಃಸಾಕ್ಷಿಯನ್ನು ಜಾಗೃತಗೊಳಿಸಿ ವೃತಿಗೌರವಕ್ಕನುಗುಣವಾಗಿ ಪ್ರಾಮಾಣಿಕತೆಯಿಂದ ಕೆಲಸಮಾಡಲು ಈ ಪ್ರಮಾಣ ವಚನವನ್ನು ತೆಗೆದುಕೊಳ್ಳಬೇಕೆಂಬ ನಿಯಮವಿದೆ. ವಕೀಲರಿಗೆ, ವೈಧ್ಯರಿಗೆ ಹಾಗೂ ಇತರ ವೃತ್ತಿಯವರಿಗೆ ಅವರವರು ನೋಂದಾಯಿಸಿಕೊಂಡ ವೃತ್ತಿಯ ಅನುಮತಿ ಪತ್ರ ಪಡೆಯುವಾಗ ಪ್ರಮಾಣ ವಚನ ಬೋಧಿಸುವ ಕ್ರಮವಿದೆ. ಎಲ್ಲರೂ ಅದರಂತೆ ನಡೆದರೆ ಮಾನವ ಕುಲ ಸತ್ಯದ ಸನಿಹಕ್ಕೆ ಸಾಗುವದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಹಣ,ಆಸ್ತಿ, ಅಧಿಕಾರ, ಸ್ವಾರ್ಥ, ಜಾತಿ, ಮತ, ಕುಲ, ಗೋತ್ರಗಳ ಅನಿಷ್ಟ ಅಮರಿಕೊಂಡು ಇಡೀ ವ್ಯಕ್ತಿತ್ವವನ್ನೇ ನುಂಗಿ ನೊಣೆಯುತ್ತಿದೆ. ಇದರ ಭಾರದಡಿಯಲ್ಲಿ ಸಿಕ್ಕಿ, ಅಂತಃಸಾಕ್ಷಿಯನ್ನು ಜಾಗೃತಿಗೊಳಿಸಬೇಕಾಗಿದ್ದ ಪ್ರಮಾಣ ವಚನ ನಲುಗಿಹೋಗಿದೆ.

ವಕೀಲನ ವೃತ್ತಿಗೆ ಹೋಲಿಸಿದಾಗ ವರ್ತಕನ ವೃತ್ತಿಯಲ್ಲಿ ನ್ಯಾಯ ಸುಲಭ ಮತ್ತು ಅವನ ಹಸ್ತಸಿದ್ಧ. ಸಮಾಜ ವರ್ತಕನ ಮೇಲೆ ಇಟ್ಟಿರುವ ನಂಬಿಕೆ ಅಭೂತಪೂರ್ವ. ವಕೀಲ ಕಕ್ಷಿಗಾರನ ಪರ ವಾದ ಮಾಡಬಹುದು. ಆದರೆ ನ್ಯಾಯಾ ನ್ಯಾಯಗಳ ತೀರ್ಪು ಅವನ ಕೈಲಿ ಇರುವದಿಲ್ಲ. ಅದು ನ್ಯಾಯಾಧೀಶರಿಗೆ ಸೇರಿದ್ದು.ವರ್ತಕನ ವೃತ್ತಿ ಹಾಗಲ್ಲ. ನ್ಯಾಯವನ್ನು ಒದಗಿಸುವ ಸಂಪೂರ್ಣ ಅಧಿಕಾರವನ್ನು ಸಹ ಸಮಾಜ ಅವನಿಗೆ ಕೊಟ್ಟಿದೆ. ಆದ್ದರಿಂದ ವರ್ತಕನ ಅಂತಃಸಾಕ್ಷಿಯೂ ಅಷ್ಟೇ ಜಾಗೃತವಾಗಿರಬೇಕು. ನ್ಯಾಯದ ತ್ರಾಸು ಅಥವಾ ತಕ್ಕಡಿ (ನ್ಯಾಯ) ಅವನ ಕೈಯಲ್ಲೇ ಇರುತ್ತದೆ. ಎಂದರೆ ವರ್ತಕ ಒಂದು ದೃಷ್ಟಿಯಲ್ಲಿ ನ್ಯಾಯಾಧೀಶ ಕೂಡ ಹೌದು. ಆ ಸ್ಥಾನ ವಕೀಲನಿಗೆ ಇಲ್ಲ. ಹೀಗಾಗಿ ಸಮಾಜಕ್ಕೆ ವರ್ತಕನ ನ್ಯಾಯ ವಿತರಣೆ ನೇರವಾದದ್ದು, ಅಷ್ಟೇ ಜವಾಬ್ದಾರಿ ಯುತವಾದದ್ದು. ಕಲಬೆರಕೆ ಇಲ್ಲದೆ, ಅಳತೆ ತೂಕದಲ್ಲಿ ವ್ಯತ್ಯಾಸವಿರದ ಪ್ರಾಮಾಣಿಕ ನ್ಯಾಯವಿತರಣೆಯ ನ್ಯಾಯಾಧೀಶ ವರ್ತಕ. ಈ ಗೌರವವನ್ನು ಮಾನ್ಯ ಮಾಡುವ ಅಂತಃಸಾಕ್ಷಿ ಎಷ್ಟು ವರ್ತಕರಲ್ಲಿದೆ? ಅವರವರ ಸ್ಥಾನ ಗೌರವವನ್ನು ಮನ್ನಣೆ ಮಾಡುವ ಅಂತಃಸಾಕ್ಷಿ ಎಷ್ಟು ಜನ ವೈದ್ಯರಿಗಿದೆ? ವಕೀಲರಿಗಿದೆ? ನ್ಯಾಯಾಧೀಶರಿಗಿದೆ? ಮಠಾಧೀಶರಿಗಿದೆ? ಆಯಾಯ ವೃತ್ತಿಯಲ್ಲಿ ನಿರತರಾಗಿರುವವರಿಗೆ ಇದೆ? ಇದನ್ನು ಇಂದು ನಾವು ಅತ್ಯಂತ ಹೆಚ್ಚಿನ ಗುರುತರ ಜವಾಬ್ದಾರಿಯಿಂದ ಆಲೋಚಿಸಬೇಕಾಗಿದೆ.

ಮಾನವ ಇತಿಹಾಸದ ಹಿನ್ನೆಲೆಯಲ್ಲಿ ಹೇಳುವದಾದರೆ ಈ ಪ್ರಮಾಣ ವಚನ ಪರಿಣಾಮಕಾರಿ ಎನ್ನಿಸಿಲ್ಲ. ಅಂತಃಸಾಕ್ಷಿಯನ್ನು ಕಳೆದುಕೊಂಡ ಯಾವ ವ್ಯಕ್ತಿಗೂ ನಿಜವನ್ನ ನುಡಿಯಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲ ಕಾನೂನುಗಳೂ ನಿರುಪಯುಕ್ತ. ಹೀಗಾಗಿ ಕಾನೂನುಗಳು ಮನುಷ್ಯನ ಸ್ವಾಭಾವಿಕ ಅಂತಃಕರಣಕ್ಕೆ ವಿರುದ್ಧವಾಗಿ ಅನೂಕೂಲಕ್ಕಿಂತಹೆಚ್ಚಾಗಿ ಅನಾನುಕೂಲಕ್ಕೆ ಕಾರಣವಾಗಿವೆ. ಪ್ರಮಾಣವನ್ನು ಬೋಧಿಸುವದು. ತೆಗೆದುಕೊಳ್ಳುವದು ಒಂದು ಯಾಂತ್ರಿಕ ಕ್ರಿಯೆಯಾಗಿ ಉಳಿದಿದೆ.ಅಂತಃಸಾಕ್ಷಿಯನ್ನು ಹಿಡಿಯ ಹೊರಟಿರುವ ಈ ಮರಳುಗಾಡಿನಲ್ಲಿ ಪ್ರಮಾಣ ವಚನದ ಪರಿಣಾಮ ಕೈ ಹಿಡಿಯಷ್ಟು ಮಾತ್ರ.ಧರ್ಮ ಗ್ರಂಥಗಳಿಂದ ಸಾಧ್ಯವಾಗದ, ಕಾನೂನು ಹಿಡಿತಕ್ಕೆ ದಕ್ಕದ ಈ ಅಂತಃಸಾಕ್ಷಿ ಎಂಬ ಪಾದರಸವನ್ನು ಹಿಡಿಯಲು ಯಾವ ಮಾರ್ಗದಲ್ಲಿ ದುಡಿಯಬೇಕು? ಇದು ಮಾನವ ಕುಲ ಬದುಕುಳಿಯ ಬೇಕಾದರೆ ತಾನು ಎದುರಿಸಬೇಕಾದ ಸವಾಲು!

ಒಟ್ಟಾರೆ ಸಾಮಾಜಿಕ ಜೀವನದ ಸತ್ಯ ಸಾಕ್ಷಾತ್ಕಾರಕ್ಕಾಗಿ, ಶುದ್ಧಿಗಾಗಿ, ಪಾವಿತ್ರ್ಯತೆಗಾಗಿ ಮನುಷ್ಯನ ಅಂತಃಸಾಕ್ಷಿಯ ಜಾಗೃತಿ ಅನಿವಾರ್ಯ. ಅದನ್ನು ಜಾಗೃತಿಗೊಳಿಸುವಲ್ಲಿ ನಡೆದಿರುವ ಪ್ರಯತ್ನಗಳೂ ಅಪಾರ. ಅಂತಹ ದೀರ್ಘ ಪಯಣದ ಮೈಲಿಗಲ್ಲುಗಳಲ್ಲಿ ನಾವೀಗ ಕ್ರಮಿಸುತ್ತಿರುವದು ಈ 'ಪ್ರಮಾಣ ವಚನ' ಇನ್ನು ಮುಂದೆ ನಾವು ಕ್ರಮಿಸಬೇಕಾಗಿರುವ ಮೈಲಿಗಲ್ಲುಗಳ ಕಡೆಗೆ ಕಡು ಎಚ್ಚರಿಕೆಯಿಂದ ಪಯಣಿಸೋಣ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳ ಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದ ವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಜಿ.ಟಿ.ಎನ್

ಮರೆಯಾದ ವಿಜ್ಞಾನ ಕೋಶ

[illegible] 21 2008 ಕರ್ನಾಟಕದ ಜನತೆಗೆ ಕರಾಳ ದಿನ. [illegible] ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಸಾಧನೆಗಳ [illegible] ತಲುಪಿದ್ದ ಮೂವರು ದಿಗ್ಗಜರು ಇಹಲೋಕವನ್ನು ತ್ಯಜಿಸಿದ್ದು ಇಡೀ ರಾಜ್ಯಕ್ಕೆ ತುಂಬಲಾರದ ನಷ್ಟ. 1971ರ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಭಾರತದ ಗೆಲುವಿನ ರೂವಾರಿಯಾಗಿದ್ದ ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ, ವೇದಾಧ್ಯಯನಕ್ಕೆ ಒಂದು ಹೊಸ ವ್ಯಾಖ್ಯಾನ ಬರೆಯುವ ಮೂಲಕ, ಸಂಪ್ರದಾಯಸ್ಥರ ಪ್ರತಿಭಟನೆಯನ್ನೂ ಲೆಕ್ಕಿಸದೆ ವೇದಗಳಲ್ಲಿನ ಸಾರವನ್ನು ಜನತೆಗೆ ಉಣಬಡಿಸಿದ ಪ್ರೊ. ಜಿ.ಎನ್. ಚಕ್ರವರ್ತಿ ಮತ್ತು ಕರ್ನಾಟಕದ ವಿಜ್ಞಾನ ಲೋಕಕ್ಕೆ, ಸಾರಸ್ವತ ಲೋಕಕ್ಕೆ ಮತ್ತು ಸಂಗೀತ ಪರಂಪರೆಗೆ ಅಪಾರ ಕೊಡುಗೆ ಸಲ್ಲಿಸಿ ಅಂತಿಮ ಉಸಿರಿರುವವರೆಗೂ ವೈಜ್ಞಾನಿಕ ಮನೋಭಾವವನ್ನು ವ್ಯಕ್ತಪಡಿಸಿದ ಪ್ರೊ. ಜಿ.ಟಿ.ನಾರಾಯಣ್‌ರಾವ್, ಈ ಮೂವರು ದಿಗ್ಗಜರನ್ನು ಕನ್ನಡ ನಾಡು ಕಳೆದುಕೊಂಡಿದೆ.

ಸಾವು ನಿರೀಕ್ಷಿತವಾದರೂ ಸಾಯುವ ಘಳಿಗೆ ಅನಿರೀಕ್ಷಿತವೇ. ಪ್ರೊ. ಜಿ.ಟಿ. ನಾರಾಯಣರಾವ್ (ಜಿ.ಟಿ.ಎನ್)ರವರ ಸಾವನ್ನೂ ಹೀಗೆಯೇ ಅರ್ಥೈಸಬಹುದು. ಕನ್ನಡದ ವಿಜ್ಞಾನ ಲೋಕಕ್ಕೆ ಅತ್ಯಮೂಲ್ಯ ಕಾಣಿಕೆಗಳನ್ನು ನೀಡಿದ ಜಿ.ಟಿ.ಎನ್ ತಮ್ಮ ಸಾವಿನಲ್ಲೂ ವೈಜ್ಞಾನಿಕ ಮನೋಭಾವವನ್ನು ಮೆರೆದಿದ್ದು ಅವರ ಹಿರಿಮೆಯನ್ನು ಸಾರುತ್ತದೆ. 1930ರ ಜನವರಿ 26ರಂದು ಮಡಿಕೇರಿಯಲ್ಲಿ ಜನಿಸಿದ ಜಿ.ಟಿ.ಎನ್. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮಂಗಳೂರಿನಲ್ಲಿ ಮುಗಿಸಿ ಉನ್ನತ ವ್ಯಾಸಂಗಕ್ಕಾಗಿ ಮದ್ರಾಸ್ ವಿಶ್ವವಿದ್ಯಾಲಯವನ್ನು ಆಶ್ರಯಿಸಿದ್ದರು. ಇಲ್ಲಿಯೇ ತಮ್ಮ ಪದವಿ ಗಳಿಸಿ, 1947ರಲ್ಲಿ ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಜಿ.ಟಿ.ಎನ್ 1969ರವರೆಗೂ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಏತನ್ಮಧ್ಯೆ ಜಿ.ಟಿ.ಎನ್ ಎನ್.ಸಿ.ಸಿ. ಯಲ್ಲೂ ಸಕ್ರಿಯವಾಗಿ ಪಾಲ್ಗೊಂಡು 1952ರಿಂದ 1969ರವರೆಗೆ ಲೆಫ್ಟಿನೆಂಟ್ ಆಗಿ ಕಾರ್ಯನಿರ್ವಹಿಸಿದ್ದರು.



ವಿಜ್ಞಾನ ಮತ್ತು ಸಂಗೀತದ ಸಮ್ಮಿಲನ

ಬಾಲ್ಯದಿಂದಲೇ ಸಂಗೀತದಲ್ಲಿ ಅಪಾರ ಆಸಕ್ತಿ ಹೊಂದಿದ್ದ ಜಿ.ಟಿ.ಎನ್ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ತಮ್ಮ ಜೀವನದ ಅವಿಭಾಜ್ಯ ಅಂಗವೆಂದೇ ಪರಿಗಣಿಸಿದ್ದರು. ಆದರೂ ವಿಜ್ಞಾನದಲ್ಲಿ ಅವರಿಗಿದ್ದ ಅಪರಿಮಿತ ಆಸಕ್ತಿ ಮತ್ತು ಕಾಳಜಿ ಜಿ.ಟಿ.ಎನ್ ಅವರನ್ನು ಆಧುನಿಕ ವಿಜ್ಞಾನದೆಡೆಗೆ ಕೊಂಡೊಯ್ದಿತ್ತು. ಗಣಿತದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರೂ, ವಿಜ್ಞಾನದ ಅಧ್ಯಯನ ಅವರ ಪ್ರಮುಖ ಗುರಿಯಾಗಿತ್ತು. ಆದರೆ ತಮ್ಮ ಧ್ಯೇಯೋದ್ದೇಶಗಳನ್ನು ಕೇವಲ ಶೈಕ್ಷಣಿಕ ಅಧ್ಯಯನಕ್ಕಾಗಿಯೇ ಮೀಸಲಿಡಲಿಲ್ಲ. ಖಗೋಳ ಶಾಸ್ತ್ರವನ್ನು ಮತ್ತು ತಾರಾ ಮಂಡಲಗಳ ಸಂರಚನೆಯನ್ನು ಕುರಿತು ಆಳವಾದ ಅಧ್ಯಯನ ನಡೆಸಿದ ಜಿ.ಟಿ.ಎನ್ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಖಗೋಳ ಶಾಸ್ತ್ರ ಮತ್ತು ಭೌತವಿಜ್ಞಾನದಲ್ಲಿ ಅಪಾರ ಜ್ಞಾನಹೊಂದಿದ್ದ ಜಿ.ಟಿ.ಎನ್ ವಿದ್ಯಾರ್ಥಿ ಮತ್ತು ಯುವ ಸಮುದಾಯಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳಸುವ ಉದ್ದೇಶದಿಂದಲೇ ಹಲವಾರು ಪುಸ್ತಕಗಳನ್ನೂ ಬರೆದಿದ್ದಾರೆ.

ಗೊಡ್ಡು ಸಂಪ್ರದಾಯಗಳು, ಮೂಢನಂಬಿಕೆಗಳು ಮತ್ತು ಆರಾಧನಾ ಪ್ರವೃತ್ತಿಯನ್ನು ತೀವ್ರವಾಗಿ ಖಂಡಿಸುತ್ತಿದ್ದ ನಿರೀಶ್ವರವಾದಿ ಜಿ.ಟಿ.ಎನ್. ತಮ್ಮ ಮನಸ್ಸಿಗೆ ಬಂದದ್ದನ್ನು ನಿರ್ದಾಕ್ಷಿಣ್ಯವಾಗಿ ಹೇಳಿಬಿಡುತ್ತಿದ್ದರು. ಜ್ಯೋತಿಷ್ಯ, ವಾಸ್ತು ಮತ್ತಿತರ ಮೂಢನಂಬಿಕೆಗಳನ್ನು ಟೀಕಿಸುವುದೇ ಅಲ್ಲದೆ ವೈಜ್ಞಾನಿಕವಾಗಿಯೇ ಅವುಗಳ ಅವೈಜ್ಞಾನಿಕ ತಳಹದಿಯನ್ನು, ಅದರಲ್ಲಿ ತುಂಬಿರುವ ಮೌಢ್ಯತೆಯನ್ನೂ ಬಹಿರಂಗಗೊಳಿಸುತ್ತಿದ್ದರು. ಉತ್ತರಾಯಣ ಪುಣ್ಯಕಾಲ ಅಥವಾ ಮಕರ ಸಂಕ್ರಾಂತಿಯ ಆಚರಣೆಯ ಬಗ್ಗೆ ಅವರು ಬರೆದ ಲೇಖನಗಳು ಎಂದಿಗೂ ಅಜರಾಮರವಾಗಿ ಉಳಿಯುತ್ತವೆ. ಪುರಾತನ ನಂಬಿಕೆಗಳಿಗೇ ಜೋತುಬಿದ್ದಿರುವ ಸಂಪ್ರದಾಯಸ್ಥ ಸಮಾಜ ಹೇಗೆ ತನಗೇ ಅರಿವಿಲ್ಲದೆ ಮೌಢ್ಯದ ಹಾದಿಯಲ್ಲಿ ಸಾಗುತ್ತಿರುತ್ತದೆ ಎಂಬ ಅಂಶವನ್ನು ಮಕರ ಸಂಕ್ರಾಂತಿಯ ಆಚರಣೆಯ ಹಿನ್ನೆಲೆಯಲ್ಲಿ ಜಿ.ಟಿ.ಎನ್ ಅದ್ಭುತವಾಗಿ ವಿಶ್ಲೇಷಿಸಿದ್ದರು. " ಜ್ಯೋತಿಷ್ಯ ಬೊಗಳೆ ವಾಸ್ತು ಅದರ ಸೋದರ "

ಗೊಡ್ಡು ಸಂಪ್ರದಾಯಗಳು, ಮೂಢನಂಬಿಕೆಗಳು ಮತ್ತು ಆರಾಧನಾ ಪ್ರವೃತ್ತಿಯನ್ನು ತೀವ್ರವಾಗಿ ಖಂಡಿಸುತ್ತಿದ್ದ ನಿರೀಶ್ವರವಾದಿ ಜಿ.ಟಿ.ಎನ್. ತಮ್ಮ ಮನಸ್ಸಿಗೆ ಬಂದದ್ದನ್ನು ನಿರ್ದಾಕ್ಷಿಣ್ಯವಾಗಿ ಹೇಳಿಬಿಡುತ್ತಿದ್ದರು. ಜ್ಯೋತಿಷ್ಯ, ವಾಸ್ತು ಮತ್ತಿತರ ಮೂಢನಂಬಿಕೆಗಳನ್ನು ಟೀಕಿಸುವುದೇ ಅಲ್ಲದೆ ವೈಜ್ಞಾನಿಕವಾಗಿಯೇ ಅವುಗಳ ಅವೈಜ್ಞಾನಿಕ ತಳಹದಿಯನ್ನು, ಅದರಲ್ಲಿ ತುಂಬಿರುವ ಮೌಢ್ಯತೆಯನ್ನೂ ಬಹಿರಂಗಗೊಳಿಸುತ್ತಿದ್ದರು. ಉತ್ತರಾಯಣ ಪುಣ್ಯಕಾಲ ಅಥವಾ ಮಕರ ಸಂಕ್ರಾಂತಿಯ ಆಚರಣೆಯ ಬಗ್ಗೆ ಅವರು ಬರೆದ ಲೇಖನಗಳು ಎಂದಿಗೂ ಅಜರಾಮರವಾಗಿ ಉಳಿಯುತ್ತವೆ. ಪುರಾತನ ನಂಬಿಕೆಗಳಿಗೇ ಜೋತು ಬಿದ್ದಿರುವ ಸಂಪ್ರದಾಯಸ್ಥ ಸಮಾಜ ಹೇಗೆ ತನಗೇ ಅರಿವಿಲ್ಲದೆ ಮೌಢ್ಯದ ಹಾದಿಯಲ್ಲಿ ಸಾಗುತ್ತಿರುತ್ತದೆ ಎಂಬ ಅಂಶವನ್ನು ಮಕರ ಸಂಕ್ರಾಂತಿಯ ಆಚರಣೆಯ ಹಿನ್ನೆಲೆಯಲ್ಲಿ ಜಿ.ಟಿ.ಎನ್ ಅದ್ಭುತವಾಗಿ ವಿಶ್ಲೇಷಿಸಿದ್ದರು.

ನಾ. ದಿವಾಕರ್

ಎಂಬ ಅವರ ಹೇಳಿಕೆ ಒಂದು ಸಂದರ್ಭದಲ್ಲಿ ಸಂಪ್ರದಾಯಸ್ತರ ಕೆಂಗಣ್ಣಿಗೆ ಗುರಿಯಾಗಿತ್ತು. ಪ್ರಸಿದ್ಧ ಜ್ಯೋತಿಷಿಗಳು ಉಪಸ್ಥಿತರಿದ್ದ ವೇದಿಕೆಯಲ್ಲೇ ಜಿ.ಟಿ.ಎನ್ ಈ ಮಾತುಗಳನ್ನು ಹೇಳಿದ್ದು ಅವರ ವಸ್ತುನಿಷ್ಠತೆ ಮತ್ತು ಅಭಿಪ್ರಾಯ ನಿಖರತೆಗೆ ಸಾಕ್ಷೀಭೂತವಾಗಿತ್ತು.

ತಮ್ಮ ವಿಜ್ಞಾನ ಪ್ರಪಂಚವನ್ನು ಕೇವಲ ವೇದಿಕೆಯ ಮೇಲಿನ ಭಾಷಣಗಳಿಗೆ ಸೀಮಿತಗೊಳಿಸದೆ ಅನೇಕ ಪುಸ್ತಕಗಳನ್ನು ಬರೆಯುವ ಮೂಲಕ ಜಿ.ಟಿ.ಎನ್ ಕನ್ನಡ ವಿಜ್ಞಾನ ಕ್ಷೇತ್ರಕ್ಕೆ ಅಪಾರ ಕೊಡುಗೆ ಸಲ್ಲಿಸಿದ್ದಾರೆ. 1969ರಲ್ಲಿ ತಮ್ಮ ಅಧ್ಯಾಪಕ ವೃತ್ತಿಯನ್ನು ತೊರೆದು ಮೈಸೂರಿಗೆ ಬಂದು ನೆಲೆಸಿದ ಜಿ.ಟಿ.ಎನ್ ನಂತರದ ದಿನಗಳಲ್ಲಿ ವಿಜ್ಞಾನದ ಪ್ರಚಾರದಲ್ಲಿ ತೊಡಗಿದರು. 1968ರಲ್ಲಿ ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿದ ವಿಜ್ಞಾನ ವಿಶ್ವಕೋಶಕ್ಕೆ ಸಂಪಾದಕರಾಗಿ ಕೆಲಸ ನಿರ್ವಹಿಸಿದ ಜಿ.ಟಿ.ಎನ್ ಈ ವಿಶ್ವಕೋಶದ ಪ್ರಕಟಣೆಯ ರೂವಾರಿಯೆಂದರೂ ತಪ್ಪಾಗಲಾರದು. ನವಕರ್ನಾಟಕ ಪಬ್ಲಿಕೇಷನ್ಸ್ ಹೊರತಂದ " ನವಕರ್ನಾಟಕ ವಿಜ್ಞಾನ ಪದವಿವರಣ ಕೋಶ " ಎಂಬ ಬೃಹತ್ ಕೃತಿಯ ಸಂಪಾದಕರಾಗಿ ವಿಜ್ಞಾನ ಪದಕೋಶವನ್ನು ಕನ್ನಡದಲ್ಲಿ ಪ್ರಕಟಿಸುವ ಮೂಲಕ ವಿಜ್ಞಾನ ಕ್ಷೇತ್ರದಲ್ಲಿ ಪಾರಿಭಾಷಿಕ ಪದಗಳನ್ನು ಪರಿಚಯಿಸಿದ ಕೀರ್ತಿಯೂ ಜಿ.ಟಿ.ಎನ್ ಅವರಿಗೆ ಸಲ್ಲುತ್ತದೆ. ಚಿಕಾಗೋದಲ್ಲಿ ಒಮ್ಮೆ ನೋಬಲ್ ಪ್ರಶಸ್ತಿ ಪುರಸ್ಕೃತರಾದ ಸರ್.ಸಿ.ವಿ.ರಾಮನ್ ಮತ್ತು ಎಸ್. ಚಂದ್ರಶೇಖರ್ ಅವರನ್ನು ಭೇಟಿ ಮಾಡಿದ ಜಿ.ಟಿ.ಎನ್ ಅವರಿಬ್ಬರ ಬಗ್ಗೆ ಪರಿಚಯ ಕೃತಿಯನ್ನೂ ಬರೆಯುವ ಮೂಲಕ , ಕನ್ನಡಿಗರಿಗೆ ಈ ಮಹಾನ್ ವ್ಯಕ್ತಿಗಳು ವಿಜ್ಞಾನ ಕ್ಷೇತ್ರಕ್ಕೆ ಸಲ್ಲಿಸಿರುವ ಕೊಡುಗೆಯನ್ನು ಪರಿಚಯಿಸಿದ್ದರು.

ಸುಮಾರು ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಜಿ.ಟಿ.ಎನ್. ಆಂಗ್ಲ ಭಾಷೆಯಲ್ಲೂ "ಇಂಡಿಯಾ ಇನ್ ಸ್ಪೇಸ್ " ಮತ್ತು " ಪ್ರಿನ್ಸಿಪಲ್ಸ್ ಆಫ್ ಮೆಕಾನಿಕ್ಸ್ " ಎಂಬ ಕೃತಿಗಳನ್ನು ರಚಿಸಿದ್ದರು. ಈ ಎರಡೂ ಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ. ಅವರ ಕೆಲವು ಕನ್ನಡ ಕೃತಿಗಳು ಆಂಗ್ಲ ಮಾತ್ರವಲ್ಲದೆ ಇತರ ಯುರೋಪಿಯನ್ ಭಾಷೆಗಳಿಗೂ ಅನುವಾದವಾಗಿವೆ. ಕೃಷ್ಣ ವಿಚಾರಗಳು, ವಿಶ್ವದ ಕಥೆ, ವಿಜ್ಞಾನದ ಸಪ್ತರ್ಷಿಗಳು, ಜಾತಕ ಮತ್ತು ಭವಿಷ್ಯ, ಕೋಪರ್‌ನಿಕಸ್ ತಂತಿ, ತಾರಾ ವೀಕ್ಷಣೆ, ಚಂದ್ರನ ಮೇಲೆ ಮಾನವ, ರಾಮನ್‌ರೊಡನೆ ಸಂದರ್ಶನ, ಐನ್‌ಸ್ಟೈನ್ ಇಲ್ಲಿ ಬದುಕಿದ್ದರು, ವೈಜ್ಞಾನಿಕ ಮನೋಧರ್ಮ ಅವರ ಪ್ರಮುಖ ಕೃತಿಗಳು. ಹೀಗೆ ವಿಜ್ಞಾನವನ್ನು ಕನ್ನಡದಲ್ಲಿ ಬರೆದವರಲ್ಲಿ ಜಿ.ಟಿ.ಎನ್ ಅಗ್ರಸ್ಥಾನ ಪಡೆಯುತ್ತಾರೆ.

ವಿಜ್ಞಾನ ಪ್ರಚಾರ ಕಾರ್ಯದೊಂದಿಗೇ ಕರ್ನಾಟಕ ಸಂಗೀತದ ಪ್ರಗತಿಗೂ ಅಪಾರ ಕಾಣಿಕೆ ಸಲ್ಲಿಸಿರುವ ಜಿ.ಟಿ.ಎನ್. ಸಂಗೀತವನ್ನು ತಮ್ಮ ಉಸಿರಾಗಿ ಪರಿಗಣಿಸುತ್ತಿದ್ದರು. " ಸಂಗೀತ ನನ್ನ ಉಸಿರು, ವಿಜ್ಞಾನ ನನ್ನ ಆತ್ಮ, ಸಾಹಿತ್ಯ ನನ್ನ ಆಹಾರ ಮತ್ತು ಆಧ್ಯಾತ್ಮವೇ ನನ್ನ ಗುರಿ " ಎಂದು ಸದಾ ನುಡಿಯುತ್ತಿದ್ದ ಜಿ.ಟಿ.ಎನ್ ಮೈಸೂರಿನಲ್ಲಿ ಸ್ಥಾಪಿಸಲಾಗಿರುವ ಗಾನಭಾರತಿ ಸಂಸ್ಥೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಅವರು ತಮ್ಮ ಬರವಣಿಗೆಗಳಿಂದ ಪಡೆಯುತ್ತಿದ್ದ ಸಂಭಾವನೆಯನ್ನು ನೇರವಾಗಿ ಗಾನಭಾರತಿಗೆ ನೀಡುತ್ತಿದ್ದರು. ಆಗಲೂ ತಮ್ಮ ಹೆಸರನ್ನು ಬಳಸಿಕೊಳ್ಳದೆ ಸಂಭಾವನೆ ನೀಡಿದ ಮಾಧ್ಯಮದವರ ಹೆಸರಿನಲ್ಲೇ ದೇಣಿಗೆ ನೀಡುತ್ತಿದ್ದುದು ಅವರ ನಿಸ್ಪೃಹತೆಗೆ ಸಾಕ್ಷಿ. ಮೈಸೂರಿನಲ್ಲಿ ಯಾವುದೇ ಸಂಗೀತ ಕಛೇರಿ ನಡೆದರೂ ಅಲ್ಲಿ ಜಿ.ಟಿ.ಎನ್ ಹಾಜರಿರುತ್ತಿದ್ದರು. ಅಷ್ಟೇ ಅಲ್ಲದೆ ಸಂಗೀತದ ಬಗ್ಗೆ, ಹಾಡುಗಾರಿಕೆಯ ಬಗ್ಗೆ ವಿಮರ್ಶೆಯನ್ನೂ ಮಾಡುತ್ತಿದ್ದುದುಂಟು.

ಸಂಗೀತ ಮಾತ್ರವಲ್ಲದೆ ನಾಟಕ, ಯಕ್ಷಗಾನಗಳಲ್ಲೂ ಆಸಕ್ತಿ ಹೊಂದಿದ್ದ ಜಿ.ಟಿ.ಎನ್ ಮೈಸೂರಿನ ಕಲಾಮಂದಿರದ ಒಬ್ಬ ಸದಸ್ಯರೇ ಆಗಿದ್ದರು. ಖ್ಯಾತ ಜನಪದ ಕಲಾವಿದ ಜನ್ನಿ ಹೇಳುವಂತೆ " ಜಿ.ಟಿ.ಎನ್ ಕಲಾ ಮಂದಿರ ಪ್ರವೇಶಿಸುತ್ತಲೇ ಇಡೀ ವಾತಾವರಣದಲ್ಲಿ ಶ್ವೇತಕಳೆ ತುಂಬಿದಂತಿರುತ್ತಿತ್ತು." ಪುಟ್ಟ ಮಕ್ಕಳಿಗೆ ವಿಜ್ಞಾನದ ವಿಷಯಗಳನ್ನು ಹೇಳುವಾಗ ಅವರು ಬಳಸುತ್ತಿದ್ದ ಹಾವಭಾವಗಳಾಗಲೀ, ಭಾಷೆಯಾಗಲೀ ಯಾರಿಂದಲೂ ಸರಿಗಟ್ಟಲಾಗದು ಎಂದು ಜನ್ನಿ ಹೆಮ್ಮೆಯಿಂದ ನೆನೆಯುತ್ತಾರೆ. ಆದರೂ. ಜಿ.ಟಿ.ಎನ್‌ರವರ ಬರವಣಿಗೆ ಮತ್ತು ಅವರು ಬಳಸುವ ಭಾಷೆ ಸಂಸ್ಕೃತ ಜನ್ಯವಾಗಿರುವುದೆಂದೂ, ಕ್ಲಿಷ್ಟಕರವಾಗಿರುವುದೆಂದೂ ಹಲವಾರು ಸಾಹಿತಿಗಳ ಅಭಿಪ್ರಾಯ. ಬಹುಶಃ ಮೂಲ ಆಂಗ್ಲ ಪದಗಳಿಗೆ ಸಮಾನಾರ್ಥಕ ಪದಗಳನ್ನು ಪ್ರಯೋಗಿಸುವ ಅವರ ಯತ್ನದಲ್ಲಿ ಈ ಅಂಶ ಕಂಡಿರಬಹುದು. ಆದರೆ ಜಿ.ಟಿ.ಎನ್ ಅವರ ಕಾಳಜಿ ಸದಾ ಸಾಮಾನ್ಯ ಜನತೆಯನ್ನೇ ಪ್ರತಿನಿಧಿಸುತ್ತಿತ್ತೆಂಬುದು ನಿರ್ವಿವಾದ. ಯಾವುದೇ ಇಸಂಗಳಿಗೆ ತಮ್ಮನ್ನು ಅರ್ಪಿಸಿಕೊಳ್ಳದೆ ವೈಜ್ಞಾನಿಕ ಮನೋಭಾವದ ಪ್ರಚಾರವನ್ನೇ ತಮ್ಮ ಧ್ಯೇಯವನ್ನಾಗಿರಿಸಿಕೊಂಡಿದ್ದ ಜಿ.ಟಿ.ಎನ್. ಯಾವುದೇ ಕ್ಷಣದಲ್ಲೂ ವೇದಿಕೆಗಳನ್ನು ಅಲಂಕರಿಸುವ ಪ್ರಚಾರಪ್ರಿಯರಾಗಲು ಇಚ್ಛಿಸಲಿಲ್ಲ. ಯಾವುದೇ ಸಂಘಟನಾತ್ಮಕ ನಿಲುವುಗಳಿಗೂ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿರಲಿಲ್ಲ. ಹಾಗಾಗಿ ಅವರು ತಮ್ಮ ಭಾಷೆಯನ್ನೂ ಜನತೆಗೆ ಅರಿವಾಗುವಂತೆ ತಿದ್ದಿಕೊಳ್ಳುವ ಯತ್ನ ಮಾಡಲಿಲ್ಲವೆನಿಸುತ್ತದೆ. ಪ್ರಗತಿ ಪರ ಚಿಂತನೆಯ ರಾಜಕೀಯ ವ್ಯಾಖ್ಯಾನದಲ್ಲಿ ಅವರನ್ನು ಒಬ್ಬ ಜನಪರ ವಿಜ್ಞಾನದ ಪ್ರತಿಪಾದಕ ಎಂದು ಕರೆಯಲು ಹಲವರು ಒಪ್ಪದಿರಬಹುದು. ಆದರೆ ಸೂಕ್ತ ಸಮಯದಲ್ಲಿ, ತಮ್ಮದೇ ಆದ ವಿದ್ವತ್ತನ್ನು ಬಳಸಿ ಅವರು ಮೌಢ್ಯಗಳ ವಿರುದ್ಧ ಸಮರ ಸಾರಿರುವುದು ಅವರ ಲೇಖನಗಳಲ್ಲಿ, ಕೃತಿಗಳಲ್ಲಿ ಕಾಣಬಹುದು.

ಶಿಸ್ತು, ಸನ್ನಡತೆ ಮತ್ತು ಸ್ಪರ್ಧಾತ್ಮಕ ಮನೋಭಾವಕ್ಕೆ ಹೆಸರಾಗಿದ್ದ ಜಿ.ಟಿ.ಎನ್ ತಮ್ಮ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳುವುದರೊಂದಿಗೇ ಮತ್ತೊಬ್ಬರ ಅಭಿಪ್ರಾಯಕ್ಕೂ ಮನ್ನಣೆ ನೀಡುತ್ತಿದ್ದರು. ತಮ್ಮ ಕುಟುಂಬದವರಿಗೆ, ಸ್ನೇಹಿತರಿಗೆ ಮತ್ತು ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ಸದಾ ಪ್ರೇರೇಪಿಸುತ್ತಿದ್ದ ಜಿ.ಟಿ.ಎನ್. ಸಾಂಪ್ರದಾಯಿಕ ಮೌಢ್ಯ ಮತ್ತು ಆಚರಣೆಗಳಿಂದ ದೂರವಿರುವಂತೆ ಉಪದೇಶಿಸುತ್ತಿದ್ದರು. ತಮ್ಮ ಜೀವಿತಾವಧಿಯಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ನೀಡುವ ಡಾ. ಹೆಚ್.ನರಸಿಂಹಯ್ಯ ಪ್ರಶಸ್ತಿ, ಕರ್ನಾಟಕ ರಾಜ್ಯದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಮುಂತಾದ ಪ್ರಶಸ್ತಿಗಳನ್ನು ಗಳಿಸಿದ್ದ ಜಿ.ಟಿ.ಎನ್ ಈ ಪ್ರಶಸ್ತಿಗಳನ್ನು ಮೀರಿದ ವ್ಯಕ್ತಿಯಾಗಿದ್ದರು ಎಂದು ನಿಸ್ಸಂದೇಹವಾಗಿ ಹೇಳಬಹುದು. ವಿಜ್ಞಾನವನ್ನು ಒಂದು ಪಠ್ಯ ವಿಷಯವನ್ನಾಗಿ ಪರಿಗಣಿಸದೆ ತಮ್ಮ ಜೀವನದ ಅಂಗವಾಗಿ ಅಳವಡಿಸಿಕೊಂಡ ಜಿ.ಟಿ.ಎನ್, ಮೃತ ದೇಹವನ್ನು ಆಸ್ಪತ್ರೆಗೆ ದಾನ ಮಾಡುವ ಮೂಲಕ ತಮ್ಮ ಅಂತಿಮ ಪಯಣದಲ್ಲೂ ವೈಜ್ಞಾನಿಕ ಮನೋಭಾವವನ್ನು ತೋರಿದ್ದಾರೆ.

ಜಿ.ಟಿ.ಎನ್ ಹೊರನೋಟಕ್ಕೆ ಒಬ್ಬ ಜನಪರ ಚಿಂತಕರಾಗಿ, ಯುವಜನ ಪ್ರೇರಕರಾಗಿ, ವಿಜ್ಞಾನ ಪರಂಪರೆಯ ಅಪ್ರತಿಮ ಪ್ರಚಾರಕರಾಗಿ ಕಾಣದೆ ಹೋದರೂ, ಅವರ ಶಿಸ್ತು, ಸಂಯಮ, ಶ್ರದ್ಧೆ ಮತ್ತು ವಿಜ್ಞಾನದಲ್ಲಿ ಅವರಿಗಿದ್ದ ಅಪರಿಮಿತ ವಿಶ್ವಾಸಗಳು ಮುಂಬರುವ ಪೀಳಿಗೆಗೆ ದಾರಿದೀಪವಾಗುತ್ತದೆ. ಮೈಸೂರಿನ ಜನತೆಯ ಪಾಲಿಗೆ ಜಿ.ಟಿ.ಎನ್ ಒಂದು ನಡೆದಾಡುವ ವಿಜ್ಞಾನ ಕೋಶದಂತಿದ್ದರು. ಸಂಗೀತ, ಸಾಹಿತ್ಯ, ವಿಜ್ಞಾನ, ನಾಟಕ, ಯಕ್ಷಗಾನ ಎಲ್ಲ ಕ್ಷೇತ್ರಗಳಲ್ಲೂ ತಮ್ಮನ್ನು ತನ್ಮಯತೆಯಿಂದ ತೊಡಗಿಸಿಕೊಂಡು ಇಹಲೋಕ ತ್ಯಜಿಸಿದ ಜಿ.ಟಿ.ಎನ್. ನಿಜಕ್ಕೂ ಒಂದು ಧೃವತಾರೆ. □

ತಮ್ಮ ವಿಜ್ಞಾನ ಪ್ರಪಂಚವನ್ನು ಕೇವಲ ವೇದಿಕೆಯ ಮೇಲಿನ ಭಾಷಣಗಳಿಗೆ ಸೀಮಿತಗೊಳಿಸದೆ ಅನೇಕ ಪುಸ್ತಕಗಳನ್ನು ಬರೆಯುವ ಮೂಲಕ ಜಿ.ಟಿ.ಎನ್ ಕನ್ನಡ ವಿಜ್ಞಾನ ಕ್ಷೇತ್ರಕ್ಕೆ ಅಪಾರ ಕೊಡುಗೆ ಸಲ್ಲಿಸಿದ್ದಾರೆ. 1969ರಲ್ಲಿ ತಮ್ಮ ಅಧ್ಯಾಪಕ ವೃತ್ತಿಯನ್ನು ತೊರೆದು ಮೈಸೂರಿಗೆ ಬಂದು ನೆಲೆಸಿದ ಜಿ.ಟಿ.ಎನ್ ನಂತರದ ದಿನಗಳಲ್ಲಿ ವಿಜ್ಞಾನದ ಪ್ರಚಾರದಲ್ಲಿ ತೊಡಗಿದರು. 1968ರಲ್ಲಿ ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿದ ವಿಜ್ಞಾನ ವಿಶ್ವಕೋಶಕ್ಕೆ ಸಂಪಾದಕರಾಗಿ ಕೆಲಸ ನಿರ್ವಹಿಸಿದ ಜಿ.ಟಿ.ಎನ್ ಈ ವಿಶ್ವಕೋಶದ ಪ್ರಕಟಣೆಯ ರೂವಾರಿಯೆಂದರೂ ತಪ್ಪಾಗಲಾರದು. ನವಕರ್ನಾಟಕ ಪಬ್ಲಿಕೇಷನ್ಸ್ ಹೊರತಂದ "ನವಕರ್ನಾಟಕ ವಿಜ್ಞಾನ ಪದವಿವರಣ ಕೋಶ" ಎಂಬ ಬೃಹತ್ ಕೃತಿಯ ಸಂಪಾದಕರಾಗಿ ವಿಜ್ಞಾನ ಪದಕೋಶವನ್ನು ಕನ್ನಡದಲ್ಲಿ ಪ್ರಕಟಿಸುವ ಮೂಲಕ ವಿಜ್ಞಾನ ಕ್ಷೇತ್ರದಲ್ಲಿ ಪಾರಿಭಾಷಿಕ ಪದಗಳನ್ನು ಪರಿಚಯಿಸಿದ ಕೀರ್ತಿಯೂ ಜಿ.ಟಿ.ಎನ್‌ಗೆ ಸಲ್ಲುತ್ತದೆ.

ಸುಳ್ಳು ಭರವಸೆಗಳ, ವಿಶ್ವ ಬ್ಯಾಂಕ್ ನಿರ್ದೇಶನದ

ಬಿಜೆಪಿ ಬಜೆಟ್

ಕರ್ನಾಟಕ ಸರ್ಕಾರ ವಿಶ್ವಬ್ಯಾಂಕಿನಿಂದ ಸ್ಟ್ರಕ್ಚರಲ್ ರಿಅಡ್ಜೆಸ್ಟ್‌ಮೆಂಟ್ ಲೋನ್ ಪಡೆದುಕೊಂಡು ಅದರ ಬದಲಿಗೆ ಬ್ಯಾಂಕಿನ ಷರತ್ತಿನನುಸಾರ ಇಡೀ ಆರ್ಥಿಕತೆಯನ್ನು ಪುನರ್ ರಚಿಸಲು ಸಮ್ಮತಿಸಿದೆ. ಹೀಗಾಗಿ ಕರ್ನಾಟಕದ ಎಲ್ಲಾ ಬಜೆಟ್ಟುಗಳು ಮತ್ತು ಆರ್ಥಿಕ ನೀತಿಗಳನ್ನು ನಿರ್ಣಯಿಸುತ್ತಿರುವುದು ಈ ರಾಜ್ಯದ ಚುನಾಯಿತ ಸರ್ಕಾರಗಳು ಅಲ್ಲ. ಅಸೆಂಬ್ಲಿಯೂ ಅಲ್ಲ! ಯಾವುದೇ ಸರ್ಕಾರ ಬಂದರೂ ವಿಶ್ವಬ್ಯಾಂಕಿನ ನಿರ್ದೇಶನದನ್ವಯವೇ ಬಜೆಟ್‌ಗಳು ಪಾಸಾಗುವಂತೆ ನೋಡಿಕೊಳ್ಳಲು ೨೦೦೨ರಲ್ಲೇ ಎಸ್.ಎಂ ಕೃಷ್ಣ ಸರ್ಕಾರ ವಿತ್ತೀಯ ಸುಧಾರಣಾ ಶಾಸನವನ್ನು ಸದನದಲ್ಲಿ ಮಂಡಿಸಿತ್ತು. ಅದಕ್ಕೆ ಬಿಜೆಪಿಯೂ ಸೇರಿದಂತೆ ಯಾವುದೇ ವಿರೋಧ ಪಕ್ಷವೂ ಪ್ರತಿರೋಧವನ್ನು ವ್ಯಕ್ತಪಡಿಸದೇ ಸರ್ವಾನುಮತದಿಂದ ಅದನ್ನು ಕಾಯಿದೆಯನ್ನಾಗಿಸಿದರು. ನಂತರ ೨೦೦೪ರಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಇದೇ ನೀತಿಯನ್ನು ಇಡೀ ದೇಶಕ್ಕೆ ಅನ್ವಯವಾಗುವಂತೆ ಕೇಂದ್ರೀಯ ಕಾಯಿದೆಯನ್ನಾಗಿಸಿತು.

ಶಿವಸುಂದರ್

ಮುಖ್ಯಮಂತ್ರಿ ಯಡಿಯೂರಪ್ಪನವರು ಸಂಪೂರ್ಣ ಬಿಜೆಪಿ ಪಕ್ಷದ್ದೇ ಆಗಿರುವ ಎಲ್ಲಾ ರಾಜಕೀಯ ಒತ್ತಡಗಳಿಂದ ಮುಕ್ತವಾಗಿದ್ದ "ಸ್ವತಂತ್ರ" ಬಜೆಟ್ ಅನ್ನು ಮಂಡಿಸಿದ್ದಾರೆ. ಆದರೆ ಈ ಸ್ವತಂತ್ರ ಬಿಜೆಪಿ ಬಜೆಟ್ ಅಚ್ಚ ಕಾಂಗ್ರೆಸ್ ಬಜೆಟ್ಟುಗಳ ಮತ್ತು ಅದರ ಆರ್ಥಿಕ ನೀತಿಗಳ ಪಡಿಯಚ್ಚೇ ಆಗಿರುವುದು ಯಾವುದೇ ಭ್ರಮೆಗಳಿಲ್ಲದೆ ರಾಜಕೀಯವನ್ನು ಗಮನಿಸುತ್ತಿರುವವರಿಗೆ ಆಶ್ಚರ್ಯವನ್ನೇನೂ ತರುತ್ತಿಲ್ಲ. ಏಕೆಂದರೆ ಜುಲೈ ೧೭ರಂದು ಮಧ್ಯಾಹ್ನ ೧೨ ರ ಶುಭಗಳಿಗೆಯಲ್ಲಿ ಯಡಿಯೂರಪ್ಪನವರು ಮಂಡಿಸಿದ ಬಜೆಟ್ ಇರಲಿ ಅಥವಾ ಈ ಹಿಂದೆ ಸಮ್ಮಿಶ್ರ ಸರ್ಕಾರ ಮತ್ತು ಆದಕ್ಕೂ ಹಿಂದೆ ೨೦೦೧ರಿಂದ ಕಾಂಗ್ರೆಸ್ ಸರ್ಕಾರ ಮಂಡಿಸಿದ ಎಲ್ಲಾ ಬಜೆಟ್ಟುಗಳು ಜನರಿಂದ ಗುಟ್ಟಾಗಿ ಇಡಲ್ಪಟ್ಟಿದ್ದರೂ ಐದು ವರ್ಷಗಳಷ್ಟು ಮುಂಚಿತವಾಗಿ ವಿಶ್ವಬ್ಯಾಂಕು ಮತ್ತು ಎಡಿಬಿಗಳಂಥ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಅನುಮೋದಿಸಲ್ಪಟ್ಟವೇ ಆಗಿವೆ.

ಏಕೆಂದರೆ ಕರ್ನಾಟಕ ಸರ್ಕಾರ ವಿಶ್ವಬ್ಯಾಂಕಿನಿಂದ ಸ್ಟ್ರಕ್ಚರಲ್ ರಿಅಡ್ಜೆಸ್ಟ್‌ಮೆಂಟ್ ಲೋನ್ ಪಡೆದುಕೊಂಡು ಅದರ ಬದಲಿಗೆ ಬ್ಯಾಂಕಿನ ಷರತ್ತಿನನುಸಾರ ಇಡೀ ಆರ್ಥಿಕತೆಯನ್ನು ಪುನರ್ ರಚಿಸಲು ಸಮ್ಮತಿಸಿದೆ. ಹೀಗಾಗಿ ಅಂದಿನಿಂದಲೂ ಕರ್ನಾಟಕದ ಎಲ್ಲಾ ಬಜೆಟ್ಟುಗಳು ಮತ್ತು ಆರ್ಥಿಕ ನೀತಿಗಳನ್ನು ನಿರ್ಣಯಿಸುತ್ತಿರುವುದು ಈ ರಾಜ್ಯದ ಚುನಾಯಿತ ಸರ್ಕಾರಗಳು ಅಲ್ಲ. ಅಸೆಂಬ್ಲಿಯೂ ಅಲ್ಲ! ಯಾವುದೇ ಸರ್ಕಾರ ಬಂದರೂ ವಿಶ್ವಬ್ಯಾಂಕಿನ ನಿರ್ದೇಶನದನ್ವಯವೇ ಬಜೆಟ್‌ಗಳು ಪಾಸಾಗುವಂತೆ ನೋಡಿಕೊಳ್ಳಲು ೨೦೦೨ರಲ್ಲೇ ಎಸ್.ಎಂ ಕೃಷ್ಣ ಸರ್ಕಾರ ವಿತ್ತೀಯ ಸುಧಾರಣಾ ಶಾಸನವನ್ನು (Fiscal Responsibility Act-2002) ಸದನದಲ್ಲಿ ಮಂಡಿಸಿತ್ತು. ಅದಕ್ಕೆ ಬಿಜೆಪಿಯೂ ಒಳಗೊಂಡಂತೆ ಯಾವುದೇ ವಿರೋಧ ಪಕ್ಷವೂ ಪ್ರತಿರೋಧವನ್ನು ವ್ಯಕ್ತ ಪಡಿಸದೇ ಸರ್ವಾನುಮತದಿಂದ ಅದನ್ನು ನಮ್ಮ ಶಾಸನ ಪ್ರತಿನಿಧಿಗಳು ಕಾಯಿದೆಯನ್ನಾಗಿಸಿದರು. ನಂತರ ೨೦೦೪ರಲ್ಲಿ ಅಂದು ಕೇಂದ್ರದಲ್ಲಿ ಅಧಿಕಾರದಲಿದ್ದ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಇದೇ ನೀತಿಯನ್ನು ಇಡೀ ದೇಶಕ್ಕೆ ಅನ್ವಯವಾಗುವಂತೆ ಕೇಂದ್ರೀಯ ಕಾಯಿದೆಯನ್ನಾಗಿಸಿತು.

ಅಷ್ಟೇಕೆ ಈ ಬಾರಿ ಯಡಿಯೂರಪ್ಪನವರು ತಮ್ಮ ಬಜೆಟ್ ಭಾಷಣದಲ್ಲಿ ಕರ್ನಾಟಕದಲ್ಲಿ ಈಗಿರುವ ತಥಾಕಥಿತ ಆರ್ಥಿಕ ಸುಸ್ಥಿತಿಗೆ ೨೦೦೨ರಲ್ಲಿ ಕಾಂಗ್ರೆಸ್ ಸರ್ಕಾರ ತಂದ ಈ ಕಾಯಿದೆಯೇ ಕಾರಣವೆಂದು ಮುಕ್ತ ಕಂಠದಿಂದ ಹೀಗೆ ಕೊಂಡಾಡಿದ್ದಾರೆ:

"೧೨. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಆರ್ಥಿಕ ವೃದ್ಧಿಯು ರಾಷ್ಟ್ರೀಯ ಸರಾಸರಿ ಗಿಂತ ಕಡಿಮೆಯಾಗಿದ್ದರೂ ರಾಜ್ಯದ ವಿತ್ತೀಯ ಪರಿಸ್ಥಿತಿ ಗಣನೀಯ ಪ್ರಮಾಣದ ಸುಧಾ ರಣೆಯನ್ನು ಬಿಂಬಿಸುತ್ತಿದೆ. ೨೦೦೦-೦೧ನೇ ಸಾಲಿನಿಂದ ರಾಜ್ಯವು ಅಳವಡಿಸಿಕೊಂಡಿರುವ ವಿತ್ತೀಯ ಸುಧಾರಣೆಗಳು ಈ ಪ್ರಗತಿಗೆ ಮೂಲ ಕಾರಣಗಳಾಗಿವೆ. ೨೦೦೪-೦೫ ನೇ ಸಾಲಿನಿಂದ ರಾಜ್ಯವು ಪ್ರತೀ ವರ್ಷದಲ್ಲಿ ರಾಜಸ್ವ ವೆಚ್ಚದ ಮೇಲೆ ರಾಜಸ್ವದ ಹೆಚ್ಚಳ (Revenue Surplus)ವನ್ನು ಕಾಪಾಡಿಕೊಂಡು ಬರುತ್ತಿದೆ. ಇದರ ಜೊತೆಗೆ ಇದೇ ಅವಧಿಯಲ್ಲಿ ರಾಜ್ಯದ ವಿತ್ತೀಯ ಕೊರತೆ (fiscal deficit)ಯನ್ನು ಶೇ. ೩ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ನಿಯಂತ್ರಿಸಿಕೊಂಡು ಬರುತ್ತಿದೆ. ಇದರ ಪರಿಣಾಮದಿಂದಾಗಿ ರಾಜ್ಯದ ಒಟ್ಟು ಸಾಲದ ಮೊತ್ತವು ೬೦೫೮೮ ಕೋಟಿ ರೂ.ಗಳಾಗಿದ್ದು, ಇದು ೨೦೦೭-೦೮ ಸಾಲಿನ ಆಂತರಿಕ ಉತ್ಪನ್ನದ (GSDP) ಶೇ. ೩೦ಕ್ಕಿಂತ ಕಡಿಮೆ ಪ್ರಮಾಣದಲ್ಲಿದೆ. ರಾಜ್ಯದ ಒಟ್ಟು ಸಾಲ ತೀರುವಳಿ, ಹೊಣೆಗಾರಿಕೆಯು ಬಡ್ಡಿ ಪಾವತಿಯನ್ನೂ ಸೇರಿಸಿಕೊಂಡು, ೨೦೦೭-೦೮ನೇ ಸಾಲಿನಲ್ಲಿ ೬೦೧೮ ಕೋಟಿ ರೂ.ಗಳಿದ್ದು ಇದು ರಾಜ್ಯದ ರಾಜಸ್ವ ಸ್ವೀಕೃತಿಗಳ ಶೇ. ೧೪.೭೫ರ ಪ್ರಮಾಣದಲ್ಲಿರುತ್ತದೆ."

ಅಷ್ಟು ಮಾತ್ರವಲ್ಲದೆ ಬರಲಿರುವ ವರ್ಷಗಳಲ್ಲಿ ತಾವು ಕಡ್ಡಾಯವಾಗಿ ಈ ನೀತಿಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವುದಾಗಿಯೂ ಬಜೆಟ್ ಭಾಷಣದಲ್ಲಿ ಘೋಷಿಸಿಕೊಂಡಿದ್ದಾರೆ.

"೧೩. ಕರ್ನಾಟಕ ಸರ್ಕಾರವು ಅಳವಡಿಸಿಕೊಂಡು ಬರುತ್ತಿರುವ ವಿತ್ತೀಯ ಸುಧಾರಣೆಗಳ ಬಗ್ಗೆ ಭಾರತ ಸರ್ಕಾರ ಮತ್ತು ಹನ್ನೆರಡನೇ ಹಣಕಾಸು ಆಯೋಗವು ಮೆಚ್ಚುಗೆ ಮತ್ತು ಬೆಂಬಲವನ್ನು ವ್ಯಕ್ತಪಡಿಸಿವೆ. ಕರ್ನಾಟಕವು ೨೦೦೨ ರಿಂದಲೇ ಅಳವಡಿಸಿಕೊಂಡಿರುವ ವಿತ್ತೀಯ ಸುಧಾರಣಾ ಶಾಸನಗಳನ್ನು ಇತರೆ ರಾಜ್ಯಗಳು ನಂತರದ ವರ್ಷಗಳಲ್ಲಿ ಅಳವಡಿಸಿಕೊಳ್ಳುತ್ತಿವೆ. ಹನ್ನೆರಡನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿರುವಂತೆ ರಾಜ್ಯವು ಸಾಲ ಒಗ್ಗೂಡಿಸುವಿಕೆ ಮತ್ತು

ವ್ಯಂಗ್ಯ ಚಿತ್ರ ಕೃಪೆ: ಕನ್ನಡ ಪ್ರಭ

ಸಾಲ ಪರಿಹಾರ ಯೋಜನೆಗಳ ಸೌಲಭ್ಯವನ್ನು ಪಡೆದುಕೊಂಡಿದೆ.

೧೪. ರಾಜ್ಯದ ವಿತ್ತೀಯ ಸ್ಥಿರತೆಯನ್ನು ದೀರ್ಘಾವಧಿಯಲ್ಲಿ ಕಾಪಾಡಿಕೊಳ್ಳುವ ದೃಷ್ಟಿಯಿಂದ ವಿತ್ತೀಯ ಸುಧಾರಣೆಗಳನ್ನು ರಾಜ್ಯವು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಇದರಿಂದ ಅಭಿವೃದ್ಧಿಯೇತರ ಮತ್ತು ರಾಜಸ್ವ ವೆಚ್ಚಗಳನ್ನು ಕಡಿಮೆ ಮಾಡಿ ತನ್ಮೂಲಕ ಸಂಪನ್ಮೂಲಗಳನ್ನು ಸಂಗ್ರಹಿಸಿ ಅದನ್ನು ಅಭಿವೃದ್ಧಿ ವೆಚ್ಚ ಮತ್ತು ಬಂಡವಾಳ ಹೂಡಿಕೆಗೆ ಒದಗಿಸಲಾಗುವುದು."

ಹೀಗಾಗಿ ಯಡಿಯೂರಪ್ಪನವರ ಬಜೆಟ್‌ಅನ್ನು ಅದು ನೀಡಿರುವ ಭರವಸೆಗಳ ಕಾರ್ಯಸಾಧುತ್ವವನ್ನು ವಿಶ್ಲೇಷಣೆ ಮಾಡುವ ಮುನ್ನ ನಮ್ಮ ಚುನಾಯಿತ ಸರ್ಕಾರಗಳು ತಮಗೆ ಓಟು ನೀಡಿದ ಜನಕ್ಕಿಂತ ಹೆಚ್ಚು ಬದ್ಧತೆಯನ್ನು ತೋರಿಸುವ ಈ ವಿತ್ತೀಯ ಸುಧಾರಣಾ ಶಾಸನ (Fiscal Responsibility Act- FRA-2002) ದ ಬಗ್ಗೆ, ಅದು ಜಾರಿಯಾದ ಹಿನ್ನೆಲೆಯ ಬಗ್ಗೆ ಮತ್ತು ಅದು ಸರ್ಕಾರಕ್ಕೆ ನೀಡುವ ನಿರ್ದೇಶನದ ಬಗ್ಗೆ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ.

FRA ಮತ್ತು ಮಧ್ಯಮಾವಧಿ ವಿತ್ತೀಯ ಯೋಜನೆ – Medium Term Fiscal Plan-MTFP ಎಂಬ ಅಸಲಿ ಬಜೆಟ್ಟು!:

೧೯೯೯-೨೦೦೦ರಲ್ಲಿ ಅಂದಿನ ಎಸ್.ಎಂ.ಕೃಷ್ಣ ಸರ್ಕಾರ ವಿಶ್ವಬ್ಯಾಂಕಿನಿಂದ ಒಂದು ಬಿಲಿಯನ್ ಡಾಲರ್‌ನಷ್ಟು ಸಾಲವನ್ನು ತೆಗೆದುಕೊಂಡಿತ್ತು. (ಆಗಿನ ವಿನಿಮಯ ದರದಲ್ಲಿ ಅದು ೮೮೨೦ ಕೋಟಿ ರೂಗಳಷ್ಟಾಗಿತ್ತು. ಅದರಲ್ಲಿ ೬೧೭೪ ಕೋಟಿಗಳು ದೀರ್ಘಾವಧಿ ಸಾಲವೆಂತಲೂ ಉಳಿದದ್ದನ್ನು ಅನುದಾನವೆಂತಲೂ ವಿಶ್ವಬ್ಯಾಂಕ್ ನೀಡಿತು.) ಒಂದು ಬಿಲಿಯನ್ ಡಾಲರ್ ಮೊತ್ತವನ್ನು ಒಂದೇ ಬಾರಿಗೆ ಬ್ಯಾಂಕು ನೀಡಲಿಲ್ಲ. ಬದಲಿಗೆ ಪ್ರತಿ ವರ್ಷ ೨೫೦ ಮಿಲಿಯನ್ ಡಾಲರ್ ನೀಡುವ ನೀತಿಯನ್ನು ಅನುಸರಿಸಿತು. ಮತ್ತು ಪ್ರತಿ ವರ್ಷದ ಕಂತನ್ನು ನೀಡುವ ಮುನ್ನ ಕರ್ನಾಟಕ ಸರ್ಕಾರ ತನ್ನ ನಿರ್ದೇಶನಗಳನ್ನು ಅನುಸರಿಸುತ್ತದೆಯೋ ಇಲ್ಲವೋ ಎಂಬುದು ಖಾತರಿಯಾಗುವುದನ್ನು ಕಡ್ಡಾಯವಾಗಿಸಿತು. ಅದಕ್ಕಾಗಿ ಅಂದು ಕಾಂಗ್ರೆಸ್ ಸರ್ಕಾರ ಸದನದಲ್ಲಿ ಮಂಡಿಸಿ ಅನುಮೋದನೆ ತೆಗೆದುಕೊಂಡ ಬಜೆಟ್‌ಗೆ ಕಿಂಚಿತ್ತೂ ಬೆಲೆ ನೀಡದೆ ತನ್ನ ನಿರ್ದೇಶನದಲ್ಲಿ ೨೦೦೧ ರಿಂದ ೨೦೦೫ರ ವರೆಗೆ ಯಾವ ಯಾವ ಕ್ಷೇತ್ರದಲ್ಲಿ ಎಷ್ಟು ಹಣ ವೆಚ್ಚ ಮಾಡಬೇಕು ಮತ್ತು ಒಟ್ಟಾರೆಯಾಗಿ ಆರ್ಥಿಕತೆಯಲ್ಲಿ ಅಂದರೆ ತೆರಿಗೆ ಸಂಗ್ರಹಣೆ ಮತ್ತು ವೆಚ್ಚದ ಬಗೆಯಲ್ಲಿ ಬರಬೇಕಿರುವ ಬದಲಾವಣೆಗಳ ಬಗ್ಗೆ ನಾಲ್ಕು ವರ್ಷಗಳ ಮಧ್ಯಮಾವಧಿ ವಿತ್ತೀಯ ಯೋಜನೆ –Medium Term Fiscal Plan-MTFP – ನೀತಿಯನ್ನು ರೂಪಿಸಿತು. ಪ್ರತಿ ವರ್ಷ ಕಂತಿನ ಸಾಲವನ್ನು ಬಿಡುಗಡೆ ಮಾಡುವ ಮುನ್ನ ಈ ನೀತಿಗೆ ಸರ್ಕಾರ ಬದ್ಧವಾಗಿದೆಯೋ ಇಲ್ಲವೋ ಎಂಬುದೇ ಮಾನ ದಂಡವಾಗಿರುತ್ತಿತ್ತು. ಸರ್ಕಾರಗಳು ಮತ್ತು ಪಕ್ಷಗಳು ಸದನದ ಒಳಗಡೆ ಮತ್ತು ಹೊರಗಡೆ ಏನೇ ಯೋಜನೆಗಳನ್ನು ಘೋಷಿಸಿದರೂ ಕಾರ್ಯಾಚರಣೆಯಲ್ಲಿ ಮಾತ್ರ ಈ ಮಧ್ಯಮಾವಧಿ ವಿತ್ತೀಯ ಯೋಜನೆ ಯಿಂದ ಕಿಂಚಿತ್ತೂ ಸರಿಯುತ್ತಿರಲಿಲ್ಲ. ೨೦೦೮-೦೯ನೇ ಸಾಲಿನ ಯಡ್ಡಿಯವರ ಬಿಜೆಪಿ ಬಜೆಟ್ ಸಹ ಇದರಿಂದ ಎಳ್ಳಷ್ಟೂ ಆಚೀಚೆ ಸರಿದಿಲ್ಲ.

೧೯೯೯-೨೦೦೦ರಲ್ಲಿ ಅಂದಿನ ಎಸ್.ಎಂ. ಕೃಷ್ಣ ಸರ್ಕಾರ ವಿಶ್ವಬ್ಯಾಂಕಿನಿಂದ ಒಂದು ಬಿಲಿಯನ್ ಡಾಲರ್‌ನಷ್ಟು ಸಾಲವನ್ನು ತೆಗೆದುಕೊಂಡಿತ್ತು. (ಆಗಿನ ವಿನಿಮಯ ದರದಲ್ಲಿ ಅದು ೮೮೨೦ ಕೋಟಿ ರೂಗಳಷ್ಟಾಗಿತ್ತು. ಅದರಲ್ಲಿ ೬೧೭೪ ಕೋಟಿಗಳು ದೀರ್ಘಾವಧಿ ಸಾಲವೆಂತಲೂ ಉಳಿದದ್ದನ್ನು ಅನುದಾನವೆಂತಲೂ ವಿಶ್ವಬ್ಯಾಂಕ್ ನೀಡಿತು.) ಒಂದು ಬಿಲಿಯನ್ ಡಾಲರ್ ಮೊತ್ತವನ್ನು ಒಂದೇ ಬಾರಿಗೆ ಬ್ಯಾಂಕು ನೀಡಲಿಲ್ಲ. ಬದಲಿಗೆ ಪ್ರತಿ ವರ್ಷ ೨೫೦ ಮಿಲಿಯನ್ ಡಾಲರ್ ನೀಡುವ ನೀತಿಯನ್ನು ಅನುಸರಿಸಿತು. ಮತ್ತು ಪ್ರತಿ ವರ್ಷದ ಕಂತನ್ನು ನೀಡುವ ಮುನ್ನ ಕರ್ನಾಟಕ ಸರ್ಕಾರ ತನ್ನ ನಿರ್ದೇಶನಗಳನ್ನು ಅನುಸರಿಸುತ್ತದೆಯೋ ಇಲ್ಲವೋ ಎಂಬುದು ಖಾತರಿಯಾಗುವುದನ್ನು ಕಡ್ಡಾಯವಾಗಿಸಿತು.

ನಂತರ ೨೦೦೨ರಲ್ಲಿ ವಿಶ್ವಬ್ಯಾಂಕಿನ ಈ ನಿರ್ದೇಶನವೇ **ವಿತ್ತೀಯ ಸುಧಾರಣಾ ಶಾಸನ** (Fiscal Responsibility Act- FRA-2002) ಆಗಿ ಜಾರಿಯಾಯಿತು. ಈ ಶಾಸನವು ತನ್ನ ಮುನ್ನುಡಿಯಲ್ಲೇ *" ಪ್ರತಿ ವರ್ಷ ಸರ್ಕಾರಗಳು ಮಂಡಿಸುವ ವಾರ್ಷಿಕ ಬಜೆಟ್ಟುಗಳು MTFP ಯಲ್ಲಿ ವಿಶದವಾಗಿರುವ ಮಧ್ಯಮಾವಧಿ ಯೋಜನೆಗೆ ಬದ್ಧವಾಗಿರತಕ್ಕದ್ದು"* ಎಂದು ತಾಕೀತು ಮಾಡುತ್ತದೆ. ಈ ಕಾಯಿದೆಯ ಪ್ರಕಾರ ಒಟ್ಟಾರೆ ಆರ್ಥಿಕ ಯೋಜನೆಗಳು *"೨೦೦೨ರಿಂದ ಮೊದಲುಗೊಂಡು ನಂತರದ ನಾಲ್ಕು ವರ್ಷಗಳಲ್ಲಿ ಸರ್ಕಾರ ತನ್ನ ರೆವೆನ್ಯೂ ಕೊರತೆಯನ್ನು ಸೊನ್ನೆಗೂ ಹಾಗೂ ವಿತ್ತೀಯ ಕೊರತೆಯನ್ನು ಒಟ್ಟಾರೆ ರಾಜ್ಯ ಅಂತರಿಕ ಉತ್ಪನ್ನದ ಶೇ.೩ಕ್ಕೆ ಇಳಿಸಬೇಕೆಂದು"* (ಕಲಂ೯(೪)(ಬಿ))ಕಡ್ಡಾಯ ಮಾಡುತ್ತದೆ. ಇದನ್ನು ಸರ್ಕಾರ ತನ್ನ ಆದಾಯ ತರದ ಖರ್ಚುಗಳನ್ನು ಕಡಿಮೆ ಮಾಡಿಕೊಳ್ಳುವ ಮೂಲಕ ಮತ್ತು ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳುವ ಮೂಲಕ ಸಾಧಿಸಬೇಕೆಂದು ನಿರ್ದೇಶನ ಮಾಡುತ್ತದೆ.

ಈ ಆದಾಯ ಹೆಚ್ಚಳ ಮತ್ತು ವೆಚ್ಚಾ ಕಡಿತ ಹೇಗೆ ಮಾಡಬೇಕು ಎಂಬುದರ ಬಗ್ಗೆ ೨೦೦೧-೨೦೦೫ರ ಅವಧಿಗೆ ಅದು ಹೊರತಂದ *MTFP*ಯಲ್ಲಿ ಹೀಗೆ ಸ್ಪಷ್ಟಪಡಿಸುತ್ತದೆ:

"14. These objectives will have to be achieved by initiating a concerted programme of tax reform, reform in the structure and management of expenditures, levying appropriate user charges, public enterprise reform and reform in administration and governance. Specifically, achieving the above objectives will require:

• improving the revenue productivity of the taxes by bringing about systemic changes in the base, rate structure and administration and enforcement mechanisms. The introduction of value added tax (VAT) would be one of the major reform initiatives that is expected not only to rationalise the consumption tax system, but also to improve revenue productivity;

• *enhancing productivity of non-tax revenue. In case of user charges, this is to be brought about by greater community participation in maintenance of assets and by ensuring quality and reliability of services. Public enterprises reforms would unleash productivity gains for generating better receipts;*

• *reducing budgetary support to public enterprises. This has to be achieved by disinvesting and restructuring public enterprises. While in some cases it may be necessary to introduce voluntary retirement schemes (VRS) to reduce over-employment, government may have to close down or privatise some of the enterprises;*

• *drastic reduction of implicit and explicit subsidies to electricity and transport sectors through economic pricing, improving productivity in generation, transmission and distribution and metering the consumption of electricity by the agricultural sector and privatisation of distribution;*

• *achieving significant improvement in cost recoveries and reducing implicit subsidies in respect of services, such as drinking water supply, irrigation, higher and technical education, and secondary and tertiary health care, particularly those not directed to the poor;*

• *reducing the quantum of food subsidies by eventually targetting it strictly to persons below the poverty line;*

• improving the efficiency of government expenditures by increasing allocation to the creation and maintenance of infrastructure facilities and augmenting outlay

on human development;

• compressing unproductive government expenditures by reducing government employment and re-deployment to social sectors such as primary and secondary education and health;

• assessing expenditures in irrigation, and public works departments by closely scrutinising the schedule of unit rates. Sequencing expenditures on major projects to minimise time and cost overruns and improving public expenditure management and control systems by increasing the level of public participation (e.g. through creating water user associations) and investment;

• ensuring a careful debt management plan to reduce the composition of high cost borrowing and to limit contingent liabilities. In particular, a close scrutiny of contingent liabilities, moving away from borrowing at high cost from small savings loans and from specialised financial institutions like HUDCO, LIC and NCDC; borrowing on the basis of repayment capacity rather than availability as in the past;

• improving governance, putting in place a sound public expenditure management programme to improve the efficiency of expenditure and targetting." (*MTFP-2001-005 p.6,7*)

ಮೇಲೆ ದಪ್ಪಕ್ಷರಗಳಲ್ಲಿ ಒತ್ತು ನೀಡಿರುವ ಅಂಶಗಳು ಸ್ಪಷ್ಟ ಪಡಿಸುವಂತೆ ಸರ್ಕಾರವು ತನ್ನ ಆದಾಯ ಸಂಗ್ರಹಣೆಯನ್ನು VAT ತರಹದ ಸಾಮಾನ್ಯ ಜನರ ಮೇಲೆ ಹೆಚ್ಚಿನ ತೆರಿಗೆಯನ್ನು ಹೇರಿ ರೂಢಿಸಿಕೊಳ್ಳುವಂತ – ಅಂದರೆ ಶ್ರೀಮಂತರಿಗೆ ತೆರಿಗೆ ಹೆಚ್ಚು ಹೇರುವ ಬದಲಿಗೆ ತೆರಿಗೆಯ ಬಲೆಯನ್ನು ಮತ್ತು ತೆರಿಗೆದಾರರನ್ನು ಹೆಚ್ಚಿಸುವ ಮೂಲಕ ಅಂದರೆ ಇನ್ನೂ ಹೆಚ್ಚೆಚ್ಚು ಸಾಮಾನ್ಯರಿಂದ ತೆರಿಗೆ ವಸೂಲಿ ಮಾಡುವ ಮೂಲಕ, ತೆರಿಗೆಯೇತರ ಆದಾಯವನ್ನು ಹೆಚ್ಚಿಸಿಕೊಳ್ಳುವ ಮೂಲಕ ಅಂದರೆ ಈ ವರೆಗೆ ರಿಯಾಯತಿ ಮತ್ತು ವಿನಾಯತಿ ದರದಲ್ಲಿ ನೀಡಲಾಗುತ್ತಿದ್ದ ಸರ್ಕಾರಿ ಸರಕು ಮತ್ತು ಸೇವೆಗಳಿಗೆ ಗರಿಷ್ಟ ಮಟ್ಟದ ಬಳಕೆದಾರರ ಶುಲ್ಕವನ್ನು ವಿಧಿಸುವ ಮೂಲಕ(ಇದಕ್ಕೆ ಒಂದು ಉದಾಹರಣೆಯೆಂದರೆ ರೈತರಿಗೆ ವಿಧಿಸುತ್ತಿದ್ದ ನೀರಾವರಿ ದರ-೧೯೭೨ರಲ್ಲಿ ನೇಮಕವಾಗಿದ್ದ ನೀರಾವರಿ ಕಮಿಷನ್ನು ರೈತರಿಗೆ ವಿಧಿಸುವ ನೀರು ದರ ರೈತರ ಒಟ್ಟಾರೆ ಆದಾಯದ ಶೇ.೫ ರಿಂದ ಗರಿಷ್ಟ ೧೨ರಷ್ಟಿರ ಬೇಕೆಂದೂ ಯಾವ ಕಾರಣಕ್ಕೂ ಶೇ.೧೨ರಷ್ಟನ್ನು ದಾಟಬಾರದೆಂದೂ ಹಾಗೂ ಯಾವ ಕಾರಣಕ್ಕೂ ರೈತರಿಗೆ ಭಾರವಾಗುವಂತೆ ಇರಲೇ ಬಾರದೆಂದು ಮಾನದಂಡಗಳನ್ನು ವಿಧಿಸಿತ್ತು.

ಆದರೆ *MTFP* ಜಾರಿಯ ನಂತರ ನೀರಿನ ದರ ಕಡ್ಡಾಯವಾಗಿ ಅದರ ಪೂರೈಕೆಗೆ ತಗಲುವ ಖರ್ಚು ಮತ್ತು ಶೇ.೧ರಷ್ಟು ಬಂಡವಾಳ ವೆಚ್ಚವನ್ನು ಒಳಗೊಂಡಿರಬೇಕೆಂದು ಕಡ್ಡಾಯಗೊಳಿಸಿದೆ. ಇದರಿಂದಾಗಿ ಒಳಸುರಿ ವೆಚ್ಚಗಳನ್ನು ತಡೆಯಲಾಗದೆ ರೈತ ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿರುವ ಅವಧಿಯಲ್ಲೇ ಕಬ್ಬಿಗೆ ಪ್ರತಿ ಎಕರೆಗೆ ವಿಧಿಸಲಾಗುತ್ತಿದ್ದ ದರವನ್ನು ೩೦೦ರೂ.ನಿಂದ ೪೦೦ರೂಗಳಿಗೆ ಮತ್ತು ಭತ್ತ, ಹತ್ತಿ ಇನ್ನಿತ್ಯಾದಿ ಬೆಳೆಗಳಿಗೆ ವಿಧಿಸುತ್ತಿದ್ದ ದರವನ್ನು ೩೦ರೂ.ನಿಂದ ೧೦೦ರೂ. ಗಳಿಗೆ ಏರಿಸಲಾಗಿದೆ. ಅದು ಹರಿಯುವ ನೀರಿಗೆ. ಏತ ನೀರಾವರಿಯಾಗಿದ್ದರೆ ಇದರ ಮೂರು ಪಟ್ಟು ದರವನ್ನು ವಿಶ್ವಬ್ಯಾಂಕಿನ ಆದೇಶದನ್ವಯ ಜಾರಿಗೆ ತರಲಾಗಿದೆ. ಇದು ಒಂದು ಉದಾಹರಣೆಯಷ್ಟೆ., ಸರ್ಕಾರಿ ಉದ್ಯಮಗಳಿಗೆ ಬಜೆಟ್ಟಿನಿಂದ ನೀಡುತ್ತಿದ್ದ ಸಹಾಯ ಧನವನ್ನು ಹಿಂತೆಗೆದುಕೊಳ್ಳುವ, ಲಾಭವಿಲ್ಲದಿದ್ದರೆ ಮುಚ್ಚುವ, ಖಾಸಗೀಕರಿಸುವ ಮತ್ತು ಉದ್ಯೋಗಿಗಳಿಗೆ ವಿ.ಆರ್.ಎಸ್. ನೀಡುವ ಮೂಲಕ, ವಿದ್ಯುತ್ ವಲಯಕ್ಕೆ ನೀಡುತ್ತಿರುವ ಸಬ್ಸಿಡಿಯನ್ನು ಗಣನೀಯವಾಗಿ ಕಡಿಮೆ ಮಾಡುವ ಮೂಲಕ, ಅದರ ದರವನ್ನು ಹೆಚ್ಚಿಸುವ ಮೂಲಕ, ಕುಡಿಯುವ ನೀರು, ನೀರಾವರಿ, ಉನ್ನತ ಶಿಕ್ಷಣ, ಆರೋಗ್ಯ ಸೇವೆ ಇನ್ನಿತರ ಬಾಬತ್ತುಗಳಿಗೆ ನೀಡುತ್ತಿರುವ ಎಲ್ಲಾ ಸಬ್ಸಿಡಿಗಳನ್ನು ಗಣನೀಯವಾಗಿ ಹಿಂತೆಗೆದುಕೊಳ್ಳುವ ಮೂಲಕ, ಪಡಿತರದಲ್ಲಿ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲು ನೀಡುತ್ತಿರುವ ಸಬ್ಸಿಡಿಯನ್ನು ಕಡ್ಡಾಯವಾಗಿ ಬಡತನ ರೇಖೆಯಿಂದ ಕೆಳಗಿರುವವರಿಗೆ ಮಾತ್ರ ಸೀಮಿತಗೊಳಿಸುವ ಮೂಲಕ ಹಾಗೂ ಇನ್ನಿತ್ಯಾದಿ ಕ್ರಮಗಳ ಮೂಲಕ ಸಾಧಿಸಬೇಕೆಂದು ತಾಕೀತು ನೀಡಿದೆ. ಅಷ್ಟು ಮಾತ್ರವಲ್ಲದೆ ಇದನ್ನು ಸಾಧಿಸಲು ಪ್ರತಿ ವರ್ಷದ ರೋಡ್ ಮ್ಯಾಪ್ ಹೇಗಿರಬೇಕೆಂಬುದನ್ನು ಸರ್ಕಾರ ಸಿದ್ದಪಡಿಸುವುದನ್ನು ಅದು ಕಡ್ಡಾಯ ಮಾಡುತ್ತದೆ.

> **ಎಲ್ಲಾ ಬಳಕೆದಾರರಿಗೆ ಮೀಟರು ಲಗಾಯಿಸುವ ಮತ್ತು ಸಬ್ಸಿಡಿಯನ್ನು ಹಂತ ಹಂತವಾಗಿ ಹಿಂತೆಗೆದುಕೊಳ್ಳುವ ನೀತಿ ಹೀಗೆ ಎಸ್ಸೆಮ್ ಕೃಷ್ಣರ ಕಾಲದಿಂದ ಪ್ರಾರಂಭವಾಗಿ ಸಮ್ಮಿಶ್ರ ಸರ್ಕಾರದಲ್ಲೂ ಮುಂದುವರೆದು ಯಡಿಯೂರಪ್ಪನವರ ಬಿಜೆಪಿ ಕಾಲದಿಂದಲೂ ಅಬಾಧಿತವಾಗಿ ಹರಿದು ಬಂದಿದೆ. ಈ ಆದೇಶದ ಪ್ರಕಾರ ೨೦೦೮-೦೯ರ ಸಾಲಿನಲ್ಲೂ ಎಷ್ಟು ಸಬ್ಸಿಡಿ ನೀಡಬೇಕೆಂಬುದು ೨೦೦೫ರಲ್ಲೇ ನಿರ್ಧಾರವಾಗಿತ್ತು. ೨೦೦೫ರಲ್ಲಿ ಆಚರಣೆಗೆ ಬಂದ ೨೦೦೯ರ ವರೆಗಿನ ವಿದ್ಯುತ್ ಸಬ್ಸಿಡಿ ನೀತಿಯ ಪ್ರಕಾರ ೨೦೦೬-೦೭ರ ಸಾಲಿಗೆ ೧೭೫೨ ಕೋಟಿ, ೨೦೦೭-೦೮ರ ಸಾಲಿಗೆ ೨೧೦೨.೨೭ ಕೋಟಿ ಮತ್ತು ೨೦೦೮-೦೯ರ ಸಾಲಿಗೆ ೨೧೦೨.೩೮ ಕೋಟಿಯೆಂದು ೨೦೦೫ರಲ್ಲೇ ನಿಗದಿಗೊಳಿಸಲಾಗಿದೆ.**

ಅದರ ಭಾಗವಾಗಿ ಆಹಾರ ಸಬ್ಸಿಡಿ ಕ್ಷೇತ್ರದಲ್ಲಿ ೨೦೦೧ ರಿಂದ ೨೦೦೫ರವರೆಗೆ ಈ ಕ್ರಮಗಳನ್ನು ಅನುಸರಿಸಬೇಕೆಂದು ಅದು ಹೇಳಿತ್ತು:

" BPL cardholders (yellow) to be supplied at subsidized rate of Rs.3.50 per kg. of rice and Rs.2.75 per kg. of wheat. 10 lakh more EBPL cards to be cancelled during 2001-02. Further, more EBPL cards to be removed in each year during 2002-03, 2003-04 and 2004-05. The subsidy will be capped in nominal terms at Rs.300 crores per annum for each of the years"

(*MTFP-2001-005 p.29*)

ಅದೇ ರೀತಿ ವಿದ್ಯುತ್ ಕ್ಷೇತ್ರವು ಸಹ ಸರ್ಕಾರದಿಂದ ಅಪಾರ ಸಬ್ಸಿಡಿಯನ್ನು ಪಡೆಯುತ್ತಿದ್ದು ಅದನ್ನು ತಗ್ಗಿಸಬೇಕೆಂಬುದೇ ವಿಶ್ವಬ್ಯಾಂಕಿನ ಮತ್ತು ಎಲ್ಲಾ *MTFP*-ಗಳ ಪ್ರಮುಖ ಒತ್ತಡವಾಗಿದೆ. ಮತ್ತು ಅದನ್ನು ಯಡಿಯೂರಪ್ಪನವರ ಉಚಿತ ವಿದ್ಯುತ್ತಿನ ಪುಗಸಟ್ಟೆ ಘೋಷಣೆಯಿಂದ ಹಿಡಿದು ಹಿಂದಿನ ಎಲ್ಲಾ ಸರ್ಕಾರಗಳು ಚಾಚೂ ತಪ್ಪದಂತೆ ಪಾಲಿಸುತ್ತಾ ಬರುತ್ತಿವೆ. ಯಡಿಯೂರಪ್ಪನವರ ಈ ಬಜೆಟ್ ಸಹ ಅದಕ್ಕೆ ಹೇಗೆ ಭಿನ್ನವಲ್ಲವೆಂಬುದನ್ನು ನಂತರ ಗಮನಿಸೋಣ. ವಿದ್ಯುತ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ ೨೦೦೧ರ *MTFP*-ಹೇಳಿರುವುದನ್ನು ಗಮನಿಸಿದ್ದೇವೆ. ೨೦೦೫-೨೦೦೯ರ ಸಾಲಿಗೆ ಸರ್ಕಾರ ಸಿದ್ದಗೊಳಿಸಿದ *MTFP*-ಈ ಯೋಜನೆಯನ್ನು ಜಾರಿಗೊಳಿಸಿದೆ:

"4.3.2 Power Sector reforms have been gaining importance in recent years. The Electricity Act, 2003 notified on 10th June 2005 has provided the necessary legal framework for reforms in this sector. Establishments of Regulators, unbundling of generation, transmission and distribution are some major reforms. On the power subsidy side, various efforts have been made by the state but with little success. The purchaser-provider model has been proposed. The major constraint in assessing the power consumption is the non-metering of agricultural pump sets. Action has been contemplated to meter the consumption points so that the actual energy consumed is accounted and the subsidy provided to Escoms to the agricultural pump sets is linked to actual submission of the of the bills by the utilities" (*MTFP-2005-2009 p.29*)

ಎಲ್ಲಾ ಬಳಕೆದಾರರಿಗೆ ಮೀಟರು ಲಗಾಯಿಸುವ ಮತ್ತು ಸಬ್ಸಿಡಿಯನ್ನು ಹಂತಹಂತವಾಗಿ ಹಿಂತೆಗೆದುಕೊಳ್ಳುವ ನೀತಿ ಹೀಗೆ ಎಸ್ಸೆಮ್ ಕೃಷ್ಣರ ಕಾಲದಿಂದ ಪ್ರಾರಂಭವಾಗಿ ಸಮ್ಮಿಶ್ರ ಸರ್ಕಾರದಲ್ಲೂ ಮುಂದುವರೆದು

ಯಡಿಯೂರಪ್ಪನವರ ಬಿಜೆಪಿ ಕಾಲದಿಂದಲೂ ಅಬಾಧಿತವಾಗಿ ಹರಿದು ಬಂದಿದೆ. ಈ ಆದೇಶದ ಪ್ರಕಾರ ೨೦೦೮-೦೯ರ ಸಾಲಿನಲ್ಲೂ ಎಷ್ಟು ಸಬ್ಸಿಡಿ ನೀಡಬೇಕೆಂಬುದು ೨೦೦೫ರಲ್ಲೇ ನಿರ್ಧಾರವಾಗಿತ್ತು. ೨೦೦೫ರಲ್ಲಿ ಆಚರಣೆಗೆ ಬಂದ ೨೦೦೯ರ ವರೆಗಿನ ವಿದ್ಯುತ್ ಸಬ್ಸಿಡಿ ನೀತಿಯ ಪ್ರಕಾರ ೨೦೦೬-೦೭ರ ಸಾಲಿಗೆ ೧೭೫೨ ಕೋಟಿ, ೨೦೦೭-೦೮ರ ಸಾಲಿಗೆ ೨೧೦೨.೨೭ ಕೋಟಿ ಮತ್ತು ೨೦೦೮-೦೯ರ ಸಾಲಿಗೆ ೨೧೦೨.೩೮ ಕೋಟಿಯೆಂದು ೨೦೦೫ರಲ್ಲೇ ನಿಗದಿಗೊಳಿಸಲಾಗಿದೆ. ಅದಕ್ಕೆ ತಕ್ಕಂತೆ ಹೆಚ್ಚುವರಿಯಾಗಿ ೧೫ ಲಕ್ಷ ಪಂಪ್ ಸೆಟ್ಟಿಗೆ ಉಚಿತ ವಿದ್ಯುತ್ ನೀಡಲಾಗುವುದೆಂದು ಬಿಜೆಪಿ ಸರ್ಕಾರ ಎಷ್ಟೇ ಕೊಚ್ಚಿಕೊಂಡರೂ ಅದಕ್ಕೆ ಹೆಚ್ಚುವರಿಯಾಗಿ ಯಾವುದೇ ಹಣವನ್ನು ಬಿಡುಗಡೆ ಮಾಡದೇ ೨೦೦೫ರಲ್ಲೇ ಘೋಷಿಸಿದಂತೆ ಸಬ್ಸಿಡಿ ಮೊತ್ತವನ್ನು ೨೦೫೦ ಕೋಟಿಗೆ ನಿಗದಿಗೊಳಿಸಿದೆ. ಈ ಸಾಲಿನ ಯಡ್ಡಿ ಬಜೆಟ್ ಜಾರಿಯಾಗುವ ೬ ತಿಂಗಳಮುನ್ನವೇ ಬಿಡುಗಡೆ ಮಾಡಲಾಗಿರುವ ೨೦೦೮-೧೨ನೇ ಸಾಲಿನ *MTFP*-ಪ್ರಕಾರ ೨೦೦೮-೦೯ ನೇ ಸಾಲಿಗೆ ವಿದ್ಯುತ್ ಸಬ್ಸಿಡಿ ಮೊತ್ತವನ್ನು ೨೦೬೦ ಕೋಟಿಯೆಂದು ಅಂದಾಜಿಸಲಾಗಿತ್ತು. ಅದು ಈಗ ಯಡಿಯೂರಪ್ಪನವ್ರು ನೀಡಿರುವ ಸಬ್ಸಿಡಿಯ ಕೇವಲ ೧೦ ಕೋಟಿಯಷ್ಟು ಮಾತ್ರ ಜಾಸ್ತಿಯೆಂಬುದು ಇಲ್ಲಿ ಗಮನಾರ್ಹ.

ಅದೇ ರೀತಿ ಈ ಮೊತ್ತವು ೨೦೦೯-೧೦ರ ಸಾಲಿಗೆ ೧೯೫೭ ಕೋಟಿ, ೨೦೧೦-೧೧ರ ಸಾಲಿಗೆ ೧೮೫೯ ಕೋಟಿ ಮತ್ತು ೨೦೧೧-೧೨ ರ ಸಾಲಿಗೆ ೧೭೬೬ ಕೋಟಿಗೆ ಇಳಿಯಬೇಕೆಂದು ನಿರ್ಧರಿಸಲಾಗಿದೆ. ಅಂದರೆ ಬರಲಿರುವ ದಿನಗಳಲ್ಲಿ ಉಚಿತ ವಿದ್ಯುತ್ತೆಂಬುದು ಕೇವಲ ಕನಸು ಎಂದರ್ಥ. ಮತ್ತಿದನ್ನು ಯಾವುದೇ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಒಳಪಡಿಸದೆ ಸದನದಲ್ಲಿ ಚರ್ಚಿಸದೆ ಆಗಿರುವ ತೀರ್ಮಾನ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಅದೇ ರೀತಿ ಆಹಾರ ,ವಸತಿ ಸಾರಿಗೆಗೆ ೨೦೦೭-೦೮ರ ಸಾಲಿನಲ್ಲಿ ನೀಡಲಾಗಿರುವ ೨೫೧೭ ಕೋಟಿ ಸಬ್ಸಿಡಿಯನ್ನು ೨೦೦೮-೦೯ರಲ್ಲಿ ೧೨೨೨ ಕೋಟಿಗೂ, ೨೦೦೯-೧೦ರ ಸಾಲಿನಲ್ಲಿ ೧೧೧೪ ಕೋಟಿಗೂ, ೨೦೧೦-೧೧ರ ಸಾಲಿನಲ್ಲಿ ೧೧೧೦ ಕೋಟಿಗೂ ಮತ್ತು ೨೦೧೧-೧೨ರ ಸಾಲಿನಲ್ಲಿ ೧೧೦೮ ಕೋಟಿಗೂ ಇಳಿಸಬೇಕೆಂಬುದು ಈಗಾಗಲೇ ನಿರ್ಧಾರವಾಗಿ ಹೋಗಿದೆ.

ಯಡಿಯೂರಪ್ಪನವರ ಬಿಜೆಪಿ ಪಕ್ಷ ಚುನಾವಣೆಗೆ ಮುನ್ನ ಬಡತನ ರೇಖೆಗೆಗಿಂತ ಕಡಿಮೆ ಇರುವವರ ಸಂಖ್ಯೆಯನ್ನು ಹೆಚ್ಚಿಸುವ ಸಲುವಾಗಿ ಆದಾಯ ಮಿತಿಯನ್ನು ಈಗಿರುವ ೧೨೦೦೦ರೂ ಇಂದ ೩೦೦೦೦ರೂಗೆ ಏರಿಸುವ ಮತ್ತು ಅವರಿಗೆ ೨ರೂ ಕೆಜಿ ಅಕ್ಕಿ ಕೊಡುವುದಾಗಿ ನೀಡಿದ್ದ ಭರವಸೆಯ ಬಗ್ಗೆ ಬಜೆಟ್ಟಿನಲ್ಲಿ ಯಾವುದೇ ಪ್ರಸ್ತಾಪ ಮಾಡದಿರುವುದು ಈ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಅರ್ಥವಾಗುತ್ತದೆ.

ಅದೇ ರೀತಿ ಈ ನೀತಿಯ ಪ್ರಕಾರ ಸರ್ಕಾರ ತನ್ನ ಅತಿ ಆದ್ಯತಾ ಅಭಿವೃದ್ಧಿ ವಲಯವನ್ನು ಗುರುತಿಸಿಕೊಳ್ಳಬೇಕು. ಇದರ ಪ್ರಕಾರ ಶಿಕ್ಷಣ, ಆರೋಗ್ಯ ಮತ್ತು ಮೂಲ ಭೂತ ಸೌಕರ್ಯಗಳು ಆದ್ಯತಾ ಕ್ಷೇತ್ರಗಳೆಂದು ಗುರುತಿಸಿದ್ದರೂ ೨೦೦೧ರಲ್ಲಿ ವಿಶ್ವಬ್ಯಾಂಕ್ ಪ್ರೇರಿತ ಮತ್ತು ಲಿಖಿತ ೨೦೦೧-೦೫ರ ನೀತಿಯಲ್ಲಿ ಸ್ಪಷ್ಟ ಪಡಿಸಿರುವಂತೆ ಈ ಕಾಯಿದೆ ಮತ್ತು ನೀತಿ ಜಾರಿ ಮಾಡುತ್ತಿರುವುದೇ ಖಾಸಗೀ ಬಂಡವಾಳವನ್ನು ಉತ್ತೇಜನ ಮಾಡಲು.

ಯಡಿಯೂರಪ್ಪನವರ ಬಜೆಟ್ಟು ಮೂಲ ಭೂತವಾಗಿ ಅತ್ಯಂತ ಜನವಿರೋಧಿಯಾಗಿರುವ ವಿಶ್ವಬ್ಯಾಂಕು ಮತ್ತು MTFP ನಿರ್ದೇಶನಗಳಾದ ಪರೋಕ್ಷ ತೆರಿಗೆಯನ್ನು ಹೆಚ್ಚಿಸುವ ಮೂಲಕ ತೆರಿಗೆ ಸಂಗ್ರಹಣ ಹೆಚ್ಚಿಸುವ, ಜನರ ಆರೋಗ್ಯ, ಕಲ್ಯಾಣ, ಶಿಕ್ಷಣ, ಆಹಾರ, ವಸತಿ ಮತ್ತು ಸಾರಿಗೆಗಳಿಗೆ ಸರ್ಕಾರ ಕೊಡುತ್ತಿದ್ದ ಸಬ್ಸಿಡಿಯನ್ನು ಹಂತಹಂತವಾಗಿ ಕಡಿತಗೊಳಿಸುವ, ಸರ್ಕಾರ ನೀಡುತ್ತಿದ್ದ ಎಲ್ಲಾ ಸೇವೆ ಮತ್ತು ಸರಕುಗಳಿಗೆ ಹೆಚ್ಚು ಶುಲ್ಕ ವಿಧಿಸುವ, ಅದರಿಂದ ಸಂಗ್ರಹವಾಗುವ ಹಣವನ್ನು ಖಾಸಗಿ ಬಂಡವಾಳ ಹೂಡಿಕೆಗೆ ಪೂರಕವಾದ ಮೂಲಭೂತ ಸೌಕರ್ಯ-ಮೆಟ್ರೊ,ವಿಮಾನ ನಿಲ್ದಾಣ, ರಸ್ತೆ, ತೆರಿಗೆ ವಿನಾಯತಿ, ಕೈಗಾರಿಕೆಗಳಿಗೆ ಕಡಿತವಿಲ್ಲದ ವಿದ್ಯುತ್ ಇನ್ನಿತ್ಯಾದಿಗಳನ್ನು ಒದಗಿಸುವ ಕಾರ್ಯಕ್ರಮಗಳನ್ನೇ ಹೊಂದಿದೆ.

" Economic reforms, under way since 1991, have posed important challenges as well as opportunities to the state governments. Accelerating economic growth and reducing poverty call for releasing resources for strengthening infrastructure facilities in the states and making substantial allocation of resources to rural development, health and education. State governments have a predominant role in the task of strengthening physical infrastructure and, more particularly, in human development. Besides, the greater role assigned to the private sector has confronted the states with the challenge of creating an accommodating environment in the wake of fierce inter-state competition. Karnataka has to participate in this competitive environment. This calls for the creation of a climate for realising the growth potential by attracting private investment. However, to be a favourable destination for private investment the State government should not only follow investment-friendly policies but also create high quality infrastructure and finance it through an efficient tax system" (MTFP-2001-05,p1)

ಹೀಗಾಗಿ ಆದ್ಯತಾ ವಲಯಗಳೆಂದರೆ ಪ್ರತಿಯೊಂದರಲ್ಲೂ ಖಾಸಗಿ ಬಂಡವಾಳದ ಉತ್ತೇಜನ ಮತ್ತು ಅದಕ್ಕೆ ಪೂರಕವಾದ ವಾತಾವರಣವೆಂಬುದೇ ಆಗಿದೆ. ಯಡಿಯೂರಪ್ಪನವರ ಬಜೆಟ್ಟಿನಲ್ಲೂ ಪ್ರತಿಯೊಂದರಲ್ಲೂ ಖಾಸಗೀ ಬಂಡವಾಳದ ಪ್ರಸ್ತಾಪ ಇರುವುದು ಈ ಕಾರಣಕ್ಕಾಗಿಯೇ ಆಗಿದೆ.

ಹೀಗೆ ಯಡಿಯೂರಪ್ಪನವರ ಬಜೆಟ್ಟು ಮೂಲಭೂತವಾಗಿ ಅತ್ಯಂತ ಜನವಿರೋಧಿಯಾಗಿರುವ ವಿಶ್ವಬ್ಯಾಂಕು ಮತ್ತು MTFP ನಿರ್ದೇಶನಗಳಾದ ಪರೋಕ್ಷ ತೆರಿಗೆಯನ್ನು ಹೆಚ್ಚಿಸುವ ಮೂಲಕ ತೆರಿಗೆ ಸಂಗ್ರಹಣ ಹೆಚ್ಚಿಸುವ, ಜನರ ಆರೋಗ್ಯ,ಕಲ್ಯಾಣ,ಶಿಕ್ಷಣ,ಆಹಾರ,ವಸತಿ ಮತ್ತು ಸಾರಿಗೆಗಳಿಗೆ ಸರ್ಕಾರ ಕೊಡುತ್ತಿದ್ದ ಸಬ್ಸಿಡಿಯನ್ನು ಹಂತಹಂತವಾಗಿ ಕಡಿತಗೊಳಿಸುವ, ಸರ್ಕಾರ ನೀಡುತ್ತಿದ್ದ ಎಲ್ಲಾ ಸೇವೆ ಮತ್ತು ಸರಕುಗಳಿಗೆ ಹೆಚ್ಚು ಶುಲ್ಕ ವಿಧಿಸುವ, ಅದರಿಂದ ಸಂಗ್ರಹವಾಗುವ ಹಣವನ್ನು ಖಾಸಗಿ ಬಂಡವಾಳ ಹೂಡಿಕೆಗೆ ಪೂರಕವಾದ ಮೂಲಭೂತ ಸೌಕರ್ಯ-ಮೆಟ್ರೊ, ವಿಮಾನ ನಿಲ್ದಾಣ,ರಸ್ತೆ,ತೆರಿಗೆ ವಿನಾಯತಿ, ಕೈಗಾರಿಕೆಗಳಿಗೆ ಕಡಿತವಿಲ್ಲದ ವಿದ್ಯುತ್ ಇನ್ನಿತ್ಯಾದಿಗಳನ್ನು ಒದಗಿಸುವ ಕಾರ್ಯಕ್ರಮಗಳನ್ನೇ ಹೊಂದಿದೆ. ಅವು ಒಂದೊಂದು ಹೇಗೆ ಯಡ್ಡಿ ಬಜೆಟ್ಟಿನಲ್ಲಿ ಪ್ರತಿಫಲಿತವಾಗಿದೆ ಎಂಬುದನ್ನು ಈಗ ಗಮನಿಸೋಣ

ಯಡ್ಡಿ ಬಜೆಟ್: ಭರವಸೆಗಳು ಉಚಿತ ಮತ್ತು ಬಂಡ್ವಾಳವಿಲ್ಲದ ಬಡಾಯಿ..!

ಈಗಾಗಲೇ ಗಮನಿಸಿದಂತೆ ಯಡಿಯೂರಪ್ಪನವರು ತಮ್ಮ ಬಜೆಟ್ ಭಾಷಣದಲ್ಲಿ **MTFP** ಗೆ ತಮ್ಮ ಸರ್ಕಾರ ಸಂಪೂರ್ಣ ಬದ್ಧತೆಯನ್ನು ಘೋಷಿಸಿದ್ದಾರೆ. ಹೀಗಾಗಿ ಈ ಹಿನ್ನೆಲೆಯಲ್ಲಿ ತೆರಿಗೆ ಸಂಗ್ರಹಣ, ವೆಚ್ಚದ ಆದ್ಯತೆ, ಸಬ್ಸಿಡಿ ಕಡಿತ ಮತ್ತು ಖಾಸಗಿ ಬಂಡವಾಳದ ಉತ್ತೇಜನ ಎಲ್ಲದರಲ್ಲೂ ಬಜೆಟ್ಟಿನಲ್ಲಿ ಏನು ಘೋಷಿಸಲಾಗಿದೆ ಎಂಬುದನ್ನು ವಿಶ್ಲೇಷಿಸೋಣ.

ಬಜೆಟ್ಟಿನ ಒಟ್ಟಾರೆ ದಿಕ್ಕು: ರಾಜ್ಯದ ಒಟ್ಟಾರೆ ಅಂತರಿಕ ಉತನ್ನ ೨,೧೫,೨೮೨ ಕೋಟಿಯೆಂದು ಅಂದಾಜು ಮಾಡಲಾಗಿದೆ. ಮತ್ತು ಅದರಲ್ಲಿ ಶೇ.೭೦ರಷ್ಟು ಜನ ಆಧಾರ ಪಟ್ಟಿರುವ ಕೃಷಿ ಕ್ಷೇತ್ರದ ಪಾಲು ಶೇ.೧೯ಕ್ಕೆ ಕುಸಿದಿದ್ದರೆ ಸೇವಾ ಕ್ಷೇತ್ರದ ಪಾಲು ಶೇ.೫೫.೧ಕ್ಕೇರಿದೆ. ಕೈಗಾರಿಕಾ ಉತ್ಪಾದನಾ ಕ್ಷೇತ್ರದ ಪಾಲು ಶೇ.೨೫ರಲ್ಲೇ ನಿಂತಿದೆ. ವಾಸ್ತವವಾಗಿ ಇದು ರಾಜ್ಯದ ಪರಿಸಿತ್ಥಿ ಮಾತ್ರವಲ್ಲ ಇಡೀ ದೇಶದ ಪರಿಸ್ಥಿತಿಯೂ ಆಗಿದೆ. ಕೃಷಿ ಕ್ಷೇತ್ರದಲ್ಲಿ ಸಾರ್ವಜನಿಕ ಬಂಡವಾಳ ಹೂಡಿಕೆಯು ಪ್ರತಿ ವರ್ಷ ಕಡಿಮೆಯಾಗುತ್ತಿರುವುದರಿಂದ ಅಥವಾ ಚುನಾವಣಾ ವರ್ಷಗಳಲ್ಲಿ ಯಾವುದೇ ಸ್ಪಷ್ಟ ದೃಕ್ಪಥವಿಲ್ಲದೆ ಕೇವಲ ನಾಮಮಾತ್ರದಲ್ಲಿ ಮಾತ್ರ ಹೆಚ್ಚಾಗುವುದರಿಂದ ಹಾಗೂ ಮೂಲಭೂತವಾಗಿ ಭೂ ಸುಧಾರಣೆಯಾಗದೆ ರೈತರ ಕೊಳ್ಳುವ ಶಕ್ತಿ ಹೆಚ್ಚದೇ ಇರುವುದರಿಂದ ಮತ್ತು ವಿದೇಶಿ ಕೃಷಿ ಸರಕುಗಳ ನಿರಾತಂಕ ಆಮದಿನಿಂದ ಕೃಷಿ ಬಿಕ್ಕಟ್ಟು ಮತ್ತು ಅದರಿಂದಾಗಿ, ರೈತರ ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ. ಇಂದು ಕೃಷಿಯ ಅಭಿವೃದ್ಧಿ ದರ ಶೇ.೨ಕ್ಕೆ

[illegible] ಹೆಚ್ಚಾಗಬೇಕೆಂದರೆ ಕೃಷಿ ಉತ್ಪಾದನೆ [illegible]ವರೆ ಮಾತ್ರ ಸಾಲುವುದಿಲ್ಲ. ಅದರ ಲಾಭ ರೈತರಿಗೆ ಸಿಗುವಂತಾಗಬೇಕು. ಆದರೆ ವಿಶ್ವಬ್ಯಾಂಕಿನ ಮತ್ತು ಸರ್ಕಾರದ ನೀತಿಗಳು ಉತ್ಪಾದನೆಯನ್ನು ಹೆಚ್ಚಿಸುವೆಡೆ ಮಾತ್ರ ಗುರಿಯನ್ನು ಹೊಂದಿದೆಯಾಗಲೀ ಅದರ ಸಮಾನ ಹಂಚಿಕೆಯ ಬಗ್ಗೆ ತದ್ವಿರುದ್ಧ ನೀತಿಯನ್ನು ಹೊಂದಿವೆ.

ಯಡಿಯೂರಪ್ಪನವರ ಬಜೆಟ್ಟು ಸಹ ಕೃಷಿ ದರವನ್ನು ಶೇ.೨ರಿಂದ ಶೇ.೪ಕ್ಕೆ ಹೆಚ್ಚಿಸಬೇಕೆಂಬ ಆಶಯವನ್ನು ಹೊಂದಿದ್ದರೂ ಅದರ ಲಾಭ ರೈತರಿಗೆ ಸಲ್ಲುವಂತ ಯಾವುದೇ ನೀತಿಯನ್ನು ಹೊಂದಿಲ್ಲ. ಈ ಹಿಂದೆ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಕೇಂದ್ರದಲ್ಲಿ ಜಾರಿಗೆ ತಂದ ಕೃಷಿ ಕಮಿಷನ್ನಿನ ಮಾದರಿಯಲ್ಲೇ ರಾಜ್ಯದಲ್ಲೂ ಒಂದು ಕಮಿಷನ್ನನ್ನು ಜಾರಿಗೆ ತರಲಾಗಿದೆ. ಎನ್‌ಡಿಎ ಸರ್ಕಾರದ ಕೃಷಿ ನೀತಿಯ ಪ್ರಕಾರ (ಅದೇ ನೀತಿಯನ್ನೇ ನಂತರ ಕಾಂಗ್ರೆಸ್ ನೇತೃತ್ವದ ಎಡರಂಗ ಬೆಂಬಲಿತ ಯು.ಪಿ.ಎ ಸರ್ಕಾರವೂ ಮುಂದುವರೆಸಿತು!) ಸಣ್ಣ ಮತ್ತು ಅತಿ ಸಣ್ಣ ರೈತರು ಕೃಷಿಯನ್ನು ಬಿಟ್ಟು ಹೊರಬರಬೇಕು. ಮತ್ತು ಕಾಂಟ್ರಾಕ್ಟ್ ಫಾರ್ಮಿಂಗ್ ಮತ್ತು ಬೃಹತ್ ಕೃಷಿ ಕಂಪನಿಗಳಿಗಾಗಿ ಕಾರ್ಪೊರೇಟ್ ಕೃಷಿಯನ್ನು ಜಾರಿಗೆ ತರಬೇಕು. ಈ ನೀತಿಯ ಶಿಶುವೇ ರಾಜ್ಯ ಕೃಷಿ ಕಮಿಷನ್ ಸಹ ಎಂಬುದು ಸ್ಪಷ್ಟ. ಇದಲ್ಲದೆ ನೀರಾವರಿಗೆ ಹೆಚ್ಚಿಸಿರುವ ಹಣ, ಒಣಕೃಷಿ ರೈತರಿಗೆ ಗೊಬ್ಬರ ಕೊಳ್ಳಲು ೧೦೦೦೦ರೂ ಸಹಾಯ ಧನ ಇವೆಲ್ಲವೂ ಕೃಷಿ ಬಿಕ್ಕಟ್ಟನ್ನು ಕಡಿಮೆಮಾಡುವ ಯಾವುದೇ ದೂರಗಾಮಿ ನೀತಿಯನ್ನು ಹೊಂದಿಲ್ಲ. ಬದಲಿಗೆ ಕೃಷಿಯಲ್ಲಿ ಖಾಸಗಿ ಪ್ರವೇಶವು ಸಣ್ಣ ಮತ್ತು ಅತಿ ಸಣ್ಣ ರೈತರ ಬಿಕ್ಕಟ್ಟನ್ನು ಇನ್ನಷ್ಟು ಹೆಚ್ಚಿಸುತ್ತದಷ್ಟೆ. ಯಡಿಯೂರಪ್ಪನವರು ನೀರಾವರಿಗೆ ಕೊಟ್ಟಿರುವ ೩೫೦೦ ಕೋಟಿ, ಉಚಿತ ವಿದ್ಯುತ್ತಿಗೆ ಕೊಟ್ಟಿರುವ ೨೦ ೫೦ ಕೋಟಿ ಮತ್ತಿತರ ವೆಚ್ಚ ಎಲ್ಲಾ ಸೇರಿಸಿದರೆ ಒಟ್ಟು ೮೦೦೦ಕೋಟಿ ನೀಡಿರುವುದರಿಂದ ತಮ್ಮದೇ ರೈತರ ಪರ ಬಜೆಟ್ಟೆಂದು ಬೆನ್ನು ತಟ್ಟಿಕೊಂಡಿದ್ದಾರೆ. ಆದರೆ ನಂತರದ ವಿಶ್ಲೇಷಣೆಯಲ್ಲಿ ಸ್ಪಷ್ಟವಾಗುವಂತೆ ಇವು ಬಹುಪಾಲು ರೈತವಿರೋಧಿ ಮತ್ತು ಖಾಸಗಿಪರ ಯೋಜನೆಗಳೇ ಆಗಿವೆ.

ಇದಲ್ಲದೆ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಿಗೆ ಸಂಬಂಧ ಪಟ್ಟಂತೆ "ಇದೇ ರೀತಿಯಲ್ಲಿ ಈ ಹಿಂದೆ ಶೇ. ೯ ರ ಪ್ರಮಾಣದ ಬೆಳವಣಿಗೆ ತೋರಿಸಿದ್ದ ಸೇವಾವಲಯವನ್ನು ರಾಜ್ಯದಲ್ಲಿರುವ ಅನುಕೂಲಕರ ಮಾನವ ಸಂಪನ್ಮೂಲ ಹಾಗೂ ಜ್ಞಾನತಳಹದಿಯನ್ನು ಬಳಸಿಕೊಂಡು ಮತ್ತಷ್ಟು ಸುಧಾರಿಸಲು ಬೆಂಬಲಿಸಬೇಕಾಗಿದೆ. ಇತ್ತೀಚಿನ ವರ್ಷಗಳಲ್ಲಿ ಶೇ. ೬ ರಿಂದ ೭ ರಷ್ಟು ಪ್ರಮಾಣದ ಆರ್ಥಿಕ ವೃದ್ಧಿಯನ್ನು ತೋರಿಸಿರುವ ಕೈಗಾರಿಕಾ ವಲಯದ ಪ್ರಗತಿಯನ್ನು ಮತ್ತಷ್ಟು ಬಲಪಡಿಸಲು ಅಗತ್ಯ ನೆರವು ನೀಡಬೇಕಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ರಾಜ್ಯವು ಕೃಷಿ ವಲಯಕ್ಕೆ ಹೆಚ್ಚಿನ ಪ್ರಮಾಣದ ಹೂಡಿಕೆಯನ್ನು ಒಗ್ಗೂಡಿಸುವ ಜೊತೆಯಲ್ಲಿಯೇ **ಕೈಗಾರಿಕೆ ಮತ್ತು ಸೇವಾ ವಲಯಕ್ಕೆ ಖಾಸಗಿ ಹೂಡಿಕೆಯನ್ನು ಆಕರ್ಷಿಸಲು ಹೆಚ್ಚಿನ ಪ್ರಯತ್ನ ನಡೆಸಬೇಕಾದ ಅಗತ್ಯ ಕಂಡುಬರುತ್ತಿದೆ."** (ರಾಜ್ಯ ಬಜೆಟ್,೧೧ನೇ ಅಂಶ)

ಮೇಲ್ನೋಟಕ್ಕೆ ಸ್ಪಷ್ಟವಾಗಿರುವಂತೆ ಬಿಜೆಪಿ ಸರ್ಕಾರವು ಈ ಹಿಂದಿನ ಎಲ್ಲಾ ಸರ್ಕಾರಗಳಂತೆ ಮತ್ತು ವಿಶ್ವಬ್ಯಾಂಕ್ ನಿರ್ದೇಶಿತ **MTFP** ನೀತಿಯಂತೆ ಕೃಷಿ, ಕೈಗಾರಿಕೆಮತ್ತು ಸೇವಾ ಕ್ಷೇತ್ರಗಳಲ್ಲಿ ಖಾಸಗಿ ಬಂಡವಾಳ ಹೂಡಿಕೆಯನ್ನೇ ಉತ್ತೇಜಿಸುವ ಮತ್ತು ಅದಕ್ಕಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಸಂಪನ್ಮೂಲ ಸಂಗ್ರಹಣೆ ಮಾಡುವ ನೀತಿಯನ್ನೇ ಅನುಸರಿಸುತ್ತಿದೆ. ಹೀಗಾಗಿ ೨೦೦೮-೦೯ನೇ ಸಾಲಿನ ಬಜೆಟ್ಟಿನಲ್ಲಿ ಪ್ರತಿ ಯೋಜನೆಯಲ್ಲೂ ಖಾಸಗಿಯ ಪಾಲು ಎದ್ದು ಕಾಣುತ್ತಿದೆ. ಉದಾಹರಣೆಗೆ:ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಉತ್ತೇಜನ, ಹೆದ್ದಾರಿ, ರೈಲ್ವೆ, ಬಂದರು, ವಿಮಾನ ನಿಲ್ದಾಣ, ಕೈಗಾರಿಕಾ ವಸಾಹತು,ವಿದ್ಯುತ್ ಉತ್ಪಾದನೆ, ಬೆಂಗಳೂರು ಅಭಿವೃದ್ಧಿ, ಕುಡಿಯುವ ನೀರು ಸರಬರಾಜು, ಮಾತ್ರವಲ್ಲದೆ ದುರ್ಬಲ ವರ್ಗಗಳಿಗೆ ನಿರ್ಮಿಸಲಾಗುವ ವಸತಿಯೂ ಒಳಗೊಂಡಂತೆ ಪ್ರತಿಯೊಂದಕ್ಕೂ ಖಾಸಗಿ ಬಂಡವಾಳವನ್ನೇ ಆಶ್ರಯಿಸಲಾಗಿದೆ. ಅಷ್ಟು ಮಾತ್ರವಲ್ಲದೆ ಯಡಿಯುರಪ್ಪನವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ **ಆರ್ಥಿಕ ಅಭಿವೃದ್ಧಿಯ ಕಾರ್ಯತಂತ್ರಗಳೆಂಬ** ಪ್ರತ್ಯೇಕ ಉಪಶೀರ್ಷಿಕೆಯಲ್ಲಿ ಖಾಸಗಿ ಬಂಡವಾಳದ ಉತ್ತೇಜನವೇ ತಮ್ಮ ಕಾರ್ಯತಂತ್ರವೆಂದು ಸ್ಪಷ್ಟ ಪಡಿಸಿದ್ದಾರೆ.

"೧೭೬. ಮೂಲ ಸೌಕರ್ಯಗಳ ಅಭಿವೃದ್ಧಿಗೆ ನಾಗರೀಕ ಸೇವೆಗಳನ್ನು ಒದಗಿಸಲು ಮತ್ತು ಮಾನವ ಸಂಪನ್ಮೂಲಗಳಲ್ಲಿ ಹೂಡಿಕೆ ಮಾಡಲು ಒಟ್ಟಾರೆಯಾಗಿ ನಮಗೆ ಅಗತ್ಯವಾಗಿ ಬೇಕಾಗಿರುವ ಹೂಡಿಕೆಯು ರಾಜ್ಯ ಸರ್ಕಾರದ ವಿತ್ತೀಯ ಸಾಮರ್ಥ್ಯವನ್ನು ಮೀರಿ ನಿಂತಿದೆ. ಈ ಹಿನ್ನೆಲೆಯಲ್ಲಿ ಈ ಕೊರತೆಯನ್ನು ತುಂಬುವುದರ ಜೊತೆಗೆ ಖಾಸಗಿಯವರು ಹೂಡಿಕೆ ಮಾಡುವ ಕೆಲವು ಕ್ಷೇತ್ರಗಳನ್ನು ಗುರುತಿಸಬಹುದಾಗಿದೆ. ಏಕೆಂದರೆ ಖಾಸಗಿಯವರು ದಕ್ಷತೆ, ಅರ್ಥಪೂರ್ಣ ಸಾಮರ್ಥ್ಯ ಮತ್ತು ಅಪಾಯವನ್ನು ತಡೆದುಕೊಳ್ಳುವ ಶಕ್ತಿಯಲ್ಲಿ ಸಾರ್ವಜನಿಕ ವಲಯವನ್ನು ಮೀರಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ.

೧೭೭. ಈ ಹಿನ್ನೆಲೆಯಲ್ಲಿ ಅಭಿವೃದ್ಧಿಗೆ ಹಣ ಹೂಡಿಕೆ ನೀತಿಯಲ್ಲಿ ಗಮನಾರ್ಹ ಬದಲಾವಣೆಯ ಅಗತ್ಯವಿದೆ. ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಯನ್ನು ಆಯಾ ವಲಯಗಳ ಅನುಭವ ಮತ್ತು ಸಾಮರ್ಥ್ಯಕ್ಕೆ ಅನುಸಾರವಾಗಿ ಹಂಚಿಕೊಳ್ಳುವ ಮಾದರಿಯಲ್ಲಿ ರೂಪಿಸಿಕೊಳ್ಳಬಹುದಾಗಿದೆ. ಇಂತಹ ಖಾಸಗಿ-ಸಾರ್ವಜನಿಕ ಸಹಭಾಗಿತ್ವ ಮಾದರಿಯನ್ನು ಪ್ರೋತ್ಸಾಹಿಸುವ ವಾತಾವರಣ ನಿರ್ಮಿಸಲು ಅಗತ್ಯವಾದ ಸಾಂಸ್ಥಿಕ ಹಾಗೂ ಕಾನೂನು ನಿಯಮಾವಳಿಗಳ ಚೌಕಟ್ಟನ್ನು ಸರ್ಕಾರವು ರೂಪಿಸಿಕೊಡುತ್ತದೆ.

೧೭೮. ಆರ್ಥಿಕವಾಗಿ ಅನುಕೂಲಕರವಾದ ಆದರೆ ಹಣಕಾಸಿನ ಹೂಡಿಕೆ ದೃಷ್ಟಿಯಿಂದ ಕೆಲವೊಮ್ಮೆ ಲಾಭದಾಯಕವಲ್ಲದಿರುವ ಯೋಜನೆಗಳನ್ನು ಖಾಸಗಿಯವರು ಕೈಗೆತ್ತಿಕೊಳ್ಳಲು ಅಗತ್ಯವಾದ ಬೆಂಬಲವನ್ನು ಸರ್ಕಾರ ನೀಡಲಿದೆ. ಇಂತಹ ಖಾಸಗಿ ಸಾರ್ವಜನಿಕ ಸಹಭಾಗಿತ್ವದ ಯೋಜನೆಗಳಿಗೆ ಸಾರ್ವಜನಿಕರೂ ಸಹ ಸೂಕ್ತ ಬಳಕೆದಾರರ ಶುಲ್ಕ ಪಾವತಿ ಮೂಲಕ ಸಹಕರಿಸಬೇಕಾಗಿದೆ." ಎಂದು ಸಾರ್ವಜನಿಕರಿಗೂ ಕರೆ ನೀಡಿದ್ದಾರೆ!

ಆದರೆ ಖಾಸಗಿ ಬಂಡವಾಳ ಲಾಭದ ಆಸೆಗ ಹೂಡಲ್ಪಡುತ್ತದೆಯೇ ವಿನಃ ಸಮಾಜ ಸೇವೆಗಲ್ಲ. ಹೀಗಾಗಿ ಯಾವುದೇ ಕ್ಷೇತ್ರದಲ್ಲಿ ಖಾಸಗಿ ಬಂಡವಾಳ ಹೂಡಿಕೆಯಾಗಬೇಕೆಂದರೆ ಅಧಿಕೃತವಾಗಿ ಸರ್ಕಾರವು ತಮ್ಮ ಲಾಭವನ್ನು ಖಾತರಿಗೊಳಿಸಬೇಕೆಂದು ಶರತ್ತುಗಳನ್ನು ಹಾಕುತ್ತಿವೆ. ಅವು ತಮ್ಮ ಸರಕು ಅಥವಾ ಸೇವೆಗಳಿಗೆ ಮಾರುಕಟ್ಟೆಗಿಂತಲೂ ಹೆಚ್ಚಿನ ದರವನ್ನು ನಿಗದಿ ಮಾಡುವ ಮೂಲಕ, ಉಚಿತ ಭೂಮಿ, ನೀರು, ವಿದ್ಯುತ್‌ಗಳನ್ನು ಪಡೆದುಕೊಳ್ಳುವ ಮೂಲಕ, ತೆರಿಗೆ ರಿಯಾಯತಿ ಪಡೆದುಕೊಳ್ಳುವ ಮೂಲಕ ತಮ್ಮ ಲಾಭವನ್ನು ಖಾತರಿ ಮಾಡಿಕೊಳ್ಳುತ್ತವೆ. ಎಲ್ಲೆಲ್ಲಿ ಸುಲಭವಾಗಿ ಲಾಭ ಮಾಡಿಕೊಳ್ಳಲು ಸಾಧ್ಯವಿಲ್ಲವೋ ಅಲ್ಲಿ ಸರ್ಕಾರದ ಬೊಕ್ಕಸವನ್ನೇ ಕೌಂಟರ್ ಗ್ಯಾರಂಟಿಯಾಗಿ ಕೇಳಿ ತಮ್ಮ ಲಾಭವನ್ನು ಖಾತರಿ ಮಾಡಿಕೊಳ್ಳುತ್ತವೆ.

ಉದಾಹರಣೆಗೆ ಯಡಿಯೂರಪ್ಪನವರ ಈ ಸಾಲಿನ ಬಜೆಟ್ಟು ಒಳಗೊಂಡಂತೆ ಎಲ್ಲಾ ಸರ್ಕಾರಗಳು ವಿದ್ಯುತ್ ಕೊರತೆ ನೀಗಲು ಖಾಸಗಿಯವರನ್ನು ಉತ್ತೇಜಿಸುವುದಾಗಿ ಹೇಳುತ್ತಿವೆ. ಬಿಜೆಪಿ ಸರ್ಕಾರ ಸಹ ಖಾಸಗಿ ಸಹಭಾಗಿತ್ವದಲ್ಲಿ ೫೦೦೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಡುವುದಾಗಿ ಘೋಷಿಸಿದೆ. ಆದರೆ ಖಾಸಗಿಯವರು ಈ ಉತ್ಪಾದನೆಯಲ್ಲಿ ತೊಡಗುವ ಮುನ್ನ ಸರ್ಕಾರದೊಂದಿಗೆ ಒಂದು ಪವರ್ ಪರ್ಚೇಸ್ ಒಪ್ಪಂದಕ್ಕೆ ಸಹಿ ಹಾಕುತ್ತವೆ. ಅದರಲ್ಲಿ ತಮ್ಮ ಬಂಡವಾಳ ವೆಚ್ಚದ ಮೇಲೆ ಶೇ.೨೬ರಷ್ಟು ಖಚಿತ ಲಾಭದ ಭರವಸೆ ಇಲ್ಲದೆ ಸಹಿ ಆಗುವುದಿಲ್ಲ. ಸರ್ಕಾರ ೧೯೪೮ರ ವಿದ್ಯುತ್ ಕಾಯಿದೆಗೆ ತಿದ್ದುಪಡಿ ತಂದು ಇದಕ್ಕೆ ದಾರಿ ಮಾಡಿಕೊಟ್ಟಿದೆ. ಇದಲ್ಲದೆ ಈ ಹೂಡಿಕೆದಾರರಿಗೆ ಉಚಿತ ನೀರು, ಜಮೀನು, ತೆರಿಗೆ ರಿಯಾಯತಿ ಎಲ್ಲವನ್ನು ನೀಡಲಾಗುತ್ತದೆ. ಅದಷ್ಟನ್ನು ಸರ್ಕಾರಿ ಕಂಪನಿಗಳಿಗೇ ನೀಡಿರುತ್ತಿದ್ದರೆ ಕಡಿಮೆ ದರಕ್ಕೆ ಜನರಿಗೆ ವಿದ್ಯುತ್ ಸಿಕ್ಕಿರುತ್ತಿತ್ತು.

ಈ ಸಾಲಿನ ಬಜೆಟ್ಟು ಒಳಗೊಂಡಂತೆ ಎಲ್ಲಾ ಸರ್ಕಾರಗಳು ವಿದ್ಯುತ್ ಕೊರತೆ ನೀಗಲು ಖಾಸಗಿಯವರನ್ನು ಉತ್ತೇಜಿಸುವುದಾಗಿ ಹೇಳುತ್ತಿವೆ. ಬಿಜೆಪಿ ಸರ್ಕಾರ ಸಹ ಖಾಸಗಿ ಸಹಭಾಗಿತ್ವದಲ್ಲಿ ೫೦೦೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದಾಗಿ ಘೋಷಿಸಿದೆ. ಆದರೆ ಖಾಸಗಿಯವರು ಈ ಉತ್ಪಾದನೆಯಲ್ಲಿ ತೊಡಗುವ ಮುನ್ನ ಸರ್ಕಾರದೊಂದಿಗೆ ಒಂದು ಪವರ್ ಪರ್ಚೇಸ್ ಒಪ್ಪಂದಕ್ಕೆ ಸಹಿ ಹಾಕುತ್ತವೆ. ಅದರಲ್ಲಿ ತಮ್ಮ ಬಂಡವಾಳ ವೆಚ್ಚದ ಮೇಲೆ ಶೇ.೨೬ರಷ್ಟು ಖಚಿತ ಲಾಭದ ಭರವಸೆ ಇಲ್ಲದೆ ಸಹಿ ಆಗುವುದಿಲ್ಲ. ಸರ್ಕಾರ ೧೯೪೮ರ ವಿದ್ಯುತ್ ಕಾಯಿದೆಗೆ ತಿದ್ದುಪಡಿ ತಂದು ಇದಕ್ಕೆ ದಾರಿ ಮಾಡಿಕೊಟ್ಟಿದೆ. ಇದಲ್ಲದೆ ಈ ಹೂಡಿಕೆದಾರರಿಗೆ ಉಚಿತ ನೀರು, ಜಮೀನು, ತೆರಿಗೆ ರಿಯಾಯತಿ ಎಲ್ಲವನ್ನು ನೀಡಲಾಗುತ್ತದೆ.

ಅದೇ ರೀತಿ ಹುಬ್ಬಳ್ಳಿ ಮತ್ತು ಧಾರವಾಡದ ಕುಡಿಯುವ ನೀರು ಸರಬರಾಜನ್ನು ಖಾಸಗಿ ಸಹಭಾಗಿತ್ವದಲ್ಲಿ ಮಾಡುವುದಾಗಿ ಸರ್ಕಾರ ಬಜೆಟ್ಟಿನಲ್ಲಿ ಘೋಷಿಸಿದೆ. ಈಗಾಗಲೇ ಹುಬ್ಬಳ್ಳಿ ಧಾರವಾಡದ ಹಲವಾರು ವಾರ್ಡುಗಳಲ್ಲಿ ೨೪/೭ ನೀರು ಸರಬರಾಜು ಪ್ರಯೋಗ ನಡೆಯುತ್ತಿದ್ದು ವಿಯೋಲಿಯಾ ಎಂಬ ಫ್ರೆಂಚ್ ಕಂಪನಿಯೊಂದಕ್ಕೆ ನೀರು ಸರಬರಾಜು ಗುತ್ತಿಗೆಯನ್ನು ನೀಡಲಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಆ ವಾರ್ಡುಗಳಲ್ಲಿ ಉಚಿತ ನೀರು ಸರಬರಾಜು ಮಾಡುತ್ತಿದ್ದ ಎಲ್ಲಾ ಬೀದಿ ಕೊಳಾಯಿಗಳನ್ನು ಕಿತ್ತು ಹಾಕಲಾಗಿದೆ. ಮತ್ತು ಪ್ರತಿ ಮನೆಗೂ ಮೀಟರನ್ನು ಕಡ್ಡಾಯವಾಗಿ ಅಳವಡಿಸಲಾಗಿದೆ. ಪ್ರಾರಂಭದ ಮೂರು ತಿಂಗಳು ಮೂರು ಹೊತ್ತು ನೀರು ಪಡೆದ ಜನರಿಗೆ ಇದೀಗ ಸರ್ಕಾರಿ ಜಲಮಂಡಳಿಯನ್ನೇ ಬಳಸಿಕೊಂಡು ಆ ಫ್ರೆಂಚ್ ಕಂಪನಿ ದಿಢೀರನೆ ೩೦೦ರೂ ನಿಂದ ೯೦೦೦ರೂ ವರಗೆ ನೀರಿನ ಬಿಲ್‌ಗಳನ್ನು ಹೇರಲಾರಂಭಿಸಿದೆ. ಬಿಲ್ ಕಟ್ಟದಿದ್ದರೆ ಕನೆಕ್ಷನ್ ಕಡಿಯುವ ನೀತಿ ಇದ್ದೇ ಇದೆ. ಹಾಗಾದಲ್ಲಿ ಬೀದಿ ಕೊಳಾಯಿಯೂ ಇಲ್ಲದ ಸಂದರ್ಭದಲ್ಲಿ ದುಡ್ಡಿಲ್ಲದ ಜನ ಕುಡಿಯುವ ನೀರು ಹೇಗೆ ಪಡೆಯುತ್ತಾರೆ? ತಮಗೆ ಲಾಭದಾಯಕ ದರ ತೆತ್ತರೆ ಮೂರು ಹೊತ್ತೂ ನೀರು. ಇಲ್ಲದಿದ್ದರೆ ಈ ದೇಶದ ನಾಗರೀಕನಾಗಿದ್ದರೂ ಕುಡಿಯುವ ನೀರಿಲ್ಲ. ಸಂವಿಧಾನಕ್ಕೆ ವಿರುದ್ಧವಾಗಿರುವ ಈ ಮೌಲ್ಯಗಳ ಹಿನ್ನೆಲೆಯಲ್ಲೇ ಪ್ರತಿಯೊಂದು ಕ್ಷೇತ್ರದಲ್ಲಿ ಖಾಸಗಿ ಸಹಭಾಗಿತ್ವ ಯೋಜನೆ ಜಾರಿಯಾಗುತ್ತಿದೆ.

ಇದರಿಂದ ಯಾರಿಗೆ ಲಾಭ? ಯಾರಿಗೆ ನಷ್ಟ? ಯಾವ ಯಾವ ಕ್ಷೇತ್ರಗಳಲ್ಲಿ ಖಾಸಗಿ ಬಂಡವಾಳ ಪ್ರವೇಶಿಸಿದೆಯೋ ಅಲ್ಲೆಲ್ಲಾ ಸರ್ಕಾರಿ ಸಂಪತ್ತು ಬಿಡಿಗಾಸಿಗೆ ಖಾಸಗಿಯವರ ಪಾಲಾಗಿದೆ. ಮತ್ತು ಸಾರ್ವಜನಿಕರು ಖಾಸಗಿಯವರಿಂದ ಸೇವೆ ಸರಕು ಪಡೆದುಕೊಳ್ಳಲು ತಮ್ಮ ಸೀಮಿತ ಆದಾಯದ ಬಹು ಮುಖ್ಯ ಭಾಗವನ್ನು ತೆತ್ತು ಬರ್ಬಾದಾಗುತ್ತಿದ್ದಾರೆ. ಇದು ಕರ್ನಾಟಕದಲ್ಲಿ ಮಾತ್ರವಲ್ಲ, ಇಡಿ ವಿಶ್ವದಾದ್ಯಂತ ನಡೆಯುತ್ತಿರುವ ಪ್ರಕ್ರಿಯೆಯಾಗಿದ್ದು ಜಾಗತೀಕರಣದ ಕಾಲಘಟ್ಟದಲ್ಲಿ ನವ ಬಿಲಿಯನ್ನರುಗಳಾಗುತ್ತಿರುವ ಬಹುಪಾಲು ಉದ್ಯಮಪತಿಗಳು ಈ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ಯೋಜನೆಗಳ ಫಲಾನುಭವಿಗಳೆಂದು ಹಲವಾರು ಅಧ್ಯಯನಗಳು ಧೃಢಪಡಿಸಿವೆ.

ಹೀಗೆ ಯಡಿಯೂರಪ್ಪನವರ ಬಜೆಟ್‌ನ ದಿಕ್ಕನ್ನು ಗಮನಿಸಿದರೆ ಈ ಹಿಂದಿನ ಕಾಂಗ್ರೆಸ್ ಸರ್ಕಾರ ಪ್ರಾರಂಭಿಸಿದಂತ ಸಂಪೂರ್ಣವಾಗಿ ಖಾಸಗಿ ದೊಡ್ಡ ಬಂಡವಾಳಿಗರ ಹಿತವನ್ನು ಕಾಯುವ ಮತ್ತು ಅದಕ್ಕಾಗಿ ಸಾಮಾನ್ಯ ಜನರ ಆದಾಯವನ್ನು ಮತ್ತು ದೇಶದ ಸಂಪನ್ಮೂಲವನ್ನು ಸುಲಿಗೆ ಮಾಡುವ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಪ್ರಾಯೋಜಿತವಾದ ಅತ್ಯಂತ ಜನವಿರೋಧಿ ನವ ಉದಾರವಾದಿ ಆರ್ಥಿಕ ನೀತಿಗಳನ್ನೇ ಬಿಜೆಪಿ ಸರ್ಕಾರ ಸಹ ಇನ್ನಷ್ಟು ನಿಷ್ಠವಾಗಿ ಯಥಾವತ್ ಪಾಲಿಸುತ್ತಿದೆ. ಇದೇ ದಾರಿಯಲ್ಲಿ ೨೦೦೯ರ ಜನವರಿಯಲ್ಲಿ ಬೆಂಗಳೂರಿನಲ್ಲಿ ಗ್ಲೋಬಲ್ ಇನ್ವೆಸ್ಟರ್ ಮೀಟ್ ಒಂದನ್ನು ಕರೆಯುವುದಾಗಿ ಸರ್ಕಾರ ಬಜೆಟ್ಟಿನಲ್ಲಿ ಘೋಷಿಸಿದೆ. ಇದು ೨೦೦೦ದಲ್ಲಿ ಬೆಂಗಳೂರನ್ನು ಸಿಂಗಪೂರ್ ಮಾಡಬೇಕೆಂದು ಮತ್ತು ಕರ್ನಾಟಕವನ್ನು ಸಂಪೂರ್ಣವಾಗಿ ವಿದೇಶಿ ಬಂಡ-ವಾಳಿಗರಿಗೆ ಗುತ್ತಿಗೆ ನೀಡಲು ಹೊರಟಿದ್ದ ಎಸ್.ಎಂ ಕೃಷ್ಣ ಸರ್ಕಾರದ ನೀತಿಯ ಮುಂದುವರಿಕೆಯೇ ಆಗಿದ್ದು ಕರ್ನಾಟಕದ ಸಂಪನ್ಮೂಲಗಳನ್ನು ಜನರಿಂದ ಕಿತ್ತುಕೊಂಡು ಇನ್ನಷ್ಟು ವಿದೇಶಿ ಬಂಡವಾಳಿಗರಿಗೆ ಪರಭಾರೆ ಮಾಡುವ ಜನವಿರೋಧಿ ನೀತಿಯೇ ಆಗಿದೆ.

> **ಗೂಡ್ಸ್ ಮತ್ತು ಸರ್ವೀಸ್ ಟ್ಯಾಕ್ಸ್ (GST) ಪದ್ಧತಿಯು ಆದಾಯ ಆಧಾರಿತ ಪದ್ಧತಿಗೆ ವ್ಯತಿರಿಕ್ತವಾಗಿ ವೆಚ್ಚ ಆಧಾರಿತ ತೆರಿಗೆ ಪದ್ಧತಿಯಾಗಿರುತ್ತದೆ. ಸಹಜವಾಗಿ ಬಡ ಮಧ್ಯಮ ವರ್ಗದ ಜನತೆ ತಮ್ಮೆಲ್ಲಾ ಆದಾಯವನ್ನು ಅತ್ಯಗತ್ಯ ವಸ್ತುಗಳ ಮೇಲೆ ವೆಚ್ಚ ಮಾಡುವುದರಿಂದ ಅತಿ ಹೆಚ್ಚು ತೆರಿಗೆ ಪಾವತಿ ಮಾಡುವ ವರ್ಗ ಸಾಮಾನ್ಯರೇ ಆಗಿರುತ್ತಾರೆ. ಶ್ರೀಮಂತ ವರ್ಗ ತನ್ನ ಆದಾಯದ ಬಹುಭಾಗವನ್ನು ಉಳಿತಾಯ ಮಾಡುವುದರಿಂದ ಮತ್ತು ಅದನ್ನು ಹೂಡಿಕೆ ಮಾಡುವುದರಿಂದ ಹಾಗೂ ಹೂಡಿಕಾ ವೆಚ್ಚಕ್ಕೆ ರಿಯಾಯತಿಗಳು ಸಿಗುವುದರಿಂದ ತೆರಿಗೆ ಸಂಪನ್ಮೂಲದಲ್ಲಿ ಶ್ರೀಮಂತ ವರ್ಗದ ಪಾಲು ಕಡಿಮೆಯಾಗುತ್ತಲೇ ಹೋಗಿ ಬಡ ಮಧ್ಯಮ ವರ್ಗದವರ ಪಾಲು ಹೆಚ್ಚುತ್ತಾ ಹೋಗುತ್ತದೆ.**

ತೆರಿಗೆ ಸಂಗ್ರಹಣ:ಜನರಿಂದ ಉದ್ಯಮಪತಿಗಳಿಗೆ!:

ಯಾವುದೇ ಸರ್ಕಾರದ ಬಜೆಟ್ಟಿನ ನೀತಿಗಳ ಹಿಂದಿನ ಹಿತಾಸಕ್ತಿಗಳು ಅರ್ಥವಾಗುವುದು ಅದು ಎಲ್ಲಿಂದ ಸಂಪನ್ಮೂಲ ಕ್ರೂಢೀಕರಿಸಿ ಎಲ್ಲಿಗೆ ಕೊಡಮಾಡುತ್ತಿದೆ ಎಂಬ ವಿಶ್ಲೇಷಣೆಯಲ್ಲಿ. ಕರ್ನಾಟಕ ರಾಜ್ಯ ಸರ್ಕಾರದ ಪ್ರಧಾನ ಸಂಪನ್ಮೂಲ ಅದರ ಸ್ವಂತ ತೆರಿಗೆ ಮೂಲಗಳು.ರಾಜ್ಯದ ಒಟ್ಟಾರೆ ಆದಾಯ ಮೂಲಗಳಲ್ಲಿ ಜನರಿಂದ ವಸೂಲಿ ಮಾಡುವ ತೆರಿಗೆಯ ಪಾಲು ಶೇ.೭೪ರಷ್ಟು. ಶೇ.೧೭ರಷ್ಟು ಕೇಂದ್ರದ ತೆರಿಗೆಗಳಲ್ಲಿ ರಾಜ್ಯದ ಪಾಲಿನಿಂದಲೂ ಮತ್ತು ಉಳಿದ ಶೇ.೯ರಷ್ಟು ಕೇಂದ್ರದ ಅನುದಾನಗಳಿಂದಲೂ ಪಡೆದುಕೊಳ್ಳಲಾಗುತ್ತದೆ. ಅಷ್ಟು ಮಾತ್ರವಲ್ಲ ಇಡೀ ದೇಶದಲ್ಲಿ ಕರ್ನಾಟಕ ರಾಜ್ಯವೇ ಅತ್ಯಂತ ಹೆಚ್ಚು ತೆರಿಗೆ ಹೇರಿಕೆ ಉಳ್ಳ ರಾಜ್ಯವಾಗಿದೆ. ಇವೆಲ್ಲವೂ ಪರೋಕ್ಷ ಅಂದರೆ ಜನಸಾಮಾನ್ಯರು ನೀಡುವ ತೆರಿಗೆಗಳೇ ಆಗಿವೆ. ೨೦೦೫ರ ನಂತರ **VAT** ತೆರಿಗೆ ಪದ್ಧತಿಯನ್ನು ಸರ್ಕಾರ ಅನುಸರಿಸಲು ಪ್ರಾರಂಭಿಸಿದ ಮೇಲೆ ಪರೋಕ್ಷ ತೆರಿಗೆ ಅಂದರೆ ಸಾಮಾನ್ಯ ಜನರಿಂದ ಸಂಗ್ರಹಿಸುತ್ತಿದ್ದ ತೆರಿಗೆ ಪ್ರಮಾಣಶೇ.೨೦ಕ್ಕಿಂತಲೂ ಜಾಸ್ತಿಯಾಗಿದೆ. ಅಂದರೆ ಜನತೆ ಮೊದಲಿಗಿಂತಲೂ ಶೇ.೨೦ರಷ್ಟು ಹೆಚ್ಚಿನ ಹಣವನ್ನು ಸರ್ಕಾರಕ್ಕೆ ಸಲ್ಲಿಸುತ್ತಿದ್ದಾರೆ ಎಂದರ್ಥ. ಕರ್ನಾಟಕ ಆಡಳಿತ ಸುಧಾರಣಾ ಆಯೋಗವೇ ಸ್ಪಷ್ಟ ಪಡಿಸಿರುವಂತೆ ೨೦೦೧-೦೨ರ ಸಾಲಿನಲ್ಲಿ ತೆರಿಗೆ ಸಂಗ್ರಹಣ ಕೇವಲ ೯೦೪೨.೭೮ ಕೋಟಿ ರೂ.ಗಳಷ್ಟಿದ್ದದ್ದು ೨೦೦೫-೦೬ರ ಸಾಲಿನಲ್ಲಿ ೨೫೪೪೬ ಕೋಟಿ ರೂಗಳಿಗೇರಿತು. ಇದೇ ಆಯೋಗದ ಅಂದಾಜಿನ ಪ್ರಕಾರ ೨೦೧೦ ರ ವೇಳೆಗೆ ತೆರಿಗೆ ಸಂಗ್ರಹಣ ಈ ಮಾರ್ಗದಲ್ಲಿ ೨೦೦೧ಕ್ಕೇ ಹೋಲಿಸಿದಲ್ಲಿ ಶೇ.೨೧೦ ಪಟ್ಟು ಹೆಚ್ಚಾಗಲಿದೆ. ಇದನ್ನು ದೊಡ್ಡ ಹೆಗ್ಗಳಿಕೆ ಮತ್ತು ಸಾಧನೆ ಎಂದು ಸರ್ಕಾರಗಳು ಬಿಂಬಿಸುತ್ತವೆ. ಆದರೆ ಸಾರಾಂಶದಲ್ಲಿ ಇದರರ್ಥ ಸಾಮಾನ್ಯ ಜನತೆ ಮೊದಲಿಗಿಂತ ಇನ್ನೂ ಎರಡು ಪಟ್ಟು ಹೆಚ್ಚು ತೆರಿಗೆ ಕಟ್ಟುತ್ತಿದ್ದಾರೆ ಎಂದು ತಾನೇ ಅರ್ಥ? ಏಕೆಂದರೆ ಶ್ರೀಮಂತರ ಮತ್ತು ಉದ್ಯಮಪತಿಗಳ ಮೇಲೆ ಹಾಕುತ್ತಿದ್ದ ವರಮಾನ ತೆರಿಗೆ, ಕಾರ್ಪೋರೇಟ್ ತೆರಿಗೆ, ಬಂಡವಾಳ ತೆರಿಗೆ, ಬಂಡವಾಳ ಲಾಭದ ಮೇಲೆ ತೆರಿಗೆ, ಡಿವಿಡೆಂಡ್-ಲಾಭ ಇನ್ನಿತ್ಯಾದಿಗಳ ಮೇಲೆ ಹಾಕುತ್ತಿದ್ದ ತೆರಿಗೆ ಇನ್ನಿತ್ಯಾದಿ ನೇರ ತೆರಿಗೆಗಳ ಪ್ರಮಾಣ ಇದೇ ಸಮಯದಲ್ಲಿ ಕಡಿಮೆಯಾಗುತ್ತಾ ಬರುತ್ತಿದೆ. ಇದಕ್ಕೆ ಖಾಸಗಿ ಬಂಡವಾಳಕ್ಕೆ ಪೂರಕವಾದ ವಾತಾವರಣ ಒದಗಿಸಬೇಕೆಂಬ ನೀತಿಗಳೇ ಕಾರಣ.

VAT ತೆರಿಗೆ ಪದ್ಧತಿಯು ಮೂಲಭೂತವಾಗಿ ತೆರಿಗೆ ಸರಳತೆಗಿಂತ ಹೆಚ್ಚಾಗಿ ತೆರಿಗೆ ಬೆಲೆಯನ್ನು ಹೆಚ್ಚು ಮಾಡುವ ಅಂದರೆ ಹೆಚ್ಚೆಚ್ಚು ಜನರನ್ನು ತೆರಿಗೆ ಪದ್ಧತಿಯೊಳಗೆ ತರುವ ಪದ್ಧತಿಯಾಗಿದೆ. ಇದನ್ನು ಪ್ರಪಂಚದೆಲ್ಲೆಡೆ ಶ್ರೀಮಂತ ವರ್ಗಗಳಿಗೆ ತೆರಿಗೆ ಮಾಫಿ ಮಾಡುವ ಸಂದರ್ಭದಲ್ಲೇ ಜಾರಿಗೆತರಲಾಗುತ್ತಿದೆ. ಹೀಗಾಗಿ ಇದನ್ನು ಆದಾಯ ಆಧಾರಿತ ಪ್ರಗತಿಪರ ತೆರಿಗೆ ನೀತಿಗೆ ಹೋಲಿಸಿದರೆ ಅತ್ಯಂತ ಪ್ರತಿಗಾಮಿ ತೆರಿಗೆ ಪದ್ಧತಿಯೆಂದೇ ಬಣ್ಣಿಸಲಾಗುತ್ತದೆ. ಈಗ ಕೇಂದ್ರದಲ್ಲೂ ಮತ್ತು ರಾಜ್ಯದಲ್ಲೂ ಇದಕ್ಕಿಂತಲೂ ಅತ್ಯಂತ ಪ್ರತಿಗಾಮಿಯಾದ ಸರಕು ಮತ್ತು ಸೇವೆಗಳಿಗೆ ಸಮಾನವಾಗಿ ಅನ್ವಯಿಸಲಾಗುವ ಗೂಡ್ಸ್ ಮತ್ತು ಸರ್ವೀಸ್ ಟ್ಯಾಕ್ಸ್(GST) ಎಂಬ ಪದ್ಧತಿಯನ್ನು ಜಾರಿಗೆ ತರಲು ಸಿದ್ಧತೆಗಳು ನಡೆಯುತ್ತಿವೆ. ಅದರ ಬಗ್ಗೆ ಯಡಿಯೂರಪ್ಪನವರ ಬಜೆಟ್ಟಿನಲ್ಲಿ ಹೀಗೆ ಹೇಳಲಾಗಿದೆ:

" ೧೮೮. ರಾಜ್ಯವು ತೀವ್ರಗತಿಯಲ್ಲಿ ಅಭಿವೃದ್ಧಿ ಸಾಧಿಸಲೋಸುಗ ಅನಿವಾರ್ಯವಾಗಿ ಗಣನೀಯವಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾಗುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕದ ತೆರಿಗೆ ವ್ಯವಸ್ಥೆಯಲ್ಲಿ ಕೈಗೊಂಡ ಪ್ರಗತಿಶೀಲ ಸುಧಾರಣೆಯ ಪರಿಣಾಮವಾಗಿ ರಾಜ್ಯದಲ್ಲಿ ಮೌಲ್ಯವರ್ಧಿತ ತೆರಿಗೆ ಪದ್ಧತಿಯು ಉತ್ತಮವಾಗಿ ವ್ಯವಸ್ಥಿತಗೊಂಡಿರುತ್ತದೆ ಮತ್ತು ಅಂಗೀಕೃತವಾಗಿರುತ್ತದೆ. ರಾಷ್ಟ್ರಾದ್ಯಂತ ಮುಂದಿನ ಎರಡು ವರ್ಷಗಳಲ್ಲಿ ಸರಕು ಮತ್ತು ಸೇವೆಗಳಿಗೆ ಸಮಾನವಾಗಿ ಅನ್ವಯಿಸುವ ಒಂದು ತೆರಿಗೆ ಪದ್ಧತಿಯನ್ನು ಜಾರಿಗೆ ತರುವ ಸಾಧ್ಯತೆಯನ್ನು ರಾಜ್ಯ ಹಣಕಾಸು ಸಚಿವರುಗಳ ಅಧಿಕಾರಯುಕ್ತ ಸಮಿತಿಯಲ್ಲಿ ಈಗ ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಇತ್ತೀಚೆಗೆ ರಚಿತವಾದ ೧೩ನೇ ಹಣಕಾಸು ಆಯೋಗ, ರಾಷ್ಟ್ರದಲ್ಲಿ ಹಣಕಾಸಿನ ಸಂಯುಕ್ತತೆ ಬಗ್ಗೆ ಈಗಾಗಲೇ ತನ್ನ ಚರ್ಚೆಗಳನ್ನು ಪ್ರಾರಂಭಿಸಿರುತ್ತದೆ."

ಈ ಗೂಡ್ಸ್ ಮತ್ತು ಸರ್ವೀಸ್ ಟ್ಯಾಕ್ಸ್(GST) ಪದ್ಧತಿಯು ಆದಾಯ ಆಧಾರಿತ ಪದ್ಧತಿಗೆ ವ್ಯತಿರಿಕ್ತವಾಗಿ ವೆಚ್ಚ ಆಧಾರಿತ ತೆರಿಗೆ ಪದ್ಧತಿಯಾಗಿರುತ್ತದೆ. ಸಹಜವಾಗಿ ಬಡ ಮಧ್ಯಮ ವರ್ಗದ ಜನತೆ ತಮ್ಮೆಲ್ಲಾ ಆದಾಯವನ್ನು ಅತ್ಯಗತ್ಯ ವಸ್ತುಗಳ ಮೇಲೆ ವೆಚ್ಚ ಮಾಡುವುದರಿಂದ ಅತಿ ಹೆಚ್ಚು ತೆರಿಗೆ ಪಾವತಿ ಮಾಡುವ ವರ್ಗ ಸಾಮಾನ್ಯರೇ ಆಗಿರುತ್ತಾರೆ.

(ಮುಂದಿನ ಸಂಚಿಕೆಗೆ)

ಜಾನಪದ ಆಧುನಿಕಗಳ ಸಂಬಂಧ–ಅನುಬಂಧ

ಡಾ॥ ಸಿ.ಬಿ. ಹೊನ್ನಯ್ಯ

ಆಧುನಿಕ ನಗರಗಳಲ್ಲಿ ಬದುಕುತ್ತಿರುವ ವಿದ್ಯಾವಂತರು, ಬುದ್ಧಿವಂತರು, ಆಧುನಿಕರು, ವಿಜ್ಞಾನಿಗಳು, ತಂತ್ರಜ್ಞರು, ಡಾಕ್ಟರ್‌ಗಳು, ಪ್ರಾಧ್ಯಾಪಕರು, ತತ್ವಜ್ಞಾನಿಗಳು ಮುಂತಾದ ವಿವಿಧ ವೃತ್ತಿ ಹೊತ್ತ ಜನಗಳ ವ್ಯಕ್ತಿನಾಮಗಳು, ಇವರು ವಾಸಿಸುವ ಪ್ರದೇಶಗಳ ಸ್ಥಳನಾಮಗಳನ್ನು ಗಮನಿಸಿದರೆ, ಅವರೊಳಗೆ ಪುರಾಣ, ಸಂಪ್ರದಾಯ ಮೂಲದ ಹೆಸರುಗಳಿರುವುದನ್ನು ಕಾಣಬಹುದು. ಪ್ರಪಂಚದ ಎಲ್ಲಾ ನಗರಗಳಲ್ಲಿಯೂ ಅವರವರ ನಂಬಿಕೆ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ಈ ರೀತಿಯ ಹೆಸರುಗಳು ಇದ್ದೇ ಇರುತ್ತವೆ. ಆದರೆ ಭಾರತ ದೇಶದಲ್ಲಿ ಅತ್ಯಧಿಕವಾಗಿರುತ್ತದೆ. ಇದಕ್ಕೆ ಕಾರಣ ಭಾರತ ಮೂಲತಃ ಜಾನಪದೀಯ ಅಂಶಗಳ ಕಣಜ. ಇಂತಹ ಹೆಸರುಗಳು ಸಹಸ್ರವಾಗಿರುವುದರಿಂದ ಅವುಗಳಲ್ಲಿ ಪ್ರಾತಿನಿಧಿಕವಾದವುಗಳನ್ನು ಮಾತ್ರ ಇಲ್ಲಿ ಹೆಸರಿಸಲಾಗಿದೆ.

ಪ್ರಪಂಚದ ಯಾವುದೇ ಸಮಾಜದ ವ್ಯಕ್ತಿ, ವಸ್ತು, ಸಂಸ್ಕೃತಿಗಳನ್ನು ತೆಗೆದುಕೊಂಡರೂ ಒಳಾಂಗಣ ಮತ್ತು ಹೊರಾಂಗಣಗಳಿದ್ದು. ಇವುಗಳ ಕೊಳ್ಳು-ಕೊಡುಗಳು ನಡೆದು ಸಂಸ್ಕೃತೀಕರಣದ ಕ್ರಿಯೆ-ಪ್ರಕ್ರಿಯೆಗಳಿಗೆ ಒಳಗಾಗಿಯೇ ಇರುತ್ತವೆ. ಇದಕ್ಕೆ ಭಾರತ ದೇಶವೇನೂ ಹೊರತಾಗಿಲ್ಲ. ಹಾಗಾಗಿ ಜಾನಪದ-ಆಧುನಿಕತೆಗಳು ಸಂಸ್ಕೃತೀಕರಣದ ಪ್ರತೀಕಗಳಾಗಿವೆ. ಆದರೆ ಸಾಂಪ್ರದಾಯಿಕ ಮನಸ್ಸುಗಳು ಮಾತ್ರ ಜಾನಪದ "ಪರಂಪರೆ" ಹಳೆಯದು, ಹಿಂದಿನದು, "ಆಧುನಿಕತೆ" ಇವತ್ತಿನದು, ಮುಂದಿನದು ಎಂಬ ಗೊಂದಲ ಸೃಷ್ಟಿಸಿವೆ. ಇದು ತಪ್ಪು. ಯಾವುದೇ ವಸ್ತು-ಸಂಸ್ಕೃತಿಗಳು ಸೃಷ್ಟಿ-ಪುನರ್‌ಸೃಷ್ಟಿಯಾದ ಆಯಾಯ ಕಾಲಕ್ಕೆ ಹೊಸತು, ಹಳತು ಕ್ರಿಯೆ-ಪ್ರಕ್ರಿಯೆಗಳು ಆಗಿಯೇ ಇರುತ್ತದೆ. ಹಾಗಾಗಿ ಇಂದಿನ ಪರಂಪರೆ. ಆಧುನಿಕತೆಗಳು ಹಿಂದೆಯೂ ಇದ್ದವು. ಅವು ಈಗಲೂ ಇವೆ. ಅವು ಮುಂದೆಯೂ ಇರುತ್ತದೆ. "ಮೂಗಿರುವವರೆಗೂ ನೆಗಡಿ ತಪ್ಪಿದ್ದಲ್ಲ" ಎನ್ನುವ ಗಾದೆ ಮಾತಿನಂತೆ ಎಲ್ಲಾ ಕಾಲಗಳಲ್ಲೂ ಜೊತೆಯಲ್ಲಿ ನಡೆದಾಡುತ್ತವೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ಇವೆರಡು ಒಂದರೊಳಗೊಂದು ವಿರೋಧ-ಪೂರಕಗಳಂತೆ ಬೆರೆತುಕೊಂಡಿರುವ ಒಳವಿನ್ಯಾಸಗಳ ಮೊತ್ತವಾಗಿದೆ.

ಜಾನಪದ ಅನ್ನುವುದು ಪರಿಸರದ ವಿಸ್ಮಯ-ಅನುಭವದ ಆವಿಷ್ಕಾರಗಳ ಸಂಮಿಶ್ರಣದ ಫಲವಾಗಿದೆ. ಹಾಗೆಯೇ "ಆಧುನಿಕತೆ" ಅನ್ನುವುದು ಮೂಲತಃ ಹಳತು-ಹೊಸದರ ಆವಿಷ್ಕಾರಗಳ ಸಂಮಿಶ್ರಣದ ಫಲವಾಗಿದೆ. ಹಾಗಾಗಿ ಜಾನಪದ ಅನುಭವ-ಪರಿಸರದ ವಿಸ್ಮಯವಿಲ್ಲದೆ ಶೂನ್ಯದಲ್ಲಿ ಹುಟ್ಟಲು ಸಾಧ್ಯವಿಲ್ಲ. ಅದೇ ರೀತಿ ಆಧುನಿಕತೆಯ ಹೊಸತು. ಹಳೆಯದಿಲ್ಲದ ಹುಟ್ಟಲು ಸಾಧ್ಯವಿಲ್ಲ. ಬಿ.ಎಂ.ಶ್ರೀ ಯವರ "ಜನವಾಣಿ ಬೇರು, ಕವಿವಾಣಿ ಹೂವು" ಎಂಬ ನಾಣ್ಣುಡಿಯಂತೆ ಜಾನಪದ ಬೇರಾಗಿ, ಆಧುನಿಕತೆ ಹೂವಾಗಿದೆ. ಹಾಗಾಗಿ ಇಲ್ಲಿ ಜಾನಪದ ಬದುಕು ಮೊದಲ ಅನುಭವದ ಅಭಿವ್ಯಕ್ತಿ ಬೇರಾದರೆ ಈ ಅಭಿವ್ಯಕ್ತಿ ಆಧಾರದ ಮೇಲೆಯೇ ಆಧುನಿಕತೆ ಅಭಿವ್ಯಕ್ತಿ ನಿರ್ಮಾಣವಾಗುತ್ತದೆ. ಆದ್ದರಿಂದ ಆಧುನಿಕತೆ ಬದುಕಿನ ಅನುಭವದ ಅಭಿವ್ಯಕ್ತಿ ಹೂವಾಗಿ ಎರಡನೆ ಅಭಿವ್ಯಕ್ತಿಯಾಗುತ್ತದೆ. ಹೂವಿಗೆ ಬೇರು ಎಷ್ಟು ಮುಖ್ಯವೋ ಹಾಗೆಯೇ ಬೇರಿಗೂ ಹೂವು ಮುಖ್ಯವಾಗಿರುತ್ತದೆ. ಆದ್ದರಿಂದ ಸಮಾಜದ ಬದುಕಿನ ಸೃಷ್ಟಿ ಕ್ರಿಯೆಯಲ್ಲಿ ಜಾನಪದ-ಆಧುನಿಕತೆಗಳು "ಹಳೆ ಬೇರು, ಹೊಸ ಚಿಗುರಿನಂತೆ" ಅನಿವಾರ್ಯದ ಪ್ರಕ್ರಿಯೆಗಳು.

ಜಾನಪದ-ಆಧುನಿಕತೆಗಳ ಬೆಸುಗೆಯ ತಾತ್ವಿಕತೆ ಮತ್ತು ಸೈದ್ಧಾಂತಿಕತೆಯ ಕ್ರಿಯೆ-ಪ್ರಕ್ರಿಯೆಗಳನ್ನು ಪ್ರಧಾನವಾಗಿ ಮೂರು ನೆಲೆಗಳಲ್ಲಿ ವಿವರಿಸಬಹುದಾಗಿದೆ.

೧. ಜಾನಪದ-ಆಧುನಿಕತೆಯ ನಡೆ-ನುಡಿ-ವರ್ತನೆಗಳಲ್ಲಿ ಕಾಣಿಸುವ ಕ್ರಿಯೆ-ಪ್ರಕ್ರಿಯೆಗಳು.

೨. ಜಾನಪದ-ಆಧುನಿಕ ವಸ್ತು-ಸಂಸ್ಕೃತಿಗಳಾಗುವ ಕ್ರಿಯೆ-ಪ್ರಕ್ರಿಯೆಗಳು.

೩. ಆಧುನಿಕತೆ ಆಧುನಿಕ ಜಾನಪದ ನಡೆ-ನುಡಿ-ವರ್ತನೆಗಳಾಗುವ ಕ್ರಿಯೆ-ಪ್ರಕ್ರಿಯೆಗಳು.

೧. ಜಾನಪದ ಆಧುನಿಕತೆಯ ನಡೆ-ನುಡಿ-ವರ್ತನೆಗಳಲ್ಲಿ ಕಾಣಿಸುವ ಕ್ರಿಯೆ-ಪ್ರಕ್ರಿಯೆಗಳು.

ಆಧುನಿಕ ಬದುಕಿನ ಮನುಷ್ಯ ವೈಜ್ಞಾನಿಕ. ವೈಚಾರಿಕವಾಗಿ ಎಷ್ಟೇ ಪ್ರಗತಿಯನ್ನು ಸಾಧಿಸಿ, ಪ್ರಗತಿಪರವಾಗಿದ್ದರೂ, ಆಕಾಶಕ್ಕೆ

ನೆಗೆದು ಅಲ್ಲಿ ಸುತ್ತಾಡಿ-ಹಾರಾಡಿ ಮನೆ ಕಟ್ಟಿ ವಾಸವಾಗಿ ಬಂದಿದ್ದರೂ, ಆತನ ನಡೆ-ನುಡಿ-ವರ್ತನೆಗಳು ಜಾನಪದೀಯ ನಡೆ-ನುಡಿ-ವರ್ತನೆಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪ್ರಜ್ಞಾ ಪೂರ್ವಕವಾಗಿಯೋ, ಅಥವಾ ಅಪ್ರಜ್ಞಾಪೂರ್ವಕವಾಗಿಯೋ ಕಾಣಿಸಿಕೊಂಡೇ ಇರುತ್ತವೆ.

ಜಾನಪದ ವಿದ್ವಾಂಸ M. Harmon ಹೇಳುವಂತೆ "Folklore may crop up in any subject, any group or Individual any time and place" ಏಕೆಂದರೆ ಮಾನವರೆಲ್ಲರೂ ಒಟ್ಟಿಗೆ ಬದುಕುವ ಜಾನಪದ ಗುಂಪುಗಳೇ ಆದ್ದರಿಂದ ಜಾನಪದ ನಡವಳಿಕೆಗಳನ್ನು ಹೊರತುಪಡಿಸಿ ಸಮಾಜ ಬದುಕಲು ಅಸಾಧ್ಯವಾದುದು. ಹಾಗಾಗಿ ಜಾನಪದ ಸಮಾಜ ಬದುಕಿನಲ್ಲಿ ಜೀವಂತ ಪಳೆಯುಳಿಕೆ. ಅದಕ್ಕೆ ಸಾವೆಂಬುದೇ ಇಲ್ಲ C.F. Potter ಮಾತಿನಂತೆ 'Folklore is a lively Fossil which refuses to die.' ಬದುಕಿನ ಬೇರೆ ಬೇರೆ ರೂಪದಲ್ಲಿ ಬದುಕುತ್ತಲೇ ಜೀವಂತವಾಗಿರುತ್ತದೆ. ಜಾನಪದರು ಬದುಕಿರುವವರೆಗೂ ಅದು ಅವರ ಜೊತೆ ಜೊತೆಯಲ್ಲಿಯೇ ಒಡನಾಡಿಯಾಗಿರುತ್ತದೆ. ಜಾನಪದ ವಿದ್ವಾಂಸ Richard. M. Dorson ಅಭಿಪ್ರಾಯ ಪಡುವಂತೆ "Folklore is an echo of the past. But at the same time it is also the vigorous vioce of the present" ಆಗಿರುತ್ತದೆ. "ಜಾನಪದ ಒಂದು ಹಳೆಯ ವಸ್ತು. ವಿಷಯ ಆಗಿರಬಹುದು. ಆದರೆ ಅದು ಇಂದಿಗೂ ಜನ ಜೀವನದಲ್ಲಿ ನೂರಾರು ರೂಪದಲ್ಲಿ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತದೆ. ಅದೊಂದು ಜೀವಂತ ಪಳೆಯುಳಿಕೆಯೇ ಹೊರತು, ಒಂದು ಅವಶೇಷ ಎನಿಸಿಕೊಳ್ಳುವುದಿಲ್ಲ. ಜಾನಪದದ ಒಂದು ರೆಂಬೆ ಮುರಿದು ಮಣ್ಣಾದರೆ ಇನ್ನೊಂದು ಹುಟ್ಟಿಕೊಳ್ಳುತ್ತದೆ. ಯಾವುದಾದರೂ ರೂಪದಲ್ಲಿ ಅದು ಮಾನವನೊಡನೆ ನಿಕಟ ಸಂಬಂಧವನ್ನು ಇಟ್ಟುಕೊಂಡೇ ಇರುತ್ತದೆ". "ಇದಕ್ಕೆ ಅಕ್ಷರಸ್ಥ. ಅನಕ್ಷರಸ್ಥ ಎಂಬ ಭೇದ-ಭಾವಗಳೇನೂ ಇರುವುದಿಲ್ಲ. ನಿದರ್ಶನಕ್ಕೆ ಕೆಲವು ಜಾನಪದ ಸಂಪ್ರದಾಯ, ನಂಬಿಕೆ, ಆಚರಣೆ, ವಿಧಿ-ವಿಧಾನಗಳಲ್ಲಿ ಪರಿಶೀಲಿಸಿ ನೋಡಬಹುದಾಗಿದೆ.

ಆಧುನಿಕ ನಗರಗಳಲ್ಲಿ ಬದುಕುತ್ತಿರುವ ವಿದ್ಯಾವಂತರು, ಬುದ್ಧಿವಂತರು, ಆಧುನಿಕರು, ವಿಜ್ಞಾನಿಗಳು, ತಂತ್ರಜ್ಞರು, ಡಾಕ್ಟರ್‌ಗಳು, ಪ್ರಾಧ್ಯಾಪಕರು, ತತ್ವಜ್ಞಾನಿಗಳು ಮುಂತಾದ ವಿವಿಧ ವೃತ್ತಿ ಹೊತ್ತ ಜನಗಳ ವ್ಯಕ್ತಿನಾಮಗಳು, ಇವರು ವಾಸಿಸುವ ಪ್ರದೇಶಗಳ ಸ್ಥಳನಾಮಗಳನ್ನು ಗಮನಿಸಿದರೆ, ಅವರೊಳಗೆ ಪುರಾಣ, ಸಂಪ್ರದಾಯ ಮೂಲದ ಹೆಸರುಗಳಿರುವುದನ್ನು ಕಾಣಬಹುದು. ಪ್ರಪಂಚದ ಎಲ್ಲಾ ನಗರಗಳಲ್ಲಿಯೂ ಅವರವರ ನಂಬಿಕೆ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ಈ ರೀತಿಯ ಹೆಸರುಗಳು ಇದ್ದೇ ಇರುತ್ತವೆ. ಆದರೆ ಭಾರತ ದೇಶದಲ್ಲಿ ಅತ್ಯಧಿಕವಾಗಿರುತ್ತದೆ. ಇದಕ್ಕೆ ಕಾರಣ ಭಾರತ ಮೂಲತಃ ಜಾನಪದೀಯ ಅಂಶಗಳ ಕಣಜ. ಇಂತಹ ಹೆಸರುಗಳು ಸಹಸ್ರವಾಗಿರುವುದರಿಂದ ಅವುಗಳಲ್ಲಿ ಪ್ರಾತಿನಿಧಿಕವಾದವುಗಳನ್ನು ಮಾತ್ರ ಇಲ್ಲಿ ಹೆಸರಿಸಲಾಗಿದೆ.

ವ್ಯಕ್ತಿ ನಾಮಗಳಿಗೆ ಸಂಬಂಧಿಸಿದಂತೆ, ರಾಮಚಂದ್ರ, ರಾಮಚಂದ್ರನ್, ಕೃಷ್ಣ, ಕೃಷ್ಣನ್, ಶಿವಲಿಂಗಸ್ವಾಮಿ, ಶಿವು, ಲಕ್ಷ್ಮಿ, ಲಕ್ಷ್ಮಿದೇವಿ, ನಾಗಮ್ಮ ನಾಗಿಣಿ, ಸೀತಮ್ಮ ಸೀತೆ, ಮಹದೇವ ಸ್ವಾಮಿ, ಮಹದೇಶ್ ಮುಂತಾದವು ಇಂತಹ

ಹೆಸರುಗಳಿರುವ ವಿಶೇಷಣಗಳನ್ನು ಗಮನಿಸಬೇಕು. ಆಧುನಿಕ ಕಾಲದ ಜನಗಳು ನಗರಗಳಲ್ಲಿರಲಿ, ಹಳ್ಳಿಗಳಲ್ಲಿರಲಿ ಹುಟ್ಟಿದ ಮಕ್ಕಳಿಗೆ ಅವರವರ ಮನೆದೇವರ ಮೂಲ ಹೆಸರುಗಳನ್ನು ಆಧರಿಸಿಯೇ ಮೊದಲು ಹೆಸರಿಡುತ್ತಾರೆ. ಆನಂತರ ಆಧುನಿಕತೆಗೆ ಅನುಗುಣವಾಗಿ ಹೆಸರುಗಳನ್ನು ಬದಲಾಯಿಸಿಕೊಳ್ಳುತ್ತಾರೆ. ಉದಾಹರಣೆ: ನಂದೀಶ್ವರ-ನಂದೀಶ್, ಮಲ್ಲೇಶ್ವರ-ಮಲ್ಲೇಶ್, ನಾಗೇಶ್ವರ-ನಾಗೇಶ್ ಇತ್ಯಾದಿ. ಅಥವಾ ಬೇರೊಂದು ರೀತಿಯ ಹೆಸರುಗಳನ್ನು ಪ್ರಕೃತಿದತ್ತವಾಗಿ ಅಥವಾ ಬದುಕಿನ ಬಾಂಧವ್ಯದ ಪ್ರತೀಕವಾಗಿಯೂ ಹೆಸರಿಟ್ಟುಕೊಳ್ಳುತ್ತಾರೆ. ಈ ಪ್ರಕ್ರಿಯೆಗಳೆಲ್ಲ ಜಾನಪದ-ಆಧುನಿಕತೆಗಳು ಬೆರೆತ ಸಂಸ್ಕೃತೀಕರಣದ ಪ್ರತೀಕವಾಗಿವೆ.

ಸ್ಥಳನಾಮಗಳಿಗೆ ಸಂಬಂಧಿಸಿದಂತೆ, ಶ್ರೀರಾಂಪುರ, ಕೃಷ್ಣರಾಜಪುರ, ರಾಮನಗರ, ಭೀಮನಗರ, ನಂದಗೋಕುಲ. ಧರ್ಮರಾಯಪುರ. ವಾಲ್ಮೀಕಿನಗರ, ಚಾಮುಂಡಿನಗರ, ಹರಿಶ್ಚಂದ್ರಘಾಟ್, ಹನುಮಂತನಗರ ಮುಂತಾದವು ಆಧುನಿಕ ನಗರ ಅನೇಕ ಹಳ್ಳಿ ಹೆಸರುಗಳನ್ನು ಬಳಸಿಕೊಂಡಿದೆ. ನಾಯಂಡಹಳ್ಳಿ, ನಾಗದೇವನಹಳ್ಳಿ, ಮಲ್ಲತ್ತಹಳ್ಳಿ, ಬ್ಯಾಟರಾಯನಪುರ, ಕಾಡಗೊಂಡನಹಳ್ಳಿ, ನಂದೀಪುರ, ಕುರುಬರಹಳ್ಳಿ, ಡೋಬಿಘಾಟ್, ಹಳೇಗುಡ್ಡದಹಳ್ಳಿ, ರಾಜಮಹಲ್‌ಗುಟ್ಟಹಳ್ಳಿ, ಮುಂತಾದವು. ಹೀಗೆ ಆಧುನಿಕತೆಯ ನಗರ ತನ್ನ ಒಡಲೊಳಗೆ ಜಾನಪದದ ವೈವಿಧ್ಯಮಯವಾದ ಲಕ್ಷಾಂತರ ಹೆಸರುಗಳನ್ನು ಇಟ್ಟುಕೊಂಡಿದೆ. ಇಂತಹ ಹೆಸರುಗಳಿಗೆ ಕೊನೆಯೇ ಇಲ್ಲ.

ಆಧುನಿಕ ನಗರಗಳಲ್ಲಿ ನಿರ್ಮಾಣವಾಗಿರುವ ಭವ್ಯಬಂಗಲೆಗಳು ಅತ್ಯಂತ ಉತ್ಕೃಷ್ಟವಾದ ವೈವಿಧ್ಯಮಯ ವಸ್ತು-ಸಂಸ್ಕೃತಿಗಳಿಂದ ಆಧುನೀಕರಣಗೊಂಡಿರುತ್ತವೆ. ಇದಕ್ಕೆ ತಕ್ಕಂತೆ ಅಲ್ಲಿ ವಾಸ ಮಾಡುವ ವ್ಯಕ್ತಿಗಳು ಹೊಂದಿಕೊಂಡಿರುತ್ತಾರೆ. ವೈರುಧ್ಯವೆಂದರೆ ಈ ಕಟ್ಟಡಗಳಲ್ಲಿ ಆ ಮನಸ್ಸುಗಳಲ್ಲಿ ದೇವರಮನೆಯೊಂದು ಸ್ಥಾನವನ್ನು ಪಡೆದುಕೊಂಡಿರುತ್ತದೆ. ಜಾನಪದ ನಂಬಿಕೆ, ಆಚರಣೆಗಳ ಪ್ರತೀಕ ಕ್ರಿಯೆ-ಪ್ರಕ್ರಿಯೆಗಳು ನಡೆಯುತ್ತಿರುತ್ತವೆ. ಪ್ರತಿಯೊಬ್ಬರ ಮನೆಗಳಲ್ಲಿ ಮನೆಯ ಹೆಂಗಸರು, ಪ್ರತಿದಿನ ಪೂಜಾ ವಿಧಿ-ವಿಧಾನಗಳನ್ನು ಕಡ್ಡಾಯವಾಗಿ ನೆರವೇರಿಸುತ್ತಾರೆ. ಭಕ್ತಿಯಿಂದ ದೇವರಿಗೆ ನಮಿಸಿ, ಮನೆಯವರಿಗೆಲ್ಲ ಒಳ್ಳೆಯದಾಗಲೆಂದು ಬೇಡಿಕೆ ಸಲ್ಲಿಸುತ್ತಾರೆ. ಈ ಕ್ರಮಗಳನ್ನು ಮನೆಯ ಗಂಡಸರು, ಮಕ್ಕಳು ಅನುಸರಿಸುತ್ತಾರೆ. ಇದು ದಿನನಿತ್ಯ ನಡೆಯುವ ನಿರಂತರ ಕ್ರಿಯೆ ಆಗಿರುತ್ತದೆ.

ಪ್ರತಿದಿನ ದೇವರಮನೆಯ ದೀಪ ಕಂಬಾಲೆಗಳು ಉರಿಯುತ್ತಿರುವಂತೆ ನೋಡಿಕೊಳ್ಳುತ್ತಾರೆ. ಈ ದೀಪ ಆರಿ ಹೋದರೆ ಮನೆ ಬರಡಾಗುತ್ತದೆಂದು ಅವರ ನಂಬಿಕೆ ಆಗಿರುತ್ತದೆ. ಈ ರೀತಿ ಪ್ರತಿಯೊಂದು ಮನೆಗಳಲ್ಲಿ ನಿತ್ಯ ನಡೆಯುವ ಪ್ರಕ್ರಿಯೆಯಾದರೆ ಹೊರಗಡೆಯಲ್ಲಿ ದೇವರ ಪೂಜಾ ವಿಧಿ-ವಿಧಾನಗಳು ಇನ್ನೊಂದು ರೀತಿಯದಾಗಿರುತ್ತದೆ. ನಗರದ ಜನಗಳು "ಜನಮರುಳೋ. ಜಾತ್ರೆ ಮರುಳೋ" ಎನ್ನುವಂತೆ ದೇವರ ಪೂಜಾ ಪುರಸ್ಕಾರಗಳಿಗೆ ಹಾತೊರೆಯುತ್ತಾರೆ. ಹಾಗೆಯೇ ಪ್ರತಿದಿನ ವಿವಿಧ ವೃತ್ತಿಯ ಜನಗಳು ದೇವಸ್ಥಾನಗಳಿಗೆ ಭೇಟಿಕೊಟ್ಟು ನಂತರ ಕಛೇರಿ ಕೆಲಸಕಾರ್ಯಗಳಿಗೆ ತೆರಳುವುದು ವಾಡಿಕೆಯಾಗಿದೆ.

ಈ ರೀತಿಯ ಸಂಪ್ರದಾಯ, ಆಚರಣೆ, ಪರಿಸ್ಥಿತಿಗಳು ದಿನಂಪ್ರತಿ ನಡೆದುಕೊಂಡೇ ಹೋಗುತ್ತಿವೆ. ಹೆಂಗಸರು, ಗಂಡಸರು ಆಧುನಿಕವಾಗಿ ಎಷ್ಟೇ ಅಲಂಕೃತವಾಗಿ ಇದ್ದರೂ ಹೆಂಗಸರು ಹಣೆಗೆ ಕುಂಕುಮ, ಬೊಟ್ಟು, ಕೈಯಿಗೆ ಬಳೆಗಳು, ಮೂಗಿಗೆ ಮೂಗುಬಟ್ಟು, ಕಾಲಿಗೆ ಕಾಲುಂಗುರ, ಕತ್ತಿಗೆ ತಾಳಿ ಹಾಕಿರುತ್ತಾರೆ, ಹಿಂದೂ ಸಮಾಜದಲ್ಲಿ ಈ ತಾಳಿಗೆ, ಕಾಲುಂಗುರಗಳಿಗೆ ಹೆಚ್ಚು ಬೆಲೆಕೊಡಲಾಗುತ್ತದೆ. ಹೆಣ್ಣಿಗೆ ಮುತ್ತೈದೆ ಭಾಗ್ಯ ಬರುತ್ತದೆಂದು ನಂಬಿಕೆ ಇದೆ. ತಾಳಿ ದೇವರ ಸಮಾನವೆಂದು ನಂಬಿಕೊಂಡಿರುತ್ತಾರೆ. ಹಾಗಾಗಿ ತಾಳಿಗೆ ಪ್ರತಿದಿನ ದೇವರ ಪೂಜೆಯ ಸಂದರ್ಭದಲ್ಲಿ ಅದಕ್ಕೆ ಕುಂಕುಮವನ್ನೂ ಸವರುತ್ತಾರೆ. ಗಂಡನೆ ದೇವರೆಂದು ತಿಳಿದು ಆತನು ಹಿಂಸಿಸಿದರೂ ಸಹಿಸಿಕೊಂಡು ಆತನ ಜೊತೆಯಲ್ಲಿಯೇ ಸಂಸಾರ ಮಾಡಬೇಕೆಂದು ಸಂಪ್ರದಾಯ ಸಮಾಜ ನಂಬುತ್ತದೆ. ಹೆಣ್ಣು ಸೀರೆ ತೊಟ್ಟುಕೊಳ್ಳುವುದು ಸಂಪ್ರದಾಯವಾಗಿದೆ. ಮಕ್ಕಳಿಗೆ ಹುಷಾರಿಲ್ಲದೆ ಹೋದಾಗ ನಗರಗಳಲ್ಲೆ ಸ್ಥಾಪಿತವಾಗಿರುವ ಕಾಳಮ್ಮ, ಭದ್ರಯ್ಯ, ಚೌಡಮ್ಮ, ಮಾರಮ್ಮನ ದೇವಸ್ಥಾನಗಳಿಗೆ ಹೋಗಿ, ಅಲ್ಲಿಯ ಪೂಜಾರಿಯ, ಮಂತ್ರವಾದಿಯ ಹತ್ತಿರ ವಿಶೇಷ ಪೂಜೆ ಸಲ್ಲಿಸಿ ಮಂತ್ರ ತಂತ್ರಗಳಿಗೆ ಮೊರೆ ಹೋಗುತ್ತಾರೆ.

ಮಕ್ಕಳಿಗೆ ಇದರಿಂದ ಎಲ್ಲಾ ಒಳ್ಳೆಯದಾಗುತ್ತೆಂದು ತಂದೆ-ತಾಯಿಗಳ ಬಲವಾದ ನಂಬಿಕೆ ಆಗಿರುತ್ತದೆ. ನಗರಗಳಲ್ಲಿ ನಡೆಯುವ ಮದುವೆಗಳು ಹೆಚ್ಚು ಕಡಿಮೆ ಹಳ್ಳಿಯಲ್ಲಿ ನಡೆಯುವ ರೀತಿ-ನೀತಿ ಸಂಪ್ರದಾಯಗಳಲ್ಲಿಯೇ ನಡೆಯುತ್ತವೆ. ಕುಲ, ಗೋತ್ರ, ಜಾತಿ, ಧರ್ಮ ಮುಂತಾದವುಗಳ ಮೇಲೆ ಗಂಡು-ಹೆಣ್ಣುಗಳ ಮದುವೆ ನಡೆಯುವುದು ವಾಡಿಕೆ. ಮದುವೆಯಲ್ಲಿ ಸಂಪ್ರದಾಯ ವ್ಯಕ್ತಿಯಾದ ಪೂಜಾರಿಯ ಪಾತ್ರ ಪ್ರಮುಖವಾದುದು. ಈತನಿಲ್ಲದೆ ತಾಳಿ ಕಟ್ಟಿಸುವ ಕೆಲಸ ನಡೆಯುವುದಿಲ್ಲ. ಈತನ ಮಂತ್ರದ ಮೂಲಕ

ಕಾಳಿಕಟುವ ಕಾರ್ಯ ನೆರವೇರುತ್ತದೆ. ಇಲ್ಲಿ ... ಕಾರ್ಯ ಸುಸೂತ್ರವಾಗಿ ನೆರವೇರಿತೆಂಬುದು ಜನಗಳ ನಂಬಿಕೆ. ನಗರಗಳಲ್ಲಿ ವಾಹನಗಳನ್ನು ಇಟ್ಟುಕೊಂಡವರು ತಾವು ಕೊಂಡುಕೊಂಡ ವಾಹನಗಳನ್ನು ಮೊದಲು ತಮಗೆ ಇಷ್ಟವಾದ ದೇವಸ್ಥಾನಗಳಿಗೆ ತೆಗೆದುಕೊಂಡು ಹೋಗಿ ವಿಶೇಷ ಪೂಜೆ ಸಲ್ಲಿಸುವುದು ರೂಢಿ ಮೂಲವಾದದು. ಹೀಗೆ ಪೂಜೆ ಸಲ್ಲಿಸಿದರೆ ಅಪಘಾತವಾಗುವುದಿಲ್ಲವೆಂಬ ನಂಬಿಕೆ ಕಾರಣವಾಗಿದೆ. ಅಲ್ಲದೆ ಪ್ರತಿದಿನ ವಾಹನ ಓಡಿಸುವ ಮುನ್ನ ವಾಹನಕ್ಕೆ ದೇವರ ಹೆಸರಿನಲ್ಲಿ ಸ್ಮರಿಸಿ ನಮಸ್ಕರಿಸಿ, ಓಡಿಸಲು ಆರಂಭ ಮಾಡುತ್ತಾರೆ. ಇದು ವಾಹನ ಸವಾರನ ದಿನನಿತ್ಯ ಪದ್ಧತಿ. ಈ ಕ್ರಿಯೆಯು ವಾಹನ ಜಾನಪದದ ಪ್ರತೀಕವಾದದು.

ಆಡಳಿತ ಕಛೇರಿಗಳಿಲ್ಲಿ ಪ್ರತಿದಿನ ಶುಕ್ರವಾರ ನೌಕರರು ಲಕ್ಷ್ಮಿಪೂಜೆಯನ್ನು ಕಡ್ಡಾಯವಾಗಿ ನೆರವೇರಿಸುತ್ತಾರೆ. ಶುಕ್ರವಾರ ಲಕ್ಷ್ಮಿಯ ದಿನವೆಂದು ನಂಬಿಕೆಯಿದ್ದು, ಹಣ ಸಂಪಾದನೆ ಮಾಡಲು ಅನುಕೂಲವಾಗುತ್ತೆಂದು ಲಕ್ಷ್ಮಿಯನ್ನು ಆರಾಧಿಸಿ, ಆಹ್ವಾನಿಸುವುದು ನೌಕರರ ನಂಬಿಕೆ ಆಗಿದೆ. ಹಾಗೆಯೇ ಪ್ರಾಥಮಿಕ ಶಾಲೆ-ಕಾಲೇಜುಗಳಲ್ಲಿ ಕಛೇರಿಯ ಸಿಬ್ಬಂದಿಯು ಪೂಜೆಯ ಜೊತೆಯಲ್ಲಿಯೇ ಶಿಕ್ಷಕ ನೌಕರರು ಪ್ರತಿ ಶುಕ್ರವಾರ ಸರಸ್ವತಿಯ ಪೂಜೆಯನ್ನು ನೆರವೇರಿಸಲು ವಿದ್ಯಾರ್ಥಿಗಳಿಗೆ ಆಗ್ರಹಿಸಿ, ಅವರಲ್ಲಿ ಸರಸ್ವತಿ/ಪೂಜೆಯ ಆಚರಣೆ, ಸಂಪ್ರದಾಯಗಳನ್ನು ಕಡ್ಡಾಯ ಮಾಡಿರುತ್ತಾರೆ. ಸರಸ್ವತಿ ವಿದ್ಯಾದೇವತೆ ಆದ್ದರಿಂದ ಆಕೆಯನ್ನು ಒಲಿಸಿಕೊಳ್ಳಬೇಕೆಂಬುದು ಈ ಸಮುದಾಯದ ನಂಬಿಕೆಯಾಗಿರುತ್ತದೆ.

ವಿದ್ಯಾವಂತರಿಗೆ ಯಾವುದೇ ಪರೀಕ್ಷೆಗಳು ಎದುರಾದರೆ, ಅತ್ಯಂತ ಭಯ ಭಕ್ತಿಯಿಂದ ವಿದ್ಯಾದೇವತೆಗಳೆಂದು ನಂಬಿರುವ ಗಣಪತಿ, ಸರಸ್ವತಿ ದೇವರುಗಳಿಗೆ ವಿಧೇಯರಾಗಿರುತ್ತಾರೆ. ಪರೀಕ್ಷೆ ಬರೆಯುವ ಮುನ್ನ ಅವುಗಳಿಗೆ ಸ್ಮರಿಸಿ, ಶರಣು ಮಾಡಿ, ನಮಸ್ಕರಿಸಿ, "ಚೆನ್ನಾಗಿ ಬರೆಯುವಂತೆ ಮಾಡಪ್ಪ" ಎಂದು ಆರಂಭಿಸುತ್ತಾರೆ. ಇದು ವಾಡಿಕೆ. ಹಾಗೆಯೇ ವಿದ್ಯಾವಂತರು ಕೆಲಸಕ್ಕೆ-ಸಂದರ್ಶನಕ್ಕೆ ಆಯ್ಕೆಯಾದಾಗ ಪ್ರತಿಯೊಬ್ಬರು ತಮ್ಮ ತಮ್ಮ ಇಷ್ಟ ದೈವಗಳನ್ನು ನೆನೆಸಿಕೊಂಡು, ಹಾಜರಾಗುತ್ತಾರೆ. ಹಾಜರಾಗುವ ಮುನ್ನ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸುತ್ತಾರೆ. ಕೆಲಸ ಸಿಕ್ಕಿದರೆ ನೂರೊಂದು ಕಾಯಿ ಒಡೆಸುತ್ತೇವೆಂದು ವಿವಿಧ ಹರಕೆ, ಇನ್ನು ಕೆಲವರು ಮರಿ-ಕುರಿಗಳನ್ನು ಬಲಿಕೊಡಲು ಹರಕೆ ಹೊತ್ತುಕೊಂಡಿರುತ್ತಾರೆ. ಹಾಗೆಯೇ ಪ್ರಾಚೀನ ಮಾನವನ ರಕ್ಷಣೆಗೆ ಸಂಗಾತಿಯಾಗಿದ್ದ ನಾಯಿ, ಬೆಕ್ಕು-ಮುಂತಾದ ಪ್ರಾಣಿಗಳು ಹಳ್ಳಿಯಲ್ಲಿಯೂ ಇವೆ. ಇಂದು ನಗರಗಳ ಮನೆಗಳಲ್ಲಿ ಮನೆ ಕಾಯುವ ಕಾಯಕವನ್ನು ಮುಂದುವರೆಸಿವೆ. ಆಧುನಿಕತೆಯೊಂದು ನಗರದಲ್ಲಿ ಅತ್ಯಂತ ತುತ್ತ ತುದಿಯಲ್ಲಿದ್ದು, ಕಠಿಣವಾದ ವೈಚಾರಿಕತೆ, ವೈಜ್ಞಾನಿಕತೆ, ಉಗ್ರ ಪ್ರಗತಿಪರತೆಯನ್ನು ಕಟ್ಟಿಕೊಂಡು ಜಾನಪದ ನಡವಳಿಕೆಗಳಿಗೆ ಆಸ್ಪದವೇ ಇಲ್ಲವೇನೋ ಎಂಬ ಸ್ಥಿತಿಯಲ್ಲಿದ್ದರೂ ಇದರೊಳಗೆ ಬೆರೆತು ಹೋಗುವ ಹುಟ್ಟು-ಸಾವುಗಳ ಆಚರಣೆ, ಸಂಪ್ರದಾಯ, ನಂಬಿಕೆಗಳ ನಡವಳಿಕೆಗಳನ್ನು ತಪ್ಪಿಸಲು ಸಾಧ್ಯವಿಲ್ಲ.

ಈ ಆಚರಣೆಗಳು ಅತ್ಯಂತ ಅನಿವಾರ್ಯ. ಈ ಆಚರಣೆಗಳಿಲ್ಲದ ಈ ಕ್ರಿಯೆಗಳನ್ನು ನಡೆಸುವುದೇ ಇಲ್ಲ. ... ತೇಣವನ್ನು ಸುಡುವ, ಹೂಳುವ, ಹೊತ್ತುಕೊಂಡು ಹೋಗುವ ಅದಕ್ಕೆ ಶೃಂಗಾರ ಮಾಡುವ ವಿಧಿ-ವಿಧಾನಗಳು, ಪೂಜಾ ವಿಧಾನಗಳು ಪರಂಪರೆಯ ಪ್ರತೀಕ. ಹುಟ್ಟಿನ ಆಚರಣೆಗಳೂ ಕೂಡ ಅಷ್ಟೇ ಮಹತ್ವಪೂರ್ಣವಾದವುಗಳು. ಹಳ್ಳಿಗಳಲ್ಲಿ ಹುಟ್ಟುಹಬ್ಬವನ್ನು ಅತ್ಯಂತ ಸಂಭ್ರಮ ಸಡಗರಗಳಿಂದ ಹಬ್ಬದೋಪಾದಿಯಲ್ಲಿಯೇ ಆಚರಿಸುತ್ತಾರೆ. ಹಳ್ಳಿಯವರು ಮನೆಮಂದಿಗೆಲ್ಲ ಬಾಳೆಹಣ್ಣು, ಬೆಲ್ಲದ ಮಿಶ್ರಣದ ರಸಾಯನವನ್ನು ಮಾಡಿ ಹಂಚುತ್ತಾರೆ. ಹೊಟ್ಟೆತುಂಬ ಊಟ ಹಾಕಿ, ಸಂತೋಷಕ್ಕೆ ಉಡುಗೊರೆ ಕೊಟ್ಟು ಕಳುಹಿಸುತ್ತಾರೆ. ಆದರೆ ಆಧುನಿಕ ನಗರಗಳಲ್ಲಿ ಹಳ್ಳಿಯ ಹುಟ್ಟಿನ ಸಡಗರ, ಸಂಭ್ರಮ ಬೇರೊಂದು ರೀತಿಯಲ್ಲಿ ಆಚರಿಸಲ್ಪಡುತ್ತದೆ. ಮನೆಗೆಲ್ಲ ಬಣ್ಣ ಬಣ್ಣದ ಶೃಂಗಾರ ಮಾಡಿ, ವಿಡಿಯೋ, ಕ್ಯಾಮರಗಳಿಂದ ಸೆರೆ ಹಿಡಿದು "ಹ್ಯಾಪಿ ಬರ್ತ್ ಡೇ"ಯನ್ನು ಕೇಕ್ ಕತ್ತರಿಸುವ ಮೂಲಕ ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಹುಟ್ಟಿನ ಆಚರಣೆಗಳು ಆಧುನಿಕತೆಯ ಕಾಲಕ್ಕೆ ತಕ್ಕಂತೆ ಕೆಲವು-ಮಾರ್ಪಾಡಿನೊಂದಿಗೆ ಆಚರಿಸಲ್ಪಡುತ್ತದೆ. ಇದೇ ರೀತಿಯಲ್ಲಿ ಜಾನಪದ ಕೆಲವು ಆಚರಣೆಗಳು ಕೆಲವು ಸಣ್ಣ-ಪುಟ್ಟ ಮಾರ್ಪಾಡಿನೊಂದಿಗೆ ಆಧುನಿಕತೆಯಲ್ಲಿ ಅಸ್ತಿತ್ವಗಳನ್ನು "ಹಳೆ ಮದ್ಯ,ಹೊಸ ಶೀಸೆ"ಎಂಬಂತೆ ಪಡೆದುಕೊಂಡಿರುತ್ತವೆ. ಹೀಗೆ ವಿಶಿಷ್ಟವಾದ ಜಾನಪದ ನಂಬಿಕೆ, ಆಚರಣೆ, ಸಂಪ್ರದಾಯಗಳು ಪರಂಪರೆಯಾಗಿ ಪ್ರತಿನಿತ್ಯ ಕಾಯಕದಂತೆ ನಿರಂತರವಾಗಿ ಆಧುನಿಕ ನಗರಗಳಾಗಿ ನಿರಂತರ ಬದುಕುತ್ತಿರುತ್ತವೆ. "ಸ್ಥೂಲವಾಗಿ ಹೇಳುವುದಾದರೆ ಬೆಂಗಳೂರು ಬಹಿರಂಗ ವಿಜ್ಞಾನ, ಅಂತರಂಗ ಅಜ್ಞಾನ, ವಿಜ್ಞಾನದ ಪರಿವಲಯದಲ್ಲಿ ಕಟ್ಟಡ ಮತ್ತು ಉಡುಪುಗಳ ವಿನ್ಯಾಸದಿಂದ ಹಿಡಿದು ಎಲ್ಲಾ ವೈಚಾರಿಕ ಪರಿಕರಗಳನ್ನು ಗಮನಿಸಬಹುದು. ಆಸ್ಪತ್ರೆಗಳಲ್ಲಿರುವ ಆಧುನಿಕ ಉಪಕರಣಗಳನ್ನು ಪರಿಗಣಿಸಿದರೆ ಸಾಕು.

ಬೆಂಗಳೂರು ಎಷ್ಟೋ ವೈಜ್ಞಾನಿಕ ಸೌಲಭ್ಯ ಪಡೆದಿದೆ ಎಂಬ ಅರಿವಾಗುತ್ತದೆ. ಈ ನಿಟ್ಟಿನಲ್ಲಿ ಬೆಂಗಳೂರು ವಿಜ್ಞಾನದ ಕೇಂದ್ರ ಸ್ಥಳವಾಗಿದೆ. ಆದರೆ ವಿಜ್ಞಾನದ ಈ ಕೇಂದ್ರ ಸ್ಥಳದಲ್ಲಿ ಹೃದಯ ಚಿಕಿತ್ಸೆಗೆ ಅತ್ಯಾಧುನಿಕ ಉಪಕರಣ ಹಿಡಿದ ಕೈಗಳು ಊದು ಬತ್ತಿಯನ್ನು ಹಿಡಿಯುತ್ತದೆ. ಊದುಬತ್ತಿಯ ಮೂಲಕ ಅತ್ಯಾಧುನಿಕ ವೈಜ್ಞಾನಿಕ ಉಪಕರಣಗಳಿಗೆ ಆಯುಧ ಪೂಜೆ ಮಾಡುತ್ತದೆ. ಶಾಲಾ ಕಾಲೇಜುಗಳಲ್ಲಿ ವಿಜ್ಞಾನದ ಪಾಠ ಕಲಿಯುತ್ತಾ, ಚಂದ್ರಗ್ರಹದ ಮೇಲೆ ಮನುಷ್ಯ ಹೆಜ್ಜೆಯಿಟ್ಟ ಪ್ರಗತಿಯನ್ನು ತಲೆಗೆ ತುಂಬಿಕೊಳ್ಳುತ್ತಾ ಗಣೇಶೋತ್ಸವದಲ್ಲಿ ತಲೆ ಬಾಗಿ ನಿಲ್ಲಲಾಗುತ್ತದೆ. ಪರೀಕ್ಷೆಗೆ ಮುಂಚೆ ಪಾಸಾಗುವುದಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ಬಹಿರಂಗದಲ್ಲಿ ಜೀನ್ಸ್ ಪ್ಯಾಂಟು ಇದ್ದರೆ ಅಂತರಂಗದಲ್ಲಿ ಮಡಿ ಪೂಜೆ ಇರುತ್ತದೆ. ಆಧುನೀಕರಣದ ಸಂದರ್ಭದಿಂದಾಗಿ ಜಾನಪದ ನಶಿಸಿ ಹೋಗುತ್ತದೆ. ಆದ್ದರಿಂದ ಜಾನಪದವನ್ನು ಆದಷ್ಟು ಬೇಗ ಸಂಗ್ರಹಿಸಿಬಿಡಬೇಕು ಎನ್ನುವ ಬಾಯಿಬಡುಕರಿಗೆ ಈ ಕ್ರಿಯೆ-ಪ್ರಕ್ರಿಯೆಗಳು ಉತ್ತರವೂ ಆಗಿದೆ. ಮಾನವನಿರುವವರೆಗೂ ಜಾನಪದ ಯಾವುದೇ ತರದ ಆಧುನಿಕತೆಯ ಜೊತೆಯಲ್ಲಿ ಇದ್ದೇ ಇರುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

೨. ಜಾನಪದ-ಆಧುನಿಕ ವಸ್ತು-ಸಂಸ್ಕೃತಿಗಳಾಗುವ ಕ್ರಿಯೆ-ಪ್ರಕ್ರಿಯೆಗಳು

ಆಧುನಿಕತೆಯೆಂದರೆ, ನಾನು ಮೊದಲೆ ಹೇಳಿದಂತೆ ಹಳತು-ಹೊಸದರ ಸೃಷ್ಟಿ ಕ್ರಿಯೆ, ಇದು ನವನವೀನತೆ ಆಕಾರ ತಾಳಿಕೊಂಡು ಹೊಸ ಬದುಕಿನ ಜೀವನ ಶೈಲಿಯ ವಿನ್ಯಾಸವಾಗಿರುತ್ತದೆ. ಒಂದು ಕಾಲದಲ್ಲಿ ಜಾನಪದವು ಇದೇ ಮಾದರಿಯ ಹೊಸ ವಿನ್ಯಾಸವೇ ಆಗಿತ್ತು. ಇವತ್ತಿಗೆ ಹಳೆಯದಾಗಿ ಹೊಸ ಸೃಷ್ಟಿಯ ಬೆಳವಣಿಗೆಗೆ ಕಾರಣವಾಗಿ ಪುನರಾವರ್ತನೆಗೊಳ್ಳುತ್ತ ಜೀವಂತವಾಗಿದೆ. ಹಾಗೆಯೇ ಇವತ್ತಿಗೆ ಆಧುನಿಕತೆಯ ಎಷ್ಟೋ ವಸ್ತು-ಸಂಸ್ಕೃತಿಗಳು ಹಳೆಯವು ಆಗಿ, ಮತ್ತೆ ಹೊಸ ಹೊಸ ವಸ್ತು-ಸಂಸ್ಕೃತಿಗಳ ಸೃಷ್ಟಿಕ್ರಿಯೆ ಬೆಳವಣಿಗೆಗೆ ಕಾರಣವಾಗುತ್ತಲೇ ಜೀವಂತವಾಗಿರುತ್ತದೆ. ಅಂದರೆ ಹಳೆತು-ಹೊಸತುಗಳ ಈ ರೀತಿಯ ಕ್ರಿಯೆ-ಪ್ರಕ್ರಿಯೆಗಳು ನಿರಂತರವಾದುದೆಂಬುದು ವೇದ್ಯವಾಯಿತು. ಮುಖ್ಯವಾಗಿ ಇವೆರಡು ಇರುವಿಕೆಗಳು ಆಗಿವೆ. ಹೊಸತೆಂಬುದು ಸುಮ್ಮನೆ ಸೃಷ್ಟಿಯಾಗಲು ಸಾಧ್ಯವಿಲ್ಲ. ಹಳೆಯದಿಲ್ಲದೆ ಇದ್ದಕ್ಕಿದಂತೆ ಅದು ಹುಟ್ಟುವುದಿಲ್ಲ. ಹಳೆಯ ಮಾದರಿಯನ್ನು ಅನುಸರಿಸಿಯೇ ಹೊಸ ಮಾದರಿಯೊಂದು ರೂಪುತಾಳುತ್ತದೆ. ಶೂನ್ಯದಲ್ಲಿ ಯಾವುದೂ ಹುಟ್ಟಲು ಸಾಧ್ಯವೇ ಇಲ್ಲ. ಬದುಕಿನ ಕೆಲವು

ಅಚ್ಚಿನ ಜೆರಾಕ್ಸ್ ಮಿಷನ್ ಹೋಗಿ ವಿದ್ಯುತ್‌ಚ್ಛಕ್ತಿಯ ಜೆರಾಕ್ಸ್ ಮಿಷನ್ ಬಂದಿದೆ. ಅಂಚೆಯಿಂದ ಫ್ಯಾಕ್ಸ್, ಇ-ಮೇಲ್, ಸ್ಥಿರ ದೂರವಾಣಿ ಬದಲಾಗಿ ಮೊಬೈಲ್ ಬಂದಿದೆ. ಬ್ಯಾಂಕ್‌ಗಳಲ್ಲಿನ ಚೆಕ್ ಪುಸ್ತಕ, ಪಾಸು ಪುಸ್ತಕಗಳ ಬದಲಾಗಿ ಎ.ಟಿ.ಎಂ. ಟೈಪಿಂಗ್ ಮಿಷನ್ ಬದಲಾಗಿ ಕಂಪ್ಯೂಟರ್ ಡಿ.ಟಿ.ಪಿ ಮಿಷನ್ ಬಂದಿದೆ. ಆರಂಭದ ಇಂಕ್ ಪೆನ್ ಬದಲಿಗೆ ನಾನಾ ತರದ ಪೆನ್‌ಗಳು ಬಂದಿವೆ. ಟಿ.ವಿ.ಗಳ ಮೂಲಕ ಪ್ರಪಂಚವು ತೆರೆದ ಪುಸ್ತಕವಾಗಿದೆ. ಐ.ಟಿ.ಬಿ.ಟಿ. ನವೀನ ತಾಂತ್ರಿಕತೆಗಳು ಬಂದಿವೆ. ಮೂಲಂಬಿ ಪ್ಯಾಂಟ್ ಹೋಗಿ ಬೆಲ್‌ಬಾಟಮ್ ಪ್ಯಾಂಟು ಬಂದಿದೆ. ಇನ್ನೂ ಮುಂತಾದವುಗಳು. ಈ ರೀತಿಯ ಕ್ರಿಯೆಗಳಲ್ಲಿ ಅರಿಯುವುದೇನೆಂದರೆ, ಜಾನಪದ ಕಾಲದಲ್ಲಿ ಅಂದಿನ ತಂತ್ರಜ್ಞಾನವಾಗಿದ್ದ ಗುಡಿಕೈಗಾರಿಕೆಗಳೇ ಇಂದಿನ ತಂತ್ರಜ್ಞಾನದ ಆಧುನಿಕತೆಯ ಕೈಗಾರಿಕೆಗಳೇ ಆಗಿ ಇವು ಮುಂದಿನ ಆಧುನಿಕ ಅತ್ಯುನ್ನತ ಬೃಹತ್ ಕೈಗಾರಿಕೆಗಳ ಯಾಂತ್ರೀಕರಣಕ್ಕೆ ಮೂಲ ಕಾರಣಗಳಾಗಿವೆ.

ಹಳೆಯ ಹೊಸ ವಸ್ತು ಸಂಸ್ಕೃತಿಗಳ ಇರುವಿಕೆಯ ರೂಪಗಳನ್ನು ಇಟ್ಟುಕೊಂಡು ಇವುಗಳ ತತ್ವಜ್ಞಾನಗಳನ್ನು ಅರಿಯಬಹುದಾಗಿದೆ.

ಮಾನವನ ಸೃಷ್ಟಿಯು ಸುಮ್ಮನೆ ಆಗಲಿಲ್ಲವೆಂಬುದನ್ನು ಜೀವ ವಿಕಾಸದ ವಿಜ್ಞಾನ ಹೇಳುತ್ತದೆ. ಮಂಗನಿಂದ ಮಾನವ ಸೃಷ್ಟಿಯೆಂದು ಸಾಬೀತು ಪಡಿಸುತ್ತದೆ. ವಿಜ್ಞಾನ ಇನ್ನೂ ಮುಂದೆ ಹೋಗಿ, ಪ್ರಾಯೋಗಿಕವಾಗಿ ಗಂಡು-ಹೆಣ್ಣಿನ ವೀರ್ಯಾಣು-ಅಂಡಾಣುಗಳ ಕ್ರಿಯೆ-ಪ್ರಕ್ರಿಯೆಗಳ ಸಂಮಿಶ್ರಣದಿಂದ ಮನುಷ್ಯ ಸೃಷ್ಟಿಯಾಗಿರುವುದನ್ನು ಅತ್ಯಂತ ನಿಖರವಾಗಿ, ವಸ್ತು ನಿಷ್ಠವಾಗಿ ಸಾಬೀತು ಪಡಿಸುತ್ತದೆ. ಅಂದರೆ ಈಗಾಗಲೇ ವಸ್ತು-ಸಂಸ್ಕೃತಿಗಳ ಇರುವಿಕೆಯನ್ನು ಸಾಬೀತು ಪಡಿಸಿ, ಇದರ ಆಧಾರದ ಮೇಲೆ ನವನವೀನ ಹೊಸ ಸೃಷ್ಟಿಯೊಂದು ಹುಟ್ಟಿಕೊಂಡಿದೆ. ಹಾಗೆಯೇ ನಿಸರ್ಗದ ಇರುವಿಕೆಯ ವಿಸ್ಮಯ-ಭಯ-ಅದ್ಭುತಗಳ ಆಧಾರದ ಮೇಲೆ ಮನುಷ್ಯನ ಬೌದ್ಧಿಕ ಕ್ರಿಯೆ ಸೃಷ್ಟಿಯಾಯಿತು. ಅದು ಹಂತ, ಹಂತವಾಗಿ ವಿಕಾಸ ಹೊಂದಿ ನಿಸರ್ಗದ ತಳಮಳವನ್ನು ಅನುಸರಿಸಿ ಬದುಕನ್ನು ಕಟ್ಟಲು ಶುರು ಮಾಡಿರುವುದನ್ನು ಪ್ರಾಚೀನ ಮಾನವ ವಿಕಾಸವಾದ ನಮಗೆ ಮನದಟ್ಟು ಮಾಡಿ ಕೊಡುತ್ತದೆ.

ಅಚ್ಚಿನ ಜೆರಾಕ್ಸ್ ಮಿಷನ್ ಹೋಗಿ ವಿದ್ಯುತ್‌ಚ್ಛಕ್ತಿಯ ಜೆರಾಕ್ಸ್ ಮಿಷನ್ ಬಂದಿದೆ. ಅಂಚೆಯಿಂದ ಫ್ಯಾಕ್ಸ್, ಇ-ಮೇಲ್, ಸ್ಥಿರ ದೂರವಾಣಿ ಬದಲಾಗಿ ಮೊಬೈಲ್ ಬಂದಿದೆ. ಬ್ಯಾಂಕ್‌ಗಳಲ್ಲಿನ ಚೆಕ್ ಪುಸ್ತಕ, ಪಾಸು ಪುಸ್ತಕಗಳ ಬದಲಾಗಿ ಎ.ಟಿ.ಎಂ. ಟೈಪಿಂಗ್ ಮಿಷನ್ ಬದಲಾಗಿ ಕಂಪ್ಯೂಟರ್ ಡಿ.ಟಿ.ಪಿ ಮಿಷನ್ ಬಂದಿದೆ. ಆರಂಭದ ಇಂಕ್ ಪೆನ್ ಬದಲಿಗೆ ನಾನಾ ತರದ ಪೆನ್‌ಗಳು ಬಂದಿವೆ. ಟಿ.ವಿ.ಗಳ ಮೂಲಕ ಪ್ರಪಂಚವು ತೆರೆದ ಪುಸ್ತಕವಾಗಿದೆ. ಐ.ಟಿ.ಬಿ.ಟಿ. ನವೀನ ತಾಂತ್ರಿಕತೆಗಳು ಬಂದಿವೆ.

ನಿಸರ್ಗದ ಚಳಿಗಾಳಿಗೆ ಎದುರಿದ ಮಾನವ ಅದರಿಂದ ತಪ್ಪಿಸಿಕೊಳ್ಳಲು ಅಲ್ಲೇ ಇದ್ದ ಮರದ ಪೊಟರೆ, ಬೆಟ್ಟ-ಗುಡ್ಡಗಳ ಕಿಬ್ಬರಿಗಳನ್ನು ಆಶ್ರಯವಾಗಿ ಮಾಡಿಕೊಂಡ. ಮುಂದಿನ ಹಂತದಲ್ಲಿ ಅದನ್ನೆ ಅನುಸರಿಸಿ ಗುಡಿಸಲು ನಿರ್ಮಿಸಿಕೊಂಡು ತನ್ನ ರಕ್ಷಣೆಯನ್ನು ಮಾಡಿಕೊಂಡನು. ಇದರ ಆಧಾರದ ಮೇಲೆ ಹೆಂಚಿನ ಮನೆ, ಮಣ್ಣಿನ ತಾರಸಿ (ಚಪ್ಪಡಿ ಕಲ್ಲು ಹಾಸಿ ಮನೆ ಮಾಡಿಕೊಂಡಿರುವ ಮನೆಗಳು ತುಮಕೂರು, ಗುಲ್ಬರ್ಗಾ, ಧಾರವಾಡ ಈ ಭಾಗಗಳಲ್ಲಿ ಇನ್ನೂ ಇರುವುದನ್ನು ನೋಡಬಹುದಾಗಿದೆ) ಮನೆಗಳನ್ನು ಕಟ್ಟಿಕೊಂಡ. ನಂತರದಲ್ಲಿ ಇವುಗಳ ಮಾದರಿಗಳನ್ನು ಅನುಸರಿಸಿ ಆಧುನಿಕ ನಗರಗಳಲ್ಲಿ ಆರ್.ಸಿ.ಸಿ.ಯಿಂದ ಕೂಡಿದ ಭವ್ಯ ಬಂಗಲೆಗಳು ತಲೆಯೆತ್ತಿವೆ. ಹಾಗೆಯೇ ಮಾನವನು ಮೈಮುಚ್ಚಿಕೊಳ್ಳಲು ಮರದ ಎಲೆಗಳನ್ನು ತೊಗಟೆಗಳನ್ನು ಆಶ್ರಯಿಸಿ, ನಂತರದಲ್ಲಿ ಆಹಾರ ಹುಡುಕುವ ಮಾನವ ಭೇಟೆಯಿಂದಾಗಿ ಪ್ರಾಣಿ-ಪಕ್ಷಿಗಳನ್ನು ಕೊಂದು ತಿಂದು ಅವುಗಳ ಚರ್ಮಗಳನ್ನು ತನ್ನ ಮೈಮುಚ್ಚಿಕೊಳ್ಳಲು ಬಳಸಿಕೊಂಡ. ಇದರ ಆಧಾರದ ಮೇಲೆ ಕೈಮಗ್ಗಗಳನ್ನು ಕಂಡುಹಿಡಿದುಕೊಂಡ. ಚಾಪೆಗಳನ್ನು ತಯಾರಿಸಿದ. ಇದರ ಆಧಾರದ ಮೇಲೆ ಹತ್ತಿ, ಉಣ್ಣೆಗಳಿಂದ ಬಟ್ಟೆಯನ್ನು ನೇಯುವುದನ್ನು ಕಂಡು ಹಿಡಿದುಕೊಂಡು ಪೂರ್ಣ ಪ್ರಮಾಣದಲ್ಲಿ ಬಟ್ಟೆ ಧರಿಸುವುದನ್ನು ಕಲಿತುಕೊಂಡ. ನಂತರದಲ್ಲಿ ಕೈಮಗ್ಗ ಟೆಕ್ಸ್‌ಟೈಲ್ ಆಯಿತು.

ಬೆಣಚುಕಲ್ಲುಗಳಿಂದ ಬೆಂಕಿ, ಬೆಂಕಿಯಿಂದ ದೀಪ, ಮಡಿಕೆಯಿಂದ ಪಾತ್ರೆ, ಪಾತ್ರೆಯಿಂದ ಕುಕ್ಕರ್, ಚಮ್ಮಾರಿಕೆಯಿಂದ ಬಾಟಾ ಷೋರೂಮ್, ಕಮ್ಮಾರಿಕೆಯಿಂದ ವೆಲ್ಡಿಂಗ್, ಬಡಿಗಾರಿಕೆಯಿಂದ ಸಾಮಿಲ್, ಬುಟ್ಟಿ ಹೆಣಿಗೆಯಿಂದ ಪ್ಲಾಸ್ಟಿಕ್, ಭೇಟೆಯಿಂದ ಯುದ್ಧ, ಅಡಿಗೆಯಿಂದ ಹೋಟೆಲ್, ಗಿಡಮೂಲಿಕೆಯಿಂದ ಡಾಕ್ಟರ್, ನೇಗಿಲಿನಿಂದ ಟ್ರಾಕ್ಟರ್, ಎತ್ತಿನ ಬಂಡಿಯಿಂದ ಬಸ್ಸು, ಕಾರು, ರೈಲು, ಹಾರುವ ಹಕ್ಕಿ, ಈಜುವ ಮೀನುಗಳಿಂದ ವಿಮಾನ, ಪಂಚಾಯ್ತಿಯಿಂದ ನ್ಯಾಯಾಲಯ, ಲಾಯರ್, ಮನೆಯ ಕಟ್ಟಡಗಾರನಿಂದ ಇಂಜಿನಿಯರ್, ಹೀಗೆ ಆಯಾಯ ಕಾಲ ಘಟ್ಟಗಳಲ್ಲಿ ಹಳತು-ಹೊಸತು, ಹೊಸತು-ಹಳತು ನಿರಂತರ ಕ್ರಿಯೆ-ಪ್ರಕ್ರಿಯೆಗಳು ಜಾನಪದ-ಆಧುನಿಕ ಅವಿಷ್ಕಾರಗಳ ಸಂಶೋಧನೆಗಳ ಬೌದ್ಧಿಕತೆಯ ಪ್ರತೀಕಗಳಾಗಿವೆ. ಹಾಗೆಯೇ ನಿರ್ದಿಷ್ಟವಾಗಿ ಗುರುತಿಸಿಕೊಂಡಿರುವ ಆಧುನಿಕತೆ ಆರಂಭದ ವಿದ್ಯಾಭ್ಯಾಸಗಳಲ್ಲಿ ಶಿಕ್ಷಕರು ತರಗತಿಗಳಲ್ಲಿ ಮುಖ್ಯವಾಗಿರುತ್ತಿದ್ದರು. ಇವರನ್ನು ಹೊರತುಪಡಿಸಿ ನವೀನ ಆಧುನಿಕತೆ ಶಿಕ್ಷಣದ ಅಂಗವಾಗಿ ಉಪಗ್ರಹದ ಮೂಲಕ ಪಾಠ-ಪ್ರವಚನ ನಡೆಸುವ ತಾಂತ್ರಿಕತೆ ಬಂದಿದೆ.

ಅಚ್ಚಿನ ಜೆರಾಕ್ಸ್ ಮಿಷನ್ ಹೋಗಿ ವಿದ್ಯುತ್‌ಚ್ಛಕ್ತಿಯ ಜೆರಾಕ್ಸ್ ಮಿಷನ್ ಬಂದಿದೆ. ಅಂಚೆಯಿಂದ ಫ್ಯಾಕ್ಸ್, ಇ-ಮೇಲ್, ಸ್ಥಿರ ದೂರವಾಣಿ ಬದಲಾಗಿ ಮೊಬೈಲ್ ಬಂದಿದೆ. ಬ್ಯಾಂಕ್‌ಗಳಲ್ಲಿನ ಚೆಕ್ ಪುಸ್ತಕ, ಪಾಸು ಪುಸ್ತಕಗಳ ಬದಲಾಗಿ ಎ.ಟಿ.ಎಂ. ಟೈಪಿಂಗ್ ಮಿಷನ್ ಬದಲಾಗಿ ಕಂಪ್ಯೂಟರ್, ಡಿ.ಟಿ.ಪಿ ಮಿಷನ್ ಬಂದಿದೆ. ಆರಂಭದ ಇಂಕ್ ಪೆನ್ ಬದಲಿಗೆ ನಾನಾ ತರದ ಪೆನ್‌ಗಳು ಬಂದಿವೆ. ಟಿ.ವಿ.ಗಳ ಮೂಲಕ ಪ್ರಪಂಚವು ತೆರೆದ ಪುಸ್ತಕವಾಗಿದೆ. ಐ.ಟಿ.ಬಿ.ಟಿ. ನವೀನ ತಾಂತ್ರಿಕತೆಗಳು ಬಂದಿವೆ. ಮೂಲಂಗಿ ಪ್ಯಾಂಟ್ ಹೋಗಿ ಬೆಲ್‌ಬಾಟಮ್ ಪ್ಯಾಂಟು ಬಂದಿದೆ. ಇನ್ನೂ ಮುಂತಾದವುಗಳು. ಈ ರೀತಿಯ ಕ್ರಿಯೆಗಳಲ್ಲಿ ಅರಿಯುವುದೇನೆಂದರೆ, ಜಾನಪದ ಕಾಲದಲ್ಲಿ ಅಂದಿನ ತಂತ್ರಜ್ಞಾನವಾಗಿದ್ದ ಗುಡಿಕೈಗಾರಿಕೆಗಳೇ ಇಂದಿನ ತಂತ್ರಜ್ಞಾನದ ಆಧುನಿಕತೆಯ ಕೈಗಾರಿಕೆಗಳೇ ಆಗಿ ಇವು ಮುಂದಿನ ಆಧುನಿಕ ಅತ್ಯುನ್ನತ ಬೃಹತ್ ಕೈಗಾರಿಕೆಗಳ ಯಾಂತ್ರೀಕರಣಕ್ಕೆ ಮೂಲ ಕಾರಣಗಳಾಗಿವೆ. ಇವುಗಳ ಚಾಲನೆ ನಿರಂತರವಾಗಿರುತ್ತದೆ. ಹಾಗಾಗಿ ಆಧುನಿಕ ವಸ್ತು-ಸಂಸ್ಕೃತಿಗಳು ಜಾನಪದ ವಸ್ತು-ಸಂಸ್ಕೃತಿಗಳಾಗಿ, ಈ ವಸ್ತು-ಸಂಸ್ಕೃತಿಗಳು ಆಧುನಿಕ ವಸ್ತು-ಸಂಸ್ಕೃತಿಗಳಾಗಿ ಹಳತು-ಹೊಸತುಗಳ, ಹೊಸತು-ಹಳತುಗಳ ಮಾನವನ ಜ್ಞಾನ-ವಿಜ್ಞಾನಗಳ ಈ ವಿಕಾಸವಾದ ಬಹುದೊಡ್ಡ ಜಾನಪದ-ಆಧುನಿಕ ವಿಜ್ಞಾನದ ಪ್ರತೀಕವಾಗಿವೆ.

೩. ಆಧುನಿಕತೆ-ಆಧುನಿಕ ಜಾನಪದ ನಡೆ-ನುಡಿ-ವರ್ತನೆಗಳಾಗುವ ಕ್ರಿಯೆ-ಪ್ರಕ್ರಿಯೆಗಳು

ಆಧುನಿಕತೆ ಜಾನಪದ ಮೂಲ ಸೆಲೆಯಿಂದಲೇ ಹುಟ್ಟಿರುವ ಸೃಜನಶೀಲ ಕ್ರಿಯೆ. ಹಾಗಾಗಿ ಆಧುನಿಕತೆಯ ನಡೆ-ನುಡಿ-ವರ್ತನೆಗಳಲ್ಲಿ ಅದರ ಅಂಶಗಳು ಹೊಸರೂಪ ತಾಳಿ ಹೊಸ ಮಾದರಿಗಳಲ್ಲಿ ಕ್ರಿಯೆ-ಪ್ರಕ್ರಿಯೆಗೊಳ್ಳುವುದು ಸಹಜವಾದ್ದೆ ಆಗಿದೆ. ಈ ಹಿಂದೆ ಇವುಗಳ ನಿರ್ದಿಷ್ಟತೆಯ ಇರುಹಿಕೆಗಳನ್ನು ಅರಿತಿದ್ದೇವೆ. ಈಗ ನಿರ್ದಿಷ್ಟವಾಗಿ ಇವುಗಳ ಆಧುನಿಕ ಜಾನಪದ ನಡೆ-ನುಡಿ-ವರ್ತನೆಗಳಾಗುವುದನ್ನು ಗುರುತಿಸಬಹುದಾಗಿದೆ. ಜನಪದರು ಹಳ್ಳಿಯಲ್ಲಿರಲಿ, ನಗರಗಳಲ್ಲಿರಲಿ, ಅವರ ನಡೆ-ನುಡಿ-ವರ್ತನೆಗಳು ಅವರ ಬದುಕಿನಲ್ಲಿ ನಡೆಯಲೇ ಬೇಕು. ಏಕೆಂದರೆ ಅವರೆಲ್ಲ ಜನಪದರು. ಹಾಗಾಗಿ ಮೌಖಿಕತೆ, ಪರಂಪಾರಿಕತೆ, ಸಾಮೂಹಿಕತೆ, ಅನಾಮಧೇಯತೆ, ಪಾಠಾಂತರ ಸಂಚಲತೆ, ಸಾಂಪ್ರದಾಯ, ಆಚರಣೆ, ನಂಬಿಕೆಗಳು, ಬೌದ್ಧಿಕತೆಗಳು ಪುನರಾವರ್ತನೆಗಳಾಗುತ್ತಾ, ಆಧುನಿಕತೆಗಳಲ್ಲಿ ಹೊಸರೂಪ ತಾಳಿ ಮುಂದುವರೆದಿವೆ. ಇವುಗಳಲ್ಲಿ ಅಕ್ಷರಸ್ಥ, ಅನಕ್ಷರಸ್ಥರೆಂಬ ಭೇದಭಾವವಿಲ್ಲದೆ ನಾಗರೀಕ ಸಮಾಜದಲ್ಲಿ ಜಾನಪದವಾಗುತ್ತಿವೆ.

ಅಕ್ಷರ-ಬರವಣಿಗೆಗಳನ್ನು ಯಾರೋ ಒಬ್ಬರು ಕಂಡುಹಿಡಿದು ಬಳಸಿದರು. ನಂತರ ಬದುಕಿನ ಅನುಭವಗಳನ್ನು ಬರವಣಿಗೆಯ ಮೂಲಕ ಯಾರೋ ಒಬ್ಬರು ಅಭಿವ್ಯಕ್ತಿಸುವ ಪ್ರಯತ್ನ ಮಾಡಿದರು. ನಂತರ ಈ ಬರಹಗಾರನೊಬ್ಬ ಮರೆಯಾಗಿ, ಅಕ್ಷರ-ಬರಹಗಳ ಅಭ್ಯಾಸದ ಅಭಿವ್ಯಕ್ತಿಗಳ ಮೂಲಕ ಬದುಕಿನ ಅನುಭವಗಳನ್ನು ಹೊರಚೆಲ್ಲುವ ಈ ಮಾದರಿ ದೇಶದಾದ್ಯಂತ, ಪ್ರಪಂಚದಾದ್ಯಂತ ಸಾಮೂಹಿವಾಗಿ ಬಳಸಲು ಎಲ್ಲರೂ ಪ್ರಾರಂಭಿಸಿದರು. ಹಾಗೆಯೇ ಆಧುನಿಕ ವಿದ್ಯಾಭ್ಯಾಸವನ್ನು ಭಾರತ ಬ್ರಿಟೀಷ್ ಸಾಮ್ರಾಜ್ಯದ ಮೆಕಾಲೆ ಜಾರಿಗೆ ತಂದದ್ದು ನಿಜ. ಆದರೆ ಆಧುನಿಕ ವಿದ್ಯಾಭ್ಯಾಸಗಳನ್ನು ಮೊದಲಿಗೆ ಕಲಿಯಲು ಪ್ರಾರಂಭಿಸಿದವರು ಯಾರೋ ಒಬ್ಬರು ಮೊದಲಿಗೆ ಆರಂಭಿಸಿದರು. ಅವರು ಮರೆಯಾದರು, ನಂತರದಲ್ಲಿ ಈ ಆಧುನಿಕ ವಿದ್ಯಾಭ್ಯಾಸ ಕ್ರಮ ಭಾರತದಲ್ಲಿ ದೇಶದಿಂದ ದೇಶಕ್ಕೆ, ರಾಜ್ಯದಿಂದ ರಾಜ್ಯಕ್ಕೆ. ಇಡೀ ದೇಶವೆಲ್ಲಾ ಬೇಧ ಭಾವವಿಲ್ಲದೆ ಎಲ್ಲರೂ ಸಾಮೂಹಿಕವಾಗಿ ಬಳಕೆಗೆ ತಂದರು.

ಸಾರ್ವತ್ರಿಕತೆಯನ್ನು ಪಡೆದುಕೊಂಡಿತು. ಇವತ್ತು ಆಧುನಿಕ ವಿದ್ಯಾಭ್ಯಾಸವಿಲ್ಲದೆ ಯಾರೂ ಬದುಕಲು ಸಾಧ್ಯವಾಗದೆ ಅನಿವಾರ್ಯವಾಯಿತು. ಸಹಜವಾಗಿಯೇ ಆಧುನಿಕತೆಯ ಸಂದರ್ಭದ ಅಕ್ಷರ, ಬರವಣಿಗೆ, ವಿದ್ಯಾಭ್ಯಾಸ ಕ್ರಮಗಳು ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಹರಡಿಕೊಳ್ಳುತ್ತಾ ಮೌಖಿಕತೆಯ ರೂಪ ಪಡೆದು ಪರಂಪಾರಿಕತೆ, ಸಾಮೂಹಿಕತೆ, ಅನಾಮಧೇಯತೆ, ಪಾಠಾಂತರಗಳಾಗಿ ಸಂಪ್ರದಾಯದಂತೆ, ಆಚರಣೆಯಂತೆ, ನಂಬಿಕೆಗಳಂತೆ ಜಾನಪದದ ಎಲ್ಲಾ ಕ್ರಿಯೆ-ಪ್ರಕ್ರಿಯೆಗಳನ್ನು ಪಡೆದು ಆಧುನಿಕ ಜಾನಪದದ ನಡೆ-ನುಡಿ-ವರ್ತನೆಗಳಾದವು.

[illegible] ಆಧುನಿಕ ವಸ್ತು-ಸಂಸ್ಕೃತಿಗಳು ಸಮಾಜದ [illegible] ಬಳಕೆಯಾಗುತ್ತಿದ್ದು, ಅವುಗಳು [illegible] ಬದುಕಿನ ಜೀವಧಾತುಗಳಾದಾಗ [illegible]ವಾಗಿಯೇ ಅಂತಹ ವಸ್ತು-ಸಂಸ್ಕೃತಿಗಳು ವ್ಯಕ್ತಿ ವಿಶಿಷ್ಟತೆಗಳನ್ನು ಕಳಚಿಕೊಂಡು ಸಾರ್ವತ್ರಿಕತೆಯನ್ನು ಪಡೆದುಕೊಂಡು ಯಾವುದೇ ಬೇಧ ಭಾವವಿಲ್ಲದೆ ಚಲಾವಣೆಗೆ ಬರುತ್ತವೆ. ಇವುಗಳು ಪ್ರದೇಶದಿಂದ ಪ್ರದೇಶಕ್ಕೆ ಹರಡುವಾಗ ಅನೇಕ ಪಾಠಾಂತರತೆಗಳನ್ನು ಪಡೆದುಕೊಂಡು, ಆಯಾ ಪರಿಸರ, ಸಂದರ್ಭಕ್ಕೆ ಅನುಗುಣವಾಗಿ ಚಲಿಸುತ್ತಾ ಹೋಗಿ ಜಾನಪದದ ಎಲ್ಲಾ ಲಕ್ಷಣಗಳನ್ನು ಮೈಗೂಡಿಸಿಕೊಂಡು ಆಧುನಿಕ ಜಾನಪದಗಳಾಗಿ ಬಿಡುತ್ತವೆ.

ಅಂದರೆ "ಯಾವುದೇ ಅಂಶ ಮೌಖಿಕ ರೂಪದಲ್ಲೇ ಇರಲಿ, ಲಿಖಿತ ರೂಪದಲ್ಲೇ ಇರಲಿ ಅದು ಮೂಲತಃ ಏಕವ್ಯಕ್ತಿ ಸೃಷ್ಟಿಯಾಗಿದ್ದರೂ ತನ್ನ ವ್ಯಕ್ತಿ ವಿಶಿಷ್ಟತೆಯನ್ನು ನೀಗಿಕೊಂಡು ಒಂದು ನಿರ್ದಿಷ್ಟ ಜನಸಮುದಾಯದಲ್ಲಿ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಪದೇ ಪದೇ ಬಳಕೆಗೊಳ್ಳುತ್ತಾ, ಸಂವಹನಗೊಳ್ಳುತ್ತಾ ಪಾಠಾಂತರಗಳನ್ನು ಪಡೆದುಕೊಳ್ಳುವ ಮೂಲಕ ಜಾನಪದವಾಗಿ ಬಿಡುತ್ತದೆ. ಆದ್ದರಿಂದ ಆಧುನಿಕ ಜಾನಪದ ಇಂದು "ಹಳೆಯದು ಮಾತ್ರ ಜಾನಪದ ಎಂಬ ಹಳೆಯ ನಂಬಿಕೆಗಳೂ ಬದಲಾಗಿ ಸಾಮೂಹಿಕ ಪ್ರಜ್ಞೆಯಿಂದ ಒಂದು ನಿರ್ದಿಷ್ಟ ಜಾನಪದದಲ್ಲಿ ನಡೆಯುವ ಪ್ರತಿಯೊಂದು ಸೃಷ್ಟಾತ್ಮಕ ಪ್ರಕ್ರಿಯೆಗಳು ಜಾನಪದವಾಗುತ್ತವೆ ಎಂಬ ವಿಶಾಲ ದೃಷ್ಟಿಕೋನದಿಂದ ಅಭ್ಯಾಸ ಮಾಡಬೇಕಾಗುತ್ತದೆ.೭" ಸಾಹಿತ್ಯದ ವಿವಿಧ ಪ್ರಕಾರಗಳೆಂದು ಸಣ್ಣ ಕಥೆ, ಕಾದಂಬರಿ, ನಾಟಕ, ಕಾವ್ಯ, ಲಲಿತ ಪ್ರಬಂಧ, ಗೋಡೆ ಬರಹಗಳು, ಆಟೋ ಬರಹಗಳು, ಯಾರೋ ಕೆಲವರು ಮೊದಲು ವಾಹನಗಳ ಮೇಲೆ ಶ್ರೀ ರಾಘವೇಂದ್ರಾಯ ನಮಃ, ಶ್ರೀ ಕಾಳಿಕಾಂಬೆ ನಮಃ, ಶ್ರೀ ದುರ್ಗಾಂಬ ನಮಃ, ಭುವನೇಶ್ವರಿ ನಮಃ ಇತ್ಯಾದಿ. ತಾಯಿ-ತಂದೆ ಆಶೀರ್ವಾದ, ಚಿತ್ರನಟರ ಹೆಸರು, ಮಕ್ಕಳ ಹೆಸರು, ಐತಿಹಾಸಿಕ ಹೆಸರುಗಳು-ಇತ್ಯಾದಿ ಹೆಸರುಗಳನ್ನು ಇಟ್ಟುಕೊಳ್ಳಲು, ಬರೆಸಲು ಆರಂಭಿಸಿದರು.

ಈ ಮಾದರಿಯ ಪ್ರಕ್ರಿಯೆಗಳನ್ನು ಸಾಮೂಹಿಕವಾಗಿ ಎಲ್ಲರೂ ಅನುಸರಿಸುತ್ತಿದ್ದಾರೆ. ಪ್ರವಾಸ ಕಥನ, ಖಂಡಕಾವ್ಯ, ಮೆಡಿಕಲ್, ಇಂಜಿನಿಯರಿಂಗ್, ಡಾಕ್ಟರ್ ಕೋರ್ಸ್‌ಗಳೆಂದು, ವೃತ್ತಿ ತರಬೇತಿ ಕೋರ್ಸ್, ಕಾನ್‌ವೆಂಟ್‌ಗಳೆಂದು, ಆಸ್ಪತ್ರೆಗಳೆಂದು, ವಿದ್ಯುತ್ ಚಿತಾಗಾರಗಳೆಂದು, ಮೂಸಿಯಂಗಳೆಂದು, ಪ್ರತಿಮೆಗಳೆಂದು, ಪಾರ್ಕ್‌ಗಳೆಂದು- ಮುಂತಾದವುಗಳನ್ನು ಪ್ರಾರಂಭಿಸಿದರು. ಹಾಗೆಯೇ ಮನೆಗೆ ಮೊದ ಮೊದಲು ಯಾರೋ ಒಬ್ಬರು ಟಿ.ವಿಯನ್ನು ಬಳಸಿದರು. ಇದನ್ನು ನೋಡಿ ಜನಗಳು ತಮ್ಮ ತಮ್ಮ ಮನೆಗಳಿಗೆ ಟಿ.ವಿಗಳನ್ನು ಕಡ್ಡಾಯವಾಗಿ ಬಳಸಿಕೊಳ್ಳುತ್ತಿದ್ದಾರೆ, ಹಾಗೆಯೇ ರೇಡಿಯೋ, ಕಂಪ್ಯೂಟರ್, ಮೊಬೈಲ್, ಕಾರು, ಸ್ಕೂಟರ್-ಮುಂತಾದವುಗಳು ಎಲ್ಲರೂ ಸಾಮೂಹಿಕತೆಯಿಂದಲೇ ಉಪಯೋಗಿಸ ತೊಡಗಿದರು. ಕಾರು, ಸ್ಕೂಟರ್ ಕೊಂಡುಕೊಂಡ ಯಾರೋ ಒಬ್ಬ ಅಪಘಾತದ ಭಯ-ಆತಂಕದಿಂದ ಗಣಪತಿ ದೇವಸ್ಥಾನದಲ್ಲಿ ಪೂಜೆ ಮಾಡಿಸಿದ. ಈತನ ರೀತಿ-ನೀತಿಗಳನ್ನು ನೋಡಿ ವಾಹನಗಳನ್ನು ಕೊಂಡುಕೊಂಡ ಎಲ್ಲರೂ ಮಾಡಿಸಲು ಆರಂಭಿಸಿದರು. ಅದು ರೂಢಿ, ಸಂಪ್ರದಾಯ, ನಂಬಿಕೆಗಳಿಗೆ ಕಾರಣವಾಗಿ "ವೆಯ್ಹಿಕಲ್ ಗಣಪತಿ" ಎಂದು ಹೆಸರಾಯಿತು.

ಗಣಪತಿ ದೇವಸ್ಥಾನಗಳು ಯಾವುದೇ ಪ್ರದೇಶದಲ್ಲಿ, ರಾಜ್ಯದಲ್ಲಿ ಇದ್ದರೂ ಅಲ್ಲಿ ಪೂಜೆ ಸಲ್ಲಿಸುವ ವಾಡಿಕೆ ಇದ್ದೇ ಇದ್ದೆ. ಹಾಗೆಯೇ "ಆಯುಧ ಪೂಜೆ"ಯಲ್ಲಿನ ಮನೆಯಲ್ಲಿರುವ ಎಲ್ಲಾ ಆಯುಧಗಳಿಗೆ, ವಾಹನಗಳಿಗೆ ಕಂಪ್ಯೂಟರ್, ಟಿ.ವಿ. ಇತರೆ ಯಂತ್ರಗಳಿಗೆ ಪೂಜೆ ಸಲ್ಲಿಸುವ ಪದ್ಧತಿ ಪ್ರತಿ ವರ್ಷ ಅಡೆ-ತಡೆ ಇಲ್ಲದೆ ನಡೆಯುತ್ತದೆ. ಇದು ರೂಢಿ ಸಂಪ್ರದಾಯವಾಗಿದೆ. "ಕ್ಷೇಮ ಸಮಾಚಾರದ ಪತ್ರಗಳ ರೀತಿ-ನೀತಿ, ದುಃಖ ಸೂಚಕ ಪತ್ರಗಳನ್ನು ಹಾಗೂ ಮದುವೆ ಲಗ್ನ ಪತ್ರಿಕೆಗಳನ್ನು ಕ್ರಮವಾಗಿ ಅರಿಶಿನ, ಕುಂಕುಮ ಮತ್ತು ಕಪ್ಪಿನಿಂದ ಗುರುತಿಸುವ ರೀತಿ-ನೀತಿಗಳು ಇರುತ್ತವೆ. ಸಾಲ ಪತ್ರಗಳು, ಜಮೀನು ವ್ಯವಹಾರದ ಪತ್ರಗಳು, ಸಾಂಪ್ರದಾಯಿಕ ರೀತಿಯ ಬರವಣಿಗೆಯನ್ನು ಒಳಗೊಂಡಿರುತ್ತವೆ." ಇವೆಲ್ಲ ಲಿಖಿತ ಜಾನಪದವೇ ಆಗಿರುತ್ತದೆ. ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಪ್ರೇಮಪತ್ರಗಳ ಮೇಲೆ S,W.K. (Sealed with Kiss) ಎಂದು ಬರೆದಿರುತ್ತಾರೆ. ಅಂದರೆ ಇದು ಪ್ರೇಮ ಪತ್ರದ ಸಂಕೇತವಾಗಿದೆ. ೮"

ನಗರಗಳ ವಿವಿಧ ಬಡಾವಣೆಗಳಿಗೆ ನಮ್ಮ ನಾಡಿಗೆ ಸೇವೆ ಸಲ್ಲಿಸಿರುವ ಅನೇಕ ವ್ಯಕ್ತಿಗಳ ಹೆಸರುಗಳನ್ನು ಇಡಲು ಯಾರೋ ಪ್ರಾರಂಭಿಸಿದರು. ಹೆಸರಿಡಲು ಹೇಳಿದ, ಸೂಚಿಸಿದ ವ್ಯಕ್ತಿಯೊಬ್ಬ ಕಾಲಾನುಗತವಾಗಿ ಮರೆಯಾಗಿ ಈಗ "ಆಡಳಿತ ಸರ್ಕಾರಗಳು, ಚುನಾಯಿತ ಪ್ರತಿನಿಧಿಗಳು, ಮಹಾನಗರ ಪಾಲಿಕೆ, ಪುರಸಭೆಗಳು ಬಡಾವಣೆಗಳಿಗೆ ಹೆಸರಿಡುವುದನ್ನು ಪದ್ಧತಿ ಮಾಡಿಕೊಂಡಿದ್ದಾರೆ. ಹಾಗೆಯೇ ನಗರಗಳಲ್ಲಿ ಯಾರೋ ಮೊದಲಿಗೆ ವಿವಿಧ ನಾಡಿನ ಹಬ್ಬಗಳನ್ನು ಉತ್ಸವಗಳ ಮಾದರಿಯಲ್ಲಿ ಆಚರಿಸಿದರು. ಈ ರೀತಿಯ ಅನೇಕ ಉತ್ಸವಗಳು ವರ್ಷ ವರ್ಷ ರೂಢಿಗಳಾಗಿವೆ. ಅದರಲ್ಲಿ ರಾಜ್ಯೋತ್ಸವ, ಗಣೇಶೋತ್ಸವ ಮೈಸೂರು ದಸರಾ ಉತ್ಸವ, ದೀಪಾವಳಿಯಲ್ಲಿ ಪಟಾಕಿ ಹೊಡೆಯುವ ಪದ್ಧತಿ ಹಾಗೆಯೇ ವ್ಯಕ್ತಿಗತವಾಗಿ ಜಯಂತಿಗಳನ್ನು ಆಚರಿಸುವ ಪದ್ಧತಿಗಳು ಜಾರಿಗೆ ಬಂದಿವೆ. ಬುದ್ಧ ಜಯಂತಿ, ಬಸವಣ್ಣ ಜಯಂತಿ, ಕನಕ ಜಯಂತಿ, ಅಂಬೇಡ್ಕರ್ ಜಯಂತಿ ಮುಂತಾದವುಗಳು.

ಆಧುನಿಕತೆಯ ಸಂದರ್ಭಗಳಲ್ಲಿ ಪ್ರಜಾಪ್ರಭುತ್ವ ಸರ್ಕಾರಗಳಿದ್ದರೂ, ಸಂವಿಧಾನ, ಕಾನೂನುಗಳಿದ್ದರೂ ಈ ದೇಶದಲ್ಲಿ ಅಸ್ಪೃಶ್ಯತೆ, ವರ್ಗ, ಲಿಂಗಭೇದ ತಾರತಮ್ಯಗಳು, ಶೋಷಣೆಗಳು ನಡೆಯುತ್ತಿದ್ದು, ಇವುಗಳ ವಿರುದ್ಧ ಬುದ್ಧ, ಬಸವಣ್ಣ, ಅಂಬೇಡ್ಕರ್, ಗಾಂಧೀಜಿ, ಜ್ಯೋತಿ ಬಾಫುಲೆ, ಸಾಹುಮಹಾರಾಜ್, ನಾರಾಯಣಗುರು, ಪೆರಿಯಾರ್-ಮುಂತಾದವರು ಸಮಾನತೆ, ಸ್ವಾತಂತ್ರ್ಯ, ಸಹೋದರತ್ವಗಳಿಗಾಗಿ ಹೋರಾಡಿದ್ದಾರೆ. ಇವರೆಲ್ಲ ಶೋಷಿತ ವರ್ಗಗಳ, ಸಾಮೂಹಿಕ ನಾಯಕರಾಗಿದ್ದಾರೆ.

ಆಧುನಿಕತೆಯ ಸಂದರ್ಭಗಳಲ್ಲಿ ಪ್ರಜಾಪ್ರಭುತ್ವ ಸರ್ಕಾರಗಳಿದ್ದರೂ, ಸಂವಿಧಾನ, ಕಾನೂನುಗಳಿದ್ದರೂ ಈ ದೇಶದಲ್ಲಿ ಅಸ್ಪೃಶ್ಯತೆ, ವರ್ಗ, ಲಿಂಗಭೇದ ತಾರತಮ್ಯಗಳು, ಶೋಷಣೆಗಳು ನಡೆಯುತ್ತಿದ್ದು, ಇವುಗಳ ವಿರುದ್ಧ ಬುದ್ಧ, ಬಸವಣ್ಣ, ಅಂಬೇಡ್ಕರ್, ಗಾಂಧೀಜಿ, ಜ್ಯೋತಿ ಬಾಫುಲೆ, ಶಾಹುಮಹಾರಾಜ್, ನಾರಾಯಣಗುರು, ಪೆರಿಯಾರ್-ಮುಂತಾದವರು ಸಮಾನತೆ, ಸ್ವಾತಂತ್ರ್ಯ ಸಹೋದರತ್ವಗಳಿಗಾಗಿ ಹೋರಾಡಿದ್ದಾರೆ. ಇವರೆಲ್ಲ ಶೋಷಿತ ವರ್ಗಗಳ, ಸಾಮೂಹಿಕ ನಾಯಕರಾಗಿದ್ದಾರೆ. ಇವರುಗಳ ಸ್ಫೂರ್ತಿಯಿಂದ ಇವತ್ತು ದಲಿತ ಹೋರಾಟ ಚಳವಳಿಗಳು, ರೈತ ಹೋರಾಟಗಳು, ಮಹಿಳಾ ಹೋರಾಟಗಳು, ಧರಣಿ, ಸತ್ಯಾಗ್ರಹ, ಬಹಿಷ್ಕಾರ, ಮುಷ್ಕರ, ಪಿಕೇಟಿಂಗ್, ರಸ್ತೆ ಚಳವಳಿ, ಮಾನವ ಸರಪಳಿ- ಇತ್ಯಾದಿ ಸಂಘಟನೆ, ಪರಿಕಲ್ಪನೆಯ ಕಾರ್ಯಾಚರಣೆಗಳ ಪ್ರಕ್ರಿಯೆಗಳೆಲ್ಲವೂ ಆಧುನಿಕ ಜಾನಪದವೇ ಆಗಿವೆ.

ಇನ್ನು ಮುಂತಾದ ಇವತ್ತಿನ ಆಧುನಿಕತೆಯ ನಡೆ-ನುಡಿ-ವರ್ತನೆಗಳೆಲ್ಲಾ ಕಾಲಾನುಗತವಾಗಿ ಆಧುನಿಕ ಜಾನಪದ ಕ್ರಿಯೆ-ಪ್ರಕ್ರಿಯೆಗಳಾಗಿಯೂ, ಗಾದೆ, ಒಗಟು, ಒಡಪು, ಗೀತೆ, ಮಹಾಕಾವ್ಯ ಮುಂತಾದವುಗಳ ಅಭಿವ್ಯಕ್ತಿಗಳಾಗಿಯೂ ಆಧುನಿಕ ಜಾನಪದದಲ್ಲಿ ಕಾಣಿಸಿಕೊಳ್ಳಬಹುದಾಗಿದೆ. ಹೀಗಾಗಿ ಜಾನಪದ ಆಧುನಿಕವಾಗಿ, ಆಧುನಿಕತೆ ಜಾನಪದವಾಗಿ ಒಂದಕ್ಕೊಂದು ಪ್ರಭಾವ-ಪ್ರೇರಣೆ-ಪರಿಣಾಮಗಳನ್ನು ಉಂಟು ಮಾಡುತ್ತಲೇ ಮಾನವನ ಬದುಕಿನ ನಿರ್ಮಾತೃ ರೂಪಕಗಳಾಗಿ ಜೀವಂತವಾಗಿವೆ. ಇವೆರಡರ ಅಂತರಂಗ, ಬಹಿರಂಗ ತಾಣ-ಭಿನ್ನಾಣಗಳು ಬದುಕಿನಲ್ಲಿ ಇದ್ದೇ ಇರುತ್ತವೆ. ಅವು ಇರಲೇ ಬೇಕು. ಆದರೆ ಅಂತರಂಗ ಆಧುನಿಕ ಕಾಲದಲ್ಲಿ ಮೌಢ್ಯತೆಯ ಕುರುಡು ನಂಬಿಕೆಯ ಅಸಮಾನತೆಗಳನ್ನು ಕಳೆದುಕೊಳ್ಳಬೇಕು. ಅಲ್ಲದೆ ಅಂತರಂಗದ ಆತ್ಮ ಶುದ್ಧಿ ಮಾಡಿಕೊಂಡು ಬಹಿರಂಗದ ವೈಚಾರಿಕ, ವೈಜ್ಞಾನಿಕತೆ, ಪ್ರಗತಿಪರತೆ, ಸಮಾನತೆ ಬದುಕಿಗೆ ತೆರೆದುಕೊಳ್ಳಬೇಕು. ಆಗ ಜಾನಪದ ಉಳಿದು ಬೆಳೆಯುತ್ತದೆ. ಆ ದಿಕ್ಕಿನ ಕಡೆ ಜಾನಪದ ಅಂತರಂಗವನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸಿ ಶೋಧಿಸಿ ಕಟ್ಟುವ ಕಾರ್ಯದಲ್ಲಿ ನಾವೆಲ್ಲ ಕಾರ್ಯೋನ್ಮುಖರಾಗಬೇಕು.

ಅಡಿ ಟಿಪ್ಪಣಿಗಳು:

೧. ಡಾ॥ ಜೀಶಂಪ, ಜಾನಪದ, ಪುಟ-೨೫
೨. ಡಾ॥ ಶ್ರೀಕಂಠ ಕೂಡಿಗೆ (ಸಂ), ಜಾನಪದದ ವಿವಿಧ ಮುಖಗಳು, ಪುಟ-೫೧
೩. ಅದೇ
೪. ಡಾ॥ ರಂಗಾರೆಡ್ಡಿ ಕೋಡಿರಾಂಪುರ, ಜಾನಪದ ೧೯೯೩, ಪುಟ ೫೨-೫೩
೬. ಅದೇ, ಪುಟ-೬೯
೭. ಅದೇ ಪುಟ-೧೯೧
೮. ಡಾ॥ ಜೀಶಂಪ, ಜಾನಪದ, ಪುಟ-೨೫-೨೬ □

ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು

ಡೆಂಗಿ ಜ್ವರ ಎಂದರೇನು?

ಡೆಂಗಿ ಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಕಾಯಿಲೆ. ಈ ಕಾಯಿಲೆಯ ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು

ಇದಕ್ಕಿದಂತೆ ತೀವ್ರಜ್ವರ,ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು., ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು.

೧. ಡೆಂಗಿ ಹರಡುವ ಈಜಿಪ್ಟೈ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.

೨. ಬಯಲಲ್ಲಿ ಪೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.

೩. ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶಾಂತ್ರಿ ಪಡೆಯುವ ವಯೋವೃದ್ಧರು, ಕಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದು. ಹೀಗೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟುವುದು ಸುಲಭ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ

ಕರ್ನಾಟಕ ವಾರ್ತೆ
Karnataka Information

ಪ್ರಸವದ ನೋವಿನಲ್ಲಿ ನೇಪಾಳ, ಪ್ರತಿಗಾಮಿ ಮುಷ್ಟಿಯಲ್ಲಿ ಕರ್ನಾಟಕ

ಸತ್ಯ

ಇದೇ ವರ್ಷದ ಏಪ್ರಿಲ್‌ನಲ್ಲಿ ನೇಪಾಳದಲ್ಲಿ ಚುನಾವಣೆಗಳು ನಡೆದವು. ಮೇ ತಿಂಗಳಲ್ಲಿ ಕರ್ನಾಟಕದ ಚುನಾವಣೆಗಳು ನಡೆದವು. ಅಲ್ಲಿ ಸುದೀರ್ಘ ಕಾಲ ಪ್ರಜಾ ಹೋರಾಟ ನಿರ್ಮಿಸುವದರಲ್ಲಿ ತೊಡಗಿಸಿಕೊಂಡಿದ್ದ ಸಿಪಿಎನ್[ಮಾವೋವಾದಿ] ಪಕ್ಷ ಆಳುವವರ ಎಲ್ಲಾ ಲೆಕ್ಕಾಚಾರಗಳನ್ನು, ತರ್ಕ-ಕುತಂತ್ರಗಳನ್ನು ತಲೆಕೆಳಗೆ ಮಾಡಿ, ಅತಿದೊಡ್ಡ ಪಕ್ಷವಾಗಿ ಗೆದ್ದುಬಂದಿತು. ಇಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಜನಪರ ಶಕ್ತಿಗಳು ಸಾಂಕೇತಿಕ ಗೆಲುವನ್ನೂ ಸಾಧಿಸದೆ ತೀವ್ರರೀತಿಯಲ್ಲಿ ಪರಾಭವಗೊಂಡವು. ಅಲ್ಲಿ ಪ್ರಪಂಚದ ಏಕೈಕ ಹಿಂದೂ ರಾಷ್ಟ್ರವೆಂದು ಕರೆಸಿಕೊಳ್ಳುತ್ತಿದ್ದ ನಿರಂಕುಶ ರಾಜ ಪ್ರಭುತ್ವವನ್ನು ರದ್ದು ಮಾಡಿ ನೇಪಾಳವನ್ನು ಜಾತ್ಯಾತೀತ, ಫೆಡರಲ್, ಪ್ರಜಾತಾಂತ್ರಿಕ, ಗಣತಂತ್ರವನ್ನಾಗಿ ಘೋಷಿಸಲಾಯಿತು. ಇಲ್ಲಿ ಚರಿತ್ರೆಯಲ್ಲಿ ಪ್ರಥಮ ಬಾರಿಗೆ ಹಿಂದುತ್ವ ಐಡಿಯಾಲಜಿಯನ್ನು ಹೊಂದಿರುವ ಪಕ್ಷ ಅಧಿಕಾರಕ್ಕೆ ಬಂದಿತು. ಅಲ್ಲಿ ದೇಶವನ್ನು ದೋಚುತ್ತಾ, ಜನರನ್ನು ವಂಚಿಸುತ್ತಾ ಬಂದ ಪಕ್ಷಗಳು, ಅವುಗಳ ನಾಯಕರು ಚುನಾವಣೆಯಲ್ಲಿ ಹೀನಾಯವಾಗಿ ಸೋಲನುಭವಿಸಿದರು. ಇಲ್ಲಿ ದೀರ್ಘ ಕಾಲದ ದಮನ, ದೌರ್ಜನ್ಯ, ಲೂಟಿ ಮತ್ತು ವಂಚನೆಯ ಇತಿಹಾಸವಿರುವ ಬಿಜೆಪಿ ಮತ್ತು ಕಾಂಗ್ರೆಸ್‌ಗಳೆ ಮತ್ತೆ ಪ್ರಮುಖ ಪಕ್ಷಗಳಾಗಿ ಗೆದ್ದುಬಂದವು. ಅಲ್ಲಿ ಏರ್ಪಟ್ಟಿರುವ ಸಂವಿಧಾನ ರಚನಾ ಸಭೆಯಲ್ಲಿ ದಲಿತರು, ಮಹಿಳೆಯರು, ಅಲ್ಪಸಂಖ್ಯಾತರನ್ನೊಳಗೊಂಡಂತೆ ಎಲ್ಲಾ ದಮನಿತ ಜನರು, ವಿವಿಧ ಭಾಷೆ-ಸಂಸ್ಕೃತಿಯನ್ನು ಹೊಂದಿರುವ ಎಲ್ಲ ಜನ ಸಮುದಾಯಗಳು ತಮ್ಮ ಜನಸಂಖ್ಯಾವಾರು ಪ್ರಾತಿನಿಧ್ಯ ಹೊಂದಿದರು. ಇಲ್ಲಿ ರಚನೆಗೊಂಡಿರುವ ವಿಧಾನ ಸಭೆಯಲ್ಲಿ ಮೇಲ್ಜಾತಿಯವರು, ಕೋಟ್ಯಾಧಿಪತಿಗಳು ವಿಶೇಷವಾಗಿ ಗಣಿ ಮತ್ತು ರಿಯಲ್ ಎಸ್ಟೇಟ್ ದರೋಡೆಕೋರರು ತುಂಬಿಕೊಂಡರು. ಅಲ್ಲಿ ಸಂವಿಧಾನವನ್ನು, ಪ್ರಭುತ್ವ ಯಂತ್ರಾಂಗವನ್ನು ಜನಪರವಾಗಿ ಪುನರ್ರಚಿಸುವ ಮೂಲಕ ಇಡೀ ನೇಪಾಳದ ಭವಿಷ್ಯವನ್ನು ಬದಲಾಯಿಸಲು ಬಯಸುವ ಶಕ್ತಿಗಳಿಗೂ, ಹೊಸ ಬಾಟಲಿಯಲ್ಲಿ ಹಳೆ ಮದ್ಯವನ್ನೆ ತುಂಬಬೇಕು ಎಂದು ಬಯಸುತ್ತಿರುವ ಶಕ್ತಿಗಳಿಗೂ ನಡುವೆ ತೀವ್ರ ಸಂಘರ್ಷ ನಡೆಯುತ್ತಿದೆ. ಇಲ್ಲಿ ಹಣ ಬಾಚುವ ಖಾತೆಗಳಿಗಾಗಿ ತೀವ್ರ ಸ್ವರೂಪದ ಕಚ್ಚಾಟ, ಪೈಪೋಟಿ ನಡೆಯುತ್ತಿದೆ. ಎಲ್ಲದಕ್ಕಿಂತ ಮುಖ್ಯವಾಗಿ ಅಲ್ಲಿನ ಎಲ್ಲಾ ರಾಜಕೀಯ ವಿದ್ಯಮಾನದಲ್ಲಿ ಜನಪರ ಶಕ್ತಿಗಳು ಪ್ರಬಲವಾಗಿವೆ, ಮುಂಚೂಣಿ ಶಕ್ತಿಯಾಗಿವೆ, ಅತಿ ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿವೆ. ಇಲ್ಲಿ ಜನಪರ ಶಕ್ತಿಗಳು ಅತ್ಯಂತ ದುರ್ಬಲವಾಗಿವೆ, ಒಗ್ಗಟ್ಟಿನಲ್ಲಿ ಇಲ್ಲ... ಒನ್ನೆಡೆಯಲ್ಲಿವೆ, ಶೋಷಣೆಯ ವಿರುದ್ಧ ಪರಿಣಾಮಕಾರಿ ರೀತಿಯಲ್ಲಿ ದನಿಯನ್ನೂ ಎತ್ತಲಾಗದ ಸ್ಥಿತಿಯಲ್ಲಿವೆ.

ಈ ಲೇಖನವನ್ನು ಓದಲು ಪ್ರಾರಂಭಿಸಿರುವ ನಿಮಗೆ, ನೇಪಾಳಕ್ಕೂ ಕರ್ನಾಟಕಕ್ಕೂ ಎತ್ತಣದಿಂದೆತ್ತಣ ಸಂಬಂಧ ಎಂಬ ಪ್ರಶ್ನೆ ಮೂಡುವುದು ಸಹಜ. ಹಾಗೆ ನೋಡಬೇಕೆಂದರೆ ಇವೆರಡಕ್ಕೂ ನೇರ ಸಂಬಂಧವೇನೂ ಇಲ್ಲ. ಎರಡರ ದೇಶ ಬೇರೆ, ಚರಿತ್ರೆ ಬೇರೆ, ಭಾಷೆ-ಸಂಸ್ಕೃತಿ ಬೇರೆ. ಈ ಲೇಖನದ ಉದ್ದೇಶ ಎರಡರ ನಡುವಿನ ಸಾಮ್ಯತೆಯನ್ನೊ ಭಿನ್ನತೆಯನ್ನೊ ಚರ್ಚಿಸುವುದಲ್ಲ. ಶೋಷಕರ ನೇಪಾಳ ಜನರ ನೇಪಾಳವಾಗಿ ಪರಿವರ್ತನೆಯಾಗುವ ನಿಟ್ಟಿನಲ್ಲಿ ದಾಪುಗಾಲಿಡುತ್ತಿರುವ, ಕರ್ನಾಟಕ ಭಾರತದ ಅತ್ಯಂತ ಪ್ರತಿಗಾಮಿಯಾದ ಹಿಂದುತ್ವ ಶಕ್ತಿಗಳ ತೆಕ್ಕೆಗೆ ಜಾರುತ್ತಿರುವ ವಿದ್ಯಮಾನಗಳು ಏಕಕಾಲದಲ್ಲಿ ನಡೆಯುತ್ತಿರುವುದರಿಂದ ಈ ಎರಡು ಸಮಾಜಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿರಲು ಕಾರಣವೇನು ಎಂಬುದರತ್ತ ಗಮನ ಸೆಳೆಯುವುದೇ ಈ ಲೇಖನದ ಉದ್ದೇಶವಾಗಿದೆ. ನೇಪಾಳಿ ಸಮಾಜದ ಪುರೋಗಾಮಿ ಚಲನೆಯ ಹಿಂದೆ ಜನಪರ ಶಕ್ತಿಗಳ ಯಶಸ್ಸಿನ ಕಥೆ ಇದೆ. ಕರ್ನಾಟಕದಲ್ಲಿ ಪ್ರತಿಗಾಮಿ ಶಕ್ತಿಗಳು ಬಲಗೊಳ್ಳುತ್ತಿರುವುದರ ಹಿಂದೆ ಪ್ರಗತಿಪರ ಶಕ್ತಿಗಳ ಸೋಲಿನ ಇತಿಹಾಸವಿದೆ. ಅವರ ಗೆಲುವು ನಮ್ಮ ಸೋಲು ಎರಡರಿಂದಲೂ ನಾವು ಪಾಠ ಕಲಿಯಬೇಕಿದೆ. ಕರ್ನಾಟಕದ ಭವಿಷ್ಯವನ್ನು ಜನಪರ ದಿಕ್ಕಿನೆಡೆ ತಿರುಗಿಸಲು ಅನುಸರಿಸಬೇಕಾದ ಮಾರ್ಗಗಳ ಬಗ್ಗೆ ಗಂಭೀರ ಚಿಂತನೆಯನ್ನು ನಡೆಸಬೇಕಿದೆ. ಈ ನಿಟ್ಟಿನಲ್ಲಿ ನನಗನಿಸಿದ ಅಭಿಪ್ರಾಯಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.



ನೇಪಾಳಕ್ಕೂ ಕರ್ನಾಟಕಕ್ಕೂ ಎತ್ತಣದಿಂದೆತ್ತಣ ಸಂಬಂಧ ಎಂಬ ಪ್ರಶ್ನೆ ಮೂಡುವುದು ಸಹಜ. ಹಾಗೆ ನೋಡಬೇಕೆಂದರೆ ಇವೆರಡಕ್ಕೂ ನೇರ ಸಂಬಂಧವೇನೂ ಇಲ್ಲ. ಎರಡರ ದೇಶ ಬೇರೆ, ಚರಿತ್ರೆ ಬೇರೆ, ಭಾಷೆ-ಸಂಸ್ಕೃತಿ ಬೇರೆ. ಈ ಲೇಖನದ ಉದ್ದೇಶ ಎರಡರ ನಡುವಿನ ಸಾಮ್ಯತೆಯನ್ನೊ ಭಿನ್ನತೆಯನ್ನೊ ಚರ್ಚಿಸುವುದಲ್ಲ. ಶೋಷಕರ ನೇಪಾಳ ಜನರ ನೇಪಾಳವಾಗಿ ಪರಿವರ್ತನೆಯಾಗುವ ನಿಟ್ಟಿನಲ್ಲಿ ದಾಪುಗಾಲಿಡುತ್ತಿರುವ, ಕರ್ನಾಟಕ ಭಾರತದ ಅತ್ಯಂತ ಪ್ರತಿಗಾಮಿಯಾದ ಹಿಂದುತ್ವ ಶಕ್ತಿಗಳ ತೆಕ್ಕೆಗೆ ಜಾರುತ್ತಿರುವ ವಿದ್ಯಮಾನಗಳು ಏಕ ಕಾಲದಲ್ಲಿ ನಡೆಯುತ್ತಿರುವುದರಿಂದ ಈ ಎರಡು ಸಮಾಜಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿರಲು ಕಾರಣವೇನು ಎಂಬುದರತ್ತ ಗಮನ ಸೆಳೆಯುವುದೇ ಈ ಲೇಖನದ ಉದ್ದೇಶವಾಗಿದೆ.

ಇದರಲ್ಲಿರಬಹುದಾದ ಸರಿ-ತಪ್ಪು ವಿಚಾರಗಳಿಗೆ ಪ್ರತಿಕ್ರಿಯಿಸಬೇಕೆಂದು ಕೋರುತ್ತೇನೆ. ಮೊದಲಿಗೆ ನೇಪಾಳದ ಯಶಸ್ಸಿನ ಕಥೆಯತ್ತ ಕಣ್ಣಾಡಿಸೋಣ.

ನೇಪಾಳಿ ಜನರ ಹೋರಾಟಗಾಥೆ:

ನೇಪಾಳ ಪ್ರಪಂಚದ ಅತ್ಯಂತ ಬಡ ದೇಶದಲ್ಲಿ ಮೂರನೆಯದು. ಪ್ರಪಂಚದ ಅತ್ಯುನ್ನತ ಶಿಖರವಾದ ಹಿಮಾಲಯದ ಬುಡದಲ್ಲಿರುವ ಸುಂದರ ನೇಪಾಳದ ಜನತೆ ಕಳೆದ ೨೪೦ ವರ್ಷಗಳ ಕಾಲ ಅರಸರ ವೈಭೋಗಕ್ಕೆ ದುಡಿದು ದುಡಿದು ಸವೆದು ಹೋದವರು. ವಿಶೇಷವಾಗಿ ೧೮ ನೇ ಶತಮಾನದಲ್ಲಿ ಹಲವು ಸಣ್ಣ ರಾಜರನ್ನು ಸೋಲಿಸಿ ನೇಪಾಳಿ ರಾಜ್ಯವನ್ನು ಕಟ್ಟಿದ ಶಾ ರಾಜ ಮನೆತನ ಹಾಗೂ ೧೮೪೮ರಿಂದ ೧೯೫೧ ರ ತನಕ ರಾಜರನ್ನು ಉತ್ಸವ ಮೂರ್ತಿಗಳನ್ನಾಗಿ ಮಾಡಿ ಪ್ರಧಾನ ಮಂತ್ರಿಗಳಾಗಿ ಆಳಿದ ರಾಣ ಮನೆತನ ತಾವು ನೇಪಾಳವನ್ನು ದೋಚಿದ್ದಲ್ಲದೆ, ಬ್ರಿಟೀಷರಿಗೂ ನಂತರ ಭಾರತದ ಬಂಡವಾಳಶಾಹಿಗಳಿಗೂ ಕೊಳ್ಳೆಹೊಡೆಯಲು ಅವಕಾಶ ಮಾಡಿಕೊಟ್ಟು ನೇಪಾಳಿ ಜನತೆಯನ್ನು ದಿವಾಳಿ ಮಾಡಿದರು. ಜನರ ಹೋರಾಟದ ದನಿಯನ್ನು ಅತ್ಯಂತ ಕ್ರೂರವಾಗಿ ದಮನಿಸಿದರು. ಭಾರತದ ೧೯೪೭ ರ 'ಸ್ವಾತಂತ್ರ್ಯ' ಹಾಗೂ ಚೀನಾದ ೧೯೪೯ ರ ಕ್ರಾಂತಿಗಳು ನೇಪಾಳದ ಸಮಾಜದ ಮೇಲೆ ತಮ್ಮದೇ ರೀತಿಯಲ್ಲಿ ಪ್ರಭಾವ ಬೀರಿದವು. ಆಗ ಅಧಿಕಾರದಲ್ಲಿದ್ದ ರಾಣ ಮನೆತನದ ವಿರುದ್ಧ ನೇಪಾಳಿ ಯುವಜನತೆ ಹೋರಾಡಲು ಪ್ರಾರಂಭಿಸಿತು. ರಾಣಾ ಆಳ್ವಿಕೆಯನ್ನು ವಿರೋಧಿಸಿ ಶಾ ರಾಜ ತ್ರಿಭುವನ್ ೧೯೫೧ರಲ್ಲಿ ಭಾರತಕ್ಕೆ ತಪ್ಪಿಸಿಕೊಂಡು ಬಂದ. ರಾಣಾ, ಶಾ ಮತ್ತು ಭಾರತದ ನಡುವೆ ಮಾತುಕತೆ ನಡೆದು ಶಾ ಮತ್ತೆ ರಾಜನಾಗಿ ನೇಪಾಳಕ್ಕೆ ಹಿಂತಿರುಗಿದ. ಈತ ಅಂದಿನ ನೇಪಾಳಿ ಜನರ ಹೋರಾಟಕ್ಕೆ ಪ್ರತಿಸ್ಪಂದಿಸುತ್ತಾ ಹೊಸ ಸಂವಿಧಾನ ಬರೆಯಲು ಸಂವಿಧಾನ ಸಭೆ ಚುನಾವಣೆಗಳನ್ನು ನಡೆಸುವುದಾಗಿ ಮಾತುಕೊಟ್ಟ. ಆದರೆ ಆ ಮಾತನ್ನು ಮುಂದಿನ ಯಾವ ರಾಜರೂ ಈಡೇರಿಸಲಿಲ್ಲ.

ಪ್ರಜಾಪ್ರಭುತ್ವಕ್ಕಾಗಿ ಜನರ ಹೋರಾಟ ಅಂದಿನಿಂದ ಮುಂದುವರಿಯುತ್ತಲೇ ಬಂತು. ಭಾರತದೊಂದಿಗೆ ನಿಕಟ ಒಡನಾಟದಲ್ಲಿದ್ದ ನೇಪಾಳದ ಬಂಡವಾಳಶಾಹಿಗಳು ಊಳಿಗಮಾನ್ಯ ರಾಜನ ಕೈಯಲ್ಲಿ ಮಾತ್ರ ಅಧಿಕಾರವಿರುವ ರಚನೆ ಬದಲಾಗಿ ತಮಗೂ ಪಾಲು ಇರುವ 'ಪ್ರಜಾಪ್ರಭುತ್ವ'ವನ್ನು ಬಯಸಿದರು. ಇವರ ಹಿತಾಸಕ್ತಿಯನ್ನು ಮುಂದಿಟ್ಟುಕೊಂಡು ನೇಪಾಳಿ ಕಾಂಗ್ರೆಸ್ ಪಕ್ಷ ಹುಟ್ಟಿಕೊಂಡಿತು. ನೇಪಾಳದ ಜನತೆ ಸಮಾನತೆಯತ್ತ ಸಾಗುತಿದ್ದ ಚೀನಾದಿಂದ ಪ್ರಭಾವಿತಗೊಂಡರು, ಕಮ್ಯುನಿಸಂ ಪರವಾಗಿ ತೀವ್ರವಾದ ಒಲವನ್ನು ತೋರಿದರು. ಜನತೆಯ ಈ ಆಶೋತ್ತರಗಳನ್ನು ಪ್ರತಿನಿಧಿಸುತ್ತಾ ನೇಪಾಳಿ ಕಮ್ಯುನಿಸ್ಟ್ ಪಕ್ಷ ಹುಟ್ಟಿಕೊಂಡಿತು. ಅಂದು, ನೇಪಾಳಿ ಕಾಂಗ್ರೆಸ್ ಮತ್ತು ರಾಜನ ನಡುವೆ ನಡೆಯುತ್ತಿದ್ದ ಸಂಘರ್ಷ ನೇಪಾಳಿ ರಾಜಕೀಯದ ಕೇಂದ್ರ ಬಿಂದುವಾಗಿತ್ತು. ನೇಪಾಳಿ ಕಾಂಗ್ರೆಸ್ ಪ್ರಜಾಪ್ರಭುತ್ವದ ಘೋಷಣೆಯನ್ನು ಮುಂದಿಡುತ್ತಿತ್ತು, ರಾಜಪ್ರಭುತ್ವ ದೇಶಪ್ರೇಮದ ಘೋಷಣೆಯನ್ನು ಮುಂದಿಡುತಿತ್ತು. ಆದರೆ ಇಬ್ಬರೂ ಪ್ರತಿಪಾದಿಸುತ್ತಿದುದ್ದು ಹುಸಿ ಪ್ರಜಾಪ್ರಭುತ್ವ ಮತ್ತು ಹುಸಿ ದೇಶಪ್ರೇಮಗಳಾಗಿದ್ದವು. ಜನರನ್ನು ಶೋಷಿಸುವುದರಲ್ಲಿ ಇಬ್ಬರ ನಡುವೆ ಒಮ್ಮತತೆ ಇತ್ತು.



ನೇಪಾಳದಲ್ಲಿ ಇತಿಹಾಸ ಸೃಷ್ಟಿಸಿದ ಮಾವೋವಾದಿ ನಾಯಕ ಪ್ರಚಂಡ

ಸಾರಾಂಶದಲ್ಲಿ ಅದು ದೇಶದ ಅಧಿಕಾರದಲ್ಲಿನ ಪಾಲಿಗಾಗಿ ಊಳಿಗಮಾನ್ಯ ಶಕ್ತಿಗಳಿಗೂ ಮತ್ತು ಬಂಡವಾಳಶಾಹಿಗಳಿಗೂ ನಡುವೆ ನಡೆದ ಕಚ್ಚಾಟವಾಗಿತ್ತು. ಇದನ್ನು ಅರ್ಥಮಾಡಿಕೊಳ್ಳದೆ ಅಂದಿನ ಮೂರನೇ ಶಕ್ತಿಯಾಗಿದ್ದ ನೇಪಾಳಿ ಕಮ್ಯೂನಿಸ್ಟ್ ಪಕ್ಷ ಒಮ್ಮೆ ಕಾಂಗ್ರೆಸ್ ಪರವಹಿಸುತ್ತಾ ಮತ್ತೊಮ್ಮೆ ರಾಜನ ಪರವಹಿಸುತ್ತಾ ಕೋಡಂಗಿಯಂತೆ ನಡೆದುಕೊಂಡಿತು. ಈ ಸಂದರ್ಭದಲ್ಲಿ ಭಾರತದಲ್ಲಿ ನಕ್ಸಲ್ಬರಿ ಹೋರಾಟ ಸಿಡಿದಾಗ ಅದರ ಪ್ರಭಾವದಿಂದ ಅಲ್ಲಿನ ಕಮ್ಯುನಿಸ್ಟ್ ಪಕ್ಷದಲ್ಲೂ ವಿಭಜನೆ ಸಂಭವಿಸಿತು. ಆ ಪಕ್ಷದಲ್ಲಿದ್ದ ಮಂದಗಾಮಿಗಳು, ಇಲ್ಲಿನ ಸಿಪಿಎಂ ಜೊತೆ ಸಂಬಂಧವಿಟ್ಟುಕೊಂಡು ಯು.ಎಂ.ಎಲ್ ಪಕ್ಷವನ್ನು ಕಟ್ಟಿಕೊಂಡರು, ತೀವ್ರಗಾಮಿಗಳು ಭಾರತದ ನಕ್ಸಲೈಟ್ ಹೋರಾಟಗಾರರ ಜೊತೆ ಸಂಬಂಧವಿಟ್ಟುಕೊಂಡು ಸಿಪಿಎನ್[ಮಾಶಾಲ್] ಹಾಗೂ ಇನ್ನಿತರ ಕ್ರಾಂತಿಕಾರಿ ಪಕ್ಷಗಳನ್ನು ಕಟ್ಟಿಕೊಂಡರು. ಕಾಲಕ್ರಮೇಣ ತೀವ್ರಗಾಮಿ ರಾಜಕೀಯವನ್ನು ಪ್ರತಿಪಾದಿಸುವ ಪಕ್ಷಗಳ ಪೈಕಿ ಸಿಪಿಎನ್[ಮಾವೋವಾದಿ] ಪಕ್ಷ ಅಗ್ರಗಣ್ಯ ಪಕ್ಷವಾಗಿ ಬೆಳೆದು ಬಂದಿತು. ೧೯೯೦ ರ ದಶಕದ ಪ್ರಾರಂಭದ ಹೊತ್ತಿಗೆ ಮಾವೋವಾದಿ ಪಕ್ಷ ನೇಪಾಳದ ರಾಜಕೀಯದಲ್ಲಿ ಹೊಸ ಶಕ್ತಿಯಾಗಿ

> **೧೯೭೯ರಿಂದ ಪ್ರಜಾಪ್ರಭುತ್ವಕ್ಕಾಗಿ ನೇಪಾಳಿ ವಿದ್ಯಾರ್ಥಿಗಳು ದೇಶವ್ಯಾಪಿ ತೀವ್ರಸ್ವರೂಪದ ಹೋರಾಟವನ್ನು ಪ್ರಾರಂಭಿಸಿದ್ದರು. ೧೯೯೦ ರ ಹೊತ್ತಿಗೆ ಇದು ಎಲ್ಲಾ ರಾಜಕೀಯ ಶಕ್ತಿಗಳನ್ನೂ, ಜನರನ್ನೂ ಒಳಗೊಂಡ ಬಲಿಷ್ಠ ಪ್ರಜಾ ಚಳುವಳಿಯಾಗಿ ಮಾರ್ಪಟ್ಟಿತು.**

ರೂಪುಗೊಳ್ಳತೊಡಗಿತು. ಇದು ಮಾವೋವಾದವನ್ನು ಬಲವಾಗಿ ಸಮರ್ಥಿಸಿಕೊಂಡಿತು. ಆದರೆ ಚೀನಾ ಕ್ರಾಂತಿಯನ್ನಾಗಲೀ, ರಷ್ಯ ಕ್ರಾಂತಿಯನ್ನಾಗಲೀ, ಭಾರತದ ನಕ್ಸಲೈಟರನ್ನಾಗಲೀ ಅನುಕರಿಸದೆ, ಎಲ್ಲರಿಂದ ಪಾಠಗಳನ್ನು ಕಲಿಯುತ್ತಾ ನೇಪಾಳ ಪರಿಸ್ಥಿತಿಗೆ ಸರಿಹೊಂದುವಂಥ ಬೇಡಿಕೆಗಳನ್ನು, ಹೋರಾಟ ಮಾರ್ಗವನ್ನು ಅನುಸರಿಸಲು ನಿರ್ಧರಿಸಿದರು. ಈ ನಿರ್ಧಾರ ಅವರನ್ನು ಆ ನೆಲದ ವಾಸ್ತವತೆಗೆ ಹತ್ತಿರವಾಗಿಸಿತು. ಹೊಸತನದ ಶಕ್ತಿಯನ್ನು ನೀಡಿತು.

೧೯೭೯ರಿಂದ ಪ್ರಜಾಪ್ರಭುತ್ವಕ್ಕಾಗಿ ನೇಪಾಳಿ ವಿದ್ಯಾರ್ಥಿಗಳು ದೇಶವ್ಯಾಪಿ ತೀವ್ರಸ್ವರೂಪದ ಹೋರಾಟವನ್ನು ಪ್ರಾರಂಭಿಸಿದ್ದರು. ೧೯೯೦ ರ ಹೊತ್ತಿಗೆ ಇದು ಎಲ್ಲಾ ರಾಜಕೀಯ ಶಕ್ತಿಗಳನ್ನೂ, ಜನರನ್ನೂ ಒಳಗೊಂಡ ಬಲಿಷ್ಠ ಪ್ರಜಾ ಚಳವಳಿಯಾಗಿ ಮಾರ್ಪಟ್ಟಿತು. ಜನರ ಹೋರಾಟದ ಒತ್ತಡಕ್ಕೆ ಮಣಿದು ಅದುವರೆಗೆ ರಾಜಕೀಯ ಪಕ್ಷಗಳ ಮೇಲೆ ಹೇರಿದ್ದ ನಿಷೇಧವನ್ನು ಹಿಂತೆಗೆದುಕೊಂಡು ಸಂವಿಧಾನಾತ್ಮಕ ರಾಜಪ್ರಭುತ್ವವನ್ನು ರಾಜ ಭೀರೇಂದ್ರ ಸ್ಥಾಪಿಸಿದನು. ಇದು ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವಗಳ ಮಿಶ್ರಣ ವ್ಯವಸ್ಥೆಯಾಗಿತ್ತು. ರಾಜ, ದೇಶದ ಆಳ್ವಿಕೆಯಲ್ಲಿ ಬಂಡವಾಳಶಾಹಿಗಳಿಗೂ ಪಾಲು ನೀಡಿದ್ದು ಇದರ ಸಾರವಾಗಿತ್ತು. ಶಾಸನ ಸಭೆ ಆಯ್ಕೆಯಾಗುತ್ತದೆ. ಅದು ದೇಶದ ಆಗುಹೋಗುಗಳನ್ನು ನೋಡಿಕೊಳ್ಳುತ್ತದೆ. ಆದರೆ ಅಂತಿಮ ಅಧಿಕಾರ ರಾಜನದೆ ಆಗಿರುತ್ತದೆ. ಸೇನೆ ಸಹ ರಾಜನ ನಿಯಂತ್ರಣದಲ್ಲಿರುತ್ತದೆ. ಇದು ಒಂದು ಮಟ್ಟಕ್ಕೆ ಜನರ ಹೋರಾಟಕ್ಕೆ ಸಂದ ಜಯವಾಗಿತ್ತು. ಆದರೆ ಇನ್ನೊಂದು ರೀತಿಯಲ್ಲಿ ರಾಜ ಹಾಗೂ ಬಂಡವಾಳಶಾಹಿ ಶಕ್ತಿಗಳು ಒಡಂಬಡಿಕೆ ಮಾಡಿಕೊಂಡು ಜನರ ಪ್ರಜಾತಾಂತ್ರಿಕ ಆಶೋತ್ತರಗಳಿಗೆ ಮಾಡಿದ ವಂಚನೆಯಾಗಿತ್ತು. ೧೯೯೧ ರಲ್ಲಿ ಶಾಸನ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಮುಖ ಪಕ್ಷವಾಗಿ ಗೆದ್ದುಬಂದಿತು. ಆದರೆ ದೇಶದ ಪರಿಸ್ಥಿತಿ ಮತ್ತಷ್ಟು ಅಧೋಗತಿಗಿಳಿಯಿತು. ಭ್ರಷ್ಟಾಚಾರ ಹಾಗೂ ಜನರ ಸಂಪತ್ತನ್ನು ಬಾಚುವ ಕೆಲಸದಲ್ಲಿ ಮುಳುಗಿ ವಿಪರೀತ ತೆರಿಗೆ, ಬೆಲೆ ಏರಿಕೆ, ನಿರುದ್ಯೋಗಗಳ ಹೆಚ್ಚಳಕ್ಕೆ ಕಾರಣವಾಯಿತು.

ಇಲ್ಲಿಂದ ಹೊಸ ಶಕೆ ಪ್ರಾರಂಭವಾಯಿತು. ಆಗ ಯೂನಿಟಿ ಸೆಂಟರ್ ಹೆಸರಿನಲ್ಲಿದ್ದ ಮಾವೋವಾದಿಗಳು ಸಂಸತ್ತಿನಲ್ಲಿ ಸಣ್ಣ ಪಕ್ಷವಾಗಿದ್ದರು. ಇವರು ಸಂಸತ್ತಿನಲ್ಲಿ ಮತ್ತು ಬೀದಿಯಲ್ಲಿ ಎರಡೂ ಕಡೆ ಜನರ ನಿಜವಾದ ಬೇಡಿಕೆಗಳಿಗಾಗಿ ಹೋರಾಟ ಪ್ರಾರಂಭಿಸಿದರು. ರಾಜ ಪ್ರಭುತ್ವವನ್ನು ರದ್ದು ಮಾಡಬೇಕು, ಹೊಸ ಸಂವಿಧಾನವನ್ನು ರಚಿಸಲು ಸಂವಿಧಾನ ಸಭೆ ಚುನಾವಣೆಗಳನ್ನು ನಡೆಸಬೇಕು ಎಂಬ ಬೇಡಿಕೆಗಳನ್ನೂ ಒಳಗೊಂಡಂತೆ ರೈತರ, ಕಾರ್ಮಿಕರ, ದಲಿತರ, ಮಹಿಳೆಯರ, ದಮನಿತ ರಾಷ್ಟ್ರೀಯತೆಗಳ ಇತ್ಯಾದಿ ಜನ ಸಮುದಾಯಗಳ ರಾಜಕೀಯ-ಸಾಮಾಜಿಕ-ಆರ್ಥಿಕ ಹಕ್ಕುಗಳಿಗಾಗಿ ೪೦ ಅಂಶಗಳ ಬೇಡಿಕೆಯನ್ನು ಮುಂದಿಟ್ಟು ಹೋರಾಟ ಬೆಳೆಸಿದರು. ಒಂದು ರೀತಿಯಲ್ಲಿ ಇವು ಹೊಸ ಜನಪರವಾದ ನೇಪಾಳ ಕಟ್ಟುವ ಬೇಡಿಕೆಗಳಾಗಿದ್ದವು. ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವಾಗಲೀ, ರಾಜನಾಗಲೀ ಇವಕ್ಕೆ ಯಾವುದೇ ಬೆಲೆಯನ್ನು ನೀಡಲಿಲ್ಲ. ಜನರ ಹೋರಾಟಗಳು

[illegible] ತೀವ್ರ ದಮನಕಾರಿಯವನ್ನು [illegible] ಗೋಲಿಬಾರಿನಲ್ಲಿ ಸಾವಿರಾರು ಜನರು ಹತರಾದರು. ಮುಂದೇನು ಎಂಬ ಚಿಂತೆ ಎಲ್ಲರನ್ನೂ ಕಾಡುತ್ತಿದ್ದಾಗ ೧೯೯೬ ಫೆಬ್ರವರಿ ೨ ರಂದು ಸಿಪಿಎನ್[ಮಾವೋವಾದಿ] ಪಕ್ಷ ಅಸ್ತಿತ್ವದಲ್ಲಿದ್ದ ಆಳ್ವಿಕೆ ವಿರುದ್ಧ ಪ್ರಜಾಯುದ್ಧದ ಘೋಷಣೆ ಮಾಡಿದರು. ಶಾಂತಿಯುತವಾಗಿ ಹೋರಾಡಿ ಮುಂದಿಟ್ಟ ನ್ಯಾಯಯುತ ಬೇಡಿಕೆಗಳಿಗೆ ಗುಂಡಿನ ಉತ್ತರ ಮಾತ್ರ ಸಿಕ್ಕಾಗ, 'ದಂಗೇಳುವುದು ಪ್ರತಿಯೊಬ್ಬರ ಹಕ್ಕು' ಎಂದು ಬಲವಾಗಿ ಪ್ರತಿಪಾದಿಸಿದರು. ಸಶಸ್ತ್ರ ಹೋರಾಟದ ಮೂಲಕ ಜನರ ಹಕ್ಕುಗಳನ್ನು ದಕ್ಕಿಸಿಕೊಳ್ಳುವ ಹೋರಾಟಕ್ಕೆ ಮುಂದಾದರು. ರಾಜಪ್ರಭುತ್ವದಿಂದ, ರಾಜಕೀಯ ಪಕ್ಷಗಳ ವಂಚನೆಯಿಂದ ರೋಸಿಹೋಗಿದ್ದ ನೇಪಾಳದ ಯುವಜನರು ದೊಡ್ಡ ಮಟ್ಟದಲ್ಲಿ ಯುದ್ಧದ ಕರೆಗೆ ಸ್ಪಂದಿಸಿದರು. ಹಂತಹಂತವಾಗಿ ಪ್ರಜಾ ಸೇನೆ ಬೆಳೆಯತೊಡಗಿತು. ಪ್ರಜಾ ವಿಮೋಚನಾ ಸೇನೆಯ ಮೂಲಕ ಹಳ್ಳಿಗಾಡಿನಲ್ಲಿದ್ದ ಶೋಷಕ ಶಕ್ತಿಗಳ ಹಿಡಿತವನ್ನು ನಾಶಮಾಡಿ ಪ್ರಜಾ ಅಧಿಕಾರವನ್ನು ಸ್ಥಾಪಿಸಿದರು. ೨೦೦೧ ರ ವೇಳೆಗೆ ರೋಲ್ಪ ಮತ್ತು ರುಕುಂಗಳಲ್ಲಿ ಮುಕ್ತ ಚುನಾವಣೆಗಳನ್ನು ನಡೆಸಿ ಪರ್ಯಾಯ ಪ್ರಜಾ ಸರ್ಕಾರವನ್ನು ಸ್ಥಾಪಿಸಿದರು. ಈ ಪರಿಸ್ಥಿತಿಯನ್ನು ಹೇಗೆ ನಿಯಂತ್ರಿಸುವುದು ತಿಳಿಯದೆ ಆಳುವವರಲ್ಲಿ ತೀವ್ರವಾದ ಒಳಜಗಳ ಪ್ರಾರಂಭವಾಯಿತು. ಅದರ ಭಾಗವಾಗಿ ೨೦೦೧ ರಲ್ಲಿ ಭಾರತ ಮತ್ತು ಅಮೇರಿಕಾದ ಬೆಂಬಲದೊಂದಿಗೆ ಭೀರೇಂದ್ರ ರಾಜನ ಇಡೀ ಕುಟುಂಬವನ್ನು ನಾಶಮಾಡಿ ಗ್ಯಾನೇಂದ್ರ ರಾಜನಾಗಿ ಅಧಿಕಾರಕ್ಕೆ ಬಂದ. ಗ್ಯಾನೇಂದ್ರ ಪಟ್ಟವೇರಿದ ತರುವಾಯ ನೇಪಾಳದ ಅಧಿಕಾರವನ್ನೆಲ್ಲ ತನ್ನ ಹಿಡಿತದಲ್ಲಿ ಕೇಂದ್ರೀಕರಿಸಿಕೊಳ್ಳತೊಡಗಿದ. ಸರ್ಕಾರದಲ್ಲಿದ್ದ ಪಕ್ಷಗಳು ಪರಸ್ಪರ ಕಚ್ಚಾಡುತ್ತಾ ಮಾವೋವಾದಿಗಳನ್ನು ಹತ್ತಿಕ್ಕುವುದರಲ್ಲಿ ವಿಫಲಗೊಳ್ಳುತ್ತಿವೆ ಎಂದು ಸರ್ಕಾರವನ್ನೆ ರದ್ದು ಮಾಡಿ, ತುರ್ತು ಪರಿಸ್ಥಿತಿಯನ್ನು ಹೇರುವ ಮೂಲಕ ದೇಶದ ಸಂಪೂರ್ಣ ಹಿಡಿತವನ್ನು ತೆಗೆದುಕೊಂಡ.

ಇಷ್ಟು ಹೊತ್ತಿಗೆ ದೇಶದ ಶೇ.೮೦ ರಷ್ಟು ಹಳ್ಳಿಗಾಡು ಪ್ರದೇಶಗಳು ಮಾವೋವಾದಿಗಳ ನಿಯಂತ್ರಣದಲ್ಲಿದ್ದವು. ಹೆಚ್ಚು ಕಡಿಮೆ ನಗರಗಳು ರಾಜನ ಕೈನಲ್ಲಿ, ಹಳ್ಳಿಗಾಡು ಮಾವೋವಾದಿಗಳ ಕೈಯಲ್ಲಿ ಎಂಬ ಪರಿಸ್ಥಿತಿ ಇತ್ತು. ಗ್ಯಾನೇಂದ್ರನ ನೇತೃತ್ವದಲ್ಲಿ ಮತ್ತೆ ರಾಜಪ್ರಭುತ್ವ ನೇಪಾಳವನ್ನು ಹಿಡಿತಕ್ಕೆ ತೆಗೆದುಕೊಂಡಿದ್ದರಿಂದ ಅದನ್ನು ಕಿತ್ತೊಗೆಯುವುದನ್ನು ಪ್ರಧಾನ ಲಕ್ಷ್ಯವನ್ನಾಗಿ ಮಾಡಿಕೊಂಡ ಮಾವೋವಾದಿಗಳು ಅದಕ್ಕಾಗಿ ಬಲಿಷ್ಠ ಜನಾಂದೋಲನ ಸೃಷ್ಟಿಸುವ ದೃಷ್ಟಿಯೊಂದಿಗೆ ಸಂಸದೀಯ ಪಕ್ಷಗಳ ಜೊತೆ ಕೈಗೂಡಿಸಲು ಮುಂದಾದರು. ಅವರನ್ನು ಒಪ್ಪಿಸಲು ಭಾರತ ಸರ್ಕಾರದ ಮೇಲೆ ಪ್ರಭಾವ ಬೀರುವುದನ್ನೂ ಒಳಗೊಂಡಂತೆ ಹಲವು ರೀತಿಯ ತಂತ್ರಗಾರಿಕೆಯನ್ನು ಅಳವಡಿಸಿದರು. ಅವರ ನಿರಂತರ ಪ್ರಯತ್ನದಿಂದಾಗಿ ೭ ಸಂಸದೀಯ ಪಕ್ಷಗಳಿಗೂ ಹಾಗೂ ಮಾವೋವಾದಿಗಳಿಗೂ ನಡುವೆ ೨೦೦೫ ರ ನವೆಂಬರ್ ೨೨ ರಂದು ೧೨ ಅಂಶದ ಚಾರಿತ್ರಿಕ ಒಪ್ಪಂದ ಏರ್ಪಟ್ಟಿತು. ಅದರ ಪ್ರಕಾರ: ಸಂಸದೀಯ ಪಕ್ಷಗಳು ಹಾಗೂ ಮಾವೋವಾದಿಗಳು ಸೇರಿ ರದ್ದು ಮಾಡಲ್ಪಟ್ಟಿರುವ ಸರ್ಕಾರವನ್ನು ಪುನರ್ ಸ್ಥಾಪಿಸಬೇಕೆಂದು ಒತ್ತಾಯಿಸಿ ರಾಜನ ವಿರುದ್ಧ ಬಲಿಷ್ಠ ಜನಾಂದೋಲನ ನಿರ್ಮಿಸುವುದು. ಅದರಲ್ಲಿ ಯಶಸ್ಸು ಸಾಧಿಸಿ, ಮಧ್ಯಂತರ ಸಂವಿಧಾನವನ್ನು ಆಧರಿಸಿದ ಮಧ್ಯಂತರ ಸರ್ಕಾರವನ್ನು ರಚಿಸುವುದು, ಈ ಸರ್ಕಾರ ಒಂದು ವರ್ಷದಲ್ಲಿ ನೇಪಾಳದ ಹೊಸ ಸಂವಿಧಾನ ರಚಿಸಲು ಅಗತ್ಯವಿರುವ ಸಂವಿಧಾನ ಸಭೆಗಾಗಿ ಚುನಾವಣೆಯನ್ನು ನಡೆಸಬೇಕು. ಆಯ್ಕೆಯಾದ ಸಂವಿಧಾನ ಸಭೆಯು ರಾಜಪ್ರಭುತ್ವವನ್ನು ರದ್ದು ಮಾಡುವ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತದೆ ಮತ್ತು ಹೊಸ ನೇಪಾಳದ ನಿರ್ಮಾಣಕ್ಕೆ ದಾರಿಮಾಡಿಕೊಡುವಂಥ ಹೊಸ ಸಂವಿಧಾನವನ್ನು ಬರೆಯುತ್ತದೆ. ಸಂವಿಧಾನ ಸಭೆ ಚುನಾವಣೆಗಳು ನಡೆಯುವ ತನಕ ಮಾವೋವಾದಿಗಳ ಪ್ರಜಾ ವಿಮೋಚನಾ ಪಡೆ [ಪಿಎಲ್‌ಎ] ಯು ಸರ್ಕಾರಿ ಖರ್ಚಿನಲ್ಲಿ ೭ ಸೇನಾ ಶಿಬಿರಗಳಲ್ಲಿರುತ್ತದೆ. ರಕ್ಷಣೆಗೆ ಕೆಲವು ಆಯುಧಗಳನ್ನು ಮಾತ್ರ ಇಟ್ಟುಕೊಂಡು ಮಿಕ್ಕವನ್ನು ವಿಶ್ವ ಸಂಸ್ಥೆಯ ನಿಗರಾಣಿಯಲ್ಲಿ ಕಂಟೈನರ್‌ಗಳಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಆಯ್ಕೆಯಾಗುವ ಸಂವಿಧಾನ ಸಭೆಯ ಸೂಕ್ತ ಸಮಿತಿಯ ಮೇಲ್ವಿಚಾರಣೆಯಲ್ಲಿ ನೇಪಾಳಿ ಸೈನ್ಯ ಮತ್ತು ಪಿ ಎಲ್ ಎ ಗಳನ್ನು ಸಮ್ಮಿಳಿತಗೊಳಿಸಿ ಹೊಸ ರಾಷ್ಟ್ರೀಯ ಸೇನೆಯನ್ನು ನಿರ್ಮಿಸುತ್ತದೆ.

ಮೇಲ್ಕಂಡ ಒಪ್ಪಂದದ ಆಧಾರದ ಮೇಲೆ ಮಾವೋವಾದಿಗಳು ೧೨ ವರ್ಷಗಳ ಕಾಲ ನಡೆಸಿದ ಪ್ರಜಾಯುದ್ಧವನ್ನು ನಿಲ್ಲಿಸಿದರು. ಮಾವೋವಾದಿಗಳು ಹಾಗೂ ೭ ಸಂಸದೀಯ ಪಕ್ಷಗಳು ಸೇರಿ ರಾಜಪ್ರಭುತ್ವದ ವಿರುದ್ಧ ಬಲವಾದ ಸಮೂಹ ಚಳುವಳಿಯನ್ನು ಪ್ರಾರಂಭಿಸಿದರು. ಅಧಿಕಾರದಿಂದ ಇಳಿದು ಹೊಸ ಸರ್ಕಾರದ ಸ್ಥಾಪನೆಗೆ ದಾರಿಮಾಡಿಕೊಡಬೇಕೆಂದು ರಾಜನನ್ನು ಆಗ್ರಹಿಸಿ ಬೃಹತ್ ಚಳುವಳಿ ಪ್ರಾರಂಭವಾಯಿತು. ದೇಶಾದ್ಯಾಂತದಿಂದ ಜನಸಾಗರ ರಾಜಧಾನಿ ಕಠ್ಮಂಡುವಿಗೆ ಹರಿದು ಬಂದಿತು. ಹಲವು ಲಕ್ಷಗಳಷ್ಟು ಜನ ಬೀದಿಯ ಮೇಲಿದ್ದರು. ಈ ಜನಶಕ್ತಿಯನ್ನು ಎದುರಿಸಲು ಬೇರೆ ದಾರಿಯಿಲ್ಲದೆ ರಾಜ ಸರ್ಕಾರವನ್ನು ಪುನರ್ ಸ್ಥಾಪನೆಗೆ ಅವಕಾಶ ಮಾಡಿಕೊಡಬೇಕಾಯಿತು. ಇದೊಂದು ಜನತೆಗೆ ಸಂದ ಬಹುಮುಖ್ಯ ಯಶಸ್ಸಾಗಿತ್ತು. ೭ ಪಕ್ಷಗಳು ಮತ್ತು ಮಾವೋವಾದಿಗಳಿಂದ ಕೂಡಿದ ಹೊಸ ಮಧ್ಯಂತರ ಸರ್ಕಾರ ಅಧಿಕಾರಕ್ಕೆ ಬಂದಿತು. ಅದು ಸೇನಾ ನಿಯಂತ್ರಣವನ್ನೂ ಒಳಗೊಂಡಂತೆ ರಾಜನ ಹಿಡಿತದಲ್ಲಿದ್ದ ಹಲವು ಮುಖ್ಯ ಅಧಿಕಾರಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತು.

ಇದರಿಂದಾಗಿ ರಾಜನ ಪಾತ್ರ ಮತ್ತು ಪ್ರಭಾವ ಅಂತ್ಯಗೊಳ್ಳಲಿಲ್ಲವಾದರೂ ದುರ್ಬಲಗೊಂಡಿತು. ರಾಜ ನೇಪಥ್ಯಕ್ಕೆ ಸರಿದ ನಂತರ ಮುಖ್ಯ ಮೂರು ರಾಜಕೀಯ ಶಕ್ತಿಗಳಾದ ಕಾಂಗ್ರೆಸ್, ಯು ಎಂ ಎಲ್ ಮತ್ತು ಮಾವೋವಾದಿಗಳ ನಡುವೆ ಸಂಘರ್ಷ ತೀವ್ರಗೊಂಡಿತು. ಭಾರತದ ಆಳುವವರ ಬಾಲಂಗೋಚಿಯಾಗಿರುವ, ಅತ್ಯಂತ ಭ್ರಷ್ಟ ಪರಂಪರೆಯನ್ನು ಹೊಂದಿರುವ, ರಾಜನೊಂದಿಗೆ ರಹಸ್ಯ ಮೈತ್ರಿಯನ್ನು ಮುಂದುವರಿಸಿದ್ದ ಕಾಂಗ್ರೆಸ್ ಅನ್ನು ಸೋಲಿಸುವುದನ್ನು ಪ್ರಧಾನ ಲಕ್ಷ್ಯ ಮಾಡಿಕೊಂಡ ಮಾವೋವಾದಿಗಳು ಯು ಎಂ ಎಲ್ ಅನ್ನೂ ಒಳಗೊಂಡಂತೆ ವಿವಿಧ ಕಮ್ಯುನಿಸ್ಟ್ ಪಕ್ಷಗಳನ್ನೆಲ್ಲಾ ಸೇರಿಸಿ ಐಕ್ಯ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವ ಪ್ರಯತ್ನಕ್ಕೆ ಕೈ ಹಾಕಿದರು. ಅದಕ್ಕಾಗಿ ಮಾವೋವಾದಿ ಹೆಸರನ್ನೂ, ಪ್ರಚಂಡ ಪಥ ಎಂದು ಕರೆದುಕೊಳ್ಳುವುದನ್ನೂ ಬಿಡಲು ಸಿದ್ಧರಾದರು. ಈ ಪ್ರಯತ್ನದಿಂದಾಗಿ ಕೆಲವು ಚಿಕ್ಕ ಚಿಕ್ಕ ಪಕ್ಷಗಳನ್ನು ಸೇರಿಸಿಕೊಳ್ಳಲು ಸಾಧ್ಯವಾದರೂ ಯು ಎಂ ಎಲ್ ನಾಯಕತ್ವ ಸಹಕರಿಸದಿದ್ದರಿಂದ ಐಕ್ಯ ಕಮ್ಯುನಿಸ್ಟ್ ಪಕ್ಷ ರೂಪಗೊಳ್ಳಲಿಲ್ಲ. ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡು ಸ್ಪರ್ಧಿಸಲು ಸಹ ಆ ಪಕ್ಷ ಒಪ್ಪಿಕೊಳ್ಳಲಿಲ್ಲ. ತನ್ನನ್ನು ಕಮ್ಯುನಿಸ್ಟ್ ಎಂದು ಕರೆದುಕೊಂಡರೂ ಮಾವೋವಾದಿಗಳನ್ನು ಹೆಚ್ಚೆಚ್ಚು ವಿರೋಧಿಸುತ್ತಾ ಕಾಂಗ್ರೆಸ್‌ನ ಬಾಲ ಹಿಡಿದು ನಡೆಯತೊಡಗಿತು.

ಈ ಹಿನ್ನೆಲೆಯಲ್ಲಿ ಸಂವಿಧಾನ ಸಭೆಗಾಗಿ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಯಿತು. ಆದರೆ ನಮ್ಮಲ್ಲಿ ನಡೆಯುವ ಚುನಾವಣೆಗಳಿಗೂ ಅಲ್ಲಿ ಅಳವಡಿಸಿಕೊಂಡ ಚುನಾವಣಾ ವಿಧಾನಕ್ಕೂ ಅಜಗಜಾಂತರ ವ್ಯತ್ಯಾಸವಿತ್ತು. ನೇರ ಚುನಾವಣೆಗಳಷ್ಟೇ ನಡೆದರೆ ಸಮಾಜದಲ್ಲಿ ಪ್ರಬಲವಾಗಿರುವ ಜಾತಿ, ಲಿಂಗ, ಜನಾಂಗಗಳಿಗೆ ಸೇರಿದ ಜನರೇ ಹೆಚ್ಚಾಗಿ ಗೆಲ್ಲುವ ಸಾಧ್ಯತೆ ಇರುವುದರಿಂದ ಆಯಾ ಸಮುದಾಯಗಳು ಎಷ್ಟು ಜನಸಂಖ್ಯೆಯಲ್ಲಿವೆಯೋ ಅಷ್ಟು ಪ್ರಮಾಣದ ಪ್ರತಿನಿಧಿಗಳು ಸಂವಿಧಾನವನ್ನು ಬರೆಯಬೇಕಿರುವ ಸಂವಿಧಾನ ಸಭೆಗೆ ಬರುವಂತಾಗಬೇಕು. ಆ ರೀತಿ ಚುನಾವಣಾ ಪ್ರಕ್ರಿಯೆಯನ್ನು ಪುನರ್ರಚಿಸಬೇಕು ಎಂದು ಮಾವೋವಾದಿಗಳು ಪ್ರಸ್ತಾಪವಿಟ್ಟರು. ಬೇರೆ ಪಕ್ಷಗಳಿಗೂ ಮಾವೋವಾದಿಗಳಿಗೂ ನಡುವೆ ತೀವ್ರ ಚರ್ಚೆ ನಡೆದು ಕೊನೆಗೆ ಸರ್ವಸಮ್ಮತಿ ಆಧಾರದ ಮೇಲೆ ಎರಡು

ಪುಟ್ಟ ನೇಪಾಳದ ಆಂತರಿಕ ಚುನಾವಣೆ ಇದಾಗಿದ್ದರೂ ಪ್ರಪಂಚದ ಘಟಾನುಘಟಿ ದೇಶಗಳೂ ಸಹ ಚುರುಕುಗೊಂಡವು, ಚುನಾವಣಾ ಪ್ರಕ್ರಿಯಯಲ್ಲಿ ತೊಡಗಿಸಿ ಕೊಂಡವು. ಅಮೇರಿಕಾ ಮತ್ತು ಭಾರತ ವಿಶೇಷ ಆಸ್ಥೆವಹಿಸಿದವು. ಭಾರತವನ್ನು ಒಳಗೊಂಡಂತೆ ಎಲ್ಲಾ ಬಲಾಢ್ಯ ಶಕ್ತಿಗಳ ಗುರಿ ಮಾವೋವಾದಿಗಳನ್ನು ಸೋಲಿಸು ವುದಾಗಿತ್ತು. ಪ್ರಪಂಚದ ಬಹುಪಾಲು ಸಾಮ್ರಾಜ್ಯಶಾಹಿ ದೇಶಗಳ ಪ್ರತಿನಿಧಿ ಗಳನ್ನು ಹೊಂದಿರುವ ಹಲವು ಅಂತ ರ್‍ರಾಷ್ಟ್ರೀಯ ವೀಕ್ಷಣಾ ಸಮಿತಿಗಳು ಆಗ ಮಿಸಿದವು. ಎಲ್ಲಾ ಪ್ರಮುಖ ಮಾಧ್ಯಮ ಗಳ ಪ್ರತಿನಿಧಿಗಳು ಜಮಾಯಿಸಿದರು. ಭಾರತ ನೇರವಾಗಿ ನೇಪಾಳಿ ಕಾಂಗ್ರೆಸ್ ಪಕ್ಷದ ಬೆಂಬಲಕ್ಕೆ ನಿಂತಿತ್ತು. ರಾಜತಂತ್ರದ ಎಲ್ಲೆಯನ್ನು ಮೀರಿ ಭಾರತದ ರಕ್ಷಣಾ ಕಾರ್ಯದರ್ಶಿ ನಮ್ಮ ಬೆಂಬಲ ಕಾಂಗ್ರೆಸ್‌ಗೆ ಎಂದು ಘೋಷಿಸಿದರು.

ರೀತಿಯ ಚುನಾವಣೆಯನ್ನು ನಡೆಸಲು ನಿರ್ಧರಿಸಲಾಯಿತು. ಒಂದು ಒಟ್ಟಾರೆ ಸಂವಿಧಾನ ಸಭೆಯ ಶೇ. ೪೦ ರಷ್ಟು ಪ್ರತಿನಿಧಿಗಳನ್ನು ನಮ್ಮಂತೆ ನೇರವಾಗಿ ಅಭ್ಯರ್ಥಿಗಳನ್ನು ಅಯ್ಕೆ ಮಾಡುವುದು. ಮತ್ತೊಂದು ಶೇ.೬೦ ರಷ್ಟು ಪ್ರತಿನಿಧಿಗಳನ್ನು ಅನುಪಾತಾಧರಿತ ಪ್ರಾತಿನಿಧ್ಯದ [proportional representation] ಆಧಾರದ ಮೇಲೆ ಚುನಾಯಿಸುವುದು. ಇದರ ಪ್ರಕಾರ ಜನರು ಪ್ರತಿನಿಧಿಗಳ ಬದಲು ಪಕ್ಷಕ್ಕೆ ಮತ ಚಲಾಯಿಸುತ್ತಾರೆ. ಯಾವ ಪಕ್ಷ ಶೇಕಡಾ ಎಷ್ಟು ಮತಗಳನ್ನು ಗಳಿಸುತ್ತದೋ ಅಷ್ಟು ಶೇಕಡಾ ಪ್ರತಿನಿಧಿಗಳನ್ನು [ದಲಿತರು, ಮಹಿಳೆಯರು ಹಾಗೂ ವಿವಿಧ ರಾಷ್ಟ್ರೀಯ ಸಮುದಾಯಗಳನ್ನು ಅವರ ಅನುಪಾತಕ್ಕೆ ತಕ್ಕಂತೆ] ಆಯ್ಕೆ ಮಾಡಿ ಕಳಿಸಬೇಕು. **ಪ್ರಜಾತಂತ್ರದ ಪರಿಕಲ್ಪನೆಯಲ್ಲೇ ಇದೊಂದು ಹೊಸ ನೆಗೆತವಾಗಿತ್ತು. ಶೇ. ೧೦೦ ರ ಪ್ರಾತಿನಿಧ್ಯ ಮತ್ತು ನೇರವಾಗಿ ಆಯಾ ಜನಸಮುದಾಯದಿಂದ ಆಯ್ಕೆಮಾಡುವ ಮಟ್ಟಕ್ಕೆ ಇದು ಹೋಗಿಲ್ಲವಾದರೂ ಶೇ. ೬೦ ರಷ್ಟು ಪ್ರಮಾಣದಲ್ಲಿ ದಮನಿತ ಸಮುದಾಯಗಳಿಗೆ ಪ್ರಾತಿನಿಧ್ಯ ಖಾತ್ರಿಮಾಡಲು ನಡೆದ ಈ ಪ್ರಯತ್ನ ಶ್ಲಾಘನೀಯ. ನೇಪಾಳಿ ಮಾವೋವಾದಿಗಳ ಈ ಕೊಡುಗೆಯನ್ನು ನಾವು ವಿಶೇಷವಾಗಿ ಗಮನಿಸುವ ಅಗತ್ಯವಿದೆ.**

ಪುಟ್ಟ ನೇಪಾಳದ ಆಂತರಿಕ ಚುನಾವಣೆ ಇದಾಗಿದ್ದರೂ ಪ್ರಪಂಚದ ಘಟಾನುಘಟಿ ದೇಶಗಳೂ ಸಹ ಚುರುಕುಗೊಂಡವು. ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡವು. ಅಮೇರಿಕಾ ಮತ್ತು ಭಾರತ ವಿಶೇಷ ಆಸ್ಥೆವಹಿಸಿದವು. ಭಾರತವನ್ನು ಒಳಗೊಂಡಂತೆ ಎಲ್ಲಾ ಬಲಾಢ್ಯ ಶಕ್ತಿಗಳ ಗುರಿ ಮಾವೋವಾದಿಗಳನ್ನು ಸೋಲಿಸುವುದಾಗಿತ್ತು. ಪ್ರಪಂಚದ ಬಹುಪಾಲು ಸಾಮ್ರಾಜ್ಯಶಾಹಿ ದೇಶಗಳ ಪ್ರತಿನಿಧಿಗಳನ್ನು ಹೊಂದಿರುವ ಹಲವು ಅಂತರ್ರಾಷ್ಟ್ರೀಯ ವಿಚಕ್ಷಣಾ ಸಮಿತಿಗಳು [observers committees] ಆಗಮಿಸಿದವು. ಎಲ್ಲಾ ಪ್ರಮುಖ ಮಾಧ್ಯಮಗಳ ಪ್ರತಿನಿಧಿಗಳು ಜಮಾಯಿಸಿದರು. ಭಾರತ ನೇರವಾಗಿ ನೇಪಾಳಿ ಕಾಂಗ್ರೆಸ್ ಪಕ್ಷದ ಬೆಂಬಲಕ್ಕೆ ನಿಂತಿತ್ತು. ರಾಜತಂತ್ರದ ಎಲ್ಲೆಯನ್ನು ಮೀರಿ ಭಾರತದ ರಕ್ಷಣಾ ಕಾರ್ಯದರ್ಶಿ ನಮ್ಮ ಬೆಂಬಲ ಕಾಂಗ್ರೆಸ್‌ಗೆ ಎಂದು ಘೋಷಿಸಿದರು. ಮಾವೋವಾದಿಗಳು ಚುನಾವಣೆಯಲ್ಲಿ ಸೋತು ಬಂಡಾಯಕ್ಕೆ ಪ್ರಯತ್ನಿಸಬಹುದೆಂದು ಅದನ್ನು ತಡೆಯಲು ಭಾರತ ೧೧ ಲಾರಿಗಳಲ್ಲಿ ಸಶಸ್ತ್ರಗಳನ್ನು ಸರಬರಾಜು ಮಾಡಲು ಹೋಗಿ ಮಾವೋವಾದಿಗಳ ವೈಸಿಎಲ್ ಸಂಘಟನೆಯ ಕೈಗೆ ಸಿಕ್ಕಿಬಿದ್ದವು. ಭಾರತದಿಂದ ಹಣದ, ಗುಂಡುಗಳ ಸರಬರಾಜು ನಡೆಯಿತು. ನೇಪಾಳದ, ಭಾರತದ ಮತ್ತು ಪ್ರಪಂಚದ ಎಲ್ಲಾ ಮಾಧ್ಯಮ ಕೇಂದ್ರಗಳು ನಿಸ್ಸಂಶಯವಾಗಿ ನೇಪಾಳಿ ಕಾಂಗ್ರೆಸ್‌ಗೆ ಮೊದಲನೆ ಸ್ಥಾನ, ಯು ಎಂ ಎಲ್ ಗೆ ಎರಡನೇ ಸ್ಥಾನ ಮತ್ತು ಮಾವೋವಾದಿಗಳಿಗೆ ಮೂರನೇ ಸ್ಥಾನ ಎಂದು ಚುನಾವಣಾ ಪೂರ್ವ ಸಮೀಕ್ಷೆಗಳನ್ನು ಸೃಷ್ಟಿಸಿ ಬಿತ್ತರಿಸಿದವು. ಮಾವೋವಾದಿಗಳು ಚುನಾವಣೆ ಸಂದರ್ಭದಲ್ಲಿ ಹಿಂಸೆ ಸೃಷ್ಟಿಸುವ ಸಾಧ್ಯತೆಗಳಿವೆ ಎಂದು ಭಯಬಿತ್ತಲು ಪ್ರಯತ್ನಿಸಿದರು. ಆದರೆ ಇವರೆಲ್ಲರ ಪ್ರಯತ್ನಗಳು, ವಾದಗಳು, ಪ್ರಚಾರಗಳು ತಲೆಕೆಳಗಾದವು. ಸಣ್ಣ ಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ ಮುಕ್ತ ರೀತಿಯಲ್ಲಿ ಚುನಾವಣೆಗಳು ನಡೆದವು ಎಂದು ಅಗ್ರ ರಾಷ್ಟ್ರಗಳ ವಿಚಕ್ಷಣಾ ಸಮಿತಿಗಳೇ ಘೋಷಿಸಬೇಕಾಗಿ ಬಂದಿತು. ನೇರ ಪ್ರತಿನಿಧಿಗಳ ಚುನಾವಣೆಯಲ್ಲಿ ಶೇ.೫೦ ರಷ್ಟು ಸ್ಥಾನಗಳನ್ನು ಮಾವೋವಾದಿಗಳು ಪಡೆದುಕೊಂಡರು. ಅದರ ಮುಂಚೂಣಿ ನಾಯಕರು ದೊಡ್ಡ ಅಂತರಗಳೊಂದಿಗೆ ಜಯಗಳಿಸಿದರು. ಕಾಂಗ್ರೆಸ್ ಮತ್ತು ಯು ಎಂ ಎಲ್ ನ ಹೆಚ್ಚಿನಪಾಲು ದೊಡ್ಡ ನಾಯಕರುಗಳು ಹೀನಾಯ ಸೋಲನ್ನು ಅನುಭವಿಸಿದರು. ಅನುಪಾತಾಧರಿತ ಪ್ರಾತಿನಿಧ್ಯಕ್ಕಾಗಿನ ಎಣಿಕೆಯಲ್ಲಿ ಮೂರನೇ ಒಂದರಷ್ಟು ಮತಗಳನ್ನು ಪಡೆದ ಮಾವೋವಾದಿಗಳು ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರು. ನಾವಿಲ್ಲಿ ಗಮನಿಸಬೇಕಿರುವ ಅಂಶವೆಂದರೆ ಮಾವೋವಾದಿಗಳಿಗೆ ಯಾವ ಶ್ರೀಮಂತರ ಬೆಂಬಲವೂ ಇರಲಿಲ್ಲ. ಅವರನ್ನು ಗೆಲ್ಲಿಸಿದ್ದು ಜನಸಾಮಾನ್ಯರ ವಿಶ್ವಾಸ ಮಾತ್ರ, ಮಾಧ್ಯಮಗಳ ಪ್ರಚಾರ, ಹಣ ಯಾವುದಕ್ಕೂ ಮರುಳಾಗದೆ ಜನ ಮಾವೋವಾದಿ ಪಕ್ಷವನ್ನು ಗೆಲ್ಲಿಸಿದ್ದರು, ಹಣವಂತರ ಪ್ರತಿನಿಧಿಗಳನ್ನು ಎತ್ತಿ ಒಗೆದಿದ್ದರು. ಒಂದು ಕ್ಷಣ ನಾವು ಪಕ್ಷಗಳನ್ನು ಮರೆತು ಅದರ ಹಿಂದಿನ ಮತದಾರರನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ ಇದು ಸಾಮ್ರಾಜ್ಯಶಾಹಿಗಳ ಮೇಲೆ, ಭಾರತದ ವಿಸ್ತಿರಣವಾದಿ ಶಕ್ತಿಗಳ ಮೇಲೆ, ಆ ದೇಶದ ಶೋಷಕರ ಮೇಲೆ ಜನಸಾಮಾನ್ಯರು ಗಳಿಸಿದ ಜಯವಾಗಿತ್ತು.

ಚುನಾವಣಾ ಫಲಿತಾಂಶ ನಿಚ್ಚಳವಾಗಿದ್ದರೂ ಪ್ರಧಾನಮಂತ್ರಿ ಸ್ಥಾನಕ್ಕೆ ನೇಪಾಳಿ ಕಾಂಗ್ರೆಸ್ ಪಕ್ಷದ ಕೊಯಿರಾಲ ರಾಜಿನಾಮೆ ಕೊಡಲಿಲ್ಲ. ಪ್ರಧಾನಮಂತ್ರಿ ಮತ್ತು ಅಧ್ಯಕ್ಷ ಎಂಬ ಎರಡು ಅಧಿಕಾರಯುತ ಹುದ್ದೆಗಳನ್ನು ಸೃಷ್ಟಿಸಿ ಅದರಲ್ಲಿ ಅಧ್ಯಕ್ಷ ಸ್ಥಾನವನ್ನು ತಮಗೇ ಬಿಟ್ಟುಕೊಡಬೇಕೆಂದು ನೇಪಾಳಿ ಕಾಂಗ್ರೆಸ್ ಹಟಹಿಡಿಯಿತು. ಅಲ್ಲದೆ ಪ್ರಧಾನ ಮಂತ್ರಿಯನ್ನು ಬದಲಾಯಿಸಬೇಕಾದರೆ ಸಂಸತ್ತಿನ ಮೂರನೆ ಎರಡರಷ್ಟು ಬಹುಮತ ಬೇಕು ಎಂದಿದ್ದ ಕಾಯ್ದೆಯನ್ನು ಬದಲಾಯಿಸಿ ಸರಳ ಬಹುಮತದಲ್ಲಿ ಪ್ರಧಾನಿಯನ್ನು ಬದಲಾಯಿಸಬಹುದು ಎಂಬ ಸಂವಿಧಾನವನ್ನು ಮಾವೋವಾದಿಗಳು ಒಪ್ಪಿದರೆ ಮಾತ್ರ ಅಧಿಕಾರ ಬಿಟ್ಟುಕೊಡುವುದಾಗಿ ವಾದಿಸತೊಡಗಿತು. ಮಾವೋವಾದಿ ಪ್ರಧಾನಮಂತ್ರಿಯನ್ನು ಯಾವ ಕ್ಷಣದಲ್ಲಿ ಬೇಕಾದರೂ ಕಿತ್ತೊಗೆಯುವ ಅಧಿಕಾರ ಆಳುವವರ್ಗಗಳ ಕೈಯಲ್ಲೆ ಇರಬೇಕು ಎಂಬುದು ಇದರ ಹಿಂದಿನ ದುರುದ್ದೇಶ. ಇದಕ್ಕೆ ಯು ಎಂ ಎಲ್ ಪಕ್ಷದ ಹಿಮ್ಮೇಳ. ಭಾರತ ಮತ್ತು ಅಮೇರಿಕಾ ದೇಶಗಳ ಪರೋಕ್ಷ ಸಕ್ರಿಯ ಬೆಂಬಲ. ಈ ಬೆಳವಣಿಗೆಗಳು ಎಲ್ಲಿಗೆ ತಲುಪುತ್ತವೆ? ಹೇಗೆ ಅಂತ್ಯಗೊಳ್ಳುತ್ತವೆ? ಎಂಬ ಪ್ರಶ್ನೆಗಳನ್ನು ಭವಿಷ್ಯದ ವಿಶ್ಲೇಷಣೆಗೆ ಬಿಟ್ಟುಬಿಡೋಣ. ಏನೇ ಇದ್ದರೂ ಜನಸಾಮಾನ್ಯರು ನಿರಂಕುಶ ರಾಜಪ್ರಭುತ್ವವನ್ನು ಕೆಳಗಿಳಿಸಿ ಅರಮನೆ ಖಾಲಿಮಾಡಿಸಿರುವುದು, ಶೋಷಕರ ಪರವಾಗಿರುವ ಪಕ್ಷಗಳನ್ನು ಚುನಾವಣೆಯಲ್ಲಿ ಸೋಲಿಸಿರುವುದು, ದಲಿತ, ಮಹಿಳಾ ಹಾಗೂ ವಿವಿಧ ರಾಷ್ಟ್ರೀಯತೆಗಳ ಪ್ರತಿನಿಧಿಗಳನ್ನು ಹೊಂದಿರುವ ಸಂವಿಧಾನ ಸಭೆ ಜನಪರವಾದ ಸಂವಿಧಾನವನ್ನು ಬರೆಯಲು, ಸೇನೆಯನ್ನು ಪುನರ್‌ರಚಿಸಲು ಹೊರಟಿರುವುದು ಸ್ಪಷ್ಟವಾಗಿದೆ. ನೇಪಾಳದ ರಾಜಕಾರಣ ಈ ರೀತಿಯಲ್ಲಿ ಪುರೋಗಾಮಿ ಹಾದಿಯನ್ನು ಹಿಡಿಯುವುದರಲ್ಲಿ ಮಾವೋವಾದಿಗಳ ಪಾತ್ರವೆ ಅತ್ಯಂತ ಪ್ರಮುಖವಾದುದು ಎಂಬುದು ನಿಸ್ಸಂದೇಹ. ನಾವು ಮಾವೋವಾದವನ್ನು ಒಪ್ಪಬಹುದು, ಒಪ್ಪದೇ ಇರಬಹುದು. ಆದರೆ ನೇಪಾಳದ ಮಾವೋವಾದಿಗಳು ನೇತೃತ್ವದಲ್ಲಿ ನಡೆದ ಆ ದೇಶದ ದಮನಿತ ಜನರ ಹೋರಾಟದಿಂದ ಕಲಿಯಲು ಯಾವ ಹಿಂದೇಟನ್ನೂ ಹಾಕಬಾರದು. ಮಾವೋವಾದಿ ಪಕ್ಷದ ನೇತೃತ್ವದಲ್ಲಿ ೧೮ ವರ್ಷಗಳ ಕಾಲ ನಡೆದ ಜನಸಾಮಾನ್ಯರ ಹೋರಾಟ ಇಂತಹ ಸಾಧನೆ ಮಾಡಲು ಈ ಕೆಳಗಿನ ಐದು ಅಂಶಗಳು ಮುಖ್ಯ ಕಾರಣಗಳಾಗಿದ್ದವು ಎಂದು ಹೇಳಬಹುದು.

೧. ಮಾವೋವಾದಿಗಳು ಹೋರಾಟ ನಡೆಸಿದ್ದು ಇದ್ದ ಪರಿಸ್ಥಿತಿಯಲ್ಲಿ ಸುಧಾರಣೆ ತರುವಂತಹ ಕೆಲವು ಜನಪರ ಬೇಡಿಕೆಗಳಿಗಾಗಿ ಅಲ್ಲ. ಬದಲಿಗೆ ಎಲ್ಲಾ ಶೋಷಣೆಗೆ ಕಾರಣವಾಗಿರುವ ಅಧಿಕಾರ ರಚನೆಯನ್ನೆ ಬದಲಾಯಿಸುವುದು ಅವರ ಗುರಿಯಾಗಿತ್ತು. ನೇಪಾಳವನ್ನು ನಿಜವಾದ ಪ್ರಜಾಪ್ರಭುತ್ವ ದೇಶವನ್ನಾಗಿ ಪರಿವರ್ತಿಸುವುದು ಇದರ ಸಾರವಾಗಿತ್ತು. ರಾಜಪ್ರಭುತ್ವವನ್ನು ಕೊನೆಗೊಳಿಸುವುದು ಅದರ ಒಂದು ಮಗ್ಗುಲಾದರೆ, ಹುಸಿ ಪ್ರಜಾಪ್ರಭುತ್ವದ ಬದಲು ನಿಜವಾದ ಪ್ರಜಾಪ್ರಭುತ್ವವನ್ನು ಅನುಷ್ಠಾನಕ್ಕೆ ತರುವುದು ಅದರ ಇನ್ನೊಂದು ಮಗ್ಗುಲಾಗಿತ್ತು. ಅವರು ತರಬಯಸಿದ್ದು

(೪೫ನೇ ಪುಟಕ್ಕೆ)

ಮಾವೋವಾದಿಗಳು ಹೋರಾಟ ನಡೆಸಿದ್ದು ಇದ್ದ ಪರಿಸ್ಥಿತಿಯಲ್ಲಿ ಸುಧಾರಣೆ ತರುವಂತಹ ಕೆಲವು ಜನಪರ ಬೇಡಿಕೆಗಳಿಗಾಗಿ ಅಲ್ಲ. ಬದಲಿಗೆ ಎಲ್ಲಾ ಶೋಷಣೆಗೆ ಕಾರಣವಾಗಿರುವ ಅಧಿಕಾರ ರಚನೆಯನ್ನೆ ಬದಲಾಯಿಸುವುದು ಅವರ ಗುರಿಯಾಗಿತ್ತು. ನೇಪಾಳವನ್ನು ನಿಜವಾದ ಪ್ರಜಾಪ್ರಭುತ್ವ ದೇಶವನ್ನಾಗಿ ಪರಿವರ್ತಿಸುವುದು ಇದರ ಸಾರವಾಗಿತ್ತು. ರಾಜಪ್ರಭುತ್ವವನ್ನು ಕೊನೆಗೊಳಿಸುವುದು ಅದರ ಒಂದು ಮಗ್ಗುಲಾದರೆ, ಹುಸಿ ಪ್ರಜಾಪ್ರಭುತ್ವದ ಬದಲು ನಿಜವಾದ ಪ್ರಜಾಪ್ರಭುತ್ವವನ್ನು ಅನುಷ್ಠಾನಕ್ಕೆ ತರುವುದು ಅದರ ಇನ್ನೊಂದು ಮಗ್ಗುಲಾಗಿತ್ತು. ಅವರು ತರಬಯಸಿದ್ದು ಭಾರತ ಅಥವಾ ಅಮೇರಿಕಾದಲ್ಲಿರುವಂಥ ಪ್ರಜಾಪ್ರಭುತ್ವ ವ್ಯವಸ್ಥೆಯನ್ನಲ್ಲ. ಅವರ ಪ್ರಕಾರ ಇಲ್ಲಿರುವುದು ಪ್ರಜಾಪ್ರಭುತ್ವದ ಮುಖವಾಡ ಮಾತ್ರ. ಪ್ರಜಾಪ್ರಭುತ್ವವೆಂದರೆ ಬಹುಸಂಖ್ಯಾತರ ಆಳ್ವಿಕೆ.

ಪರಂಪರೆಯ ಬಂಧನದಲ್ಲಿ—ವ್ಯಸನದಲ್ಲಿ ಮಹಿಳೆಯರ ಬದುಕು ಮೂರಾಬಟ್ಟೆ



ಕರ್ನಾಟಕದ ವಿಧಾನಸಭೆಯ ಚುನಾವಣೆ ಮುಗಿದಿದೆ. ಪ್ರಜಾಪ್ರಭುತ್ವ ಸರ್ಕಾರವೂ ರಚನೆಯಾಗಿದೆ. ಅಂದಮೇಲೆ ಕರ್ನಾಟಕಸ್ಥರಿಗೆ ಹೆಚ್ಚು ಭ್ರಮೆಗಳಿರಲು ಸಾಧ್ಯವಿಲ್ಲ. ಇಲ್ಲಿ ನಾವು ಗಮನಿಸಬೇಕಾಗಿರುವ ಸಂಗತಿಯೆಂದರೆ ವಿಧಾನಸಭೆಯ ೨೨೪ ಸ್ಥಾನಗಳಲ್ಲಿ ಮಹಿಳೆಯರು ಕೇವಲ ಮೂರು ಸ್ಥಾನಗಳಲ್ಲಿ ಮಾತ್ರ ಆಯ್ಕೆಯಾಗಿದ್ದಾರೆ (ಶೇ. ೧.೩೩) ರಾಜ್ಯದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪಾಲು ಶೇ. ೪೯.೧೦ ರಷ್ಟಿದೆ. ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ಅವರ ಪಾಲು ಶೇ. ೩೫.೭೬ ರಷ್ಟಿದೆ. (ಇದು ಅವರ ಸಂಪಾದನಾ ದುಡಿಮೆಯನ್ನು ಮಾತ್ರ ಪರಿಗಣಿಸಿದಾಗ ಕಂಡು ಬರುವ ಚಿತ್ರ, ಅವರ ಸಂಪಾದನಾ ದುಡಿಮೆಯ ಜೊತೆಗೆ ಅವರ ಸಂಗೋಪನಾ ದುಡಿಮೆಯನ್ನು (ಮನೆವಾರ್ತೆ, ಮಕ್ಕಳ ಮತ್ತು ವಯೋವೃದ್ಧರ ಪಾಲನೆ-ಲಾಲನೆ, ಸೇವೆ, ಶುಶ್ರೂಷೆ) ಪರಿಗಣಿಸಿದರೆ ಅವರ ದುಡಿಮೆ ಸಹಭಾಗಿತ್ವದ ಪ್ರಮಾಣ ಶೇ. ೫೦ಕ್ಕಿಂತ ಅಧಿಕವಾಗುತ್ತದೆ) ಆದರೆ ಶಾಸನ ಸಭೆಯಲ್ಲಿ ಮಾತ್ರ ಅವರ ಪ್ರಮಾಣ ಕೇವಲ ಶೇ. ೧.೩೩ ನಮ್ಮ ರಾಜಕೀಯ ಪಕ್ಷಗಳ ಸಾಮಾಜಿಕ ದಿವಾಳಿತನಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕಾಗಿಲ್ಲವೆಂದು ಕಾಣುತ್ತದೆ.

ಚುನಾವಣೆ ಪೂರ್ವದಲ್ಲಿ ಮಹಿಳೆಯರ ರಾಜಕೀಯ ಪ್ರಾತಿನಿಧ್ಯದ ಬಗ್ಗೆ ಅವುಗಳು ನೀಡಿದ್ದ ಆಶ್ವಾಸನೆಗಳಿಗೇನು ಕಡಿಮೆಯಿರಲಿಲ್ಲ. ಆದರೆ ಚುನಾವಣೆ ನಂತರ ಅವು ಅವರಿಗೆ ಜ್ಞಾಪಕಕ್ಕೆ ಬರುವುದು ಕಡಿಮೆ. ಆದರೆ ಪಟ್ಟಭದ್ರರಿಗೆ ಮಣೆಹಾಕುವುದನ್ನು ಮಾತ್ರ ಅವು ಸುತರಾಂ ಮರೆಯುವುದಿಲ್ಲ. ಈ ಚುನಾವಣೆಯಲ್ಲಿ ಅತ್ಯಂತ ನಿರ್ಣಾಯಕ ಪಾತ್ರವಹಿಸಿದ್ದರೆನ್ನಲಾದ ಮೂವರೂ 'ಗಣಿ' ಧಣಿಗಳಿಗೆ ಮಂತ್ರಿ ಸ್ಥಾನ ನೀಡಲಾಗಿದೆ. ಆದರೆ ೨೫೯.೫೨ ಲಕ್ಷ ಮಹಿಳೆಯರಿಗೆ ವಿಧಾನ ಸಭೆಯಲ್ಲಿ ಪ್ರಾತಿನಿಧ್ಯ ಕೇವಲ ಶೇ. ೧.೩೩ ಮತ್ತು ಮಂತ್ರಿಮಂಡಲ ದಲ್ಲಿ ಅವರಿಗೆ ಕೇವಲ ಒಂದು ಸ್ಥಾನವನ್ನು ನೀಡಲಾಗಿದೆ. ಈಗ ಸರ್ಕಾರ ರಚಿಸಿರುವ ಪಕ್ಷಕ್ಕೆ ಇದೇನು ದೊಡ್ಡ ಮಿತಿಯೆಂದೆನಿಸು ವುದಿಲ್ಲ. ಏಕೆಂದರೆ ಇಂದಿನ ಆಡಳಿತ ಪಕ್ಷವು ಭಾರತೀಯ ಸಂಸ್ಕೃತಿ ಯನ್ನು ಅದರ ಉತ್ಪನ್ನವಾಗಿ ರಾಜಕಾರಣವನ್ನು ಹೇಗೆ ಪರಿಭಾವಿಸಿ ಕೊಂಡಿದೆಯೊ ಅದಕ್ಕೆ ತಕ್ಕಂತೆ ಮಂತ್ರಿಮಂಡಲದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲಾಗಿದೆ.

ನಮಗೆಲ್ಲರಿಗೂ ತಿಳಿದಿರುವಂತೆ ಕಳೆದ ಏಳೆಂಟು ವರ್ಷಗಳಿಂದ ದೆಹಲಿಯ ಶ್ರೀಮತಿ ಸುಷ್ಮಾ ಸ್ವರಾಜ್ ಪ್ರತಿ ವರ್ಷ ಶ್ರಾವಣ ಮಾಸ ದಲ್ಲಿ ಬಳ್ಳಾರಿಗೆ ಭೇಟಿಕೊಡುತ್ತಿದ್ದಾರೆ ಅವರು ಭೇಟಿಕೊಡುವುದು ಮಹಿಳೆಯರ ಬಗೆಗಿನ ಯಾವುದೇ ಕಾಳಜಿಯಿಂದಲ್ಲ. ಅದರಲ್ಲೂ ಅವರು ಯಾವತ್ತೂ ದುಡಿಯುವ ಮಹಿಳೆಯರ ಬಗ್ಗೆ ಮಾತನಾಡಿ ದವರಲ್ಲ. ಅವರ ಕೇರಿಗಳಿಗೆ ಪ್ರವೇಶಿಸಿದವರಲ್ಲ. ಅವರಿಗೆ ದುಡಿಯುವ ಮಹಿಳೆಯರು ಹರಿಸುವ ಬೆವರಿನ, ಕಣ್ಣೀರಿನ ಮತ್ತು ರಕ್ತದ ಘಾಟು ಕುಡಿದ ಅನುಭವವಿಲ್ಲ. ಅವರು ಬಳ್ಳಾರಿಗೆ ಪ್ರತಿ ವರ್ಷ ಬರುವುದು 'ವರಮಹಾಲಕ್ಷ್ಮಿ' ಪೂಜೆಗಾಗಿ ವಿನಾ ಬಡ ದುಡಿಯುವ ಮಹಿಳೆಯರ ಅಳಲನ್ನು ಆಲಿಸುವುದಕ್ಕಲ್ಲ. ಅಂದಮೇಲೆ ಅವರು ಪ್ರತಿನಿಧಿಸುವುದು ಸಮಾಜದ ಯಾವ ವರ್ಗದ ಮಹಿಳೆಯರ ಹಿತಾಸಕ್ತಿಗಳೆಂಬುದು ಇದರಿಂದ ತಿಳಿ ಯುತ್ತದೆ. ಇಂತಹ ಮಹಿಳಾ ಪ್ರಾತಿನಿಧ್ಯ ಹೊಂದಿರುವ ಪಕ್ಷವು ಮಹಿಳೆಯರಿಗೆ ಯಾವ ಬಗೆಯ ನ್ಯಾಯ ಒದಗಿಸಬಲ್ಲದೆಂಬುದನ್ನು ಮತ್ತು ಯಾವ ಬಗೆಯ ಲಿಂಗ ಸಂಬಂಧಿ ಅಭಿವೃದ್ಧಿಯನ್ನು ನೀಡಬಹುದೆಂಬುದನ್ನು ಊಹಿಸಿಕೊಳ್ಳಬಹುದಾಗಿದೆ.

ಮಹಿಳೆಯರ ಅಭಿವೃದ್ಧಿ ಕುರಿತಂತೆ ಅನೇಕ ಕಾರ್ಯಕ್ರಮಗಳು ಇಂದು ಆಚರಣೆಯಲ್ಲಿವೆ. ಅವುಗಳಿಗೇನು ಬರವಿಲ್ಲ. ಆದರೆ ಅವು ಮಹಿಳೆಯರನ್ನು ಹೇಗೆ ಪರಿಭಾವಿಸಿಕೊಂಡಿವೆ, ಅವು ಸಮಾಜದ ಯಾವ ವರ್ಗದ ಮಹಿಳೆಯರನ್ನು ಗುರಿಯಾಗಿಟ್ಟುಕೊಂಡಿವೆ ಮತ್ತು ಮಹಿಳೆಯರ ಯಾವ ಬಗೆಯ ಹಿತಾಸಕ್ತಿಗಳನ್ನು ಅವು ಈಡೇರಿಸುತ್ತವೆ ಎಂಬುದು ಮುಖ್ಯವಾಗುತ್ತದೆ. ಪ್ರಸಿದ್ಧ ಸ್ತ್ರೀವಾದಿಯೊಬ್ಬಳು ಸರ್ಕಾರದ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಎರಡು ಗುಂಪುಗಳಾಗಿ ವರ್ಗೀಕರಿಸುತ್ತಾರೆ. ಮೊದಲನೆ ಗುಂಪಿನವುಗಳನ್ನು ಆಕೆ ಮಹಿಳೆಯರ ದೈನಂದಿನ ಅಗತ್ಯಗಳನ್ನು ಪೂರೈಸುವ ಕಾರ್ಯಕ್ರಮಗಳೆಂದು ಕರೆದರೆ ಎರಡನೆಯ ಗುಂಪಿನವುಗಳನ್ನು ಮಹಿಳೆಯರ ಸಂಘರ್ಷಣಾತ್ಮಕ ಅಗತ್ಯಗಳನ್ನು ಪೂರೈಸುವ ಕಾರ್ಯಕ್ರಮಗಳೆಂದು ಕರೆದಿದ್ದಾಳೆ. ಕರ್ನಾಟಕದಲ್ಲಿ ಇಂದು ಅನುಷ್ಠಾನದಲ್ಲಿರುವ ಅನೇಕ ಕಾರ್ಯಕ್ರಮಗಳು ಅಂದರೆ ಭಾಗ್ಯಲಕ್ಷ್ಮಿ, ಬಾಲಕಿಯರಿಗೆ ಬೈಸಿಕಲ್ಲು, ಸ್ತ್ರೀಶಕ್ತಿ, ಯಶಸ್ವಿನಿ, ಮಡಿಲು, ಜನನಿಸುರಕ್ಷಾ ಮುಂತಾದವು ಮಹಿಳೆಯರ ದೈನಂದಿನ ಅಗತ್ಯಗಳನ್ನು ಮಾತ್ರ ಪೂರೈಸಬಲ್ಲವು. ಇಂತಹ ಅಗತ್ಯಗಳನ್ನು ಈಡೇರಿಸುವುದು ಮುಖ್ಯ. ಆದರೆ ಈ ಬಗೆಯ ಅಗತ್ಯಗಳನ್ನು ಒದಗಿಸಲು ಸಮಾಜದಲ್ಲಿನ ಅಧಿಕಾರ ಸಂಬಂಧಗಳಲ್ಲಿ ಯಾವ ಬಗೆಯ ಬದಲಾವಣೆಯೂ ಬೇಕಾಗಿಲ್ಲ. ಕುಟುಂಬ ಮಟ್ಟದಲ್ಲೂ ಯಾರ ಅಧಿಕಾರವು ಮುಕ್ಕಾಗಬೇಕಾಗಿಲ್ಲ.

ಸರ್ಕಾರವು ಇಂತಹ ಅಗತ್ಯಗಳನ್ನು ಈಡೇರಿಸಿ ಕೊಡಲು ಹಿಂದೆ ಮುಂದೆ ನೋಡುವುದಿಲ್ಲ. ಏಕೆಂದರೆ ಇಲ್ಲಿ ಅದು ಕಳೆದುಕೊಳ್ಳುವುದೇನಿಲ್ಲ. ನಿಜವಾಗಿ ಮಹಿಳೆಯರಿಗೆ ಬೇಕಾಗಿರುವುದು ಆಸ್ತಿಯ ಮೇಲಿನ ಹಕ್ಕು, ಕೌಟುಂಬಿಕ ದುಡಿಮೆಯನ್ನು ಕುಟುಂಬದ ಪುರುಷ ಸದಸ್ಯರು ಹಂಚಿ ಕೊಳ್ಳುವುದು, ಲಿಂಗ ಸಂಬಂಧಿ ಶ್ರಮ ವಿಭಜನೆಯನ್ನು ತಿರಸ್ಕರಿಸುವುದು, ಮಹಿಳೆಯರು ತಾವೇನಾಗಬೇಕೆಂದಿದ್ದಾರೊ ಅದರಂತಾಗಲು ಅಗತ್ಯವಾದ ಅವಕಾಶಗಳನ್ನು ಮತ್ತು ಅವುಗಳನ್ನು ದಕ್ಕಿಸಿಕೊಳ್ಳಲು ಬೇಕಾದ ಸಾಮರ್ಥ್ಯವನ್ನು

ಚುನಾವಣೆ ಪೂರ್ವದಲ್ಲಿ ಮಹಿಳೆಯರ ರಾಜಕೀಯ ಪ್ರಾತಿನಿಧ್ಯದ ಬಗ್ಗೆ ಅವುಗಳು ನೀಡಿದ್ದ ಆಶ್ವಾಸನೆಗಳಿಗೇನು ಕಡಿಮೆಯಿರಲಿಲ್ಲ. ಆದರೆ ಚುನಾವಣೆ ನಂತರ ಅವು ಅವರಿಗೆ ಜ್ಞಾಪಕಕ್ಕೆ ಬರುವುದು ಕಡಿಮೆ. ಆದರೆ ಪಟ್ಟಭದ್ರರಿಗೆ ಮಣೆಹಾಕುವುದನ್ನು ಮಾತ್ರ ಅವು ಸುತರಾಂ ಮರೆಯುವುದಿಲ್ಲ. ಈ ಚುನಾವಣೆಯಲ್ಲಿ ಅತ್ಯಂತ ನಿರ್ಣಾಯಕ ಪಾತ್ರವಹಿಸಿದ್ದರೆನ್ನಲಾದ ಮೂವರೂ 'ಗಣಿ' ಧಣಿಗಳಿಗೆ ಮಂತ್ರಿ ಸ್ಥಾನ ನೀಡಲಾಗಿದೆ. ಆದರೆ ೨೫೯.೫೨ ಲಕ್ಷ ಮಹಿಳೆಯರಿಗೆ ವಿಧಾನ ಸಭೆಯಲ್ಲಿ ಪ್ರಾತಿನಿಧ್ಯ ಕೇವಲ ಶೇ. ೧.೩೩ ಮತ್ತು ಮಂತ್ರಿಮಂಡಲದಲ್ಲಿ ಅವರಿಗೆ ಕೇವಲ ಒಂದು ಸ್ಥಾನವನ್ನು ನೀಡಲಾಗಿದೆ. ಈಗ ಸರ್ಕಾರ ರಚಿಸಿರುವ ಪಕ್ಷಕ್ಕೆ ಇದೇನು ದೊಡ್ಡ ಮಿತಿಯೆಂದೆನಿಸುವುದಿಲ್ಲ. ಇಂದಿನ ಆಡಳಿತ ಪಕ್ಷವು ಭಾರತೀಯ ಸಂಸ್ಕೃತಿಯನ್ನು ಅದರ ಉತ್ಪನ್ನವಾಗಿ ರಾಜಕಾರಣವನ್ನು ಹೇಗೆ ಪರಿಭಾವಿಸಿಕೊಂಡಿದೆಯೊ ಅದಕ್ಕೆ ತಕ್ಕಂತೆ ಮಂತ್ರಿ ಮಂಡಲದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲಾಗಿದೆ.

ಒದಗಿಸು ವುದು, ಮಹಿಳೆಯನ್ನು ಕೇವಲ ತಾಯಿಯಾಗಿ ಮಾತ್ರ ಪರಿಭಾವಿಸಿ ಕೊಳ್ಳದೆ ಅವಳನ್ನು ವ್ಯಕ್ತಿಯಾಗಿ ನೋಡುವುದು, ತನ್ನ ವ್ಯಕ್ತಿತ್ವತನ್ನು ತಾನು ಬಯಸಿದಂತೆ ಕಟ್ಟಿಕೊಳ್ಳಲು ಅಗತ್ಯವಾದ ಸ್ವಾತಂತ್ರ್ಯವನ್ನು ಒದಗಿಸುವುದು, ಮಹಿಳೆಯ ದೈಹಿಕ ಸಮಗ್ರತೆ ಮುಂತಾದವು. ಇಂತಹ ಹಿತಾಸಕ್ತಿಗಳನ್ನು ಗುರುತಿಸುವ-ಪೂರೈಸುವ ಮತ್ತು ಒದಗಿಸುವ ಬಗ್ಗೆ ಸರ್ಕಾರಗಳು ಯಾವತ್ತೂ ಯೋಚಿಸುವುದಿಲ್ಲ. ಈ ದೈನಂದಿನ ಅಗತ್ಯಗಳನ್ನು ಪೂರೈಸುವ ಕಾರ್ಯಕ್ರಮಗಳು ಕೇವಲ ಮಹಿಳೆಯರ ಬದುಕನ್ನು 'ಸಹ್ಯ'ವನ್ನಾಗಿ ಮಾಡ ಬಲ್ಲವೆ ವಿನಾ ಅವು ಅವಳ ಬದುಕನ್ನು 'ಸಮೃದ್ಧ'ಗೊಳಿ ಸುವುದು ಸಾಧ್ಯವಿಲ್ಲ. ಇಂತಹ ಕಾರ್ಯಕ್ರಮಗಳಲ್ಲಿ 'ಪರಿ ವರ್ತನೆ'ಗೆ ಅವಕಾಶವಿರುವುದಿಲ್ಲ.

ಮಹಿಳೆಯ ಬದುಕು ಸಹನೀಯವಾಗುವುದರಿಂದ ಏನೂ ಪ್ರಯೋಜನವಿಲ್ಲ. ಮಹಿಳೆಯರ ಬದುಕು ಘನ ತೆಯ ಮತ್ತು ಗೌರವದ ಸಂಗತಿಯಾಗಬೇಕು. ಮಹಿಳೆ ಯರು ವ್ಯಕ್ತಿಗಳಾಗಿ ತಮ್ಮ ಬದುಕನ್ನು ತಾವು ಪರಿಭಾವಿ ಸಿಕೊಂಡಂತೆ ರೂಪಿಸಿಕೊಳ್ಳಲು-ಕಟ್ಟಿಕೊಳ್ಳಲು ಅಗತ್ಯವಾದ ಸ್ವಾತಂತ್ರ್ಯ ಮತ್ತು ಸಾಮರ್ಥ್ಯವನ್ನು ಒದಗಿಸುವುದು ಇಲ್ಲಿ ಬಹಳ ಮುಖ್ಯವಾಗುತ್ತದೆ. ಕರ್ನಾಟಕದಲ್ಲಿ ಇಂದು ಅಧಿಕಾರಕ್ಕೆ ಬಂದಿರುವ ಸರ್ಕಾರದಿಂದ ಮಹಿಳೆಯರ ಬದುಕು ಸಮೃದ್ಧಗೊಳ್ಳುವಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬಯಸುವುದು ಸಾಧ್ಯವೇ ಇಲ್ಲ. ಏಕೆಂದರೆ ಅದು ನಂಬಿಕೊಂಡಿರುವ 'ಭಾರತೀಯ ನಾರಿ' ಪರಿಭಾವನೆಯಲ್ಲಿ ಸಂಘರ್ಷಣಾತ್ಮಕ ಸಂಗತಿಗಳಿಗೆ ಅವಕಾಶವಿಲ್ಲ. ಈ ಪಕ್ಷವು ನಮ್ಮ ಪ್ರಾಚೀನ ಪರಂಪರೆಯ ಬಗ್ಗೆ ತೀವ್ರ ಅಭಿಮಾನವನ್ನಿಟ್ಟುಕೊಂಡಿದೆ. ಅದನ್ನು ಸಾರಸಗಟಾಗಿ ಉಳಿಸಿಕೊಳ್ಳುವುದರ ಬಗ್ಗೆ ಮತ್ತು ಅದನ್ನು ಊರ್ಜಿತಗೊಳಿಸುವುದರ ಬಗ್ಗೆ ಅದು ಕಟಿಬದ್ಧವಾಗಿದೆ. 'ಸಂಸ್ಕೃತಿಯ ಹೆಮ್ಮೆ' ಅವರ ಧಾತು ಸದೃಶ ಮಂತ್ರವಾಗಿದೆ. ಅವರಿಗೆ 'ವರಮಹಾಲಕ್ಷ್ಮಿ' ಪೂಜೆ ಮುಖ್ಯವಾಗುತ್ತದೆ ವಿನಾ ದುಡಿಯುವ ಮಹಿಳೆಯರ ದಿನಗೂಲಿಯಾಗಲಿ ಅಥವಾ ಅವರ ಉದ್ಯೋಗದ ಅವಕಾಶಗಳ ವರ್ಧನೆಯ ಪ್ರಶ್ನೆಯಾಗಲಿ ಮುಖ್ಯವಾ ಗುವುದಿಲ್ಲ. ಸಾಮಾಜಿಕ ಬದಲಾವಣೆಯಲ್ಲಿ ಅಥವಾ ಸಾಮಾಜಿಕ ಪರಿವರ್ತನೆಯಲ್ಲಿ ಅದಕ್ಕೆ ಆಸಕ್ತಿಯಿಲ್ಲ. ಪರಂ ಪರೆಯ ಸಂರಕ್ಷಣೆಯಲ್ಲಿ ಅದು ತನ್ನ ಪ್ರಸ್ತುತತೆಯನ್ನು ಕಂಡುಕೊಳ್ಳಲು ಬಯಸುತ್ತದೆ.

ಪರಂಪರೆಯ ವೈಭವೀಕರಣ

ಇತ್ತೀಚೆಗೆ ಮಾಧ್ಯಮಗಳಲ್ಲಿ, ಅದರಲ್ಲೂ ಎಲೆ ಕ್ಟ್ರಾನಿಕ್ ಮಾಧ್ಯಮದಲ್ಲಿ ಪರಂಪರೆಯ ಗುಣಗಾನ ಮಾಡು ವುದು ಅತಿಯಾಗಿಬಿಟ್ಟಿದೆ. ಕೆಲವು ಪತ್ರಿಕೆಗಳಂತೂ ಅದನ್ನು ತಮ್ಮ ಅಘೋಷಿತ ಧೋರಣೆಯನ್ನಾಗಿ ಮಾಡಿ ಕೊಂಡುಬಿಟ್ಟಿವೆ. ರಾಜ್ಯದ ಮುಖ್ಯಮಂತ್ರಿಯೊಬ್ಬರು ಅಧಿ ಕಾರ ಸ್ವೀಕರಿಸಿದ ಮೇಲೆ ತಮ್ಮ ಕಛೇರಿಯಲ್ಲಿ ವೈದಿ ಕಾಗಮ ಪ್ರಣೀತ ಯಜ್ಞ, ಯಾಗ, ಹೋಮ, ಹವನ ಮಾಡುತ್ತಾರೆಂದರೆ ಅವರು ಸಮಾಜಕ್ಕೆ ಯಾವ ಬಗೆಯ ಸಂದೇಶ ನೀಡುತ್ತಾರೆಂಬುದನ್ನು ನಾವು ಯೋಚಿ ಸಬೇಕಾಗಿದೆ. ಮುಖ್ಯಮಂತ್ರಿಗಳನ್ನು ಅನುಸರಿಸಿ ಇತರೆ ಮಂತ್ರಿಗಳೂ ವಿಧಾನಸಭೆಯನ್ನು ಪುರೋಹಿತ್ಯ ನಡೆಸುವ ಯಜ್ಞಶಾಲೆ-ಪಾಕಶಾಲೆಯನ್ನಾಗಿ ಪರಿವರ್ತಿಸುವಲ್ಲಿ ನಿರತ ರಾಗಿದ್ದಾರೆ. ಅದನ್ನ ತಮ್ಮ ಸ್ವಂತ ಆಸ್ತಿಯೆಂಬಂತೆ, ತಮ್ಮ ಕೌಟುಂಬಿಕ ಸಾಮ್ರಾಜ್ಯದಂತೆ ಮಾಡಿಕೊಳ್ಳುತ್ತಿದ್ದಾರೆ. ಇನ್ನೊಬ್ಬ ಸಚಿವರು ಇನ್ನೂ ಮುಂದೆ ಹೋಗಿ ರಾಜ್ಯದ ಮೂವತ್ತೂ ಅಥವಾ ಮೂವತ್ತೈದೂ ಸಾವಿರ ಗುಡಿ ಗುಂಡಾರಗಳಲ್ಲಿ ಮುಖ್ಯಮಂತ್ರಿಯವರ ಹೆಸರಿನಲ್ಲಿ ಪೂಜೆ ನಡೆಸಬೇಕೆಂಬ ಆದೇಶ ನೀಡಿಬಿಟ್ಟಿದ್ದರು. ಅವೆಲ್ಲವೂ ತಮ್ಮ ಸ್ವಂತ ಆಸ್ತಿಯೆನ್ನುವಂತೆ ಅವರೆಲ್ಲ ವರ್ತಿಸುತ್ತಿದ್ದಾರೆ. ಮುಂದೆ ಈ ಸರ್ಕಾರದ ಆಳ್ವಿಕೆಯಲ್ಲಿ ಏನೆಲ್ಲ ನಡೆಯಬಹುದೆಂಬುದಕ್ಕೆ ಇದೊಂದು ಸಣ್ಣ ನಮೂನೆಯಾಗಿದೆ. ಈ ಬಗ್ಗೆ ಜನರ ಮನೋಭಾವ ಏನಿರಬಹುದೆಂಬುದನ್ನು ಪರಿ ೀಕ್ಷಿಸುವ ಸಂಘ ಪರಿವಾರದ ಒಂದು ಹುನ್ನಾರವು ಇದಾಗಿ ರಬಹುದು. ಇಲ್ಲಿ ನಾವು ಒಂದು ಸೂಕ್ಷ್ಮವನ್ನು ಅಗತ್ಯವಾ ಗಿ ಪರಿಗಣಿಸಬೇಕು. ಅದೇನೆಂದರೆ ಮುಜರಾಯಿ ಗುಡಿಗಳ ಲ್ಲಿ ಮಾತ್ರ ಪೂಜೆಗೆ ಸಚಿವರು ಆಜ್ಞೆ ಹೊರಡಿಸಿದಂತೆ ಕಾಣುತ್ತದೆ. ಆದರೆ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿರುವ ಲಕ್ಷಾಂತರ ಅವೈದಿಕ ಗುಡಿಗಳಲ್ಲಿ ಪೂಜೆ ನಡೆಸಬೇಕೆಂ ಬುದು ಇವರಿಗೆ ಹೊಳೆಯುವುದು ಸಾಧ್ಯವಿಲ್ಲ.

ಹಾಗೆ ನೋಡಿದರೆ ಮುಖ್ಯಮಂತ್ರಿಗಳು ತಮ್ಮ ವಿಧಾನಸಭೆ ಕಛೇರಿಯಲ್ಲಿ ನಡೆಸಿದಂತೆ ಉಳಿದ ಕೆಲವು ಸಚಿವರು ತಮ್ಮ ತಮ್ಮ ಕಛೇರಿಗಳಲ್ಲಿ ನಡೆಸುತ್ತಿರುವ-ನಡೆಸ ಲಿರುವ ಯಜ್ಞ-ಯಾಗ, ಹೋಮ-ಹವನಗಳೆಲ್ಲವನ್ನು ನಡೆಸಿದವರು ಒಂದು ಕೋಮಿಗೆ ಸೇರಿದ್ದರೆಂಬುದು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯಾಗಿದೆ. ಈ ರಾಜ್ಯದ ಬಹುಸಂಖ್ಯಾತ ಜನರ ನಂಬಿಕೆ-ಆಚರಣೆಗಳನ್ನು ಕಡೆಗಣಿಸಿ-ಅವುಗಳನ್ನು ತುಚ್ಚೀಕರಿಸಿ ಸರ್ಕಾರ ನಡೆಸು ವವರು ವೈದಿಕರನ್ನು, ವೈದಿಕ ದೇವತೆಗಳನ್ನು ಹಾಗೂ ಪುರೋಹಿತರನ್ನು ಓಲೈಸುವ ಕಾರ್ಯದಲ್ಲಿ ನಿರತರಾ ಗಿರುವಂತೆ ಕಾಣುತ್ತದೆ. ಏಕೆಂದರೆ ಅವರಿಗೆ ಗುಡಿಗಳೆ ಂದರೆ, ನಂಬಿಕೆಗಳೆಂದರೆ ಕೇವಲ ಪುರೋಹಿತರಿಂದ ಕೂಡಿರುವ ಮತ್ತು ಪ್ರಧಾನಧಾರೆಯ ದೇವರುಗಳನ್ನೊಳ ಗೊಂಡ ಆಗಮ ಪ್ರಣೀತ ಯಜ್ಞ, ಯಾಗ, ಹವನ, ಹೋಮ ಗಳನ್ನು ನಡೆಸುವ ಗುಡಿಗಳು ಮತ್ತು ಪುರೋಹಿತರು ಮಾತ್ರವೆಂಬುದನ್ನು ಮತ್ತೆ ಹೇಳುವ ಅಗತ್ಯವಿಲ್ಲ. ಈಗ ಅಧಿಕಾರ ಹಿಡಿದಿರುವ ಸರ್ಕಾರಕ್ಕೆ ಗುಡಿ ಗುಡಾರಗಳಿಗೆ ಸಂಬಂಧಿಸಿದಂತೆ ಕೂಡ ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಮತ್ತು ಸಂಘ ಪರಿವಾರದ ಶಕ್ತಿಗಳು ಅತ್ಯಂತ ಜತನದಿಂದ ಕಾಯ್ದುಕೊಂಡು ಬರುತ್ತಿರುವ ಹಾಗೂ ಊರ್ಜಿತಗೊಳಿಸಲು ಪ್ರಯತ್ನಿಸುತ್ತಿರುವ 'ಸಾಮಾಜಿಕ ಅಸ ಮಾನತೆ'ಯನ್ನು ಜಾಗೃತವಾಗಿಟ್ಟುಕೊಳ್ಳಬೇಕೆಂಬ ಪ್ರಜ್ಞೆ ಯಿದೆ ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ ಯಾಗಿದೆ.

ನಮ್ಮ ದೂರದರ್ಶನದಲ್ಲಿಯಂತೂ ವೈದಿಕರ ಪ್ರವಚ ನಗಳಿಗೆ ಕೊರತೆ ಕಂಡುಬರುವುದಿಲ್ಲ. ಬೆಳಿಗ್ಗೆಯಿಂದ ರಾತಿ ್ರಯವರೆಗೆ ಎಡೆಬಿಡದೆ ಪರಂಪರೆಯ ಗುಣಗಾನ ವನ್ನೊಳಗೊಂಡ ಪ್ರವಚನ, ಉಪನ್ಯಾಸ, ಹರಿಕಥೆ, ಚರ್ಚೆ, ಸಂವಾದ, ಕಾವ್ಯವಾಚನ ಮುಂತಾದವು ನಡದೇ ನಡೆಯು ತ್ತಿರುತ್ತವೆ. ದೂರದರ್ಶನದವರು ಪುರೋಹಿತರುಗಳಿಗೆ ಅದನ್ನು ಗುತ್ತಿಗೆ ಕೊಟ್ಟುಬಿಟ್ಟಂತೆ ಕಾಣುತ್ತದೆ. ನಮ್ಮ ಪರಂ ಪರೆಗೆ ಸಂಬಂಧಿಸಿದ ಅದರಲ್ಲೂ ಪ್ರಧಾನಧಾರೆಯ ಪರಂಪರೆಯ ಅನೇಕ ಸಂಗತಿಗಳ ಬಗ್ಗೆ ಇವರೆಲ್ಲ ಮಾತನಾಡುತ್ತಿರುತ್ತಾರೆ. ಅದರಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆ ಬಗ್ಗೆ ಮಾತು ಬಂದಾಗಲೆಲ್ಲ ಇವರೆಲ್ಲ ಸಾಮಾನ್ಯವಾಗಿ ನಮ್ಮ ಪರಂಪರೆಯ 'ಗುರುಕುಲ' ಪದ್ಧತಿಯ ಬಗ್ಗೆ ಅ ತ್ಯಂತ ಹೆಮ್ಮೆಯಿಂದ ಮಾತನಾಡುತ್ತಾರೆ. ಅಲ್ಲಿನ ಗುರು ಶಿಷ್ಯ ಸಂಬಂಧ, ಸೇವಾ ಮನೋಭಾವ, ಶ್ರಮಕ್ಕೆ ಸಂಬಂ ಧಿಸಿದಂತೆ ತರಬೇತಿ, ಪ್ರಕೃತಿಯೊಂದಿಗಿನ ಸೌಹಾರ್ದ ಯುತ ಸಾಹಚರ್ಯ ಮುಂತಾದವುಗಳ ಗುಣಗಾನ ಎಲ್ಲ ವೇದಿಕೆಗಳಿಂದಲೂ ಕೇಳಿಬರುತ್ತದೆ. ವಿಶ್ವಕ್ಕೆ ಭಾರತವು ನೀಡಿದ ಮಹಾನ್ ಕೊಡುಗೆಯಿದೆಂದು ಹೇಳಲಾಗುತ್ತದೆ. ಇವೆಲ್ಲ ಒಂದು ಮಟ್ಟದವರೆಗೆ ಸರಿಯಿರಬಹುದು.

ಆದರೆ ಇಲ್ಲಿ ನಾವು ಕೇಳಿಕೊಳ್ಳಬೇಕಾದ ಆದರೆ ಪರಂಪರೆಯನ್ನು ಗುತ್ತಿಗೆ ಹಿಡಿದುಕೊಂಡ ವೈದಿಕೋತ್ತಮರು 'ಕೇಳಿಕೊಳ್ಳದ' ಪ್ರಶ್ನೆ ಬೇರೆಯಿದೆ. ಇವರೆಲ್ಲ ಹಾಡಿ ಹೊಗಳುವ ಗುರುಕುಲದಲ್ಲಿ ಸಮಾಜದ ಯಾವ ವರ್ಗಕ್ಕೆ ಮತ್ತು ಯಾವ ಲಿಂಗಕ್ಕೆ ಪ್ರವೇಶವಿತ್ತೆಂಬುದರ ಬಗ್ಗೆ ಯಾಕೆ ಇವರೆಲ್ಲ ಪ್ರಶ್ನೆ ಕೇಳಿಕೊಳ್ಳುವುದಿಲ್ಲವೆಂಬುದೆ ಅಚ್ಚರಿ ಯ ಸಂಗತಿಯಾಗಿದೆ. ಅದು ಸಮಾಜದಲ್ಲಿ 'ಎಲ್ಲರನ್ನು ಒಳಗೊಳ್ಳುವ'



ಶ್ರೀ ಟಿ. ಆರ್. ಚಂದ್ರಶೇಖರ್, ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು. ಈಗ ಸಮಾಜ ವಿಜ್ಞಾನ ನಿಕಾಯದ ಡೀನ್ ಕೂಡ ಆಗಿದ್ದಾರೆ. ಅರ್ಥಶಾಸ್ತ್ರ ವಿದ್ವಾಂಸರಾದ ಇವರು ಸಾಹಿತ್ಯ ಮತ್ತು ಅಭಿವೃದ್ಧಿ ಮೀಮಾಂಸೆಯ ಬಗ್ಗೆ ವಿಶೇಷ ಆಸಕ್ತಿ ಉಳ್ಳವರು. ಸಮಕಾಲೀನ ಸಾಮಾಜಿಕ ಸಮಸ್ಯೆಗಳ ಬಗ್ಗೆ ಅಪಾರ ಕಾಳಜಿ ಇರುವ ಚಂದ್ರಶೇಖರ್ ಅವರು ತಮ್ಮ ಬರಹಗಳಲ್ಲೂ ಈ ವಿಷಯಗಳನ್ನೇ ಮುಖ್ಯವಾಗಿ ಪರಿಗಣಿಸುತ್ತಾರೆ. 'ಅಸ್ಸಾಂ ಸಮಸ್ಯೆ', 'ಕರ್ನಾಟಕದ ಅಭಿವೃದ್ಧಿಯ ಆಕೃತಿ', 'ಅಮರ್ತ್ಯಸೇನರ ಅಭಿವೃದ್ಧಿ ಅಧ್ಯಯನಗಳು', 'ಅಭಿವೃದ್ಧಿ ಮೀಮಾಂಸೆ', 'ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ", 'ವಿಕೇಂದ್ರಿಕರಣ ಮತ್ತು ಗ್ರಾಮೀಣಾಭಿವೃದ್ಧಿ'- ಲೇಖಕರ ಕೆಲವು ಮುಖ್ಯ ಕೃತಿಗಳು.

ಇದಲ್ಲದೇ 'ಅನುಭಾವಿಗಳ ಕ್ರಾಂತಿ' ಎಂಬ ಅವರ ಅನುವಾದಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ವಚನಗಳ ಬಗ್ಗೆ ವಿಶೇಷ ಆಸಕ್ತಿ ಉಳ್ಳ ಚಂದ್ರಶೇಖರ್ ಅವರ 'ವಚನ ಸಂಸ್ಕೃತಿಗಳ ಸಾಮಾಜಿಕ ಆಯಾಮಗಳು' ಕೃತಿಗೆ ಕಾವ್ಯಾನಂದ ಪ್ರಶಸ್ತಿ ದೊರಕಿದೆ. ಕನ್ನಡ ವಿಶ್ವ ವಿದ್ಯಾನಿಲಯದ 'ಅಭಿವೃದ್ಧಿ ಅಧ್ಯಯನ' ಎಂಬ ಪತ್ರಿಕೆಯ ಸಂಪಾದಕರಾಗಿರುವ ಚಂದ್ರಶೇಖರ್ ಬಜೆಟ್ ವಿಶ್ಲೇಷಣೆ ಮಾಡುವುದರಲ್ಲಿ ನಿಷ್ಣಾತರು.

'ಧರೆ ಹತ್ತಿ ಉರಿದರೆ' ಎಂಬ ಅಂಕಣವನ್ನು ಸಂವಾದಕ್ಕಾಗಿ ಚಂದ್ರಶೇಖರ್ ಬರೆಯುತ್ತಿದ್ದಾರೆ. ಅಭಿವೃದ್ಧಿ, ರಾಜಕಾರಣ, ಮಹಿಳೆಯರ ಬದುಕು, ಪ್ರಾದೇಶಿಕ ಅಸಮಾನತೆ, ಪರಿಶಿಷ್ಟರ ಪಡಿಪಾಟಲು, ಸಂಘ ಪರಿವಾರದ ಪಿತೂರಿ ಮುಂತಾದ ವಿಷಯಗಳ ಬಗ್ಗೆ ಪ್ರತೀ ತಿಂಗಳೂ ನಿರಂತರವಾಗಿ ನಿಮ್ಮೊಂದಿಗೆ ಮುಖಾಮುಖಿಯಾಗಲಿದ್ದಾರೆ.

ವೆಂಬುದ್ಯಾಗಿಲ್ಲವೆಂಬುದು ಯಾಕೆ [illegible] ಗುಣಗಾನದ ಗುತ್ತಿಗೆ ಹಿಡಿದಿರುವವರಿಗೆ ಹೊಳೆಯುವುದಿಲ್ಲವೆಂಬುದು ಬಿಡಿಸಲಾರದ ಒಗಟಾಗಿಬಿಟ್ಟಿದೆ. ದೊಡ್ಡ ದೊಡ್ಡ ವಿದ್ವಾಂಸರೆಂದೆನಿಸಿಕೊಂಡವರೂ ಕೂಡ ಪರಂಪರೆಯನ್ನು ಪ್ರಶ್ನಾತೀತವನ್ನಾಗಿ ಪರಿಭಾವಿಸಿಕೊಂಡಿರುವುದು ಕಂಡುಬರುತ್ತದೆ. ಗುರುಕುಲದ ಬಗ್ಗೆ ಮಾತನಾಡುವ ಜನರು ಯಾಕೆ ಅಲ್ಲಿ ಮಹಿಳೆಯರಿಗೆ ಪ್ರವೇಶ ಮತ್ತು ಅವಕಾಶವಿರಲಿಲ್ಲವೆಂಬುದನ್ನು ಮರೆಮಾಚುತ್ತಾರೆಂಬುದು ಯೋಚಿಸಬೇಕಾದ ಸಂಗತಿಯಾಗಿದೆ. ಅಲ್ಲಿ ಶೂದ್ರರಿಗೆ ಮತ್ತು ಪರಿಶಿಷ್ಟರಿಗೆ ಶಿಕ್ಷಣದ ಹಕ್ಕೇ ಇರಲಿಲ್ಲವೆಂಬುದರ ಬಗ್ಗೆ ಯಾಕೆ ಅವರು ಮೌನವಹಿಸುತ್ತಾರೆ?

ಅಲ್ಲಿ ಯಾವ ವಿಷಯಗಳನ್ನು ಬೋಧಿಸುತ್ತಿದ್ದರೆಂಬುದು, ಅದು ಯಾವ ವರ್ಗದ ಹಿತಗಳನ್ನು ಪೂರೈಸುತ್ತಿತ್ತು ಎಂಬುದೂ ಕೂಡ ಇವರನ್ನು ಪ್ರಶ್ನೆಯಾಗಿ ಕಾಡುವುದಿಲ್ಲ. ಪ್ರಜಾಸತ್ತಾತ್ಮಕ ಶಿಕ್ಷಣ ವ್ಯವಸ್ಥೆಯಲ್ಲಿ ನಾಡಿನ ಶೂದ್ರರಿಗೆ, ಮಹಿಳೆಯರಿಗೆ ಮತ್ತು ಮುಖ್ಯವಾಗಿ ಪರಿಶಿಷ್ಟರಿಗೆ ಅವಕಾಶ ಕೊಟ್ಟಿರುವುದು ಅವರಿಗೆ ನುಂಗಲಾರದ ತುತ್ತಾಗಿಬಿಟ್ಟಿರುವಂತೆ ಕಾಣುತ್ತದೆ. ಅದಕ್ಕಾಗಿಯೆ ಅದರ ವಿಷಯದ ಚರ್ಚೆ ಬಂದಾಗಲೆಲ್ಲ ಅವರು ತಮ್ಮ ಪರಂಪರೆಯ ಗುಣಗಾನ ಶುರು ಮಾಡಿ ಬಿಡುತ್ತಾರೆ ಮತ್ತು ಆ ತಕ್ಷಣ ಅವರಿಗೆ ತಮ್ಮ ಗುರುಕುಲಗಳು ಜ್ಞಾಪಕಕ್ಕೆ ಬಂದುಬಿಡುತ್ತವೆ. ಅವು ಸಾಮಾಜಿಕವಾಗಿ ತಾರತಮ್ಯದ, ಅಸಮಾನತೆಯ ಮತ್ತು ಸಮಾಜದಲ್ಲಿ ಕೆಲವರನ್ನು ಮಾತ್ರ 'ಒಳಗೊಳ್ಳುವ' ಸಂಸ್ಥೆಗಳೆಂಬುದು ಅವರಿಗೆ ಕಾಣಿಸುವುದಿಲ್ಲ. ಈ ಪರಂಪರೆಯ ಕೊಡುಗೆಯಾದ ಗುರುಕುಲಗಳ ಬಗ್ಗೆ ಮಾತನಾಡುವ ಇವರೆಲ್ಲ ಮಹಿಳೆಯರಿಗೆ, ಶೂದ್ರರಿಗೆ ಮತ್ತು ಪರಿಶಿಷ್ಟರಿಗೆ ಶಿಕ್ಷಣವನ್ನು ನಿಷೇಧಿಸಬೇಕೆಂದು ಬಯಸುತ್ತಾರೇನು?

ಕುಟುಂಬ: ಅಕ್ಕರೆಯ ಆಕರವೂ ಹೌದು ಮತ್ತು ಹಿಂಸೆಯ ಕೇಂದ್ರವೂ ಹೌದು!

ಪರಂಪರೆಯನ್ನು ವೈಭವೀಕರಿಸುವವರು ಮತ್ತು ಅದರ ಬಗ್ಗೆ ಅತ್ಯಂತ ಹೆಮ್ಮೆಯಿಂದ ಬೀಗುವವರು ಮತ್ತೆ ಮತ್ತೆ ಆತಂಕಗೊಂಡವರಂತೆ ಮಾತನಾಡುವ ಸಂಗತಿಯೆಂದರೆ ನಮ್ಮ ಕುಟುಂಬ ವ್ಯವಸ್ಥೆಯು ಮುರಿದು ಬೀಳುತ್ತಿದೆ ಎಂಬುದಾಗಿದೆ. ಇದಕ್ಕೆ ಸಾಮಾನ್ಯವಾಗಿ ಇವರೆಲ್ಲ ನೀಡುವ ಕಾರಣವೆಂದರೆ ಮಹಿಳೆಯರು 'ಮಹಿಳೆ'ಯರಾಗುತ್ತಿದ್ದಾರೆ ಮತ್ತು ಪಶ್ಚಿಮದ ಪ್ರಭಾವದಿಂದಾಗಿ, ಸ್ತ್ರೀವಾದಿಗಳಿಂದಾಗಿ, ಮಹಿಳೆಯರ ಸ್ವಾತಂತ್ರ್ಯದ ಬಗ್ಗೆ ಮಾತನಾಡುವವರಿಂದಾಗಿ ನಮ್ಮ ಹೆಮ್ಮೆಯ ಕುಟುಂಬ ವ್ಯವಸ್ಥೆಯು ನಾಶವಾಗುತ್ತಿದೆಯೆಂದು ಕಿಡಿಕಾರುತ್ತಿರುತ್ತಾರೆ. ಅಂದರೆ ಇವರ ಪ್ರಕಾರ ಕುಟುಂಬವನ್ನು ಸಂರಕ್ಷಿಸುವ ಜವಾಬುದಾರಿ ಮಹಿಳೆಯರದ್ದಾಗಿದೆ. ಹಾಗಾದರೆ ಇದರಲ್ಲಿ ಪುರುಷರ ಜವಾಬುದಾರಿ ಏನೂ ಇಲ್ಲವೆ? ಮಹಿಳೆಯರನ್ನು ಯಾಕೆ ಕುಟುಂಬದೊಂದಿಗೆ ಸಮೀಕರಿಸಲಾಗುತ್ತದೆ?

ಒಂದು ಕಾಲದಲ್ಲಿ ಅಧಿಕಾರಿಗಳು ಮತ್ತು ಊರಲ್ಲಿ ದೊಡ್ಡವರೆನಿಸಿಕೊಂಡವರೆಲ್ಲ ತಮ್ಮ ಹೆಂಡತಿಯರನ್ನು 'ನನ್ನ ಕುಟುಂಬ'ವೆಂದೇ ಪರಿಚಯಿಸುತ್ತಿದ್ದರೆಂಬುದು ಇಲ್ಲಿ ನೆನಪಿಸಿಕೊಳ್ಳಬೇಕಾದ ಸಂಗತಿಯಾಗಿದೆ. ನಮ್ಮ ಪರಂಪರೆಯಲ್ಲಿ ಮಹಿಳೆ ಯರಿಗೆ ಮಹಿಳೆಯರಾಗಿ ಅಸ್ತಿತ್ವವಿರಲಿಲ್ಲ. ಅವಳಿಗೆ 'ತಾಯಿ'ಯಾಗಿ, 'ಗೃಹಿಣಿ'ಯಾಗಿ ಮತ್ತು 'ಹೆಂಡತಿ'ಯಾಗಿ ಮಾತ್ರ ಅಸ್ತಿತ್ವವಿತ್ತು. ಅವಳ ಬದುಕು ಸಾರ್ಥಕವಾಗುತ್ತಿದ್ದುದೆ ಅವಳ 'ಸಂತಾನೋತ್ಪತ್ತಿ' ಜವಾಬುದಾರಿಯ ನಿರ್ವಹಣೆಯಿಂದ ಎಂಬುದು ಬಹಳ ಮುಖ್ಯವಾದ ಸಂಗತಿಯಾಗಿದೆ. ಈ ಸಂತಾನೋತ್ಪತ್ತಿ ಜವಾಬುದಾರಿಯು ಜೈವಿಕವಾಗಿ ಮಹಿಳೆಯರಿಗೆ ಮೀಸಲಾದುದು ಎಂಬ ನಂಬಿಕೆ ಇಂದಿಗೆ ಗಟ್ಟಿಯಾಗಿ ಮುಂದುವರೆದಿರುವುದನ್ನು ನೋಡಬಹುದಾಗಿದೆ. ಆದರೆ ಇದರಲ್ಲಿ ಎರಡು ಸಂಗತಿಗಳಿವೆ. ಮೊದಲನೆಯದು ಜೀವವೊಂದಕ್ಕೆ ಉಸಿರು ನೀಡುವುದು. ಇದು ಜೈವಿಕವಾಗಿ ಮಹಿಳೆಯರಿಗೆ ಮೀಸಲಾದ ಸಂಗತಿಯಾಗಿದೆ. ಆದರೆ ಮಗುವಿನ ಲಾಲನೆ ಪಾಲನೆ, ಶುಶ್ರೂಷೆ, ಅದರ ಊಟ ಉಪಚಾರ ಮುಂತಾದವುಗಳೆಲ್ಲ ಜೈವಿಕವಾದವುಗಳೇನಲ್ಲ. ಅವುಗಳನ್ನು ಪುರುಷರು ನಿರ್ವಹಿಸಬಹುದಾಗಿದೆ. ಸಂಗೋಪನಾ ದುಡಿಮೆಯೆಂಬುದು ಮಹಿಳೆಯರಿಗೆ ಮಾತ್ರ ಸಂಬಂಧಿಸಿದುದಲ್ಲ. ಈ ಸಂಗೋಪನಾ ದುಡಿಮೆಯ ಗುಣಗಳನ್ನು ಮಹಿಳೆಯರಾಗಲಿ ಅಥವಾ ಪುರುಷರಾಗಲಿ ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳಬೇಕಾಗುತ್ತದೆ. ಅದು ಮಹಿಳೆಯ ರಿಗೆ ನೈಸರ್ಗಿಕವಾಗಿ ದತ್ತವಾದ ಸಂಗತಿಯೇನಲ್ಲ.

ಜೆ.ಎಸ್.ಮಿಲ್ ಹೇಳುವಂತೆ ಅದೊಂದು 'ಕೃತಕವಾದ ಆದರೆ ಉತ್ಕೃಷ್ಟವಾದ ಗುಣ'ವಾಗಿದೆ. ಈ ಗುಣವು ಕೇವಲ ಮಹಿಳೆಯರಿಗೆ ಮೀಸಲಾದ ಖಾಸಗಿಯಾದ ಸಂಗತಿಯೇನಲ್ಲ. ಅದು ಸಾಮಾಜಿಕವಾದ ಜವಾಬುದಾರಿಯಾಗಿದೆ. ಹಸುಗೂಸೊಂದಕ್ಕೆ ರಾತ್ರಿಯಲ್ಲ ಮತ್ತೆ ಮತ್ತೆ ಎದ್ದು ಹಾಲೂಡಿಸುವ, ಒದ್ದೆ ಬಟ್ಟೆ ಬದಲಾಯಿಸುವ ತಾಯಿಯ ಕೆಲಸ ಕೇವಲ ವೈಯಕ್ತಿಕವಾದುದಲ್ಲ. ಅದರಿಂದ ಆಕೆಗೇನು ಬರಿಸಂತೋಷ ದೊರೆಯುವುದಿಲ್ಲ. ಅದು ಅವಳಿಗೆ ಕಿರಿಕಿರಿಯುಂಟು ಮಾಡಬಹುದು. ಆದರೆ ಅವಳು ಅದನ್ನು ಸಾಮಾಜಿಕ ಜವಾಬುದಾರಿಯೆಂದು ತಿಳಿದು ನಿರ್ವಹಿಸುತ್ತಾಳೆ. ಈ ಗುಣವನ್ನು ಪುರುಷಶಾಹಿ ಅರ್ಥಮಾಡಿಕೊಳ್ಳಬೇಕು. ಸಂಪಾದನಾ ಆರ್ಥಿಕತೆಯ ಸಮೃದ್ಧಿಯು ಸಂಗೋಪನಾ ದುಡಿಮೆಯನ್ನು ಅವಲಂಬಿಸಿದೆ. ಸಂಗೋಪನಾ ದುಡಿಮೆಯನ್ನು ನಿರ್ಲಕ್ಷಿಸುವುದರಿಂದ ಹಾನಿ ಸಂಪಾದನಾ ಆರ್ಥಿಕತೆ ಮೇಲುಂಟಾಗುತ್ತದೆ.

ಕುಟುಂಬವು ಮಹಿಳೆಯರ ದೃಷ್ಟಿಯಿಂದ ಕೇವಲ ಅಕ್ಕರೆಯ–ಮಮತೆಯ ಕೇಂದ್ರ ಮಾತ್ರವಾಗಿಲ್ಲ. ಅದು ಮಹಿಳೆಯರಿಗೆ ಹಿಂಸೆಯ ಮೂಲವೂ ಆಗಿದೆ. ಮಹಿಳೆಯರ ಮೇಲಿನ ಹಿಂಸೆಯು ಬಹುತೇಕ ಸಂದರ್ಭಗಳಲ್ಲಿ ಕುಟುಂಬ ಸಂಬಂಧಿಗಳಿಂದಲೇ ನಡೆಯುತ್ತದೆ ಎಂಬುದು ಅನೇಕ ಅಧ್ಯಯನಗಳಿಂದ ಮತ್ತು ನಿದರ್ಶನಗಳಿಂದ ದೃಢಪಟ್ಟಿದೆ. ಕುಟುಂಬವೆಂಬುದೇನು ಸದ್ಗುಣಗಳ ಖನಿಯಲ್ಲ. ಅದರೊಳಗಿನ ಮಹಿಳೆಯರಿಗೆ ಸಂಬಂಧಿಸಿದ ಅಸಮಾನತೆಗಳನ್ನು ನಾವು ಗುರುತಿಸಬೇಕಾಗಿದೆ. ಅಮರ್ತ್ಯಸೇನ್ ಕುಟುಂಬವನ್ನು 'ಸಹಕಾರ ಮತ್ತು ಸಂಘರ್ಷ'ಗಳೆರಡನ್ನೂ ಏಕಕಾಲದಲ್ಲಿ ಹೊಂದಿರುವ ಸಂಸ್ಥೆಯಾಗಿರುವುದನ್ನು ತೋರಿಸಿಕೊಟ್ಟಿದ್ದಾರೆ.

ಕುಟುಂಬವು ಮಹಿಳೆಯರ ದೃಷ್ಟಿಯಿಂದ ಕೇವಲ ಅಕ್ಕರೆಯ–ಮಮತೆಯ ಕೇಂದ್ರ ಮಾತ್ರವಾಗಿಲ್ಲ. ಅದು ಮಹಿಳೆಯರಿಗೆ ಹಿಂಸೆಯ ಮೂಲವೂ ಆಗಿದೆ. ಮಹಿಳೆಯರ ಮೇಲಿನ ಹಿಂಸೆಯು ಬಹುತೇಕ ಸಂದರ್ಭಗಳಲ್ಲಿ ಕುಟುಂಬ ಸಂಬಂಧಿಗಳಿಂದಲೇ ನಡೆಯುತ್ತದೆ ಎಂಬುದು ಅನೇಕ ಅಧ್ಯಯನಗಳಿಂದ ಮತ್ತು ನಿದರ್ಶನಗಳಿಂದ ದೃಢಪಟ್ಟಿದೆ. ಕುಟುಂಬವೆಂಬುದೇನು ಸದ್ಗುಣಗಳ ಖನಿಯಲ್ಲ. ಅದರೊಳಗಿನ ಮಹಿಳೆಯರಿಗೆ ಸಂಬಂಧಿಸಿದ ಅಸಮಾನತೆಗಳನ್ನು ನಾವು ಗುರುತಿಸಬೇಕಾಗಿದೆ. ಅಮರ್ತ್ಯಸೇನ್ ಕುಟುಂಬವನ್ನು 'ಸಹಕಾರ ಮತ್ತು ಸಂಘರ್ಷ'ಗಳೆರಡನ್ನೂ ಏಕಕಾಲದಲ್ಲಿ ಹೊಂದಿರುವ ಸಂಸ್ಥೆಯಾಗಿರುವುದನ್ನು ತೋರಿಸಿಕೊಟ್ಟಿದ್ದಾರೆ. ಇವರೆಡರ ನಡುವಿನ ಸಮತೋಲನವು ಮಹಿಳೆಯರ ಮೇಲಿನ ಹಿಂಸೆಯನ್ನು ನಿರ್ಧರಿಸುವ ಬಹು ಮುಖ್ಯ ಸಂಗತಿಯಾಗಿದೆ. ಪರಂಪರೆಯ ವೈಭವೀಕರಣದಿಂದಾಗಿ ಸಂಘರ್ಷದ ಸಂಗತಿಗಳನ್ನು ಮಹಿಳೆಯರು ಅದುಮಿಟ್ಟುಕೊಂಡು ಕೇವಲ ಸಹಕಾರದ ಮುಖವಾಡ ತೊಟ್ಟುಕೊಂಡು ಬದುಕುತ್ತಿರುವುದು ಕಂಡು ಬರುತ್ತದೆ. ಯಾಕೆ ಮಹಿಳೆಯರು ಹೀಗೆ ನಡೆದುಕೊಳ್ಳುತ್ತಾರೆ? ಸಂಘರ್ಷದ ಹಾದಿಯನ್ನೇಕೆ ತುಳಿಯುವುದಿಲ್ಲ? ಇದು ಬಹಳ ಕುತೂಹಲದ ಸಂಗತಿಯಾಗಿದೆ. ಇಲ್ಲಿನ ಸೂಕ್ಷ್ಮವೆಂದರೆ ಮಹಿಳೆಯರು ಒಂದು ವೇಳೆ ಸಂಘರ್ಷದ ಹಾದಿ ತುಳಿದರೆ ಅವರು ಎದುರಿಸಬೇಕಾದ ಅಪಾಯಗಳು ಮತ್ತು ಹಿಂಸೆ ಕುಟುಂಬದೊಳಗಿದ್ದು ಅಲ್ಲಿ ಸಹಕಾರದ ಮುಖವಾಡ ತೊಟ್ಟು ಎದುರಿಸುವ ಹಿಂಸೆಗಿಂತ ಭೀಕರವಾಗಿರುವ ಸಾಧ್ಯತೆಯಿದೆ. ಏಕೆಂದರೆ ನಮ್ಮ ಸರ್ಕಾರಗಳು ಹೀಗೆ ಸಂಘರ್ಷದ ಪರಿಣಾಮವಾಗಿ ಒಬ್ಬಂಟಿಗರಾದ ಮಹಿಳೆಯರ ನೆರವಿಗೆ ಯಾವುದೇ ವ್ಯವಸ್ಥೆ ಅಂದರೆ ಪುನರ್ವಸತಿಯ ಸೌಲಭ್ಯವನ್ನಾಗಲಿ ಅಥವಾ ಮತ್ತೇನಾದರು ಅವಕಾಶವನ್ನಾಗಲಿ ಮಾಡಲಿಲ್ಲ. ಸಂಕಷ್ಟದ ಸಂದರ್ಭದಲ್ಲಿ ಒಂಟಿ ಹೆಣ್ಣು ಯಾರನ್ನು ಅಥವಾ ಏನನ್ನು ಆಶ್ರಯಿಸಬೇಕು?

ನಮ್ಮ ಪರಂಪರೆಯ ಭಾಗವಾದ ಕುಟುಂಬ ವ್ಯವಸ್ಥೆಯಲ್ಲಿ ಗಂಡನ ಮನೆಯಿಂದ ಹೊರಬಿದ್ದ ಮಹಿಳೆಯರಿಗೆ ತವರುಮನೆಯಲ್ಲಿ ಆಶ್ರಯ ರಕ್ಷಣೆ ದೊರೆಯುವುದಿಲ್ಲ. ಹಾಗಾದರೆ ಸಂಘರ್ಷದ ಹಾದಿ ತುಳಿದ ಮಹಿಳೆಯರು ಎಲ್ಲಿಗೆ ಹೋಗಬೇಕು? ಏನನ್ನು ಆಶ್ರಯಿಸಬೇಕು? ಈ ಅಗೋಚರ ಅಪಾಯವನ್ನು ಎದುರಿಸುವುದಕ್ಕಿಂತ ಗೊತ್ತಿರುವ ಹಿಂಸೆಯನ್ನು ಅನುಭವಿಸುವುದು ಲೇಸೆಂದು ಅವರು ಹಿಂಸೆಯನ್ನು ಸಹಿಸಿಕೊಂಡೆ ಕುಟುಂಬದೊಳಗೆ ಬದುಕು ದೂಡುತ್ತಿದ್ದರೆ ಅದರಲ್ಲಿ ಆಶ್ಚರ್ಯಪಡುಬೇಕಾದುದೇನಿಲ್ಲ. ಇದರಿಂದಾಗಿ ಮಹಿಳೆಯರು ಅನುಭವಿಸುವ ಮಾನಸಿಕ ಯಾತನೆ, ಒತ್ತಡ, ಚಿನ್ನತೆಗಳನ್ನು ನಾವು ಊಹಿಸಿಕೊಂಡೆ ತಿಳಿದುಕೊಳ್ಳಬೇಕು.

ಈಗಾಗಲೆ ತಿಳಿಸಿರುವಂತೆ ಸಂಗೋಪನಾ ದುಡಿಮೆ

ಯನ್ನು ಸಂಪೂರ್ಣವಾಗಿ ಮಹಿಳೆಯರು ನಿಭಾಯಿಸುತ್ತಿದ್ದಾರೆ. ಅವರು ಇಂದು ದೊಡ್ಡ ಪ್ರಮಾಣದಲ್ಲಿ ಸಂಪಾದನಾ ದುಡಿಮೆಯ ಕ್ಷೇತ್ರವನ್ನು ಪ್ರವೇಶಿಸುತ್ತಿದ್ದಾರೆ. ಜಾಗತೀಕರಣವು ಉಂಟು ಮಾಡಿರುವ ಬಹು ದೊಡ್ಡ ಪರಿಣಾಮ ಇದಾಗಿದೆ. ಮನೆಯ ಹೊರಗಿನ ದುಡಿಮೆಯು ಇಂದು ಅವರಿಗೆ ಅನಿವಾರ್ಯವಾಗಿಬಿಟ್ಟಿದೆ. ಅಂದರೆ ಅವರು ಎರಡೂ ದುಡಿಮೆಯು ಇಂದು ಅವರಿಗೆ ಅನಿವಾರ್ಯವಾಗಿಬಿಟ್ಟಿದೆ. ಅಂದರೆ ಅವರು ಎರಡೂ ದುಡಿಮೆಯನ್ನು ನಿರ್ವಹಿಸಬೇಕಾದ ಅನಿವಾರ್ಯತೆಯಲ್ಲಿದ್ದಾರೆ. ಮನೆಯ ಹೊರಗೆ ಸಂಪಾದನಾ ದುಡಿಮೆಯನ್ನು ಅವರು ಪ್ರವೇಶಿಸಿದ ಮಾತ್ರಕ್ಕೆ ಅವರಿಗೆ ಸಂಗೋಪನಾ ದುಡಿಮೆಯಿಂದ ವಿನಾಯಿತಿಯೇನು ದೊರೆಯುವುದಿಲ್ಲ. ಈ ಇಬ್ಬಗೆಯ ಹೊಣೆಗಾರಿಕೆಯಿಂದಾಗಿ ಎರಡನ್ನೂ ಸಮರ್ಪಕವಾಗಿ ನಿರ್ವಹಿಸುವುದು ಅವರಿಗೆ ಸಾಧ್ಯವಿಲ್ಲ. ವಾಗಿದೆ. ಇದು ಕೇವಲ ಮಹಿಳೆಯರಿಗೆ ಉಂಟಾದ ನಷ್ಟವಲ್ಲ. ಇದು ಅಭಿವೃದ್ಧಿಯ ಮೇಲೆ ಪರಿಣಾಮ ಬೀರಬಲ್ಲದು.

ಕುಟುಂಬದಲ್ಲಿ ಮಹಿಳೆಯರು ನಿರ್ವಹಿಸುತ್ತಿರುವ ಸಂಗೋಪನಾ ದುಡಿಮೆಯನ್ನು ಪುರುಷರು ಹಂಚಿಕೊಳ್ಳುವ ಅವಶ್ಯಕತೆಯಿದೆ. ಸಂಗೋಪನಾ ದುಡಿಮೆಯಲ್ಲಿ ದೊರೆತ ಬಿಡುವನ್ನು ಅವರು ಸಂಪಾದನಾ ದುಡಿಮೆಯ ಕಡೆ ನೀಡಬಹುದು. ಕುಟುಂಬದಲ್ಲಿ ಹೀಗೆ ಇರ್ವರೂ ಅಂದರೆ ಗಂಡ-ಹೆಂಡತಿ ಜವಾಬುದಾರಿಯನ್ನು ಹಂಚಿಕೊಳ್ಳುವುದರಿಂದ ಕುಟುಂಬದ ವರಮಾನವನ್ನು ಗರಿಷ್ಟಗೊಳಿಸಿಕೊಳ್ಳಬಹುದು. ಪರಂಪರೆಯಿಂದ ಹರಿದು ಬಂದಿರುವ ಕುಟುಂಬಕ್ಕೆ ಸಂಬಂಧಿಸಿದ ಇತಿಮಿತಿಗಳನ್ನು ಸರಿಪಡಿಸಿಕೊಳ್ಳುವುದರಿಂದ ಮಹಿಳೆಯರು ಅನುಭವಿಸುವ ಅನೇಕ ಬಗೆಯ ತಾರತಮ್ಯ ಮತ್ತು ಹಿಂಸೆಯನ್ನು ಕಡಿಮೆ ಮಾಡಬಹುದು. ಕುಟುಂಬವನ್ನು ಕೇವಲ ವೈಭವೀಕರಿಸುವುದರಿಂದ ಪ್ರಯೋಜನವಿಲ್ಲ. ಮಹಿಳೆಯರನ್ನು ಕುಟುಂಬಕ್ಕೆ ಸಂವಾದಿಯಾಗಿ ಪರಿಭಾವಿಸಿಕೊಳ್ಳುವುದರಿಂದ ಅವರಿಗೆ ಅನ್ಯಾಯವಾಗುತ್ತದೆ.

ಸಂಗೋಪನಾ ದುಡಿಮೆಯೆಂಬುದನ್ನು ಮಹಿಳೆಯರಾಗಲಿ ಪುರುಷರಾಗಲಿ ರೂಢಿಸಿಕೊಳ್ಳಬೇಕಾಗುತ್ತದೆ. ಅದು ಜೈವಿಕವಾದ ಮಹಿಳೆಯರಿಗೆ ಹುಟ್ಟಿನಿಂದಲೆ ಪ್ರಾಪ್ತವಾಗುವ ಸಂಗತಿಯಲ್ಲ. ಈ ಬಗೆಯ ದುಡಿಮೆಯ ಭಾರವನ್ನು ಕಡಿಮೆಗೊಳಿಸುವುದರಿಂದ ಮಹಿಳೆಯರ 'ಧಾರಣಾ ಸಾಮರ್ಥ್ಯ'ವು ಉತ್ತಮಗೊಳ್ಳುತ್ತದೆ. ಜನರ ಧಾರಣಾ ಸಾಮರ್ಥ್ಯವನ್ನು ವಿಸ್ತೃತಗೊಳಿಸುವುದು, ಅದನ್ನು ಸಂವರ್ಧಿಸುವುದೇ ಅಭಿವೃದ್ಧಿಯೆಂದಾದರೆ ಸಂಗೋಪನಾ ದುಡಿಮೆಯನ್ನು ಮಹಿಳೆಯರೊಂದಿಗೆ ಹಂಚಿಕೊಳ್ಳುವುದು. ಅತ್ಯಂತ ಅಪೇಕ್ಷಣೀಯವಾದ ಸಂಗತಿಯಾಗಿದೆ. ಇದರಿಂದ ಕುಟುಂಬದೊಳಗೆ ಲಿಂಗಸಂಬಂಧಿ ಅಧಿಕಾರಕ್ಕೆ ಸಂಬಂಧಿಸಿದಂತೆ ಬದಲಾವಣೆ ಉಂಟಾಗುತ್ತದೆ.

ಮಹಿಳೆಯರ ಅಭಿವೃದ್ಧಿಯೆಂಬುದು ಜನರಿಗೆ ದತ್ತಿಯಾಗಿ ಪ್ರಾಪ್ತವಾಗುವ ಫಲವಲ್ಲ. ಅದು ದಕ್ಕಿಸಿಕೊಳ್ಳಬೇಕಾದ ಹಕ್ಕಾಗಿದೆ. ಸರ್ಕಾರವು ಮಹಿಳೆಯರನ್ನು ಹಂಗಿನ ಸ್ಥಿಗತಿಯಾಗಿ ಪರಿಭಾವಿಸಿಕೊಳ್ಳುವುದು ನಿಲ್ಲಿಸಬೇಕು. ಪರಂಪರೆಯನ್ನು ವಿಮರ್ಶಾತ್ಮಕವಾಗಿ ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಈ ದಿಶೆಯಲ್ಲಿ ನಾವು ಯೋಚಿಸಬೇಕಾಗಿದೆ. □

ಪ್ರಸವದ ನೋವಿನಲ್ಲಿ ನೇಪಾಳ; ಪ್ರತಿಗಾಮಿ ಮುಷ್ಟಿಯಲ್ಲಿ ಕರ್ನಾಟಕ

(೪೧ನೇ ಪುಟದಿಂದ)

ಭಾರತ ಅಥವಾ ಅಮೇರಿಕಾದಲ್ಲಿರುವಂಥ ಪ್ರಜಾಪ್ರಭುತ್ವ ವ್ಯವಸ್ಥೆಯನ್ನಲ್ಲ. ಅವರ ಪ್ರಕಾರ ಇಲ್ಲಿರುವುದು ಪ್ರಜಾಪ್ರಭುತ್ವದ ಮುಖವಾಡ ಮಾತ್ರ. ಪ್ರಜಾಪ್ರಭುತ್ವವೆಂದರೆ ಬಹುಸಂಖ್ಯಾತರ ಆಳ್ವಿಕೆ. ಆದರೆ ಬಹುಸಂಖ್ಯಾತರಾದ ಜನಸಾಮಾನ್ಯರು ಇಲ್ಲಿ ಪ್ರಭುಗಳಲ್ಲ. ಅಲ್ಪಸಂಖ್ಯಾತರಾದ ಶೋಷಕ ವರ್ಗಗಳ ಕೈಯಲ್ಲೆ ಅಧಿಕಾರ ಉಳಿದುಕೊಂಡಿದೆ. ಹಾಗಾಗಿ ದಮನಿತ ಜನಸಮುದಾಯಗಳು ಅಧಿಕಾರದಲ್ಲಿರುವಂಥ ನೈಜಪ್ರಜಾತಂತ್ರ ವ್ಯವಸ್ಥೆಯನ್ನು ತರುವುದು ಅವರ ಗುರಿಯಾಗಿತ್ತು. ಅದಕ್ಕೆ ದಾರಿಮಾಡಿಕೊಡುವಂತಹ ಹೊಸ ಸಂವಿಧಾನ, ಹೊಸ ರೀತಿಯ ಚುನಾವಣೆಗಳು, ಹೊಸ ರೀತಿಯ ಅಧಿಕಾರ ಕೇಂದ್ರಗಳು ಇರುವಂತಹ ಸಂಪೂರ್ಣ ಹೊಸ ವ್ಯವಸ್ಥೆಗಾಗಿನ ಕನಸನ್ನು ಜನರಲ್ಲಿ ಬಿತ್ತುತ್ತ ಹೋದರು. ಆ ಕನಸನ್ನು ನನಸಾಗಿಸುವ ನಿಟ್ಟಿನಲ್ಲೆ ತಮ್ಮೆಲ್ಲ ಕೆಲಸಗಳನ್ನು ಕೇಂದ್ರೀಕರಿಸಿದರು, ಅದಕ್ಕಾಗಿ ಜನರನ್ನು ಸಿದ್ಧಗೊಳಿಸುತ್ತಾ ಸಾಗಿದರು.

೨. ಈ ನೈಜ ಪ್ರಜಾತಂತ್ರದ ಗುರಿಸಾಧನೆಗಾಗಿ ಅವರು ಯಾವುದೇ ಒಂದು ರೀತಿಯ ಹೋರಾಟದ ವಿಧಾನಕ್ಕೆ ಅಂಟಿಕೂರಲಿಲ್ಲ. ವಿಸ್ತೃತ ಪ್ರಚಾರವನ್ನು, ಶಾಂತಿಯುತ ಪ್ರದರ್ಶನಗಳನ್ನು, ಚುನಾವಣೆಯಲ್ಲಿ ಭಾಗವಹಿಸಿ ಸಂಸತ್ತಿನಲ್ಲಿ ಸಂಘರ್ಷ ನಡೆಸುವುದನ್ನು, ಸಮರಶೀಲ ಬೀದಿ ಹೋರಾಟಗಳನ್ನು, ಸ್ವಯಂ ರಕ್ಷಣಾ ಪಡೆಗಳನ್ನು ಕಟ್ಟಿ ಭೂಮಾಲೀಕರ ಗೂಂಡಾಗಳೊಂದಿಗೆ ಹೊಡೆದಾಡುವುದನ್ನು, ಸಮಗ್ರ ಸಿದ್ಧತೆಗಳೊಂದಿಗೆ ಪ್ರಜಾಯುದ್ಧ ನಡೆಸುವುದನ್ನು, ಮುಖ್ಯ ಶತ್ರುವಿನ ವಿರುದ್ಧ ಸಣ್ಣ ಶತ್ರುವಿನ ಜೊತೆ ಕೈಗೂಡಿಸಿ ಚಳುವಳಿ ನಿರ್ಮಿಸುವುದನ್ನು ಒಳಗೊಂಡಂತೆ ಚಳುವಳಿ ಬೆಳೆಸಲು ಆಯಾ ಸಂದರ್ಭದಲ್ಲಿ ಅಗತ್ಯವಾಗಿದ್ದ ವಿಭಿನ್ನ ಹೋರಾಟ ವಿಧಾನಗಳನ್ನು ಅವರು ಅಳವಡಿಸಿಕೊಂಡರು. ಶಾಂತಿಯುತ ಚಳುವಳಿ, ಸಮಗ್ರ ಪ್ರಜಾಯುದ್ಧ, ಶಾಂತಿಗಾಗಿನ ಮಾತುಕತೆ, ರಾಜತಾಂತ್ರಿಕ ನಡೆ ಮತ್ತು ಸಂಸದೀಯ ಹೋರಾಟಗಳನ್ನು ಐದು ಮುಖ್ಯ ಮಾದರಿಗಳನ್ನಾಗಿ ಬಳಸಿಕೊಂಡರು. ಯುದ್ಧವಿಲ್ಲದೆ ಸೇನೆ-ಪೊಲೀಸ್ ಬೆಂಬಲವನ್ನು ಹೊಂದಿರುವ ಆಳುವ ಶಕ್ತಿಗಳನ್ನು ಮಣಿಸುವುದು ಅಸಾಧ್ಯ ಎಂಬುದನ್ನು ಧೃಢವಾಗಿ ಪ್ರತಿಪಾದಿಸಿದರು. ಆದರೆ ಕೇವಲ ಅದರಿಂದ ಮಾತ್ರ ಗೆಲುವು ಸಾಧ್ಯವಿಲ್ಲವೆಂದು ಪರಿಸ್ಥಿತಿಗೆ ತಕ್ಕ ಹೋರಾಟಗಳತ್ತ ಗಮನ ನೀಡಿದರು. ಜನರ ಹಕ್ಕುಗಳನ್ನು ಪಡೆಯಲು ಸಂಧಾನಕ್ಕೂ ಬದ್ಧ-ಸಮರಕ್ಕೂ ಸಿದ್ಧ ಎಂಬ ಮಾತನ್ನು ಚಾಚೂತಪ್ಪದೆ ಪಾಲಿಸಿದರು.

೩. ಜನತೆಯ ಹಿತಾಸಕ್ತಿಯನ್ನು ಕಾಪಾಡಲು ಎಂತಹ ತ್ಯಾಗಕ್ಕೂ ಸಿದ್ಧವಿರುವ ಶಿಸ್ತುಬದ್ಧ ಪಕ್ಷವನ್ನು ಕಟ್ಟಲು ಅವರು ಪ್ರಾರಂಭದಿಂದಲೂ ಗಮನ ನೀಡಿದರು. ಆ ಪಕ್ಷದ ನಾಯಕರುಗಳೆ ಮುಂದೆ ನಿಂತು ಅದಕ್ಕೆ ಮಾದರಿಯಾದರು. ಎಲ್ಲಾ ನಾಯಕರುಗಳು ತಮ್ಮೆಲ್ಲಾ ಆಸ್ತಿಪಾಸ್ತಿಗಳನ್ನು ಚಳವಳಿಗೆ ಅರ್ಪಿಸಿ, ಜನರನ್ನಾಧರಿಸಿ ಸರಳವಾಗಿ ಬದುಕಿದರು. ಆಸ್ತಿ ಮತ್ತು ಅಧಿಕಾರದ ಅಮಲು ನಾಯಕರುಗಳಲ್ಲಿ ಬೆಳೆಯದಂತೆ ನೋಡಿಕೊಳ್ಳಲು ಪಕ್ಷದೊಳಗೆ ವಿಶೇಷ ಎಚ್ಚರಿಕೆ ವಹಿಸಲಾಯಿತು. ಬಸವಣ್ಣ ಪ್ರತಿಪಾದಿಸಿದ ಜಂಗಮತೆಯನ್ನು ಇವರು ತಮ್ಮದೇ ರೀತಿಯಲ್ಲಿ ಪಾಲಿಸಿದರು ಎನ್ನಬಹುದು. ಜನಪರ ಬದಲಾವಣೆಗಾಗಿ ನಡೆದ ಈ ಹೋರಾಟದಲ್ಲಿ ಮಾವೋವಾದಿ ಪಕ್ಷದ ನಾಯಕರು ಮತ್ತು ಕಾರ್ಯಕರ್ತರನ್ನೂ ಒಳಗೊಂಡಂತೆ ೧೦ ಸಾವಿರಕ್ಕಿಂತ ಹೆಚ್ಚು ಜನರು ಪ್ರಾಣಾರ್ಪಣೆ ಮಾಡಿರುವುದೇ ಪಕ್ಷವನ್ನು ಹಾಗೂ ಜನರನ್ನು ಯಾವ ರೀತಿಯಲ್ಲಿ ಅವರು ಹೋರಾಟಕ್ಕೆ ಸಿದ್ಧಪಡಿಸಿದರು ಎಂಬುದಕ್ಕೆ ಸಾಕ್ಷಿ.

೪. ಹೋರಾಟದಲ್ಲವರು ಶತ್ರುವನ್ನು ಮರಿಯಲಿಲ್ಲ- ಆದರೆ ವಿವೇಕವನ್ನು ಕಳೆದುಕೊಳ್ಳಲಿಲ್ಲ. ಆ ದೇಶದಲ್ಲಿನ ರಾಜಪ್ರಭುತ್ವ, ದೇಶದ್ರೋಹಿ ಬಂಡವಾಳಶಾಹಿ, ಭಾರತದ ವಿಸ್ತರಣವಾದ, ಅಮೇರಿಕಾ ನೇತೃತ್ವದ ಸಾಮ್ರಾಜ್ಯವಾದ ತಮ್ಮನ್ನು ದೋಚುತ್ತಿರುವ ಶಕ್ತಿಗಳೆಂದು ಸರಿಯಾಗಿ ಗುರುತಿಸಿದರು. ಆದರೆ ಎಲ್ಲರನ್ನೂ ಒಮ್ಮೆಗೆ ಎದುರು ಹಾಕಿಕೊಳ್ಳದೆ ಕಾಲಕಾಲಕ್ಕೆ ಯಾರು ಪ್ರಧಾನವೋ ಅವರನ್ನು ಮಾತ್ರ ಗುರಿಮಾಡಿ, ಅವರ ವಿರುದ್ಧ ಸಾಧ್ಯವಿರುವ ಶಕ್ತಿಗಳನ್ನೆಲ್ಲಾ ಒಗ್ಗೂಡಿಸಿ ಹೋರಾಡುತ್ತಾ ಬಂದರು. ವಿಶೇಷವಾಗಿ ಆಳುವ ವರ್ಗಗಳ ನಡುವೆ ಇದ್ದ ಭಿನ್ನಾಭಿಪ್ರಾಯಗಳನ್ನು ಪ್ರಗತಿಪರ ಶಕ್ತಿಗಳ ಮುನ್ನೆಡೆಗೆ ಮೆಟ್ಟಿಲುಗಳನ್ನಾಗಿ ಬಳಸಿಕೊಂಡರು.

೫. ಕೊನೆಯದಾಗಿ ಮತ್ತು ಮುಖ್ಯವಾಗಿ, ಭಾರತದ ಕಮ್ಯುನಿಸ್ಟರಂತೆ ವರ್ಗ ಹೋರಾಟವೆಂದು ಏಕಮುಖವಾಗಿ ಕುದುರೆಯಂತೆ ಕಣ್ಣಿನ ಪಟ್ಟಿ ಕಟ್ಟಿಕೊಳ್ಳದೆ ಜಾತಿ, ಲಿಂಗ ಮತ್ತು ರಾಷ್ಟ್ರೀಯತೆಗಳ ತಾರತಮ್ಯದ ರೂಪದಲ್ಲೂ ಅಸ್ತಿತ್ವದಲ್ಲಿರುವ ಅಸಮಾನತೆಗಳ ವಿರುದ್ಧ ಹೋರಾಡಲು ಗಮನ ನೀಡಿದರು. ವರ್ಗ ಹೋರಾಟವನ್ನು ಹಾಗೂ ಈ ಹೋರಾಟಗಳನ್ನು ಸೃಜನಶೀಲ ರೀತಿಯಲ್ಲಿ ಬೆಸೆದು ಬೆಳೆಸಿದರು. ಹಾಗಾಗಿಯೇ ಬಡಜನರಷ್ಟೇ ಅಲ್ಲದೆ ದಲಿತರು, ಮಹಿಳೆಯರು, ವಿವಿಧ ದಮನಿತ ರಾಷ್ಟ್ರೀಯತೆಗಳ ಜನರು ಈ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು ಹಾಗೂ ಮುಖ್ಯ ಪಾತ್ರವನ್ನು ನಿರ್ವಹಿಸಿದರು. ಸಾರಾಂಶದಲ್ಲಿ ಒಂದು ರೀತಿಯ ದಮನಕ್ಕೊಳಗಾದವರ ಹೋರಾಟಕ್ಕೆ ಸೀಮಿತಗೊಳ್ಳದೆ ಎಲ್ಲಾ ರೀತಿಯ ದಮನಿತರನ್ನು ಒಟ್ಟು ಮಾಡಿ ಎಲ್ಲರ ಬವಣೆಗೂ ಕಾರಣವಾದ ಶಕ್ತಿಗಳ ವಿರುದ್ಧ ಹೋರಾಡಿದ್ದು ಒಂದು ಮುಖ್ಯ ಅಂಶವಾಗಿತ್ತು.

(ಮುಂದಿನ ಸಂಚಿಕೆಗೆ)

ದಲಿತರೇ ಹಳ್ಳಿಗಳನ್ನು ಬಿಟ್ಟು ಬನ್ನಿ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

೧೯೪೨ರಲ್ಲಿ ಮಹಾತ್ಮ ಗಾಂಧಿ ಕರೆ ನೀಡಿದಾಗ ಭಾರತ ಬಿಟ್ಟು ಹೋದವರಿಗಿಂತ, ಇತಿಹಾಸದ ಪುಟಗಳಲ್ಲಿ ಹಿಂದೆಂದೂ ಕಾಣದಂತಹ ಪ್ರಮಾಣದಲ್ಲಿ ಭಾರತೀಯರು ಭಾರತ ಬಿಟ್ಟು ಹೋಗುತ್ತಿದ್ದಾರೆ. ಹಾಗಾದರೆ ದಲಿತರು ಎಲ್ಲಿ ಹೋಗಬೇಕು? ಮೈಕೆಲ್ ತೇವರ್ ಅವರ ಕೃಪಾಕಟಾಕ್ಷದ ಪರಿಣಾಮವಾಗಿ, ಅಮೆರಿಕೆಯ ವೀಸಾ ಪಡೆದು ಇದೇ ನವೆಂಬರ್ ತಿಂಗಳಲ್ಲಿ ಅಲ್ಲಿಗೆ ಪ್ರಯಾಣ ಬೆಳೆಸಲಿರುವ ೬೫,೦೦೦ ಭಾರತೀಯರಲ್ಲಿ ಕೇವಲ ೧೯ ಮಂದಿ ದಲಿತರು ಮಾತ್ರ ಇದ್ದಾರೆ. ಏಕೆಂದರೆ, ಬಹುತೇಕ ದಲಿತರು ಇನ್ನೂ ಭಾರತದ ಹಳ್ಳಿಗಳಲ್ಲಿಯೇ ಕೊಳೆಯುತ್ತಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹಳ್ಳಿಗಳನ್ನು ಬಿಟ್ಟು ಬರಲು ದಲಿತರಿಗೆ ನೀಡಿದ ಕರೆಯನ್ನು ಗೌರವಿಸಲೇಬೇಕಾದ ಸಮಯವಿದು.

ಅನುವಾದ :
ಸತ್ಯಪ್ರಕಾಶ್ ಎಂ.ಆರ್

ಡಾಲರ್ ಜಗತ್ತಿನಲ್ಲಿ ವಿಜೃಂಭಿಸುವ ಕನಸು ಕಾಣುತ್ತಿರುವ ಸುಮಾರು ೬೫,೦೦೦ ಭಾರತೀಯರಿಗೆ ಎಚ್೧-ಬಿ ವೀಸಾಗಳನ್ನು ಅಮೆರಿಕೆಯ ಸರ್ಕಾರ ಕಳೆದ ವಾರ ನೀಡಿದೆ. ಪ್ರತಿ ವರ್ಷ ಸಾವಿರಾರು ಮಂದಿ ಭಾರತೀಯರು ವೃತ್ತಿ ಪರವಾನಗಿಗಳನ್ನು ಪಡೆದು ಕೆನಡಾ, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾಗೆ ವಲಸೆ ಹೋಗುತ್ತಲೇ ಇದ್ದಾರೆ.

ಇನ್ನೂ ಸಾವಿರಾರು ಮಂದಿ ಹೆಚ್ಚಿನ ವ್ಯಾಸಂಗಕ್ಕಾಗಿ ಅಮೆರಿಕಾ, ಇಂಗ್ಲೆಂಡ್, ಕೆನಡಾ ಮತ್ತು ಆಸ್ಟ್ರೇಲಿಯಾ ದೇಶಗಳನ್ನರಸಿ 'ಭಾರತ ಬಿಟ್ಟು ಹೋಗುತ್ತಿದ್ದಾರೆ.' ಇವರಲ್ಲಿ ಬಹುತೇಕ ಮಂದಿ ಆ ದೇಶಗಳಲ್ಲಿಯೇ ನೆಲೆಸಬಯಸಿದ್ದಾರೆ. ಸುಶಿಕ್ಷಿತರಲ್ಲದವರು ತೈಲದ ಖನಿಗಳಾಗಿರುವ ಪಶ್ಚಿಮ ಏಷ್ಯಾ ದೇಶಗಳಲ್ಲಿ ನೆಲೆಸುತ್ತಾರೆ.

೧೯೪೨ರಲ್ಲಿ ಮಹಾತ್ಮ ಗಾಂಧಿ ಕರೆ ನೀಡಿದಾಗ ಭಾರತ ಬಿಟ್ಟು ಹೋದವರಿಗಿಂತ, ಇತಿಹಾಸದ ಪುಟಗಳಲ್ಲಿ ಹಿಂದೆಂದೂ ಕಾಣದಂತಹ ಪ್ರಮಾಣದಲ್ಲಿ ಭಾರತೀಯರು ಭಾರತ ಬಿಟ್ಟು ಹೋಗುತ್ತಿದ್ದಾರೆ.

ಹಾಗಾದರೆ ದಲಿತರು ಎಲ್ಲಿ ಹೋಗಬೇಕು? ಮೈಕೆಲ್ ತೇವರ್ ಅವರ ಕೃಪಾಕಟಾಕ್ಷದ ಪರಿಣಾಮವಾಗಿ, ಅಮೆರಿಕೆಯ ವೀಸಾ ಪಡೆದು ಇದೇ ನವೆಂಬರ್ ತಿಂಗಳಲ್ಲಿ ಅಲ್ಲಿಗೆ ಪ್ರಯಾಣ ಬೆಳೆಸಲಿರುವ ೬೫,೦೦೦ ಭಾರತೀಯರಲ್ಲಿ ಕೇವಲ ೧೯ ಮಂದಿ ದಲಿತರು ಮಾತ್ರ ಇದ್ದಾರೆ. ಏಕೆಂದರೆ, ಬಹುತೇಕ ದಲಿತರು ಇನ್ನೂ ಭಾರತದ ಹಳ್ಳಿಗಳಲ್ಲಿಯೇ ಕೊಳೆಯುತ್ತಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹಳ್ಳಿಗಳನ್ನು ಬಿಟ್ಟು ಬರಲು ದಲಿತರಿಗೆ ನೀಡಿದ ಕರೆಯನ್ನು ಗೌರವಿಸಲೇಬೇಕಾದ ಸಮಯವಿದು.

ಕಳೆದ ಜನವರಿ ತಿಂಗಳಿನಿಂದ ನಾನು ಬಹುತೇಕ ಸಮಯವನ್ನು ಉತ್ತರ ಪ್ರದೇಶದ ಹಳ್ಳಿಗಳಲ್ಲಿಯೇ ಕಳೆಯುತ್ತಿದ್ದೇನೆ. ಗ್ರಾಮೀಣ ಪ್ರದೇಶಗಳಲ್ಲಿ ಹುಟ್ಟಿ ಬೆಳೆದವರಿಗೆ ಗ್ರಾಮೀಣ ಜೀವನಶೈಲಿಯ ಬಗ್ಗೆ ಸಂಪೂರ್ಣ ಅರಿವಿರುತ್ತದೆ. ಭಾರತದ ಯಾವುದಾದರೂ ಒಂದು ಹಳ್ಳಿಯಲ್ಲಿ ಓರ್ವ ವ್ಯಕ್ತಿ ಕೇವಲ ಒಂದು ವಾರ ನೆಲೆಸುವುದೂ ಕೂಡ ಕಲ್ಪನೆಗೆ ನಿಲುಕದ ಅನುಭವವೇ ಸರಿ. ಏಳು ದಿನ ಕಳೆದು ಎಂಟನೆಯ ದಿನ ಕಾಲಿಡುತ್ತಿದ್ದಂತೆ, ಆ ವ್ಯಕ್ತಿಯಲ್ಲಿ ಕರಾಳತೆ ಆವರಿಸುವುದಂತೂ ಖಂಡಿತ. ಹೀಗಿರುವಾಗ, ವರ್ಷದ ೩೬೫ ದಿನವೂ ಹಳ್ಳಿಗಳಲ್ಲಿಯೇ ನೆಲೆಸುವಂತಾದರೆ ಆ ವ್ಯಕ್ತಿ 'ಹಿಪ್ಪಿ'ಯಾಗಿ (೧೯೬೦ರ ದಶಕದಲ್ಲಿ ಅಮೆರಿಕದಲ್ಲಿ ಕಂಡುಬಂದ ಪ್ರತಿ-ಸಾಂಸ್ಕೃತಿಕ ಚಳವಳಿ) ಬದಲಾಗೇ ತೀರುತ್ತಾನೆ.

ಎಲ್ಲ ರೀತಿಯ ಅತ್ಯುತ್ತಮವಾದ ಭೌತಿಕ ಸುಖಾನುಭವ ಪಡೆದ ಅಮೆರಿಕದ 'ಹಿಪ್ಪಿ'ಗಳು ತಮ್ಮ ಭೋಗ ಜೀವನದಿಂದ ಬದಲಾವಣೆ ಬಯಸಿದರು. ಆದರೆ ಗ್ರಾಮೀಣ ಭಾರತೀಯರು, ಯಾವುದೇ ರೀತಿಯ ಭೌತಿಕ ಸುಖದ ಅರಿವಿಲ್ಲದೆಯೂ 'ಹಿಪ್ಪಿ'ಗಳಾಗುತ್ತಿದ್ದಾರೆ. ಅಮೆರಿಕನ್ನರು ತಮ್ಮ ಇಚ್ಛೆಯಾನುಸಾರ 'ಹಿಪ್ಪಿ'ಗಳಾದರೆ, ಭಾರತೀಯರು ವಿಧಿಯಿಲ್ಲದೆ 'ಹಿಪ್ಪಿ'ಗಳಾಗುವಂತಾಗಿದೆ.

ವಿಶ್ವದಾದ್ಯಂತ ನಗರವಾಸಿಗಳು, ಗ್ರಾಮೀಣವಾಸಿಗಳಿಗಿಂತ ಉತ್ತಮ ಜೀವನ ನಡೆಸುತ್ತಿದ್ದಾರೆ. ನಗರವಾಸಿಗಳ ಆದಾಯ, ಅವರಿಗೆ ದೊರಕುವ ನಾಗರಿಕ ಸೌಕರ್ಯಗಳು ಯಾವಾಗಲೂ ಗ್ರಾಮೀಣರಿಗಿಂತ ಉತ್ತಮವೇ.

ಇದಕ್ಕೆ ಸಂಬಂಧಿತ ವಿಷಯವನ್ನು ಹೇಳುವುದಾದರೆ, ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸೇವಾ ವಲಯವೇ ಅತ್ಯಧಿಕ ಉದ್ಯೋಗ ಕಲ್ಪಿಸುತ್ತಿರುವುದು. ಅದರಂತೆ ಭಾರತ, ಚೀನಾ ಮತ್ತು ಬ್ರೆಜಿಲ್‌ನಂತಹ ಅಭಿವೃದ್ಧಿಶೀಲ ದೇಶಗಳಲ್ಲಿಯೂ ಇದೇ ಸೂಚನೆಗಳು ಕಂಡುಬರುತ್ತಿವೆ. ಸೇವಾವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುತೇಕ ಮಂದಿ ನಗರವಾಸಿಗಳೇ ಆಗಿದ್ದಾರೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ನಗರಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು, ಬಹುತೇಕ ಗ್ರಾಮೀಣ ವಿದ್ಯಾರ್ಥಿಗಳಿಗಿಂತ ಯಾವಾಗಲೂ ಮುಂದು.

ಎರಡು ಕಾರಣಗಳಿಗಾಗಿ ಈಗ ಸಮಯ ದಲಿತರ ಪರವಾಗಿದೆ: ಮೊದಲನೆಯದಾಗಿ, ಅಭೂತಪೂರ್ವವಾದ ಆರ್ಥಿಕ ವಿಸ್ತರಣೆಯ ಪರಿಣಾಮವಾಗಿ ಜಾತಿಯ ಹಂಗಿಲ್ಲದ ಸಾವಿರಾರು ವೃತ್ತಿಗಳು ಅಸ್ತಿತ್ವಕ್ಕೆ ಬರುತ್ತಿವೆ. ಎರಡನೆಯದಾಗಿ, ದಲಿತರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಗಣನೀಯವಾಗಿ ಆಸ್ತಿಯ ಒಡೆತನ ಇಲ್ಲದಿರುವುದರಿಂದ, ನಗರ ಪ್ರದೇಶಗಳಿಗೆ ಅವರು ಸುಲಭವಾಗಿ ವಲಸೆ ಬರಬಹುದಾಗಿದೆ.

ಈಗಾಗಲೇ ಸಾಕಷ್ಟು ಮಂದಿ ದಲಿತರು ಹಳ್ಳಿಗಳನ್ನು ತೊರೆದು ನಗರಗಳಲ್ಲಿ ಬಂದು ನೆಲೆಸಿದ್ದರೂ, 'ದಲಿತರು ಹಳ್ಳಿಗಳನ್ನು ಬಿಟ್ಟು ಬರಬೇಕಾದ' ಅಂಶ ದಲಿತ ಚಳವಳಿಗಳನ್ನು ಪ್ರೇರೇಪಿಸಬೇಕಿದೆ. ಮೊದಲ ಪೀಳಿಗೆಯ ನಗರವಾಸಿ ದಲಿತರು, ನಗರಗಳಲ್ಲಿ ಪ್ರಮುಖವಾಗಿ ವಸತಿ ಮತ್ತಿತರ ಸಮಸ್ಯೆಗಳನ್ನು ಎದುರಿಸುವರಾದರೂ, ಕ್ರಮೇಣ ಸಮಸ್ಯೆಗಳು ಬಗೆಹರಿಯುತ್ತಿದ್ದಂತೆ ಇತರರೂ ಕೂಡ ಬಂದು ನೆಲೆಸಬಹುದು. ಈ ಪ್ರಕ್ರಿಯೆ ಈಗಾಗಲೇ ನಡೆಯುತ್ತಿದ್ದರೂ, ಬೃಹತ್ ಪ್ರಮಾಣದಲ್ಲಿ ಇನ್ನೂ ನಡೆಯುತ್ತಿಲ್ಲ.

೨೦೫೦ರಷ್ಟರಲ್ಲಿ ಭಾರತದ ನಗರ ಪ್ರದೇಶಗಳ ಜನಸಂಖ್ಯೆ ಗ್ರಾಮೀಣ ಭಾರತಕ್ಕಿಂತ ಹೆಚ್ಚಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

ಹಳ್ಳಿಗಳಲ್ಲಿಯೇ ಉಳಿದುಕೊಳ್ಳುವವರು ಕೇವಲ ಇತರೆ ಹಿಂದುಳಿದ ವರ್ಗಗಳು ಮಾತ್ರ ಎಂದು ಕೂಡ ನಿರೀಕ್ಷಿಸಲಾಗಿದೆ. ಇದೂ ಕೂಡ ದಲಿತರಿಗೆ ಲಭಿಸಿರುವ ಮತ್ತೊಂದು ಸದವಕಾಶವೇ ಆಗಿದೆ.

೧೯೫೦ರಲ್ಲಿ ಭಾರತದಲ್ಲಿ ಗಣರಾಜ್ಯ ಅಸ್ತಿತ್ವಕ್ಕೆ ಬಂದಾಗಿನಿಂದ ದೇಶದಲ್ಲಿ ಎರಡು ಮೂಲಭೂತ ಬದಲಾವಣೆಗಳಾಗಿವೆ: ಒಂದು, ಭೂಸುಧಾರಣೆ, ಮತ್ತು ಎರಡು, ಸರ್ಕಾರಿ ಕೆಲಸಗಳಲ್ಲಿ ಮತ್ತು ಶಾಸಕಾಂಗದಲ್ಲಿ ದಲಿತರು/ ಆದಿವಾಸಿಗಳಿಗಾಗಿ ಸಕಾರಾತ್ಮಕ ಕ್ರಿಯಾಯೋಜನೆ. ಈ ಕಾರಣಗಳಿಂದಾಗಿ, ಸಾಂಪ್ರದಾಯಿಕವಾಗಿ ಪ್ರಬಲವಾಗಿದ್ದ ಸಾಮಾಜಿಕ ವರ್ಗಗಳು, ಸ್ಪಷ್ಟವಾಗಿ ಹೇಳಬೇಕೆಂದರೆ, ದ್ವಿಜರು ತಮ್ಮ ಹಿಡಿತವನ್ನು ಕಳೆದುಕೊಂಡಿದ್ದಾರೆ.

ದ್ವಿಜರಿಂದ ಮುಕ್ತವಾದ ಸ್ಥಳವನ್ನು ಆವರಿಸಲು ದಲಿತರು ಮತ್ತು ಇತರೆ ಹಿಂದುಳಿದ ವರ್ಗಗಳು ಪೈಪೋಟಿಯಲ್ಲಿದ್ದಾರೆ. ಮೀಸಲಾತಿ ಮತ್ತು ಶಿಕ್ಷಣದ ಸಲುವಾಗಿ ದಲಿತರು ಸರ್ಕಾರಿ

ಬಂಡವಾಳಶಾಹಿ ವ್ಯವಸ್ಥೆ ಅನುಸರಿಸಿ

ನೌಕರಿಗಳಲ್ಲಿ ಪ್ರಬಲವಾಗಿದ್ದರೆ, ಇತರೆ ಹಿಂದುಳಿದ ವರ್ಗಗಳು ಭೂಸುಧಾರಣೆಯ ಪ್ರಮುಖ ಫಲಾನುಭವಿಗಳಾಗಿದ್ದಾರೆ.

ಕೃಷಿ ಆಧಾರಿತ ಸಮಾಜದಲ್ಲಿ ಪ್ರಾಬಲ್ಯ ಸಾಧಿಸಿದ ಇತರೆ ಹಿಂದುಳಿದ ವರ್ಗಗಳು ಸ್ವಾಭಾವಿಕವಾಗಿ ಸ್ಥಳೀಯವಾಗಿ ಆಡಳಿತ ವರ್ಗಗಳಾದವು. ಕೃಷಿ ಚಟುವಟಿಕೆಗಳು ಮತ್ತು ಪಶುಸಂಗೋಪನೆಯಲ್ಲಿ ಆಳವಾಗಿ ತೊಡಗಿಸಿಕೊಂಡ ಈ ವರ್ಗಗಳಿಗೆ ನಗರದ ಜೀವನ ಶೈಲಿ ಸೂಕ್ತವಾಗಿ ಒಗ್ಗಲಿಲ್ಲ. ಆದರೆ, ಸರ್ಕಾರಿ ನೌಕರಿಗಳ ಸಲುವಾಗಿ ನಗರಗಳಿಗೆ ಬಂದು ನೆಲೆಸಿದ ದಲಿತರಿಗೆ ನಗರದ ಜೀವನ ಶೈಲಿ ಅತ್ಯಂತ ಆಪ್ತವಾಯಿತು.

ಜಾಗತೀಕರಣದ ನಂತರದ ಈ ದಿನಗಳಲ್ಲಿ, ಭಾರತ ನಗರೀಕರಣ ಮತ್ತು ಆರ್ಥಿಕ ವಿಸ್ತರಣೆಯ ಪ್ರಮುಖವಾದ ಮನ್ವಂತರ ಕಾಲದಲ್ಲಿದೆ. ಇಲ್ಲಿ, ದಲಿತರಿಗೆ ಪ್ರತಿಸ್ಪರ್ಧಿಗಳಿಲ್ಲ. ಒಂದೆಡೆ ದ್ವಿಜರು, ನಗರದ ಪರಿಸರದಲ್ಲಿ ಬೇರುಬಿಟ್ಟಿದ್ದರೆ, ಇನ್ನೊಂದೆಡೆ ಇತರೆ ಹಿಂದುಳಿದ ವರ್ಗಗಳು ಕೃಷಿ ಮತ್ತು ಪಶುಸಂಗೋಪನೆಯಲ್ಲಿ ಜೋತುಬಿದ್ದಿದ್ದಾರೆ. ಹೀಗಾಗಿ, ದಲಿತರಿಗೆ ಈಗ ಮುಕ್ತ ಅವಕಾಶ. 'ದಲಿತರೆ ಹಳ್ಳಿಗಳನ್ನು ಬಿಟ್ಟು ಬನ್ನಿ' ಎಂಬ ಧ್ಯೇಯ ವಾಕ್ಯ ಮತ್ತು ಆಶಯ ದಲಿತರ ಮುಕ್ತಿಗೆ ಲಭಿಸಿರುವ ಐತಿಹಾಸಿಕ ತಿರುವಾಗಿದೆ.

ಕಳೆದ ವಾರ ನನಗೆ ಪರಿಚಿತರಾದ ಹಿರಿಯ ದಲಿತರೊಬ್ಬರನ್ನು ಭೇಟಿಯಾಗುವ ಅವಕಾಶ ಲಭ್ಯವಾಯಿತು. ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯ ಪರವಾಗಿ ನಾನು ವಾದಿಸುತ್ತಿರುವುದು ತಪ್ಪು ಎಂದು ಅವರು ಕೊಂಚ ಹಿಂಜರಿಕೆಯಿಂದಲೇ ಹೇಳಿದರು. ಆ ಹಿರಿಯ ವ್ಯಕ್ತಿಯ ಪ್ರಕಾರ ಬಂಡವಾಳಶಾಹಿ ವ್ಯವಸ್ಥೆಯೆಂದರೆ ಕೇವಲ ಲಾಭಗಳಿಕೆ ಮತ್ತು ಶೋಷಣೆ. ಹೆಚ್ಚಿನ ವಿವರಣೆ ಕೇಳಿದಾಗ, ಬಂಡವಾಳಶಾಹಿತ್ವ ಮಾಲ್ ಸಂಸ್ಕೃತಿಯಂತಹ ಕೆಡುಕನ್ನು ಸೃಷ್ಟಿಸುತ್ತದೆ ಎಂದವರು ಹೇಳಿದರು. ಅವರು ನಾಲ್ಕು ದಶಕಗಳ ಹಿಂದೆ ಗ್ರಾಮೀಣ ಪ್ರದೇಶದಿಂದ ನಗರಕ್ಕೆ ಬಂದು ನೆಲೆಸಿದವರು ಎಂಬುದನ್ನು ಇಲ್ಲಿ ಗಮನಿಸಬೇಕು. ಹೊರಡುವ ಮುಂಚೆ, ಆ ಹಿರಿಯರಿಗೆ ನಾನೊಂದು ಪ್ರಶ್ನೆ ಕೇಳಿದೆ. ಓರ್ವ ದಲಿತನಿಗೆ ಯಾವ ಪರಿಸ್ಥಿತಿ ಉತ್ತಮವಾದುದು? ಹಳ್ಳಿಗಳಲ್ಲಿ ಭೂಮಾಲೀಕರ ಕೈಕೆಳಗೆ ಜೀತ ಮಾಡುವುದೇ ಅಥವಾ ನಗರಗಳಲ್ಲಿ ಬಂಡವಾಳಶಾಹಿದಾರನೋರ್ವನಿಗಾಗಿ ದುಡಿಯುವುದೇ? ತತ್‌ಕ್ಷಣ ಅವರಿಗೆ ತನ್ನ ಗ್ರಾಮದ ಭೂಮಾಲೀಕರ ನೆನಪಾಗಿ, ಅವರೆಲ್ಲರನ್ನೂ ದೂಷಿಸಲು ಶುರುಮಾಡಿದರು.

"ಈ ವಿತರ್ಕವೇಕೆ?" ಎಂಬ ಪ್ರಶ್ನೆ ಅವರನ್ನು ಬೀಳ್ಕೊಟ್ಟ ಮೇಲೂ ನನ್ನನ್ನು ಕಾಡುತ್ತಲೇ ಇತ್ತು. ಹೀಗೆ ಅಚ್ಚರಿಗೊಳಗಾದ ನಾನು, ನಿವೃತ್ತನಾದ ಸರ್ಕಾರಿ ನೌಕರನೋರ್ವ ಸಮಾಜದ ಸಂಕೀರ್ಣತೆಯನ್ನು ಅರಿಯುವಲ್ಲಿ ತನ್ನದೇ ಆದ ಮಿತಿಗಳನ್ನು ಹೊಂದಿರುತ್ತಾನೆ ಎಂದು ರಿಯಾಯಿತಿ ನೀಡಿ ಸುಮ್ಮನಾದೆ.

ಮನೆಗೆ ಬಂದ ಮೇಲೆ ಇನ್ನೂ ನಾನು ತರ್ಕಕ್ಕೆ ನಿಲುಕದ ಅದೇ ವಿಷಯದ ಬಗ್ಗೆಯೇ ಚಿಂತಿಸುತ್ತಿದ್ದೆ, ಏಕೆಂದರೆ ಬಹಳಷ್ಟು ದಲಿತ ಬುದ್ಧಿಜೀವಿಗಳು ಈ ಸರ್ಕಾರಿ ನೌಕರನಂತಹುದೇ ಅಭಿಪ್ರಾಯ ಹೊಂದಿದ್ದಾರೆ.

ಬಂಡವಾಳಶಾಹಿತ್ವದಿಂದ ದಲಿತರಿಗೆ ಒಳಿತಾಗುವುದಿಲ್ಲ ಎಂಬ ಒಟ್ಟಭಿಪ್ರಾಯ ದಲಿತ ಚಿಂತಕರು ಮತ್ತು ದಲಿತ ಚಳವಳಿಗಳಲ್ಲಿದೆ. ಬಂಡವಾಳಶಾಹಿತ್ವ, ಕೈಗಾರಿಕೀಕರಣ ಮತ್ತು ನಗರೀಕರಣದ ಬಗ್ಗೆ ಎಡಪಂಥೀಯರು, ಸಮಾಜವಾದಿಗಳು ಮತ್ತು ಆರ್‌ಎಸ್‌ಎಸ್ ಕೂಡ ಇದೇ ರೀತಿಯ ಅಭಿಪ್ರಾಯ ಹೊಂದಿರುವುದು ಕೂಡ ಕಾಕತಾಳೀಯವೇ. ಪರಿಸರವಾದಿಗಳು ಕೂಡ ಇದೇ ಗುಂಪಿಗೆ ಸೇರುತ್ತಾರೆ.

ಆದರೆ, ಅಂಬೇಡ್ಕರ್‌ವಾದಿಗಳು ಕೂಡ ಇದೇ ರೀತಿ ಚಿಂತಿಸಲು ಹೇಗೆ ಸಾಧ್ಯವಾಯಿತು ಎಂಬ ಅಂಶ ಮಾತ್ರ ನನ್ನ ಅರ್ಥಕ್ಕೆ ನಿಲುಕುತ್ತಿಲ್ಲ. ಭೂಕಂಪ, ಸುನಾಮಿ ಮತ್ತು ಬರ, ಇಂತಹ ವಿಷಯಗಳ ಬಗ್ಗೆ ವಿವಿಧ ಸೈದ್ಧಾಂತಿಕ ಗುಂಪುಗಳು ಒಂದೇ ರೀತಿಯ ಅಭಿಪ್ರಾಯ ಹೊಂದಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ, ಶತಮಾನಗಳಿಂದ ಹಸಿವು ಮತ್ತು ಅವಮಾನಗಳಿಂದ ಶೋಷಣೆಗೊಳಗಾಗಿರುವ ಒಂದು ಸಾಮಾಜಿಕ ವರ್ಗ, ಸಂಪ್ರದಾಯವಾದಿ ಶೋಷಕರಂತೆ ಹೇಗೆ ಚಿಂತಿಸಲು ಸಾಧ್ಯ?

ಜಾತಿ ಆಧಾರಿತ ಜಮೀನ್ದಾರಿ ವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ಥೆ ಇವೆರಡೂ ನಿಂತಿರುವುದು ಉದ್ಯೋಗಿ ಮತ್ತು ಮಾಲೀಕನ ನಡುವಿನ ಸಂಬಂಧದ ಮೇಲೆ. ಜೀತದಾಳು ಮತ್ತು ಮಾಲೀಕ, ಮೇಲ್ಜಾತಿ ಮತ್ತು ಕೆಳಜಾತಿ, ಪ್ರಾಣಿಗಳು ಮತ್ತು ಕೀಟಗಳು ಹೀಗೆ ಎಲ್ಲ ಜೀವಿಗಳ ಪ್ರಾಥಮಿಕ ಕಾರ್ಯ ಆಹಾರ ಹುಡುಕುವುದೇ ಆಗಿದೆ. ಹೀಗೆ ಎಲ್ಲೆಲ್ಲೂ ಮಾಲೀಕ ಮತ್ತು ಉದ್ಯೋಗಿಯ ಸಂಬಂಧ ಏರ್ಪಡುತ್ತದೆ. ಇದೇ ಸಂಬಂಧ, ಕಾರ್ಮಿಕರು ಅಥವಾ ಕೆಲಸಗಾರರ ಪ್ರಾಬಲ್ಯ ಅಥವಾ ಸ್ವಾತಂತ್ರ್ಯವನ್ನು ಕೂಡ ನಿರ್ಧರಿಸುತ್ತದೆ.

ಭೂಮಾಲೀಕರು ಮತ್ತು ಭೂಮಿ ಹೊಂದಿಲ್ಲದ ಕೂಲಿ ಕಾರ್ಮಿಕನ ಮಧ್ಯೆ ಹಾಗೂ ಬಂಡವಾಳಶಾಹಿದಾರರು ಮತ್ತು ಅವರ ಉದ್ಯೋಗಿಯ ಮಧ್ಯೆ ಅಸ್ತಿತ್ವದಲ್ಲಿರುವ ಪರಿಸ್ಥಿತಿಗಳನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ನಗರದ ಹಿನ್ನೆಲೆ ಹೊಂದಿರುವ, ಅಥವಾ ಹಳ್ಳಿಗಳಿಂದ ಬಹಳ ವರ್ಷಗಳ ಕಾಲ ದೂರ ಉಳಿದಿರುವ, ಅಥವಾ ಮುಗ್ಧಾಳತನದ ಕಾರಣದಿಂದ ಓರ್ವ ಜಮೀನ್ದಾರ ಮತ್ತು ಕೂಲಿ ಕಾರ್ಮಿಕನ ನಡುವಿನ ಮಾಲೀಕ- ಉದ್ಯೋಗಿಯ ಸಂಬಂಧವನ್ನು ಅರ್ಥ ಮಾಡಿಕೊಳ್ಳದವರು ಈ ಕೆಳಗಿನ ವಿಚಾರಗಳನ್ನು ತಿಳಿದುಕೊಳ್ಳಲೇಬೇಕು:

ಇಲ್ಲಿ ಕೂಲಿ ಕಾರ್ಮಿಕನಿಗೆ ಒಂದು ನಿಖರವಾದ ಕೆಲಸದ ಅವಧಿ ಇಲ್ಲ. ಓರ್ವ ಕೂಲಿ ಕಾರ್ಮಿಕ ಸೂರ್ಯೋದಯದ ಸಮಯದಲ್ಲಿ ಕೆಲಸ ಆರಂಭಿಸಿ, ಮಧ್ಯಾಹ್ನದ ಊಟದ ನಂತರವೂ ಕೆಲಸ ಮುಂದುವರೆಸುತ್ತಾನೆ.

ಓವರ್-ಟೈಂ ಕೆಲಸಕ್ಕೆ ಈತನಿಗೆ ಹೆಚ್ಚಿನ ಸಂಬಳವೇನೂ ಇಲ್ಲ.

ಕನಿಷ್ಠ ವೇತನದ ಮಾನದಂಡಗಳನ್ನು ಇಲ್ಲಿ ಪಾಲಿಸಲಾಗುವುದಿಲ್ಲ.

ಬಹುತೇಕ, ವೇತನವನ್ನು ಕರುಣೆಯ ಮೇಲೆ ನೀಡಲಾಗುತ್ತದೆ.

ಭೂಮಾಲೀಕ ತನ್ನ ಉದ್ಯೋಗಿಯನ್ನು ಮಾತ್ರ ನಿಯಂತ್ರಿಸುವುದಲ್ಲದೆ, ಆತನ ಮಕ್ಕಳು ಮತ್ತು ಕುಟುಂಬದ ಎಲ್ಲ ಸದಸ್ಯರ ಮೇಲೂ ಹಿಡಿತ ಸಾಧಿಸಿರುತ್ತಾನೆ. ಈ ಪರಿಸ್ಥಿತಿಯನ್ನು, ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಪರಿಸ್ಥಿತಿಯೊಂದಿಗೆ ಹೋಲಿಸಿ ನೋಡಿ. ಇಲ್ಲಿ ಕೆಲಸದ ಅವಧಿ ನಿಗದಿಗೊಂಡಿರುತ್ತದೆ. ಓವರ್-ಟೈಂ ಕೆಲಸಕ್ಕೆ ಹೆಚ್ಚಿನ ವೇತನ ಲಭಿಸುತ್ತದೆ. ಕನಿಷ್ಠ ವೇತನದ ಮಾನದಂಡವನ್ನು ಪರಿಪಾಲಿಸಲಾಗುತ್ತದೆ. ದೊಡ್ಡ ಸಂಸ್ಥೆಗಳಲ್ಲಿ, ಉದ್ಯೋಗಿಗಳು ಸರ್ಕಾರಿ ನೌಕರರಂತೆಯೇ ಎಲ್ಲ ಸೌಕರ್ಯಗಳನ್ನು ಪಡೆಯುತ್ತಾರೆ.

ಎಲ್ಲಕ್ಕಿಂತ ಮುಖ್ಯವಾಗಿ, ಉದ್ಯೋಗಿಯೊಬ್ಬ ತಡವಾಗಿ ಕೆಲಸಕ್ಕೆ ಬಂದರೆ, ಬಂಡವಾಳಶಾಹಿದಾರರು ಜಾತಿನಿಂದನೆ ಮಾಡುತ್ತಾರೆಯೇ? ಒಂದು ವೇಳೆ ಆತ ಅನಾರೋಗ್ಯ ಅಥವಾ ಇನ್ನಿತರ ಯಾವುದೇ ಕಾರಣದಿಂದ ಕೆಲಸಕ್ಕೆ ಬಾರದಿದ್ದರೆ, ಬದಲಿ ಕೆಲಸಗಾರರನ್ನು ಕಳುಹಿಸಿಕೊಡುವಂತೆ ಒತ್ತಾಯ ಮಾಡುತ್ತಾರೆಯೇ? ಇನ್ನೂ ಮುಂದುವರೆದು ಹೇಳುವುದಾದರೆ, ಕಾರ್ಮಿಕರು ಕಡಿಮೆ ಸಂಖ್ಯೆಯಲ್ಲಿದ್ದರೆ, ಕಾರ್ಮಿಕರ ಹೆಂಡತಿ/ ತಾಯಿ/ ಮಗಳನ್ನು ಕಾರ್ಖಾನೆಗೆ ಕರೆತರುವಂತೆ ಒತ್ತಾಯಿಸುತ್ತಾರೆಯೇ? ಆದರೆ ಇದೆಲ್ಲವೂ ಹಳ್ಳಿಗಳಲ್ಲಿ ನಡೆಯುತ್ತದೆ.

ಹೀಗಾಗಿ, ದಲಿತರು ಯಾವ ಹಿನ್ನೆಲೆಯಲ್ಲಿ ಬಂಡವಾಳಶಾಹಿತ್ವವನ್ನು ಕೆಟ್ಟದೆಂದು ಪರಿಗಣಿಸುತ್ತಾರೆ? ಸ್ಪಷ್ಟವಾಗಿ ಹೇಳುವುದಾದರೆ, ದಲಿತರಿಗೆ ಉಳಿದಿರುವುದು ಎರಡೇ ಆಯ್ಕೆಗಳು; ಒಂದು ಹಳ್ಳಿಗಳಲ್ಲಿಯೇ ಭೂಮಾಲೀಕರ ಕೈಕೆಳಗೆ ಕೆಲಸ ಮಾಡುತ್ತಾ ಕೊಳೆಯುವುದು ಅಥವಾ ಬಂಡವಾಳಶಾಹಿಗಳ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವುದು.

ದಲಿತ ಚಿಂತಕರು ಒಂದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು: ಬಂಡವಾಳಶಾಹಿ ವ್ಯವಸ್ಥೆಯನ್ನು ವಿರೋಧಿಸುತ್ತಿರುವವರು ಜಾತಿ ಆಧಾರಿತ ಜಮೀನ್ದಾರಿ ವ್ಯವಸ್ಥೆಯ ಎಲ್ಲ ಲಾಭಗಳನ್ನು ಪಡೆದವರು, ದಲಿತರಂತೆ ಶತಮಾನಗಳಿಂದ ಹಸಿವು ಮತ್ತು ಅವಮಾನಗಳನ್ನು ಅನುಭವಿಸಿದವರಲ್ಲ. ವಿಶ್ವದಾದ್ಯಂತ ಬಂಡವಾಳಶಾಹಿ ವ್ಯವಸ್ಥೆ, ಜಮೀನ್ದಾರಿ ವ್ಯವಸ್ಥೆ ಮತ್ತು ಕೃಷಿ ವ್ಯವಸ್ಥೆಯ ವಿರುದ್ಧ ಹೋರಾಡಿ ಯಶಸ್ವಿಯಾಗಿ ಅವುಗಳನ್ನು ಪರಾಜಿತಗೊಳಿಸಿದೆ. ಭಾರತ ಕೂಡ ಇದರಿಂದ ಹೊರತಲ್ಲ. ಯಾಕೆಂದರೆ ಜಮೀನ್ದಾರಿ ವ್ಯವಸ್ಥೆಯಲ್ಲಿ ಬಂಡವಾಳಶಾಹಿ ವ್ಯವಸ್ಥೆ ಬೆಳೆಯಲಾಗುವುದಿಲ್ಲ.

ಗ್ರಾಮ ಸ್ವರಾಜ್ಯವನ್ನು ಕೊಲ್ಲಿ

ಆದ್ದರಿಂದ ತನ್ನ ಅಸ್ತಿತ್ವದ ಸಲುವಾಗಿ ಕೃಷಿ ವ್ಯವಸ್ಥೆಯ ವಿರುದ್ಧ ಬಂಡವಾಳಶಾಹಿ ವ್ಯವಸ್ಥೆ ಹೋರಾಡುತ್ತದೆ. ಈ ಕೃಷಿ ವ್ಯವಸ್ಥೆ ನಿರ್ನಾಮವಾದರ ಬಂಡವಾಳಶಾಹಿ ವ್ಯವಸ್ಥೆಯ ವಿರೋಧಿಗಳಾದ ಮೇಲ್ಜಾತಿಯ ಹಿಂದೂಗಳು ಕಣ್ಣೀರಿಡಬೇಕು, ದಲಿತರಲ್ಲ.

ಈ ಸುಂದರ ಗ್ರಾಮೀಣ– ಸಮುದಾಯಗಳು, ಯಾವುದೇ ರೀತಿಯ ಪ್ರತಿರೋಧ ಒಡ್ಡುವುದಿಲ್ಲವೆಂದು ಮೇಲ್ನೋಟಕ್ಕೆ ಅನಿಸಿದರೂ, ಇವು 'ಓರಿಯಂಟಲ್' ಸರ್ವಾಧಿಕಾರದ ಭದ್ರ ತಳಹದಿಯಾಗಿವೆ. ಒಂದು ಸೀಮಿತವಾದ ಚೌಕಟ್ಟಿನೊಳಗೆ ಮಾನವನ ಬುದ್ಧಿಮತ್ತೆಯನ್ನು ಸೆರೆಹಿಡಿಯುವ ಈ ಗ್ರಾಮೀಣ ಹಿನ್ನೆಲೆ, ಮೂಢನಂಬಿಕೆಗಳಿಗೆ ಪ್ರತಿರೋಧ ಒಡ್ಡದೆ, ಸಾಂಪ್ರದಾಯಿಕ ನಿಯಮಾವಳಿಗಳಿಗೆ ಜೋತುಬೀಳುವಂತಹ ಪರಿಸ್ಥಿತಿ ನಿರ್ಮಾಣ ಮಾಡುತ್ತದೆ.

– ಕಾರ್ಲ್ ಮಾರ್ಕ್ಸ್, ೧೮೫೩

ಭಾರತದ ಗ್ರಾಮೀಣ ಸಮಾಜವನ್ನು ಕುರಿತ ಕಾರ್ಲ್ ಮಾರ್ಕ್ಸ್ ಅವರ ಅಭಿಪ್ರಾಯವಿದು. ಈ ಗ್ರಾಮೀಣ ಭಾರತವನ್ನು ನಾಶಗೊಳಿಸಿ, ಪಾಶ್ಚಿಮಾತ್ಯ ಶೈಲಿಯ ಭಾರತೀಯ ಸಮಾಜವನ್ನು ಕಟ್ಟಬೇಕೆಂದು ಕಾರ್ಲ್ ಮಾರ್ಕ್ಸ್ ಪ್ರತಿಪಾದಿಸಿದ್ದರು. ಹೀಗಾಗಿ, ೧೮೫೩ರಲ್ಲಿ ಅವರು ಈ ರೀತಿ ಬರೆದಿದ್ದಾರೆ.

"ಇಂಗ್ಲೆಂಡ್ • ಭಾರತದಲ್ಲಿ ಎರಡು ಕೆಲಸ ಮಾಡಬೇಕಿದೆ: ಒಂದು, ಸಾಂಪ್ರದಾಯಿಕ ಸಮಾಜವನ್ನು ನಿರ್ನಾಮಗೊಳಿಸುವುದು, ಇನ್ನೊಂದು, ಹಳೆಯ ಗ್ರಾಮೀಣ ಸಮಾಜವನ್ನು ಮೆಟ್ಟಿ ನಿಂತು ಏಷ್ಯಾದಲ್ಲಿ ಪಾಶ್ಚಿಮಾತ್ಯ ಸಮಾಜಕ್ಕೆ ಭೌತಿಕ ತಳಹದಿಯನ್ನು ಹಾಕುವುದು."

ಸರಿಸುಮಾರು ನೂರು ವರ್ಷಗಳ ಬಳಿಕ ಡಾ. ಬಿ ಆರ್ ಅಂಬೇಡ್ಕರ್ ಭಾರತೀಯ ಗ್ರಾಮೀಣ ಸಮಾಜವನ್ನು ಕುರಿತು ೧೯೪೮ರಲ್ಲಿ ಈ ರೀತಿ ಬರೆದಿದ್ದಾರೆ:

"ಈ ಗ್ರಾಮ ಸ್ವರಾಜ್ಯಗಳೇ ಭಾರತದ ವಿನಾಶಕ್ಕೆ ಕಾರಣ ಎಂಬುದು ನನ್ನ ಅಭಿಪ್ರಾಯ. ಇಲ್ಲಿ, ಪ್ರಜಾತಂತ್ರ ಮತ್ತು ಸಮಾನತೆಗೆ ಅವಕಾಶವಿಲ್ಲ. ಇವು ಅಸ್ಪೃಶ್ಯರ ಮೇಲೆ ದಬ್ಬಾಳಿಕೆ ನಡೆಸುವ ಹಿಂದೂಗಳ ಸಂಸ್ಥಾನಗಳಾಗಿವೆ. ಇವು ಒಂದು ರೀತಿಯಲ್ಲಿ ಅಸ್ಪೃಶ್ಯರನ್ನು ಶೋಷಿಸಲು ಹಿಂದೂಗಳು ನಿರ್ಮಿಸಿಕೊಂಡಿರುವ ವಸಾಹತು ವ್ಯವಸ್ಥೆ. ಈ ಗ್ರಾಮ ಸ್ವರಾಜ್ಯಗಳಲ್ಲಿ ಅಸ್ಪೃಶ್ಯರಿಗೆ ಯಾವುದೇ ಹಕ್ಕುಗಳಿಲ್ಲ. ಇಲ್ಲಿ ಅಸ್ಪೃಶ್ಯರು, ಕಾಯಲು, ಸೇವೆ ಮಾಡಲು ಮತ್ತು ಜೀತ ಮಾಡಲು ಮಾತ್ರ ಇದ್ದಾರೆ. ಅಸ್ಪೃಶ್ಯರು ಹಳ್ಳಿಗಳಲ್ಲಿ 'ಮಾಡಬೇಕು ಇಲ್ಲ ಮಡಿಯಬೇಕು.'"

ನಮಗೆಲ್ಲರಿಗೂ ತಿಳಿದಿರುವಂತೆ, ಮಾರ್ಕ್ಸ್ ಬ್ರಾಹ್ಮಣನೂ ಅಲ್ಲ, ದಲಿತನೂ ಅಲ್ಲ. ಬೇರೆ ದೇಶದಲ್ಲಿ ಹುಟ್ಟಿ– ಬೆಳೆದ ಮಾರ್ಕ್ಸ್ ಒಂದು ರೀತಿಯಲ್ಲಿ ನ್ಯೂಟ್ರಲ್ ಅಂಪೈರ್ ಇದ್ದ ಹಾಗೆ. ಭಾರತೀಯ ಸಮಾಜದ ಬಗ್ಗೆ ಮುಕ್ತವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಡಾ. ಅಂಬೇಡ್ಕರ್ ಭಾರತದಲ್ಲಿಯೇ ಹುಟ್ಟಿ ಬೆಳೆದವರಾದರೂ, ಓರ್ವ ಅಸ್ಪೃಶ್ಯರಾಗಿ ಅವರೂ ಕೂಡ ಮುಕ್ತವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಈ ಇಬ್ಬರೂ ಮಹಾನ್ ವ್ಯಕ್ತಿಗಳು, ಭಾರತದ ಗ್ರಾಮೀಣ ಸಮಾಜವನ್ನು ನಾಶಪಡಿಸಿ ಆಧುನಿಕ ಕೈಗಾರಿಕಾ ಆಧಾರಿತ ನಗರಗಳನ್ನು ಕಟ್ಟಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆದರೆ, ಭಾರತದಲ್ಲಿರುವ ಮಾರ್ಕ್ಸ್‌ನ ಅನುಯಾಯಿಗಳು ಇದನ್ನು ಒಪ್ಪುವುದಿಲ್ಲ. ಅವರು ಅಂಬೇಡ್ಕರರ ಅಭಿಪ್ರಾಯವನ್ನೂ ಒಪ್ಪುವುದಿಲ್ಲ.

ವಿಶ್ವದಾದ್ಯಂತ ಕೇವಲ ಬಂಡವಾಳಶಾಹಿ ವ್ಯವಸ್ಥೆ ಮಾತ್ರ ಗ್ರಾಮೀಣ ಸಮಾಜವನ್ನು ಮತ್ತು ಕೃಷಿ ವ್ಯವಸ್ಥೆಯನ್ನು ನಾಶಮಾಡಬಲ್ಲದು. ೨೦ನೇ ಶತಮಾನದಲ್ಲಿ ಕೆಲವು ರಾಷ್ಟ್ರಗಳು ಬಂಡವಾಳಶಾಹಿತ್ವಕ್ಕೆ ಪ್ರತಿರೋಧ ಒಡ್ಡಿ ಕೈಗಾರಿಕೀಕರಣದಿಂದ ಕೊಂಚ ಮಟ್ಟಿಗೆ ಹೊರಬಂದವು. ಉದಾಹರಣೆಗೆ, ಯುರೋಪಿನ ಪೂರ್ವ ಜರ್ಮನಿ ಸಂಪೂರ್ಣವಾಗಿ ಕೈಗಾರಿಕೀಕರಣ ಹೊಂದಿದ ರಾಷ್ಟ್ರವಾಗಿದ್ದು, ಸಮಾಜವಾದಿ ಸರ್ಕಾರ ಬಂದ ನಂತರ ಸಾಕಷ್ಟು ಸಂಕಷ್ಟ ಅನುಭವಿಸಿದೆ.

ಯಾವುದೇ ಮಾನದಂಡದ ಮೇಲೆ ಅಳೆದು ತೂಗಿದರೂ, ಕೈಗಾರಿಕೀಕರಣ ಮತ್ತು ನಗರೀಕರಣ ಬಂಡವಾಳಶಾಹಿತ್ವದ ಅವಿಭಾಜ್ಯ ಪ್ರಕ್ರಿಯೆಗಳು ಎಂಬುದು ದಿಟ. ಬಂಡವಾಳಶಾಹಿತ್ವಕ್ಕೆ ಒಳಪಡದ ಪ್ರದೇಶಗಳು, ಕೈಗಾರಿಕೀಕರಣ ಅಥವಾ ನಗರೀಕರಣದಿಂದ ವಂಚಿತವಾಗಿರುತ್ತವೆ.

ಇದೊಂದು ಸಾರ್ವತ್ರಿಕ ಅನುಭವವಾಗಿರುವುದರಿಂದ, ಬಂಡವಾಳಶಾಹಿ ವ್ಯವಸ್ಥೆ ಭಾರತಕ್ಕೆ ಕಾಲಿರಿಸಿ ಗ್ರಾಮೀಣ ಸಮಾಜವನ್ನು ನಾಶಪಡಿಸಿದರೆ ತಪ್ಪೇನು?

ಭಾರತದ ಗ್ರಾಮೀಣ ಸಮಾಜ ನಿರ್ನಾಮವಾದರೆ ಇಲ್ಲಿನ ಜಾತಿ ವ್ಯವಸ್ಥೆಯ ಮೇಲಾಗುವ ಪರಿಣಾಮವೇನು?

ನಾವು ಎಡಪಂಥೀಯರು ಮತ್ತು ಆರ್‌ಎಸ್‌ಎಸ್‌ಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕಿದೆ. ಒಂದು ವೇಳೆ ಎಡರಂಗ ಮತ್ತು ಆರ್‌ಎಸ್‌ಎಸ್‌ನ ನಾಯಕರು ಒಂದು ಶತಮಾನದ ತಮ್ಮ ಕೌಟುಂಬಿಕ ಇತಿಹಾಸವನ್ನು ಬರೆಯುವುದಾದರೆ, ಯಾರಾದರೂ ಒಬ್ಬರು, ದಲಿತ ಭೂಮಾಲೀಕರ ಕೈಕೆಳಗೆ ಭೂಮಿಯಿಲ್ಲದ ತಮ್ಮ ಪೂರ್ವಿಕರು ಕೆಲಸ ಮಾಡುತ್ತಿದ್ದರು ಎಂದು ಬರೆಯಲು ಸಾಧ್ಯವಿದೆಯೇ?

ಜಾತಿ ವ್ಯವಸ್ಥೆ ಮೊದಲ ಬಲಿಪಶುವಾಗುವುದೇ? ಅಥವಾ ಜಾತಿವ್ಯವಸ್ಥೆಯ ಬಲಿಪಶುಗಳು ಮೊದಲ ಫಲಾನುಭವಿಗಳಾಗುವರೇ?

ನಾನು ಹುಟ್ಟಿ ಬೆಳೆದು, ಪದವಿಯವರೆಗೂ ಬದುಕು ಸವೆಸಿದ ಉತ್ತರ ಪ್ರದೇಶ ರಾಜ್ಯದ ಪೂರ್ವದಲ್ಲಿರುವ ನನ್ನ ಸ್ವಗ್ರಾಮಕ್ಕೆ ಕೇವಲ ಐದು ಮೈಲಿ ದೂರದಲ್ಲಿರುವ ಹಳ್ಳಿಗೆ ನಾನು ಇತ್ತೀಚೆಗೆ ಭೇಟಿ ನೀಡಿದೆ. ಆ ಹಳ್ಳಿಯ ದಲಿತರು ಒಂದು ಭಯಾನಕ ಕಥೆಯನ್ನು ಹೇಳಿದರು. ನಾಲ್ಕು ದಶಕಗಳ ಹಿಂದೆ ಹಳ್ಳಿಯ ಇಬ್ಬರು ದಲಿತರು ಪಟ್ಟಣದ ಕಾರ್ಖಾನೆಯೊಂದರಲ್ಲಿ ಕಾರ್ಮಿಕರಾಗಿ ಕೆಲಸಕ್ಕೆ ಸೇರುವ ಇಚ್ಛೆಯಿಂದ ಹಳ್ಳಿಯಿಂದ ಪಟ್ಟಣಕ್ಕೆ ಓಡಿಹೋಗುವ ಯತ್ನದಲ್ಲಿದ್ದರು. ವಿಷಯ ಸ್ಥಳೀಯ ಜಮೀನ್ದಾರನಿಗೆ ತಿಳಿದಾಗ, ರೈಲ್ವೆ ನಿಲ್ದಾಣಕ್ಕೆ ಜನರನ್ನು ಬಿಟ್ಟು, ರೈಲಿಗಾಗಿ ಕಾದಿದ್ದ ಅವರಿಬ್ಬರನ್ನು ಹಳ್ಳಿಗೆ ಮತ್ತೆ ಕರೆತಂದರು. ಆ ಇಬ್ಬರು ಇನ್ನೆಂದೂ ನಗರದ ಬಂಡವಾಳಶಾಹಿತ್ವವನ್ನು ನೋಡಲೂ ಇಲ್ಲ, ಬಂಡವಾಳಶಾಹಿಗಳಿಗಾಗಿ ಕೆಲಸ ಮಾಡಲೂ ಇಲ್ಲ.

ಭಾರತದಲ್ಲಿ ಇಂದು ಎರಡು ವ್ಯವಸ್ಥೆಗಳ ನಡುವೆ ಸಮರ ನಡೆಯುತ್ತಿದೆ– ಜಾತಿವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ಥೆ. ಗ್ರಾಮೀಣ ಸ್ವರಾಜ್ಯಗಳಲ್ಲಿ ಜನಿಸಿದ ಜಾತಿವ್ಯವಸ್ಥೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ತನ್ನ ತೀಕ್ಷ್ಣತೆಯನ್ನು ಕಳೆದುಕೊಳ್ಳುತ್ತದೆ. ಆದರೆ ಇಲ್ಲಿ ಇನ್ನೊಂದು ಪ್ರಮುಖ ಪ್ರಶ್ನೆ ಕೂಡ ಇಲ್ಲಿ ಉದ್ಭವಿಸುತ್ತದೆ: ಭಾರತದ ನಗರ ಪ್ರದೇಶಗಳಲ್ಲಿ ಜಾತಿ ವ್ಯವಸ್ಥೆ ಸಂಪೂರ್ಣವಾಗಿ ಕಣ್ಮರೆಯಾಗಿದೆಯೇ? ಇಲ್ಲ. ಆದರೆ, ಭಾರತ ಸಂಪೂರ್ಣವಾಗಿ ಬಂಡವಾಳಶಾಹಿ ಸಮಾಜವಾಗಿ ಕೂಡ ಇನ್ನೂ ಪರಿವರ್ತಿತವಾಗಿಲ್ಲ.

ಈ ಎರಡು ಪ್ರಶ್ನೆಗಳ ನಡುವೆ ಎಲ್ಲೋ ಉತ್ತರವಿದೆ. ಬಂಡವಾಳಶಾಹಿ ವ್ಯವಸ್ಥೆಯ ವ್ಯಾಪ್ತಿಗನುಸಾರವಾಗಿ ಭಾರತದ ಜಾತಿ ವ್ಯವಸ್ಥೆ ಸಡಿಲಗೊಳುತ್ತಿದೆ. ಓರ್ವ ದಲಿತನಿಗೆ ಗ್ರಾಮೀಣ ಪ್ರದೇಶಗಳಲ್ಲಂತಲ್ಲದೆ, ನಗರ ಪ್ರದೇಶ ಸಮಾನಾವಕಾಶ ನೀಡುತ್ತದೆ. ಓರ್ವ ದಲಿತ, ನಗರ ಪ್ರದೇಶಗಳಲ್ಲಿ ಯಶಸ್ಸು ಪಡೆದಂತೆ ಗ್ರಾಮೀಣ ಪ್ರದೇಶಗಳಲ್ಲಿ ಯಶಸ್ಸು ಸಾಧಿಸುವುದು ಕಷ್ಟ.

ಇಂತಹ ವಿಚಾರಗಳು ಕಣ್ಣಿಗೆ ರಾಚುವಂತಿದ್ದರೂ, ಬಹಳಷ್ಟು ಮಂದಿ ಬುದ್ಧಿಜೀವಿಗಳು, ರಾಜಕಾರಣಿಗಳು ಮತ್ತು ಕಾರ್ಯಕರ್ತರು ಬಂಡವಾಳಶಾಹಿ ವ್ಯವಸ್ಥೆ ಮತ್ತು ಪಾಶ್ಚಿಮಾತ್ಯೀಕರಣದ ವಿರುದ್ಧ ಹೋರಾಡುತ್ತಿದ್ದಾರೆ. ಈ ಹೋರಾಟ ಸೈದ್ಧಾಂತಿಕವಾದುದೇ ಅಥವಾ ಮಾನಸಿಕವಾದುದೇ? ಇದು ಉತ್ತರವಿಲ್ಲದ ಪ್ರಶ್ನೆಯಾಗಿಯೇ ಉಳಿದಿದೆ.

ಕೆಲವೇ ಮಂದಿ ಮನುಷ್ಯರು ಹಾವಿನ ವಿಷದಿಂದ ಸತ್ತವರಾದರೂ, ಎಲ್ಲರಿಗೂ ಹಾವಿನ ಹೆದರಿಕೆ ಇದೆ. ಪ್ಲಾಸ್ಟಿಕ್ ಹಾವನ್ನು ಯಾರಾದರೂ ಅಪರಿಚಿತರು ನಿಮ್ಮ ಮೇಲೆ ಎಸೆದರೆ, ನೀವು ಎಷ್ಟೇ ಧೈರ್ಯವಂತರಾದರೂ,

ಭಯಭೀತರಾಗುವುದು ಖಂಡಿತ. ಇದರಲ್ಲಿ ಸೈದ್ಧಾಂತಿಕವಾದುದು ಏನಾದರೂ ಇದೆಯೇ? ಇದು ಮಾನಸಿಕ ಭೀತಿಯಲ್ಲವೇ? ವಿಶ್ವದಾದ್ಯಂತ ಜಾತಿ, ಮತ, ದೇಶ, ಸಮುದಾಯಗಳ ಭೇದವಿಲ್ಲದೆ ಜಮೀನ್ದಾರಿ ವ್ಯವಸ್ಥೆಯಿಂದ ಶೋಷಣೆಗೆ ಒಳಗಾಗಿರುವವರು ಈ ವ್ಯವಸ್ಥೆಯ ಬಗ್ಗೆ ಭೀತಿ ವ್ಯಕ್ತಪಡಿಸುತ್ತಾರೆ. ಏಕೆಂದರೆ ಓರ್ವ ಭೂಮಾಲೀಕನ ಹಿಡಿತ, ಹಾವಿನ ವಿಷಕ್ಕಿಂತ ಹೆಚ್ಚಿನ ನೋವುಂಟುಮಾಡುವಂತಹುದು.

ಭಾರತದಲ್ಲಿ ಕೆಲವು ರಾಜಕೀಯ ಸಿದ್ಧಾಂತಗಳು ಕೃಷಿ ವ್ಯವಸ್ಥೆಯನ್ನು ಅಟ್ಟಕ್ಕೇರಿಸುತ್ತಾ, ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಆತಂಕ ವ್ಯಕ್ತಪಡಿಸುವುದು ಸೈದ್ಧಾಂತಿಕ ಪ್ರತಿಕ್ರಿಯೆಯೇ?

ಎಡಪಂಥ, ಆರ್‌ಎಸ್‌ಎಸ್ ಮತ್ತು ಸಮಾಜವಾದ, ಈ ಮೂರು ಅಧಿಕೃತ ರಾಜಕೀಯ ಸಿದ್ಧಾಂತಗಳು ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸುತ್ತವೆ. ಎಡರಂಗ ಮತ್ತು ಆರ್‌ಎಸ್‌ಎಸ್ ಬೌದ್ಧಿಕವಾಗಿ ಬ್ರಾಹ್ಮಣರು ಅಥವಾ ದ್ವಿಜರ ನಾಯಕತ್ವದಲ್ಲಿರುವುದು ಎಲ್ಲರಿಗೂ ತಿಳಿದ ವಿಷಯ. ಇನ್ನು, 'ಬಫೆಲೋ ರಿಪಬ್ಲಿಕ್'ನ ಸಮಾಜವಾದಿಗಳು ಅಥವಾ ಇತರೆ ಹಿಂದುಳಿದ ವರ್ಗಗಳು/ ಶೂದ್ರರು, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆಧುನಿಕತೆಯ ಜಾಡನ್ನು ಗುರುತಿಸಿ ಭಯಭೀತರಾಗಿದ್ದಾರೆ. ಹೀಗಾಗಿ, ಈ ಶೂದ್ರವರ್ಗವನ್ನು ನಾವು ಪ್ರಸ್ತುತ ಚರ್ಚೆಯಲ್ಲಿ ಮರೆತುಬಿಡೋಣ.

ಆದರೆ ನಾವು ಎಡಪಂಥೀಯರು ಮತ್ತು ಆರ್‌ಎಸ್‌ಎಸ್‌ಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕಿದೆ. ಒಂದು ವೇಳೆ ಎಡರಂಗ ಮತ್ತು ಆರ್‌ಎಸ್‌ಎಸ್‌ನ ನಾಯಕರು ಒಂದು ಶತಮಾನದ ತಮ್ಮ ಕೌಟುಂಬಿಕ ಇತಿಹಾಸವನ್ನು ಬರೆಯುವುದಾದರೆ, ಯಾರಾದರು ಒಬ್ಬರು, ದಲಿತ ಭೂಮಾಲೀಕರ ಕೈಕೆಳಗೆ ಭೂಮಿಯಿಲ್ಲದ ತಮ್ಮ ಪೂರ್ವಿಕರು ಕೆಲಸ ಮಾಡುತ್ತಿದ್ದರು ಎಂದು ಬರೆಯಲು ಸಾಧ್ಯವಿದೆಯೇ?

ತಮ್ಮ ಪೂರ್ವಿಕರು ಮುಂಜಾನೆ ಎದ್ದು ದಲಿತ ಭೂಮಾಲೀಕರ ಮನೆಗೆ ದೌಡಾಯಿಸುತ್ತಿದ್ದ ಬಗೆಯನ್ನು ವಿವರಿಸಲು ಸಾಧ್ಯವಿದೆಯೇ? ದಲಿತ ಭೂಮಾಲೀಕರಿಂದ ಬೈಗುಳ ತಿಂದು, ಕೆಲವೊಮ್ಮೆ ಥಳಿಸಿಕೊಂಡ ಸ್ಮೃತಿಗಳೇನಾದರೂ ಇದೆಯೇ? ತಮ್ಮ ಪೂರ್ವಿಕರು ಸಗಣಿ ಸಾರಿಸುವಾಗ ದಲಿತ ಭೂಮಾಲೀಕರು ಚಹಾ ಹೀರುತ್ತಿದ್ದ ನೆನಪುಗಳೇನಾದರೂ ಇದೆಯೇ?

ಯಾರಾದರೂ ಒಬ್ಬ ಎಡರಂಗ ಅಥವಾ ಆರ್‌ಎಸ್‌ಎಸ್ ನಾಯಕರು ಮತ್ತು ಬುದ್ಧಿಜೀವಿಗಳು ತಮ್ಮ ಪೂರ್ವಿಕರು ದಲಿತ ಭೂಮಾಲೀಕರ ಮನೆಗಳಲ್ಲಿ ಪಾಲಿಸಿಕೊಂಡು ಬರಬೇಕಿದ್ದ ಕೆಲಸದ ದಿನಚರಿಯ ಬಗ್ಗೆ ಬರೆಯಲು ಸಾಧ್ಯವಿದೆಯೇ? ಮದುವೆಯಾಗಿ ಮೂರು ದಿನ ಕಳೆದ ಮಧುಮಗಳು ಮತ್ತು ಅವಳ ಕುಟುಂಬದ ಸದಸ್ಯರು ದಲಿತ ಭೂಮಾಲೀಕನ ಮನೆಯಲ್ಲಿ

ಎಡರಂಗ ಮತ್ತು ಆರ್‌ಎಸ್‌ಎಸ್ ನಾಯಕರು ಬ್ರಿಟಿಷ್ ಆಡಳಿತವನ್ನು ದೂಷಿಸಿದರೆ ನನಗೆ ಆಶ್ಚರ್ಯವಾಗುವುದಿಲ್ಲ. ಎಡಪಂಥೀಯ ಚಳವಳಿ ಮತ್ತು ಆರ್‌ಎಸ್‌ಎಸ್ ಎರಡೂ ಬ್ರಿಟಿಷ್ ಆಡಳಿತಾವಧಿಯಲ್ಲಿ ಆರಂಭವಾದಂತಹುವು. ಆದ್ದರಿಂದ, ಬ್ರಿಟಿಷ್ ಆಡಳಿತ ಇನ್ನೂ ಇವರ ಮನಸ್ಸಿನಲ್ಲಿ ಉಳಿದಿದೆ. ಬ್ರಿಟಿಷ್ ಆಡಳಿತಾವಧಿಯಲ್ಲಿ ಮೊಟ್ಟ ಮೊದಲ ಬಾರಿಗೆ ಇವರ ಪೂರ್ವಿಕರು ಹೊರಗಿನ ಸಾಮಾಜಿಕ ವ್ಯವಸ್ಥೆಗೆ ಅಡಿಯಾಳುಗಳಾಗಿ ಉದ್ಯೋಗ ಮಾಡಬೇಕಾಗಿ ಬಂತು. ಇವರೆಲ್ಲರೂ ಹೊರಗಿನ ಪರಮಾಧಿಕಾರಕ್ಕೆ ಶರಣಾಗಿ ನಿಖರವಾದ ಕೆಲಸದ ಅವಧಿಯನ್ನು ಶಿಸ್ತಿನಿಂದ ಪಾಲಿಸಬೇಕಾಯಿತು.

ಬಲವಂತವಾಗಿ ಕೆಲಸ ಮಾಡಿದ ನಿದರ್ಶನಗಳೇನಾದರೂ ಇದೆಯೇ? ಗ್ರಾಮೀಣ ಪ್ರದೇಶಗಳಲ್ಲಿ ದಲಿತ ಭೂಮಾಲೀಕರ ಹಿಡಿತದಲ್ಲಿರುವ ವೇತನ ಶ್ರೇಣಿಯ ಬಗ್ಗೆ ಬರೆಯಲು ಸಾಧ್ಯವಿದೆಯೇ?

ಎಡಪಂಥೀಯರು ಮತ್ತು ಆರ್‌ಎಸ್‌ಎಸ್ ನಾಯಕರು, ದಲಿತ ಭೂಮಾಲೀಕರಿಗಾಗಿ ದುಡಿಯುತ್ತಿದ್ದ ತಮ್ಮ ಪೂರ್ವಿಕರ ಆಹಾರ ಪದ್ಧತಿ ಮತ್ತು ಜೀವನಶೈಲಿಯನ್ನು ವಿವರಿಸಲು ಸಾಧ್ಯವೇ? ಇವರಲ್ಲಿ ಯಾರೊಬ್ಬರೂ ತಮ್ಮ ಪೂರ್ವಿಕರು ಮೊದಲ ಊಟ ಯಾವಾಗ ಮಾಡಿದರೆಂದು ಹೇಳಲು ಸಾಧ್ಯವಾಗುವುದಿಲ್ಲ. ದಲಿತ ಭೂಮಾಲೀಕರಿಗಾಗಿ ಕೆಲಸ ಮಾಡುವಾಗ ತಮ್ಮ ಕುಟುಂಬದ ಹೆಂಗಸರ ಮೇಲೆ ಅತ್ಯಾಚಾರ ನಡೆದ ಪ್ರಸಂಗಗಳೇನಾದರೂ ಇದೆಯೇ?

ತಮ್ಮ ಭೂ-ರಹಿತ ತಂದೆ ವರ್ಷಕ್ಕೊಮ್ಮೆ ಸಂಬಂಧಿಕರ ಮನೆಗೆ ಹೋದಾಗ ಏನಾಗುತ್ತಿತ್ತು? ದಲಿತ ಭೂಮಾಲೀಕರ ಮನೆಯಲ್ಲಿ ತನ್ನ ಬದಲಿಗೆ ಕೆಲಸ ಮಾಡಲು ಬೇರೆ ವ್ಯಕ್ತಿಯನ್ನು ನಿಯೋಜಿತಗೊಳಿಸಿ ಹೋಗಬೇಕಿತ್ತು ಎಂದು ಎಡರಂಗ ಅಥವಾ ಆರ್‌ಎಸ್‌ಎಸ್‌ನ ಯಾವ ನಾಯಕರೂ ಹೇಳುವುದಕ್ಕೆ ಸಾಧ್ಯವಿಲ್ಲ.

ಆದರೆ ದಲಿತರು ಭಾರತದ ಎಲ್ಲ ಹಳ್ಳಿಗಳಲ್ಲಿಯೂ ಹಸಿವು, ಅವಮಾನ, ನಾಗರಿಕ ಹಕ್ಕುಗಳ ತಿರಸ್ಕಾರಗಳನ್ನು ಅನುಭವಿಸುತ್ತಾ ಬಂದಿದ್ದಾರೆ. ಸಮಾಜದಲ್ಲಿ, ದಲಿತ ಜೀವನಚರಿತ್ರೆಗಳಲ್ಲಿ, ಇತಿಹಾಸದ ಪುಟಗಳಲ್ಲಿ, ಎಲ್ಲೆಲ್ಲೂ ಇದು ದಾಖಲಾಗಿದೆ.

ಹಾವು ಕಚ್ಚುವ ಕಥೆಯಲ್ಲಿ ಈ ವಿದ್ಯಮಾನಕ್ಕೆ ಉತ್ತರವಿದೆ. ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಭಯ ವ್ಯಕ್ತಪಡಿಸುವ ಎಡರಂಗ ಮತ್ತು ಆರ್‌ಎಸ್‌ಎಸ್‌ನ ನಾಯಕರು, ಸಂಪಾದಕೀಯ ಬರಹಗಾರರಿಗೆ ಭೂಮಾಲೀಕರ ಕೈಕೆಳಗೆ ಕೂಲಿಗಳಾಗಿ ಕೆಲಸ ಮಾಡಿದ ಇತಿಹಾಸವಿಲ್ಲ. ಆದ್ದರಿಂದ, ಇವರಿಗೆ 'ಭೂಮಾಲೀಕರ-ಹೊಡೆತ' ಬಿದ್ದಿಲ್ಲ. ಆದರೆ, ಈಗ ಬಂಡವಾಳಶಾಹಿ ವ್ಯವಸ್ಥೆಯ ಪೆಟ್ಟಂತೂ ಬೀಳುತ್ತಿದೆ.

ಭಾರತದಲ್ಲಿ ಮುಸ್ಲಿಂ ದೊರೆಗಳು ಕಾಲಿರಿಸಿದಾಗಿನಿಂದ ಆರಂಭಗೊಂಡು, ಬ್ರಿಟಿಷ್ ಆಡಳಿತದಲ್ಲಿ ಮುಂದುವರೆದು, ನಂತರ ೧೯೫೦ರಲ್ಲಿ ಭಾರತ ಗಣರಾಜ್ಯವಾದಾಗ, ಮತ್ತೆ ಈಗ, ೧೯೯೦ರ ನಂತರ ಬಂಡವಾಳಶಾಹಿ ವ್ಯವಸ್ಥೆ ಅಳವಡಿಸಿಕೊಂಡ ಬಳಿಕ ಮೊಟ್ಟ ಮೊದಲ ಬಾರಿಗೆ ಬ್ರಾಹ್ಮಣರು/ ದ್ವಿಜರು 'ಉದ್ಯೋಗಿ'ಗಳಾಗುವ ಹೊಸ ಅನುಭವ ಪಡೆದುಕೊಳ್ಳುತ್ತಿದ್ದಾರೆ.

ಹೀಗಾಗಿ, ಎಡರಂಗ ಮತ್ತು ಆರ್‌ಎಸ್‌ಎಸ್ ನಾಯಕರು ಬ್ರಿಟಿಷ್ ಆಡಳಿತವನ್ನು ದೂಷಿಸಿದರೆ ನನಗೆ ಆಶ್ಚರ್ಯವಾಗುವುದಿಲ್ಲ. ಎಡಪಂಥೀಯ ಚಳವಳಿ ಮತ್ತು ಆರ್‌ಎಸ್‌ಎಸ್ ಎರಡೂ ಬ್ರಿಟಿಷ್ ಆಡಳಿತಾವಧಿಯಲ್ಲಿ ಆರಂಭವಾದಂತಹುವು. ಆದ್ದರಿಂದ, ಬ್ರಿಟಿಷ್ ಆಡಳಿತ ಇನ್ನೂ ಇವರ ಮನಸ್ಸಿನಲ್ಲಿ ಉಳಿದಿದೆ. ಬ್ರಿಟಿಷ್ ಆಡಳಿತಾವಧಿಯಲ್ಲಿ ಮೊಟ್ಟ ಮೊದಲ ಬಾರಿಗೆ ಇವರ ಪೂರ್ವಿಕರು ಹೊರಗಿನ ಸಾಮಾಜಿಕ ವ್ಯವಸ್ಥೆಗೆ ಅಡಿಯಾಳುಗಳಾಗಿ ಉದ್ಯೋಗ ಮಾಡಬೇಕಾಗಿ ಬಂತು. ಇವರೆಲ್ಲರೂ ಹೊರಗಿನ ಪರಮಾಧಿಕಾರಕ್ಕೆ ಶರಣಾಗಿ ನಿಖರವಾದ ಕೆಲಸದ ಅವಧಿಯನ್ನು ಶಿಸ್ತಿನಿಂದ ಪಾಲಿಸಬೇಕಾಗಿ ಬಂತು.

ಈಗ, ಬಂಡವಾಳಶಾಹಿ ವ್ಯವಸ್ಥೆ ಗ್ರಾಮ ಸ್ವರಾಜ್ಯಗಳನ್ನು ಮೆಟ್ಟಿ ನಿಲ್ಲುವಂತ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯನ್ನು ವಿರೋಧಿಸುವುದು ಸೈದ್ಧಾಂತಿಕ ವಿಚಾರ ಎನ್ನುವುದಾದರೆ, ಎಡಪಂಥೀಯರು ಇದಕ್ಕೆ ಬೆಂಬಲ ವ್ಯಕ್ತಪಡಿಸಬೇಕು. ಯಾಕೆಂದರೆ, ಸ್ವತಃ ಕಾರ್ಲ್ ಮಾರ್ಕ್ಸ್ ಜಮೀನ್ದಾರಿ ಪದ್ಧತಿಯ ಬದಲಿಗೆ, ಬಂಡವಾಳಶಾಹಿ ವ್ಯವಸ್ಥೆಯನ್ನು, ಕೃಷಿ ವ್ಯವಸ್ಥೆಯ ಬದಲಿಗೆ ನಗರೀಕರಣವನ್ನು ಪ್ರತಿಪಾದಿಸಿದ್ದ. ಕೃಷಿ ವ್ಯವಸ್ಥೆಯ ಬಗ್ಗೆ ಇವರಿಗಿರುವ ಒಲವು ಕೂಡ ಮಾನಸಿಕವಾದುದು.

ಯಾಕೆಂದರೆ, ತಮ್ಮ ಚಳವಳಿಯ ಕೆಲವು ಸದಸ್ಯರು ಈ ಗ್ರಾಮ ಸ್ವರಾಜ್ಯಗಳ ನಾಯಕರಾಗಿದ್ದಾರೆ. ಹೀಗಾಗಿ, ಬಂಡವಾಳಶಾಹಿ ವ್ಯವಸ್ಥೆಯಿಂದಾಗಿ ತಮ್ಮವರು 'ಅರಸರಿಂದ ಆಳು'ಗಳಾಗಿ ಪರಿವರ್ತಿತಗೊಂಡು, ದಲಿತರ ಸರಿಸಮಾನರಾಗಿ ಒಂದೇ ಸಂಸ್ಥೆಯಲ್ಲಿ ಕೆಲಸ ಮಾಡಬೇಕಾಗುತ್ತದೆ ಎಂಬ ಇವರ ಆತಂಕ ಕೂಡ ಮಾನಸಿಕವಾದುದೇ.

□

ಬಂಡವಾಳ ಶಾಹಿ ವ್ಯವಸ್ಥೆಯ ಭೀತಿ

ಬುದ್ಧಾಯಣ

೩೬

ಈ ಬ್ರಾಹ್ಮಣ ಚಂಡಾಲರ್ಯಾರು...?!

ಸಿ.ಎಚ್. ರಾಜಶೇಖರ್

ಬಹಳ ಹಿಂದೆ ವಾರಣಾಸಿ ನಗರವನ್ನು ಪ್ಲೇಗು ಆವರಿಸಿತು. ಅದು ಚಾಚಿದ ಕೆನ್ನಾಲಿಗೆಗೆ ಪ್ರಜೆಗಳೆಲ್ಲ ಬಲಿಯಾದರು. ಒಂದೇ ಒಂದು ಪುರೋಹಿತ ಕುಲದ ನರಪಿಳ್ಳೆಯು ಉಳಿಯಲಿಲ್ಲ. ಇಡೀ ನಗರದಲ್ಲಿ ಉಳಿದವನು ಒಬ್ಬನೇ ಒಬ್ಬ ಬಾಲಕ ಮಾತ್ರ. ಆತ ಕೋಟೆಯ ಗೋಡೆಯನ್ನು ಹೊಡೆದು ತಪ್ಪಿಸಿಕೊಂಡು ಓಡಿ ಹೋಗಿ ಜೀವ ಉಳಿಸಿಕೊಂಡ ಆ ಬಾಲಕನೇ ಚಂಡಾಲ ಕುಲಕ್ಕೆ ಸೇರಿದ 'ಬೋಧಿಸತ್ವ'.

ಅಲ್ಲಲ್ಲಿ ಅಲೆದು ಅಲೆದು ಕೊನೆಗೆ ತಕ್ಷಶಿಲೆಯನ್ನು ಸೇರಿದ ಅಲ್ಲಿ ಒಬ್ಬ ಶ್ರೇಷ್ಠ ಆಚಾರ್ಯ ಗುರುಕುಲವನ್ನು ನಡೆಸುತ್ತಿದ್ದ. ನೂರಾರು ಬ್ರಾಹ್ಮಣ ಯುವಕರಿಗೆ ವೇದಾಧ್ಯಯವನ್ನು ಅಭ್ಯಾಸ ಮಾಡಿಸುತ್ತಿದ್ದರು. ಆಶ್ರಮದೊಳಗಡೆ ಬ್ರಾಹ್ಮಣರಿಗೆ ಬಿಟ್ಟರೆ ಚಂಡಾಲರಿಗೆ ಪ್ರವೇಶ ನಿಷಿದ್ಧವಾಗಿತು. ಬೋಧಿಸತ್ವರು ತಕ್ಷಶಿಲೆಯಲ್ಲಿ ಭಿಕ್ಷೆ ಬೇಡಿ ತಿಂದ ಬಳಿಕ ಆಶ್ರಮದ ಹೊರ ವಲಯದಲ್ಲಿ ಬಂದು ನಿಲ್ಲುತ್ತಿದ್ದರು. ತನ್ನ ವಯಸ್ಸಿನ ಹುಡುಗರಂತೆ ತಾನು ವೇದಾಧ್ಯಯನ ಮಾಡಬೇಕೆಂಬ ಇಚ್ಛೆ ಬಲವಾಯಿತು. ಒಂದು ದಿನ ಆಚಾರ್ಯರು ಸ್ನಾನಕ್ಕಾಗಿ ನದಿಯ ಬಳಿ ತೆರಳುತ್ತಿದ್ದ ಸಮಯವನ್ನು ಕಾಯ್ದು ದೂರದಿಂದಲೇ ಅವರ ಪಾದಕ್ಕೆ ನಮಿಸಿ:

'ಗುರುವೆ ಎಲ್ಲರಂತೆ ನನಗೂ ವಿದ್ಯದಾನವನ್ನು ಕುರುಣಿಸಿ' ಎಂದ ಆಗ ಆಚಾರ್ಯರು ಆತನತ್ತ ಅನುಕಂಪದಿಂದ ನೋಡುತ್ತಾ:

'ಮಗು ನೀನಾರು? ಎಲ್ಲಿಂದ ಬಂದೆ?'

'ಗುರುವೆ, ನಾನು ವಾರಣಾಸಿ ನಗರದ ನಿವಾಸಿ ಪ್ಲೇಗಿನ ಕೆನ್ನಾಲಿಗೆಯಲ್ಲಿ ಬದುಕಿ ಉಳಿದ ಏಕೈಕ ಜೀವ:

'ಬ್ರಾಹ್ಮಣನಂತೆ ಕಾಣುತ್ತಿಲ್ಲದ ನಿನ್ನ ಕುಲ ಯಾವುದು?'

'ಗುರುವೆ ನನ್ನದು ಚಂಡಾಲ ಕುಲ...!

'ದೇವ ದೇವಾ... ಅಪಚಾರ... ಅಪಚಾರ... ಎಲ್ಲಾದರೂ ಉಂಟೆ? ದಾರಿ– ಸರಿದು ನಿಲ್ಲು...!

'ಗುರುವೆ, ಜಾತಿಯೇ ನೀತಿಯಾಗಲು ಹೇಗೆ ಸಾಧ್ಯ...?'

'ಸಾಧ್ಯ ಸಾಧ್ಯತೆಯ ಬಗ್ಗೆ ನಾನು ಮಾತನಾಡಲಾರೆ ಆದರೆ ನಾನು ಕಟ್ಟುಪಾಡನ್ನು ದಾಟುವಂತಿಲ್ಲ...!'

'ದಾಟ ಬೇಕಾದ್ದನ್ನು ದಾಟಿದಾಗಲೇ ಅಲ್ಲವೆ ತಾವು ಆಚಾರ್ಯ ಪದವಿಗೆ ಅರ್ಹರಾಗುವುದು...!?'

'ಹೌದು ಬಾಲಕ ನಿನ್ನ ಮಾತಿನಲ್ಲಿ ಸತ್ಯವಿದೆ. ಇದು ವಯಸ್ಸಿಗೂ, ಕುಲಕ್ಕೂ ಮೀರಿದ ಜ್ಞಾನವೇ ಸರಿ, ನಿನ್ನಂತಹ ಅಪೂರ್ವ ಬಾಲಕ ನನಗೆ ಶಿಷ್ಯನಾಗಿ ದೊರೆತದ್ದೆ ನನ್ನ ಪೂರ್ವ ಜನ್ಮದ ಸುಕೃತ ನನ್ನ ಸಮಸ್ತ ಕುಲ ನನಗೆ ಎದುರಾದರೂ ಪರವಾಗಿಲ್ಲ ನಾನು ನಿನಗೆ ವಿದ್ಯಾದಾನವನ್ನು ಮಾಡುವೆ ನನ್ನೊಂದಿಗೆ ಬಾ...!' ಎಂದರು.

ಆ ಗುಣಸಂಪನ್ನ ಆಚಾರ್ಯರ ಬಳಿ ಬೋಧಿಸತ್ವರು ಹತ್ತಾರು ವರ್ಷಗಳು ಕಲಿಯಬಹುದಾದ ಎಲ್ಲಾ ವಿದ್ಯೆಯನ್ನು ಕಲಿತರು. ಬೀಳ್ಕೊಡುವ ಸಂದರ್ಭ ಬಂದಾಗ ಆಚಾರ್ಯರು ತನ್ನ ಪ್ರಿಯ ಶಿಷ್ಯನ ಮೇಲಿನ ಅಪಾರ ಪ್ರೀತಿಯಿಂದಾಗಿ:

'ಮಗು ನಾನು ನಿನ್ನನ್ನು ಮತ್ತು ನಿನ್ನ ನಂಬಿದವರನ್ನು ಕಾಪಾಡುವಂತಹ ಅಪೂರ್ವ ಕಾಣಿಕೆಯನ್ನು ಕೊಡುವೆ. ಅದನ್ನು ಧರ್ಮಯುತವಾಗಿ ಸಂರಕ್ಷಿಸಿಕೊಳ್ಳ ಬಲ್ಲೆಯಾ...?'

'ನಿಜಕ್ಕೂ ಕೊಟ್ಟ ಮಾತಿಗೆ ತಪ್ಪಲಾರೆ ಗುರುವೆ!'

'ಹಾಗಾದರೆ ಇದೋ ಸ್ವೀಕರಿಸು...! ಇದು ಸಾಧಾರಣ ಮಾವಿನ ವಾಟೆ ಎಂದು ಬಗೆಯ ಬೇಡ. ಇದು ಅಪೂರ್ವ ತಳಿಯಿಂದ ಕೂಡಿದ ವಾಟೆ. ಇದು ವಸಂತ ಕಾಲದಲ್ಲಿ ಅಷ್ಟೇ ಅಲ್ಲ, ವರ್ಷ ಪೂರ ನಿರಂತರವಾಗಿ ಸಂವೃದ್ಧವು ಸುಗಂಧಭರಿತವು ಅಪೂರ್ವ ರುಚಿ ಮತ್ತು ಬಣ್ಣದಿಂದಲೂ ಕೂಡಿರುತ್ತದೆ. ಇದರಿಂದ ನಿನ್ನ ಜೀವನ ನಿರ್ವಹಣೆ ಸುಗಮವಾಗುತ್ತದೆ. ತೆಗೆದುಕೋ ಈ ಎರಡು ಮಾವಿನ ವಾಟೆಯನ್ನು ಒಂದನ್ನು ನೀನು ನಿನ್ನ ಹಿತ್ತಲಲ್ಲಿ ನೆಟ್ಟು ಬೆಳೆಸು. ಇನ್ನೊಂದು ಮಾವಿನ ವಾಟೆಯನ್ನು ಜತನದಿಂದ ಸಂರಕ್ಷಿಸಿ ಇಡು. ನನಗೆ ನಿನ್ನಂತಹ ಅಪೂರ್ವ ಶಿಷ್ಯ ದೊರೆತಾಗ ನಾನು ನಿನಗೆ ಶಿಷ್ಯ ಕಾಣಿಕೆಯನ್ನು ಕೊಟ್ಟಂತೆ ಭವಿಷ್ಯದಲ್ಲಿ ನಿನ್ನನ್ನು ಮೀರುವಂತಹ ಶಿಷ್ಯ ನಿನಗೆ ದೊರೆತಾಗ ಆತನಿಗೆ ಆ ಇನ್ನೊಂದು ಮಾವಿನ ವಾಟೆಯನ್ನು ದಾನ ಮಾಡುವ ಮೂಲಕ ನನ್ನಂತೆ ನೀನೂ ಧನ್ಯನಾಗು...!' ಎನ್ನುತ್ತಾ ಆ ಎರಡು ಮಾವಿನ ವಾಟೆಯನ್ನು ದಾನ ಮಾಡಿದರು. ಆತ ಆ ಎರಡೂ ಮಾವಿನ ವಾಟೆಗಳನ್ನು ತೆಗೆದುಕೊಂಡು ಅವನ್ನು ಭಕ್ತಿಯಿಂದ ಕಣ್ಣಿಗೆ ಹೊತ್ತುಕೊಂಡು ತನ್ನ ಜೋಳಿಗೆಯಲ್ಲಿ ಭದ್ರ ಪಡಿಸಿಕೊಂಡ. ಬಳಿಕ:

'ಗುರುದಕ್ಷಿಣೆಯನ್ನು ಕೊಡುವ ಬಳಿ ಶಿಷ್ಯದಕ್ಷಿಣೆಯನ್ನು ಕೊಟ್ಟು ನಮ್ಮ ಋಣವನ್ನು ಮತ್ತು ಹೆಚ್ಚಿಸಿದ ತಾವುಗಳು ನಿಜಕ್ಕೂ ಮಹಾಗುರುವೆ ಸರಿ...!' ಎನ್ನುತ್ತ ಗುರುಗಳ ಪಾದಕ್ಕೆ ನಮಿಸಿ ತನ್ನ ಊರಾದ ವಾರಣಾಸಿಗೆ ಮರಳಿದ.

ಅಷ್ಟರಲ್ಲಾಗಲೇ ವಾರಣಾಸಿ ನಗರವು ಪುನರುಜ್ಜೀವನಗೊಂಡಿತ್ತು. ಬ್ರಹ್ಮದತ್ತ ರಾಜನು ಆ ನಗರವನ್ನು ಆಳುತ್ತಿದ್ದನು. ತನ್ನ ಪಾಳುಬಿದ್ದ ಮನೆಯನ್ನು ಪುನರ್ ನಿರ್ಮಿಸಿದ. ಮುಂದೆ ಮದುವೆಯಾಗಿ ಮಕ್ಕಳನ್ನೂ ಪಡೆದ ಆಗ ಜೀವನ ನಿರ್ವಾಹಣೆಯ ಬವಣೆಯೂ ಆತನನ್ನು ಕಾಡತೊಡಗಿದಾಗ ತನ್ನ ಗುರುವು ಕೊಟ್ಟ ಅಪೂರ್ವ ಮಾವಿನ ತಳಿಯ ಬೀಜದ ನೆನಪಾಯಿತು. ಅದರಲ್ಲಿ ಒಂದು ವಾಟೆಯನ್ನು ತೆಗೆದುಕೊಂಡು ತನ್ನ ಮನೆಯ ಹಿತ್ತಲಲ್ಲಿ ಆಳವು ವಿಶಾಲವೂ ಆದ ಗುಂಡಿಯನ್ನು ತೊಡಿ ಗೊಬ್ಬರ ನೀರನ್ನು ಹಾಕಿ ಆ ಮಾವಿನ ವಾಟೆಯನ್ನು ಭೂಮಿಗೆ ನಾಟಿ ಮಾಡಿದ. ಅದು ನಿಧಾನವಾಗಿ ಮೊಳಕೆ ಹೊಡೆದು ಚಿಗುರ ತೊಡಗಿತು. ಅದನ್ನು ಶ್ರದ್ಧೆಯಿಂದ ನಿಗಾವಹಿಸಿ ಬೆಳೆಸ ತೊಡಗಿದ. ಕೆಲವೇ ವರ್ಷಗಳಲ್ಲಿ ಅದೊಂದು ಬೃಹದಾಕಾರವಾದ ಮರವಾಗಿ ಬೆಳೆದು ನಿಂತಿತು. ಬಳಿಕ ಆಕಾಲದಲ್ಲಿ ಹೂವಾಗಿ, ಹಿಚಾಗಿ, ಮಿಡಿಯಾಗಿ ಕೊನೆಗೆ ಸಂವೃದ್ಧ, ಫಲಭರಿತ ಮರವಾಗಿ ಮಾರ್ಪಟ್ಟಿತು. ಅದರ ಪ್ರಥಮ ಫಲವನ್ನು ತಿಂದ ಬೋಧಿಸತ್ವರು ಅದರ ಅಪೂರ್ವ ಗಾತ್ರ, ಬಣ್ಣ ಮತ್ತು ರುಚಿಯಿಂದಾಗಿ ರೋಮಾಂಚಿತರಾದರು. ತನ್ನ ಗುರುವಿಗೆ ಮನದಲ್ಲಿಯೇ ಕೃತಜ್ಞತೆಯಿಂದ ಧನ್ಯವಾದವನ್ನು ಸಲ್ಲಿಸಿದರು.

ಆ ದಾರಿಯಲ್ಲಿ ಓಡಾಡುವ ಜನಗಳು ಅಕಾಲದಲ್ಲಿ ಫಲಬಿಡುವ ಆ ಅಪೂರ್ವ ತಳಿಯ ಮಾವಿನ ಮರವನ್ನು ಬೆರಗು ಗಣ್ಣಿನಿಂದ ನೋಡತೊಡಗಿದರು, ಆ ಬಗ್ಗೆ ಚರ್ಚಿಸ ತೊಡಗಿದರು. ತಾವು ಆ ಫಲವನ್ನು ಕೊಂಡು ಅವುಗಳ ವಾಟೆಯನ್ನು ಭೂಮಿಯಲ್ಲಿ ನೆಟ್ಟು ಎಷ್ಟೇ ನಿಗಾವಹಿಸಿ ಬೆಳೆಸಿದರೂ ಮರವಾಗಿ ಬೆಳೆಯುತ್ತಿತ್ತೆ ಹೊರೆತು, ಸದಾಕಾಲದಲ್ಲಿಯು ಫಲವನ್ನು ಕೊಡುತ್ತಿರಲಿಲ್ಲ. ಇತರ ಮಾವಿನ ಜಾತಿಯಂತೆ ವರ್ಷಕ್ಕೊಮ್ಮೆ ಫಲ ನೀಡುತ್ತಿತ್ತು. ಇದರಿಂದ ಬೇಸರಗೊಳ್ಳುತ್ತಿದ್ದ ಜನಗಳು ಕೊನೆಗೆ ಅದು ಅವರವರ ಕೈಗುಣವೆಂತಲೂ, ಅದೃಷ್ಟವೆಂದತೂ, ಪುಣ್ಯದ ಫಲವೆಂತಲೂ ವಿಧಿಯ ಮೇಲೆ ಭಾರ ಹೊರಸಿ ನಿಟ್ಟುಸಿರು ಬಿಡುತ್ತಿದ್ದರು.

ಹೀಗೆ ಬೋಧಿಸತ್ವರು ತಮ್ಮ ಗುರುಗಳ ಕೃಪೆಯಿಂದ ಮಾವಿನ ಫಲವನ್ನು ಮಾರಿ ಅದರಿಂದ ಬಂದ ಹಣದಿಂದ ಹೆಂಡತಿ ಮಕ್ಕಳನ್ನು ಸಾಕುತ್ತಿದ್ದರು. ಮಿಕ್ಕ ವೇಳೆಯಲ್ಲಿ ಆಸಕ್ತ ಮಕ್ಕಳಿಗೆ ವಿದ್ಯಾದಾನವನ್ನು ಮಾಡುತ್ತಿದ್ದರು. ಬೋಧಿಸತ್ವರು ಚಂಡಾಲಕುಲದ ಗುರುವೆಂದು ಹೀಯಾಳಿಸುತ್ತಿದ್ದ ಬ್ರಾಹ್ಮಣರು ಅವರ ಬಳಿ ವಿದ್ಯೆ ಕಲಿಯಲು ಬರುತ್ತಿರಲಿಲ್ಲ.

ಇಂಥಹ ಸಂದರ್ಭದಲ್ಲಿ ಒಬ್ಬ ಕುತಂತ್ರಿ ಬುದ್ಧಿಯುಳ್ಳ ಬ್ರಾಹ್ಮಣ ಯುವಕ ಹೀಗೆ ಯೋಚಿಸಿದ, ಈ ಚಂಡಾಲ ಬೋಧಿಸತ್ವನು ಬೆಳೆಯುವ ಮಾವಿನ ಫಲವು ಸಹಜ ಕೃಷಿಯ ಫಲವಲ್ಲ. ಯಾವುದೋ ಮಂತ್ರ ವಿದ್ಯೆಯ ಫಲವಿರಬೇಕು. ಆದ್ದರಿಂದ ನಾನು ಅವನ ಅಚ್ಚುಮೆಚ್ಚಿನ ಶಿಷ್ಯನಂತೆ ನಟಿಸಿ ಆ ಮಂತ್ರ ವಿದ್ಯೆಯ

ರಹಸ್ಯವನ್ನು ಅರಿತು ಶ್ರೀಮಂತನಾಗಬೇಕೆಂದು ಕನಸು ಕಂಡ ಹಾಗಾಗಿ ಆತ ಸಾತ್ವಿಕ ವಿದ್ಯಾರ್ಥಿಯ ಸೊಗನ್ನು ಹಾಕಿಕೊಂಡು ಬೋಧಿಸತ್ವರಿಗೆ ಅತಿ ವಿನಯ ಮತ್ತು ವಿಧೇಯತೆಯಿಂದ ನಮಸ್ಕರಿಸುತ್ತಾ:

'ಗುರುದೇವಾ, ನಾನು ತಮ್ಮ ಚರಣಕ್ಕೆ ಶರಣು ಬಂದೆ. ನನಗೆ ವಿದ್ಯೆ ಮತ್ತು ಮಂತ್ರವನ್ನು ಕಲಿಸಿ ನನ್ನನ್ನೂ ಪಾವನಗೊಳಿಸಬೇಕೆಂದು...!' ಕಣ್ಣೀರಾಕತೊಡಗಿದ.

ಈ ಅಪೂರ್ವ ದೃಶ್ಯವನ್ನು ಕಂಡ ಚಂಡಾಲ ಕುಲದ ಬೋಧಿಸತ್ವರ ಹೆಂಡತಿ ತನ್ನ ಪತಿಯನ್ನು ಒಳಕರೆದು ಹೀಗೆ ನುಡಿದಳು:

'ಸ್ವಾಮಿ, ಇಂದು ನಮ್ಮ ಕುಲಕ್ಕೆ ಅಂಟಿದ್ದ ಶಾಪವು ವಿಮೋಚನೆ ಆಯಿತು...!

'ಪ್ರಿಯೆ, ಏಕೆ? ಯಾ ಕಾರಣಕ್ಕಾಗಿ?'

'ಇಲ್ಲಿಯ ತನಕ ತಮ್ಮ ಬಳಿ ಶೂದ್ರರು ಮತ್ತು ಚಂಡಾಲರು ಹೊರತು ಬೇರಿನ್ನಾವ ಕುಲದ ಶಿಷ್ಯರು ವಿದ್ಯ ಕಲಿಯಲು ಬಂದಿರಲಿಲ್ಲ. ಈಗ ಬ್ರಾಹ್ಮಣ ಯುವಕನೊಬ್ಬ ಬಂದಿದ್ದಾನೆ ಅವಕ್ಕೆ...!

'ಪ್ರಿಯೆ ಆತ ನನ್ನ ಗುಣವನ್ನೋ, ನೀತಿಯನ್ನೋ, ಕುಲವನ್ನೋ ಮೆಚ್ಚಿ ಬಂದವನಲ್ಲ. ಸರ್ವಕಾಲ. ಫಲ ನೀಡುವ ಮಾವಿನ ಫಲದ ರಹಸ್ಯವನ್ನು ಬೇಧಿಸಲು ಬಂದಿರುವ ಕುತಂತ್ರಿ' ಎನ್ನಲು ಆಕೆ ಆ ವಾದವನ್ನು ಒಪ್ಪಲಿಲ್ಲ. ಮತ್ತು ಆತನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಹಠ ತೊಡಗಿದಳು. ಆತ ಮುಂದಿನ ಅನಾಹುತವನ್ನು ಹೇಳಿದನಾದರೂ ಹೆಂಡತಿಯು ತನ್ನ ಪ್ರತಿಷ್ಠೆಯನ್ನು ಮುಂದು ಮಾಡಿ ಪರಿಪರಿಯಾಗಿ ವಾದಿಸಿದ ಕಾರಣ ಆತನನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿದರು.

ಬೋಧಿಸತ್ವರು ಪ್ರತಿದಿನವು ಪಾಠ ಪ್ರವಚನ ಮುಗಿದ ಬಳಿಕ ಹಿತ್ತಲಿಗೆ ಬರುತ್ತಿದ್ದರು. ಆ ಮಾವಿನ ಮರದ ಬುಡದಲ್ಲಿ ಬೆಳೆದ ಕಳತೆಗೆಯುತ್ತಿದ್ದರು. ಸುತ್ತಲು ಹಗೆದು ಗೊಬ್ಬರ ಚೆಲ್ಲಿ ನೀರುಣಿಸುತ್ತಿದ್ದರು. ಬಳಿಕ ಆ ಮರಕ್ಕೆ ಮೂರು ಭಾರಿ ಪ್ರದಕ್ಷಣೆ ಹಾಕುತ್ತಿದ್ದರು. ಬಳಿಕ ತಮ್ಮ ಗುರುವನ್ನು ವಂದಿಸುವ ಮಂತ್ರವನ್ನು ಉಚ್ಚರಿಸುತ್ತಿದ್ದರು. ಅಂದಿನ ಅಗತ್ಯಕ್ಕೆ ಎಷ್ಟು ಫಲಗಳು ಬೇಕೊ ಅಷ್ಟನ್ನು ಕಿತ್ತೊಕೊಳ್ಳುತ್ತಿದ್ದರು. ಅವುಗಳನ್ನು ಮಾರಿ ಮನೆಗೆ ಹಿಂದಿರುವಾಗ ದವಸದಾನ್ಯವನ್ನು ಅಂಗಡಿಯಿಂದ ಕೊಂಡು ತಂದು ಜೀವಿಸುತ್ತಿದ್ದರು. ಮಿಕ್ಕ ಹೆಚ್ಚಿಗೆ ಫಲವನ್ನು ದಾನ ಮಾಡುತ್ತಿದ್ದನು.

ಬೋಧಿಸತ್ವರನ್ನು ಒಲಿಸಿಕೊಳ್ಳುವ ಸಲುವಾಗಿ ಆ ಬ್ರಾಹ್ಮಣ ಯುವಕನು ಸೌದೆ ಹೊಡೆಯುವುದು ಕಾಡಿಗೆ ಹೋಗಿ ಸೌದೆ ತುರುವುದು, ಭತ್ತವನ್ನು ಕುಟ್ಟುವುದು ಬಾವಿಯಿಂದ ನೀರು ಸೇದಿ ಹಾಕುವುದು ಮತ್ತು ಅಡುಗೆಯನ್ನು ಮಾಡುವುದು ಹೀಗೆ ಆತ ಮನೆಯ ಕೆಲಸ ಕಾರ್ಯಗಳಲ್ಲಿ ತನ್ನನ್ನೂ ಶ್ರದ್ಧೆಯಿಂದ ತೊಡಗಿಸಿಕೊಳ್ಳುತ್ತಿದ್ದ. ಒಮ್ಮೆ ಬೋಧಿಸತ್ವರ ಹೆಂಡತಿ ಒಂದು ಗಂಡು ಮಗುವನ್ನು ಹಡೆದಳು. ಅವಳ ಹೆರಿಗೆ ಕೆಲಸ ಮತ್ತು ಬಾಣಂತಿತನವನ್ನು ಆತನೇ ಮುಂದೆ ನಿಂತು ನಿರ್ವಹಿಸಿದ. ಇದರಿಂದ ಪಲಿತಳಾದ ಬೋಧಿಸತ್ವರ ಹೆಂಡತಿ ತನ್ನ ಪತಿಯನ್ನು ಉದ್ದೇಶಿಸಿ:

'ಸ್ವಾಮಿ ಆತ ಜಾತಿಯಲ್ಲಿ ಬ್ರಾಹ್ಮಣನಾದರೂ ಚಂಡಾಲಿಯಾದ ನನ್ನ ಹೆರಿಗೆ ಕೆಲಸ ಕಾರ್ಯವನ್ನೆಲ್ಲ ಅತಿ ಶ್ರದ್ಧೆಯಿಂದ ಮಾಡಿ ನಮ್ಮನ್ನು ಋಣದಿಂದ ಬಂಧಿಸಿದ್ದಾನೆ. ಆದ್ದರಿಂದ ಆತನನ್ನೆ ತಮ್ಮ ನೆಚ್ಚಿನ ಶಿಷ್ಯನನ್ನಾಗಿ ತಾವುಗಳು

'ಗುರುವೆ, ಜಾತಿಯೇ ನೀತಿಯಾಗಲು ಹೇಗೆ ಸಾಧ್ಯ...?'

ಸ್ವೀಕರಿಸಬೇಕು. ನಿಮ್ಮ ಗುರುಗಳು ನಿಮಗಿತ್ತ ಮತ್ತೊಂದು ಮಾವಿನ ಫಲದ ವೊಟೆಯನ್ನು ಈತನಿಗೆ ನೀಡಿ ನಾವು ಋಣ ಮುಕ್ತರಾಗೋಣ...!' ಎಂದಳು. ಆತನು:

'ಹಾಗೇ ಆಗಲಿ!' ಎನ್ನುತ್ತಾ ಆಬ್ರಾಹ್ಮಣ ಯುವಕನನ್ನು ಕರೆದು ಬೋಧಿಸತ್ವರು:

'ಅಯ್ಯ, ಬ್ರಾಹ್ಮಣ ಯುವಕನೆ ನೀನು ನನ್ನ ಪ್ರೀತಿಗೆ ಪಾತ್ರನಾಗಿರುವೆ. ನನ್ನ ಮತ್ತು ನನ್ನ ಹೆಂಡತಿ ಮಕ್ಕಳ ಸೇವೆ ಮಾಡಿ ಋಣಬಾಧೆಯನ್ನು ಹೆಚ್ಚಿಸಿರುವೆ. ಆದ್ದರಿಂದ ನನ್ನ ಗುರುವು ನನಗಾಗಿ ನೀಡಿದ ಸದಾಕಾಲ ಫಲಕೊಡುವ ಮತ್ತೊಂದು ಮಾವಿನ ವಾಟೆಯನ್ನು ನಿನಗೆ ನೀಡಬೇಕೆಂದು ನಿರ್ಧರಿಸಿರುವ. ಆದರೆ ಒಂದು ಷರತ್ತಿದೆ' ಎನ್ನಲು ಆ ಯುವಕ ನನ್ನ ಕುತಂತ್ರ ಫಲಿಸಿತು ಎಂದು ಅಪಾರ ಸಂತೋಷಗೊಂಡು:

ಗುರುಗಳೇ ತಮ್ಮ ಷರತ್ತನ್ನು ನಾನು ಶಿರಸಾ ವಹಿಸಿ ಪಾಲಿಸುತ್ತೇನೆ. ಏನೆಂದು ಹೇಳಬೇಕೆಂದ:

'ಮತ್ತೇನಿಲ್ಲ ಈ ಮಾವಿನ ವಾಟೆಯನ್ನು ನಿನಗೆ ನೀಡಿದವರು ಯಾರೆಂದು ಯಾರಾದರೂ ಪ್ರಶ್ನಿಸಿದರೆ ನಮ್ಮ ಗುರು ಎಂದು ಹೇಳಬೇಕು. ಇಲ್ಲವಾದರೆ ಆ ಮಾವಿನ ಮರ ಬರಡಾಗುತ್ತದೆ. ಅದನ್ನು ಒಪ್ಪಿಕೊಂಡು ಸಂರಕ್ಷಿಸುವೆಯಾ...!' ಎನ್ನಲು.

'ತಮ್ಮ ವಚನವನ್ನು ಶಿರಾಸವಹಿಸಿ ಪಾಲಿಸುವೆ...!' ಎಂದ ಬಳಿಕ ಬೋಧಿಸತ್ವರು ತಮ್ಮ ಗುರುವು ಕಾಣಿಕೆಯಾಗಿ ತಮಗೆ ನೀಡಿದ್ದ ಮತ್ತೊಂದು ಸುರ್ವಋತುವಿನಲ್ಲಿಯೂ ಫಲ ನೀಡುವ ಮಾವಿನ ವಾಟೆಯನ್ನು ಆತನಿಗೆ ನೀಡಿ ಬೀಳ್ಕೊಟ್ಟರು. ಆತ ತನ್ನ ಕಾರ್ಯವು ಸಾಧನೆಯಾಗಿತ್ತೆಂದು ಅಪಾರ ಸಂತೋಷದಿಂದ ತನ್ನ ಮನೆಗೆ ಮರುಳಿದ. ಫಲವತ್ತಾದ ತನ್ನ ಹೊಲದಲ್ಲಿ ಈ ಮಾವಿನ ವಾಟೆಯನ್ನು ನೆಟ್ಟು ಬಹಳ ಜತನದಿಂದ ಮರವಾಗಿ ಬೆಳೆಸಿದ ಅದು ಸರ್ವಋತುವಿನಲ್ಲಿಯೂ ಫಲ ನೀಡಲು ಪ್ರಾರಂಭಿಸಿತು. ಪ್ರತಿದಿನವು ಎಷ್ಟು ಫಲಗಳು ಸಿಗುತ್ತದೋ ಅಷ್ಟನ್ನೂ ಮಾರಿ ದಿನದಿಂದ ದಿನಕ್ಕೆ ಶ್ರೀಮಂತನಾಗತೊಡಗಿದ ಆತನ ಮಾವಿನ ಫಲವನ್ನು ಒಮ್ಮೆ ಮಾಲಿಯು ಬ್ರಹ್ಮದತ್ತ ಮಹಾರಾಜನಿಗೆ ನೀಡಿದ. ಅದರ ಬಣ್ಣ ರುಚಿ ಮತ್ತು ಗಾತ್ರಕ್ಕೆ ಮಾರು ಹೋದ ರಾಜ ಇದನ್ನು ಬೆಳೆದವರು ಯಾರು? ಆತನನ್ನ ಅರಮನೆಗೆ ಕರೆದು ತಾ!' ಎಂದ.

ಅದರಂತೆಯೇ ಆ ಬ್ರಾಹ್ಮಣ ಯುವಕನು ರಾಜನ ಎದುರು ನಿಂತು ನಮಸ್ಕರಿಸ ಒಂದು ಬುಟ್ಟಿ ಮಾವಿನ ಹಣ್ಣು ಕೊಟ್ಟ. ಹೀಗೆ ಪ್ರತಿದಿನವು ರಾಜನಿಗೆ ಉಡುಗೊರೆಯಾಗಿ ಮಾವಿನ ಫಲ ನೀಡಲು ಆತ ರಾಜನಿಗೆ ನೀಡುತ್ತಿದ್ದ. ಆ ಕಾರಣಕ್ಕಾಗಿ ಆತ ರಾಜನಿಗೆ ಅಚ್ಚು ಮೆಚ್ಚಿನವನಾದ. ಆತನನ್ನು ರಾಜ ಆಸ್ಥಾನದಲ್ಲಿ ಗೌರವದ ಪಂಡಿತ ಹುದ್ದೆಯನ್ನು ನೀಡಿ ಸನ್ಮಾನಿಸಿದ. ಬಳಿಕ ಆ ಯುವಕ ಶ್ರೀಮಂತಿಕೆಯ ತುತ್ತ ತುದಿಗೆ ಏರಿದ.

ಒಂದು ದಿನ ರಾಜನು ಕುತೂಹಲಗೊಂಡು ತಾನು ನಿನ್ನ ಮಾವಿನ ವೃಕ್ಷವನ್ನು ನೋಡಬೇಕು ಎಂದು ಅಪೇಕ್ಷಿಸಿದ. ಆಗಲೆಂದು ಒಪ್ಪಿಗೆ ಇತ್ತ ಯುವಕ ರಾಜನ್ನು ಆತನ ಪರಿವಾರವನ್ನು ತನ್ನ ಹೊಲಕ್ಕೆ ಕರೆದ್ಯೊಯ್ದು. ಈ ಸೋಜಿಗವನ್ನು ನೋಡಬೇಕೆಂದು ಪುರಜನರು ಆ ಮಾವಿನ ವೃಕ್ಷದ ಸುತ್ತ ನೆರೆದರು. ಆ ಯುವಕ ಮಾವಿನ ಮರಕ್ಕೆ ಎಂದಿನಂತೆ ಗೊಬ್ಬರ ನೀರನ್ನು ಹಾಕಿ ಮೂರು ಸುತ್ತು ಪ್ರದಕ್ಷಿಣೆ ಬಂದ. ಮನದಲ್ಲಿ ತನ್ನ ಗುರುವಿನ ಸ್ಮರಣೆ ಮಾಡಿ ಮಂತ್ರ ಜಪಿಸಿದ. ಬಳಿಕ ಮರವನ್ನು ಏರಿ ರಂಬೆಕೊಂಬೆಗಳನ್ನು ಅಲುಗಿಸತೊಡಗಿದ. ಹಣ್ಣಾದ ಫಲಗಳು ಮರದ ಸುತ್ತ ಉದುರಿ ನಿಂತವು. ಅದನ್ನು ಆಯ್ದು ಯುವಕ ರಾಜನಿಗೂ ರಾಜಪರಿವಾರಕ್ಕೂ ಮತ್ತು ನೆರೆದ ಪ್ರೇಕ್ಷಕರಿಗೂ ನೀಡಿದ ಅವರೆಲ್ಲ ಬಾಯನ್ನು ಚಪ್ಪರಿಸಿಕೊಂಡು ತಿಂದು ಆ ಯುವಕನಿಗೆ ಅಭಿನಂದಿಸಿ ಹೊರಟು ಹೋದರು ಬಳಿಕ ರಾಜನು ಆ ಯುವ ಪಂಡಿತನನ್ನು ಉದ್ದೇಶಿಸಿ:

'ಎಲ್ಲೆ ಪಂಡಿತನೇ ನಿನಗೆ ಈ ಅಪೂರ್ವ ಮಾವಿನ ತಳಿಯನ್ನು ನಿಡಿದವರು ಯಾರು...!?' ಎನ್ನಲು. ಆ ಯುವಕ ತನ್ನ ಆಚಾರ್ಯ 'ಚಂಡಾಲ' ಹಾಗಾಗಿ ಆತನ ಹೆಸರು ಮತ್ತು ಕುಲವನ್ನು ಬಹಿರಂಗಗೊಳಿಸಿದರೆ ರಾಜನು ನನ್ನನ್ನು ತಿರಸ್ಕರಿಸಬಹುದು ಅಥವಾ ಕೀಳಾಗಿ ನೋಡಬಹುದು ಇಲ್ಲವೆ ಶಿಕ್ಷಿಸಬಹುದೆಂದು ಬಗೆದು:

'ಪ್ರಭು, ತಕ್ಷಶಿಲೆಯ ನನ್ನ ಬ್ರಾಹ್ಮಣ ಗುರುವು ಈ ಅಪೂರ್ವ ತಳಿಯನ್ನು ಕರುಣಿಸಿದರು...!' ಎಂದು ಸುಳ್ಳು ಹೇಳಿಬಿಟ್ಟ.

'ಹಾ... ಹ್ಹಾ... ಹಾಗೆ ಹೇಳು ಮತ್ತೆ...! ಇರಬಹುದು.. ಇರಬಹುದು...! ಈ ಅಪೂರ್ವ ಸ್ವಾದಿಷ್ಟವು ಮತ್ತು ಸರ್ವಋತುವಿನ ಪ್ರಭಾವವು ಭವಿಷ್ಯ ಆ ಮಹಾ ಮುನಿಯ ಪುಣ್ಯದ ಫಲವೇ ಇರಬೇಕು...!!' ಎಂದ ರಾಜನಿಗೆ ಮತ್ತಷ್ಟು ಹಣ್ಣುಗಳನ್ನು ತಿನ್ನುವ ಬಯಕೆಯಾಗಿ:

'ಎಲ್ಲೆ ಪಂಡಿತನೇ ಈ ಪುಣ್ಯ ಫಲವನ್ನು ಆದೆಷ್ಟು ತಿಂದರೂ ತೃಪ್ತಿಯೇ ಸಿಗುತ್ತಿಲ್ಲ. ತಿಂದಷ್ಟು ಬಯಕೆ ಹೆಚ್ಚುತ್ತಲೆ ಹೋಗುತ್ತದೆ. ಮರವೇರಿ ಮತ್ತಷ್ಟು ಫಲವನ್ನು ಉದುರಿಸು...!' ಎನ್ನಲು ಆತ ಮೊದಲಿನಂತೆ ಮಂತ್ರವನ್ನು ಉಚ್ಚರಿಸಲು ಪ್ರಯತ್ನಿಸಿದ. ಆ ಮಂತ್ರದ ಉಚ್ಚಾರವೇ ಮರೆತು ಹೋಗಿತ್ತು. ಅದೆಷ್ಟೇ ಪ್ರಯತ್ನ ಪಟ್ಟರೂ ಜ್ಞಾಪಕಕ್ಕೆ ಬರಲೇ ಇಲ್ಲ. ಬೆವರ ತೊಡಗಿದ. ವಿಧಿ ಇಲ್ಲದೆ ಮರವೇರಿ ರಂಬೆಕೊಂಬೆಗಳನ್ನು ಅಲುಗಿಸಿದ. ಒಂದೇ ಒಂದು ಹಣ್ಣಾಗಲಿ ಕಾಯಾಗಲಿ ಉದುರಲಿಲ್ಲ. ಬದಲಿಗೆ ಆ ಮಾವಿನ ವೃಕ್ಷ ಬುಡ ಸಮೇತ ಉರುಳಿ ನೆಲಕ್ಕೆ ಬಿತ್ತು. ಗಾಯಗೊಂಡ ಆ ಯುವಕ ಅಳುತ್ತಾ ರಾಜನೆದುರು ತಲೆ ತಗ್ಗಿಸಿ ನಿಂತು.

'ಅಪಚಾರವಾಯಿತು ಪ್ರಭು, ನನ್ನನ್ನೂ ಕ್ಷಮಿಸಿ ಬಿಡಿ...! ಈ ಅಪೂರ್ವ ತಳಿಯನ್ನು ಕುರುಣಿಸಿದ್ದು 'ಚಂಡಾಲ' ಕುಲದ ಆಚಾರ್ಯರೊಬ್ಬರು. ಜಾತಿಯ ಆಹಂಕಾರದಿಂದಲೂ, ದುರಾಸೆಯ ಫಲದಿಂದಲೂ, ನಾನು ಸುಳ್ಳನ್ನು ನುಡಿದೆ. ನನ್ನೆದುರು ಗುರುವಿಲ್ಲ ಈ ಮರಕ್ಕೇನು ಬಾಯಿದೆಯೇ ಅಥವಾ ಜೀವವಿದೆಯೇ ಎಂದು ಕಲ್ಪಿಸಿ ಸುಳ್ಳಾಡಿ ನಾಶ ಹೊಂದಿದೆ...!' ಎನ್ನಲು ಆ ರಾಜನು:

'ಜಾತಿಗಿಂತ ನೀತಿಯೇ ಮುಖ್ಯ ಎಂದು ಅರಿಯದ ನೀನು ಬ್ರಾಹ್ಮಣ ಕುಲಕ್ಕೂ, ಪಂಡಿತ –ವರ್ಗಕ್ಕೂ ಅಪಚಾರ ಮಾಡಿದೆ. ಇನ್ನೂ ನನಗೆ ಮುಖ ತೋರಬೇಡ ನನ್ನ ರಾಜ್ಯದಿಂದ ತೊಲಗಾಚೆ...!!' ಎಂದ. □

'SAMVADA' Kannada Monthly, Aug 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕೇಂದ್ರ ಸಾಹಿತ್ಯ ಅಕಾದೆಮಿ,
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು:
* ಆ ದೀರ್ಘ ಮೌನ (ಇಂಗ್ಲೀಷ್ ಮೂಲ: ಶಶಿ ದೇಶಪಾಂಡೆ, ಅನು : ವಿಜಯ ಕಣೇಕಲ್ 120.00
* ಆರು ಅಡಿ ಭೂಮಿ (ಉರ್ದೂ ಮೂಲ: ಅಬ್ದುಸ್ಸಮದ್; ಅನು: ಪಂಚಾಕ್ಷರಿ ಹಿರೇಮಠ 150.00
* ಅರ್ಧನಾರೀಶ್ವರ (ಹಿಂದಿ ಮೂಲ: ವಿಷ್ಣು ಪ್ರಭಾಕರ್; ಅನು: ಎಸ್.ಎಮ್. ರಾಮಚಂದ್ರಸ್ವಾಮಿ) 250.00
* ನೀಲಿಚಂದಿರ (ಹಿಂದಿ ಮೂಲ: ಶಿವಪ್ರಸಾದ ಸಿಂಹ; ಅನು: ಪಿ. ಶಶಿಕಲಾ) 350.00
* ಚಿಟ್ಟಾಲಹು (ಪಂಜಾಬೀ ಮೂಲ: ನಾನಕ್ ಸಿಂಗ್; ಅನು: ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) 85.00
* ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) 100.00
* ಶಾಂಬ (ಬಂಗಾಳಿ ಮೂಲ: ಸಮರೇಶ ಬಸು, ಅನು: ಜಿ. ಕುಮಾರಪ್ಪ) 100.00
* ಹಗ್ಗ-3 ಭಾಗಗಳು (ಮಲಯಾಳ ಮೂಲ: ತಕಳಿ ಶಿವಶಂಕರ ಪಿಳ್ಳೆ 325.00
ಅನು: ಕೆ.ಕೆ. ನಾಯರ್, ಅಶೋಕ್ ಕುಮಾರ್ 250.00
* ಸುಂದರಿಯರು ಮತ್ತು ಸುಂದರರು (ಮಲಯಾಳ ಮೂಲ: ಊರುಬ್, ಅನು: ಮೋಹನ್ ಕುಂಕಾರ್) 250.00
* ನೆಲವೆದ್ದು ಬಡಿಯಿತು (ಮರಾಠಿ ಕಾದಂಬರಿ ಮೂಲ: ವಿಶ್ವಾಸ ಪಾಟೀಲ ಕನ್ನಡಕ್ಕೆ ಅನುವಾದ: ಚಂದ್ರಕಾಂತ ಪೋಕಳೆ-350
* ಒಂದು ಗಿಡ ಮತ್ತು ಎರಡು ಹಕ್ಕಿಗಳು: ಮೂಲ: ಆತ್ಮಕಥನ ಕನ್ನಡಕ್ಕೆ: ಕುಮುದಿನಿ ಅಶೋಕ ಬೈರಣ್ಣವರ-225.00
* ಕೇತು ವಿಶ್ವನಾಥ ರೆಡ್ಡಿ ಕತೆಗಳು (ತೆಲುಗು ಮೂಲ: ಕೇತು ವಿಶ್ವನಾಥ ರೆಡ್ಡಿ, ಅನು: ಮೀರಾಸಾಬಿಹಳ್ಳಿ ಶಿವಣ್ಣ) 120.00

ಕಥಾ ಸಂಕಲನ:
* ಸ್ವರ್ಣಕಮಲಗಳು (ತೆಲುಗು ಮೂಲ: ಇಲ್ಲಿಂದಲ ಸರಸ್ವತೀದೇವಿ; ಅನು-ಪಿ. ವೇಣು-ಗೋಪಾಲ್) 300.00
* ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು-ಅಶೋಕ್ ಕುಮಾರ್) 300.00
* ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೊಮನಾಥ್) 125.00
* ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) 100.00
* ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ.ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ) 150.00
* ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು ಸ್ನೇಹಲತಾ ರೋಹಿಡೇಕರ್) 160.00

ಕಾವ್ಯ:
* ಕನ್ನಡ ಸಾನೆಟ್ ಸಂಗ್ರಹ (ಸಂ.ಹೆಚ್.ಎಸ್. ವೆಂಕಟೇಶಮೂರ್ತಿ) 85.00
* ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ: ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ ಹೆಮ್ಮಿಗೆ) 90.00
* ಸಂಬಂಧ (ಇಂಗ್ಲಿಷ್: ಮೂಲ ಜಯಂತ ಮಹಾಪಾತ್ರ; ಅನು: ಪಿ ಲಕ್ಷ್ಮೀನಾರಾಯಣಭಟ್) 50.00
* ತಮಿಳು ಕವಿತೆಗಳು (ಸಂಪಾದಕರು: ಚಂದ್ರಶೇಖರ ಕಂಬಾರ ಮತ್ತು ಓ. ಎಲ್ ನಾಗಭೂಷಣಸ್ವಾಮಿ) 40.00
* ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ; ಅನು: ಅರ್ಕಸಾಲಿ ವೃಷಭೇಂದ್ರಾಚಾರ್) 200.00
* ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) 125.00

ಇತರ
* ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) 600.00
* ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು: ವಿ. ಗೋಪಾಲಕೃಷ್ಣ) 200.00
* ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) 200.00
* ತೆಲುಗು-ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) 150.00
* ಟೀಕಾ ಸ್ವಯಂವರ: ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) 180.00
* ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ 75.00

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ. 25.00)
* ವ. ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
* ಜಿ.ಪಿ. ರಾಜರತ್ನಂ * ತೀನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ
* ಅ.ನ. ಕೃಷ್ಣರಾವ್ (40.00) * ಕನುಪರ್ತಿ ವರಲಕ್ಷ್ಮಮ್ಮ (40.00) * ಅಕ್ಕಮಹಾದೇವಿ (40.00) * ಆರ್ ಕಲ್ಯಾಣಮ್ಮ (40.00)
* ಬಸವರಾಜ ಕಟ್ಟೀಮನಿ (40.00) * ಆಲೂರು ವೆಂಕಟರಾವ್ (40.00)